ಶುಕ್ರವಾರ, ಡಿಸೆಂಬರ್ 6, 2024 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಂಗರೂಪ
'ಲೈಫ್ ಆಫ್ ಪೈ' ಎಂಬ
ಪುಸ್ತಕದ ರಂಗರೂಪವು
ಇದೇ ಮೊದಲ ಬಾರಿಗೆ
ಮುಂಬೈನಲ್ಲಿ ಗುರುವಾರ
ಪ್ರದರ್ಶನಗೊಂಡಿತು



ಏಳು ಹಂತಗಳಲ್ಲಿ 1,729 ಕಾಮಗಾರಿಗಳ ಸ್ಥಳ ತಪಾಸಣೆಗೆ ನ್ಯಾ. ನಾಗಮೋಹನದಾಸ್ ಆಯೋಗದ ನಿರ್ಧಾರ

40% ಲಂಚ ಆರೋಪ: ಸ್ಥಳ ತನಿಖೆ ಆರಂಭ

• ವಿ.ಎಸ್. ಸುಬ್ರಹ್ಮಣ್ಯ



ಆಯೋಗವು ಮಧ್ಯಂತರ ವರದಿ ಸಲ್ಲಿಕೆ ಬಗ್ಗೆ ಯೋಚಿಸಿಲ್ಲ. ವಿಚಾರಣೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸುವುದಕ್ಕೆ ಆದ್ಯತೆ ನೀಡಲಾಗಿದೆ.

ನ್ಯಾ. ನಾಗಮೋಹನದಾಸ್
ವಿಚಾರಣಾ ಆಯೋಗದ ಮುಖ್ಯಸ್ಥ

ಬೆಂಗಳೂರು: ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇಕಡ 40ರಷ್ಟು ಲಂಚ ಪಡೆಯಲಾಗುತ್ತಿತ್ತು ಎಂಬ ಆರೋಪದ ಕುರಿತು ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ನೇತೃತ್ವದ ಆಯೋಗವು ಕಾಮಗಾರಿಗಳ ಭೌತಿಕ ಸ್ಥಳ ತಪಾಸಣೆ ಆರಂಭಿಸಿದೆ. ರಾಜ್ಯದಾದ್ಯಂತ 1,729 ಕಾಮಗಾರಿಗಳನ್ನು ತಪಾಸಣೆಗೆ ಆಯ್ದುಕೊಳ್ಳಲಾಗಿದೆ.

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳಲ್ಲಿನ ಕಾಮಗಾರಿಗಳ ಕುರಿತು ಆಯೋಗ ತನಿಖೆ ನಡೆಸುತ್ತಿದೆ. ವೈಜ್ಞಾನಿಕ ಮಾನದಂಡಗಳ ಆಧಾರದಲ್ಲಿ ಗುರುತಿಸಿರುವ ಕಾಮಗಾರಿಗಳ ತಪಾಸಣೆಯನ್ನು ಆಯೋಗದ ಅಧಿಕಾರಿಗಳ ತಂಡಗಳು ಎಲ್ಲ ಜಿಲ್ಲೆಗಳಲ್ಲೂ ಪ್ರಾರಂಭಿಸಿವೆ. ಎರಡು ವಾರಗಳಲ್ಲಿ ಸ್ಥಳ ತಪಾಸಣೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

'ಸಾರ್ವಜನಿಕರಿಂದ ಆಯೋಗಕ್ಕೆ 300 ದೂರುಗಳು ಬಂದಿದ್ದವು. ಅವುಗಳ ಪೈಕಿ 150ರಿಂದ 160 ದೂರುಗಳು ಆಯೋಗದ ಕಾರ್ಯವ್ಯಾಪ್ತಿಗೆ ಸೇರಿದ್ದವು. ಅವುಗಳಿಗೆ ಸಂಬಂಧಿಸಿದ ಕಡತ ಪರಿಶೀಲನೆ ಮತ್ತು ಸ್ಥಳ ತಪಾಸಣೆ ಪೂರ್ಣಗೊಂಡಿದೆ. ಎರಡನೇ ಹಂತದಲ್ಲಿ ಆಯೋಗವೇ ಸ್ವಯಂ ಆಯ್ಕೆಮಾಡಿಕೊಂಡ ಕಾಮಗಾರಿಗಳ ಸ್ಥಳ ತಪಾಸಣೆ ಮಾಡಲಾಗುತ್ತಿದೆ' ಎಂದು ಆಯೋಗದ ಅಧ್ಯಕ್ಷ ಎಚ್‌.ಎನ್‌. ನಾಗಮೋಹನದಾಸ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ತನಿಖೆಗೆ ಆಯ್ಕೆಮಾಡಿಕೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳನ್ನು ಆಯೋಗದ ಅಧಿಕಾರಿಗಳು ಪರಿಶೀಲಿಸಿ, ಟಿಪ್ಪಣಿ ಸಿದ್ಧಪಡಿಸಿದ್ದಾರೆ. ಅದರ ಆಧಾರದಲ್ಲೇ ಸ್ಥಳ ತಪಾಸಣೆ ನಡೆಯಲಿದೆ. ಕ್ರಿಯಾಯೋಜನೆ ಅನುಸಾರ ಕಾಮಗಾರಿ ನಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಕಳಪೆ ಕಾಮಗಾರಿ, ಅವ್ಯವಹಾರ ನಡೆದಿದೆಯೆ ಎಂಬುದನ್ನು ಪರಿಶೀಲಿಸಲು ಸ್ಥಳ ತಪಾಸಣೆ ಆರಂಭಿಸಲಾಗಿದೆ.

ಪ್ರತಿ ಜಿಲ್ಲೆಯಲ್ಲಿ 52ರಿಂದ 55 ಕಾಮಗಾರಿಗಳನ್ನು ಆಯ್ದುಕೊಳ್ಳಲಾಗಿದೆ. ಆಯೋಗದಲ್ಲಿ ವಿಷಯ ತಜ್ಞರಾಗಿ ನೇಮಕಗೊಂಡಿರುವ ನಿವೃತ್ತ ಮುಖ್ಯ ಎಂಜಿನಿಯರ್‌ಗಳು, ತನಿಖಾ ಕಾರ್ಯಕ್ಕೆ ನೇಮಿಸಿಕೊಂಡಿರುವ ನಿವೃತ್ತ ಕಾರ್ಯಪಾಲಕ ಎಂಜಿನಿಯರ್‌ಗಳು ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಸ್ಥಳಕ್ಕೆ ತೆರಳಿ ತಪಾಸಣೆ ನಡೆಸಲಿದ್ದಾರೆ.

ಏಳು ಹಂತದ ವಿಂಗಡಣೆ: ಕಾಮಗಾರಿಗಳ ಮೊತ್ತಕ್ಕೆ ಅನುಗುಣವಾಗಿ ಏಳು ಹಂತಗಳಲ್ಲಿ ವಿಂಗಡಿಸಿ ಸ್ಥಳ ತಪಾಸಣೆ ಪಟ್ಟಿ ಸಿದ್ಧಪಡಿಸಲಾಗಿದೆ. ₹5 ಲಕ್ಷದವರೆಗೆ, ₹5.01 ಲಕ್ಷದಿಂದ ₹50 ಲಕ್ಷದವರೆಗೆ, ₹50.01 ಲಕ್ಷದಿಂದ ₹1 ಕೋಟಿವರೆಗೆ, ₹1.01 ಕೋಟಿಯಿಂದ ₹5 ಕೋಟಿವರೆಗೆ, ₹5.01 ಕೋಟಿಯಿಂದ ₹10 ಕೋಟಿವರೆಗೆ, ₹10.01 ಕೋಟಿಯಿಂದ ₹50 ಕೋಟಿವರೆಗೆ ಮತ್ತು ₹ 50 ಕೋಟಿಗಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳು ಎಂಬುದಾಗಿ ವರ್ಗೀಕರಿಸಿ ತನಿಖೆ ಆರಂಭಿಸಲಾಗಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಸ್ಥಳ ತಪಾಸಣೆಗೆ ಆಯ್ದುಕೊಂಡ ಕಾಮಗಾರಿಗಳ ವಿವರ

ಇಲಾಖೆ	₹5 ಲಕ್ಷ ದವರೆಗೆ	₹5.01 ಲಕ್ಷ- ₹ 10 ಲಕ್ಷ	₹50.01 ಲಕ್ಷ- ₹ 1 ಕೋಟಿ	₹1.01 ಕೋಟಿ- ₹ 5 ಕೋಟಿ	₹5.01 ಕೋಟಿ- ₹ 10 ಕೋಟಿ	₹10.01 ಕೋಟಿ- ₹50 ಕೋಟಿ	₹ 50 ಕೋಟಿ ಗಿಂತ ಹೆಚ್ಚು
ಲೋಕೋಪಯೋಗಿ	140	89	22	25	15	16	08
ಜಲಸಂಪನ್ಮೂಲ	17	41	07	06	02	03	07
ನಗರಾಭಿವೃದ್ಧಿ	145	126	11	04	20	27	07
ಸಣ್ಣ ನೀರಾವರಿ	32	35	03	02	02	01	00
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್	691	174	24	15	10	01	01

ಕೌನ್ಸೆಲಿಂಗ್ ಮೂಲಕ 47 ವೈದ್ಯರ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಕೌನ್ಸೆಲಿಂಗ್ ಮೂಲಕ ಪರಿಣತಿಗೆ ಅನುಗುಣವಾಗಿ 47 ವೈದ್ಯರನ್ನು ವಿವಿಧ ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಿದೆ.

ಇಲಾಖೆಯು ಈ ವರ್ಷ ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ ಪ್ರಕ್ರಿಯೆ ನಡೆಸುತ್ತಿದೆ. ತಜ್ಞತೆ ಅನುಸಾರ ವೈದ್ಯರ ಮಾಹಿತಿಯನ್ನು ಪಡೆದು, ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವರ್ಗಾವಣೆ ಮಾಡಲಾಗಿದೆ.

'ಈ ಕ್ರಮದಿಂದ ಸಾರ್ವಜನಿಕ ಆರೋಗ್ಯ ಸೇವೆ ಬಲಗೊಳ್ಳಲಿದ್ದು, ಗುಣಮಟ್ಟದ ವೈದ್ಯಕೀಯ ಸೇವೆ ದೊರೆಯಲಿದೆ. ರಾಜ್ಯದಾದ್ಯಂತ ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿಮಾಡಿ, ಸಾಮರ್ಥ್ಯ ಹೆಚ್ಚಳಕ್ಕೆ ಈ ವರ್ಗಾವಣೆ ಸಹಕಾರಿಯಾಗಲಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.


ಅಧಿಕಾರ ಹಂಚಿಕೆ 'ಒಪ್ಪಂದ': ವಾಕ್ಸಮರ

ರಾಜ್ಯದಲ್ಲಿ 'ಅಧಿಕಾರ ಹಂಚಿಕೆ' ಸೂತ್ರದ ವಿಚಾರ ಗೃಹ ಸಚಿವ ಜಿ. ಪರಮೇಶ್ವರ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡುವೆ ಮಾತಿನ ಸಮರಕ್ಕೆ ಕಾರಣವಾಗಿದೆ. ಖಾಸಗಿ ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ್ದ ಡಿ.ಕೆ. ಶಿವಕುಮಾರ್, 'ನಾವು ಒಂದು ಒಪ್ಪಂದಕ್ಕೆ (ಅಂಡರ್ ಸ್ಟ್ಯಾಂಡಿಂಗ್) ಬಂದಿದ್ದೇವೆ' ಎಂದಿದ್ದರು. ಈ 'ಒಪ್ಪಂದ'ದ ಹೇಳಿಕೆಗೆ ಜಿ. ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಾವೆಲ್ಲ ಯಾಕಿರಬೇಕು?– ಜಿ. ಪರಮೇಶ್ವರ

'ಈಗ ಒಪ್ಪಂದ ಆಗಿದೆ ಎನ್ನುವುದಾದರೆ ನಾವೆಲ್ಲ ಯಾಕಿರಬೇಕು' ಎಂದು ಪ್ರಶ್ನಿಸಿರುವ ಪರಮೇಶ್ವರ, 'ಅವರಿಬ್ಬರೇ (ಸಿದ್ದರಾಮಯ್ಯ- ಡಿ.ಕೆ. ಶಿವಕುಮಾರ್) ರಾಜಕಾರಣ ನಡೆಸಲಿ' ಎಂದು ಗರಂ ಆದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಬೇರೆಯವರು ಇರುವುದೇ ಬೇಡವೇ? ಆ ರೀತಿ ಒಪ್ಪಂದ ಆಗಿರಲು ಸಾಧ್ಯವಿಲ್ಲ. ಹೈಕಮಾಂಡ್ ಅಂತಿಮವಾಗಿ ಏನು ತೀರ್ಮಾನ ಮಾಡುತ್ತದೆ ಅದಕ್ಕೆ ನಾವು ಬದ್ಧವಾಗಿರುತ್ತೇವೆ. ನಾವು ಯಾರೂ ಕೂಡ ಹೈಕಮಾಂಡ್ ಅನ್ನು ಬಿಟ್ಟು ಹೋದವರಲ್ಲ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆ ಅದನ್ನು ಒಪ್ಪಿಕೊಳ್ಳುತ್ತೇವೆ' ಎಂದರು.




'ಅಧಿಕಾರ ಹಂಚಿಕೆ ಬಗ್ಗೆ ಒಪ್ಪಂದ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ದೆಹಲಿ ಮತ್ತು ರಾಜ್ಯದಲ್ಲಿ ಇಬ್ಬರು, ಮೂವರನ್ನು ಕೇಳಿದ್ದೇನೆ. ಒಪ್ಪಂದ ಆಗಿದೆ ಎಂದು ಯಾರೂ ಹೇಳಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯಾವ ಅರ್ಥದಲ್ಲಿ ಹೇಳಿದ್ದಾರೊ ನನಗೆ ಗೊತ್ತಿಲ್ಲ. ಅಂತಹ ಒಪ್ಪಂದ ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ' ಎಂದೂ ಅವರು ಹೇಳಿದರು.

ಸದ್ಯಕ್ಕೆ ಅಧಿಕಾರ ಹಸ್ತಾಂತರದ ಪ್ರಸ್ತಾಪವಿಲ್ಲ– ಡಿಕೆಶಿ

'ನಾನು ನಿಮ್ಮ ಮುಂದೆ ಏನೂ ಮಾತನಾಡಿಲ್ಲ. ಪರಮೇಶ್ವರ ಹಾಗೂ ಇತರರ ಜೊತೆಯಲ್ಲೂ ಮಾತನಾಡಿಲ್ಲ. ನಾನು ಸುದ್ದಿ ವಾಹಿನಿಯೊಂದರಲ್ಲಿ ನನ್ನದೇ ಆದ ವಿಚಾರ ಪ್ರಸ್ತಾಪಿಸಿದ್ದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಪರಮೇಶ್ವರ ಅವರ ಮಾತಿಗೆ ಪ್ರತಿಕ್ರಿಯೆ ನೀಡಿದ ಅವರು, 'ನಾವು ಏನು ಮಾತನಾಡಿಕೊಂಡಿದ್ದೇವೆ ಎಂದು ನಿಮ್ಮ (ಮಾಧ್ಯಮ) ಮುಂದೆ ಹೇಳಲು ಸಾಧ್ಯವೇ? ಈ ವಿಚಾರದಲ್ಲಿ ಯಾವುದೇ ಚರ್ಚೆ ಇಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ನಾನು ಚರ್ಚೆ ಮಾಡುವುದಿಲ್ಲವೆಂದು ಒಪ್ಪಿಕೊಂಡಿದ್ದೇನೆ. ಮುಖ್ಯಮಂತ್ರಿಯ ಮಾತನ್ನು ನಾನು ಒಪ್ಪುತ್ತೇನೆ. ಸದ್ಯಕ್ಕೆ ಅಧಿಕಾರ ಹಸ್ತಾಂತರದ ಪ್ರಸ್ತಾಪವಿಲ್ಲ. ಯಾವುದೇ ಸಮಸ್ಯೆ ಇಲ್ಲದೆ ನಮ್ಮ ಸರ್ಕಾರದ ಅಧಿಕಾರ ಅವಧಿಯನ್ನು ಪೂರ್ಣಗೊಳಿಸುತ್ತೇವೆ' ಎಂದರು.

ನಿಮ್ಮ ಮತ್ತು ಪರಮೇಶ್ವರ ನಡುವೆ ಭಿನ್ನಾಭಿಪ್ರಾಯ ಇದೆಯೇ?' ಎಂಬ ಪ್ರಶ್ನೆಗೆ, 'ನನಗೆ ಯಾರ ಜೊತೆಗೂ ಭಿನ್ನಾಭಿಪ್ರಾಯ ಇಲ್ಲ. ರಾಜಕೀಯದಲ್ಲಿ ನನಗೆ ಯಾರೂ ವೈರಿಗಳಲ್ಲ. ಪಕ್ಷದಲ್ಲಿ ನಾವು ಜೊತೆಗೂಡಿ ಕೆಲಸ ಮಾಡಿದ್ದೇವೆ. ಮುಂದೆಯೂ ಜೊತೆಯಲ್ಲೇ ಸಾಗುತ್ತೇವೆ' ಎಂದರು.



ಸುದ್ದಿ 2 ನಿಮಿಷ

ವಕ್ಫ್–ಎರಡನೇ ಹಂತದ ಹೋರಾಟ: ಯತ್ನಾಳ

ನವದೆಹಲಿ: ವಕ್ಫ್ ಮುಂದಿನ ಹಂತದ ಹೋರಾಟವನ್ನು ಬಳ್ಳಾರಿ, ವಿಜಯನಗರ, ಹಾವೇರಿ, ದಾವಣಗೆರೆ ಜಿಲ್ಲೆಗಳಲ್ಲಿ ನಡೆಸಲಾಗುವುದು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ಗುರುವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮೊದಲ ಹಂತದಲ್ಲಿ ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕದ ಬಹುತೇಕ ಭಾಗಗಳಿಗೆ ಭೇಟಿ ನೀಡಲಾಗಿದೆ' ಎಂದರು.

'ಜಂಟಿ ಸಂಸದೀಯ ಸಮಿತಿಯ ಅವಧಿಯನ್ನು ಬಜೆಟ್ ಅಧಿವೇಶನದ ವರೆಗೆ ವಿಸ್ತರಿಸಲಾಗಿದೆ. ಲಭ್ಯ ಇರುವ ಎಲ್ಲ ದಾಖಲೆಗಳನ್ನು ಸಮಿತಿಗೆ ನೀಡಲಾಗಿದೆ. ಹೀಗಾಗಿ, ಈಗ ಮತ್ತೊಮ್ಮೆ ಸಮಿತಿಯವರನ್ನು ಭೇಟಿ ಮಾಡುವುದಿಲ್ಲ. 2ನೇ ಹಂತದ ಹೋರಾಟದ ಬಳಿಕ ರೈತರು ಹಾಗೂ ಮಠಾಧೀಶರನ್ನು ಒಳಗೊಂಡ ನಿಯೋಗದ ಮೂಲಕ ಸಮಿತಿಗೆ ದಾಖಲೆಗಳನ್ನು ಹಸ್ತಾಂತರಿಸಲಾಗುವುದು' ಎಂದರು.

ಚಾರುಕೀರ್ತಿ ಶ್ರೀಗಳ ನಿಷಿಧಿ ಮಂಟಪ ಉದ್ಘಾಟನೆ ಇಂದು



ಶ್ರವಣಬೆಳಗೊಳ (ಹಾಸನ): ಕ್ಷೇತ್ರದ ಬೆಳವಣಿಗೆಗೆ ದುಡಿದು ದೇಹ ತ್ಯಾಗ ಮಾಡಿದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸ್ಮರಣೆಯ ನಿಷಿಧಿ ಮಂಟಪ ಸಿದ್ಧವಾಗಿದ್ದು, ಡಿ.6ರಂದು ಉದ್ಘಾಟನೆಗೊಳ್ಳಲಿದೆ.

ಲೋಕಾರ್ಪಣೆ ಕಾರ್ಯಕ್ರಮಕ್ಕೆ ಜೈನ ಮಠಗಳ ಎಲ್ಲ ಮಠಾಧೀಶರು, ಆದಿಚುಂಚನಗಿರಿ, ಪೇಜಾವರ, ಸಿದ್ಧಗಂಗಾ ಶ್ರೀಗಳು, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜಕೀಯ ಮುಖಂಡರು ಭಾಗವಹಿಸಲಿದ್ದಾರೆ. 10 ಸಾವಿರಕ್ಕೂ ಅಧಿಕ ಭಕ್ತರು ಪಾಲ್ಗೊಳ್ಳಲಿದ್ದಾರೆ.

'ಈ ನಿಷಿಧಿ ಮಂಟಪವು 7 ಅಡಿ ಎತ್ತರ, 6 ಅಡಿ ಅಗಲವಿದ್ದು, 2 ಆಕರ್ಷಕ ಕಮಾನು, ಶ್ರೀಗಳ ಪಾದುಕೆ, ಅವರ ಜೀವನ ಚರಿತ್ರೆ, ಸಾಧನೆಯನ್ನು 6 ಇಂಚು ದಪ್ಪದ ಶಿಲೆಯಲ್ಲಿ ಶಾಸನಗಳಂತೆ ಕೆತ್ತಿಸಲಾಗಿದೆ' ಎಂದು ಜೈನಮಠದ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ತಿಳಿಸಿದರು.

'ಶ್ರೀಗಳ ಸ್ಮರಣೆಗೆ ಅವರಿಗೆ ಪ್ರಿಯವಾಗಿದ್ದ ಮಾವಿನಹಣ್ಣಿನ 10 ಸಾವಿರ ಗಿಡಗಳನ್ನು ಜನರಿಗೆ ವಿತರಿಸಲಾಗುವುದು. 54 ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ, ಸುತ್ತಲಿನ ಗ್ರಾಮಗಳಿಗೆ ನೀರು ಶುದ್ಧೀಕರಣ ಘಟಕ, ಹೈಮಾಸ್ಟ್ ದೀಪಗಳನ್ನು ಕೊಡುಗೆಯಾಗಿ ನೀಡಲಾಗುತ್ತದೆ' ಎಂದರು.



ಬಸ್ಸಿಗಾಗಿ ಪರದಾಟ

ಹಾಸನದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಜನಕಲ್ಯಾಣ ಸಮಾವೇಶಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ನಿಯೋಜಿಸಿದ್ದರಿಂದ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪರದಾಡಿದರು –ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಪ್ರವೀಣ್ ನೆಟ್ಟಾರು ಹತ್ಯೆ: ತನಿಖೆ ಚುರುಕು

ಕರ್ನಾಟಕ, ತಮಿಳುನಾಡಿನ 16 ಸ್ಥಳಗಳಲ್ಲಿ ಎನ್‌ಐಎ ಅಧಿಕಾರಿಗಳಿಂದ ಶೋಧ: ದಾಖಲೆ ಜಪ್ತಿ

ಪ್ರಜಾವಾಣಿ ವಾರ್ತೆ



ಪ್ರವೀಣ್ ನೆಟ್ಟಾರು

ಬೆಂಗಳೂರು: ಬಿಜೆಪಿ ಯುವ ಮೋರ್ಚಾದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಮುಖಂಡರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಸಂಬಂಧ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಕರ್ನಾಟಕ, ತಮಿಳುನಾಡಿನ ವಿವಿಧೆಡೆ ಗುರುವಾರ ನಸುಕಿನ ವೇಳೆ ಏಕಕಾಲಕ್ಕೆ ದಾಳಿ ನಡೆಸಿ, ಶೋಧ ನಡೆಸಿದರು.

16 ವಿವಿಧ ಸ್ಥಳಗಳಲ್ಲಿ ದಾಳಿ ನಡೆದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು 2022ರ ಆಗಸ್ಟ್ 4ರಂದು ಎನ್‌ಐಎ ವಹಿಸಿಕೊಂಡಿತ್ತು.

'ತಲೆಮರೆಸಿಕೊಂಡಿರುವ ಆರೋಪಿಗಳು, ಶಂಕಿತರು, ಅವರ ಸಹಚರರ ಮನೆಗಳ ಮೇಲೆ ದಾಳಿ ನಡೆಸಿ ಡಿಜಿಟಲ್ ಪರಿಕರ ಸೇರಿದಂತೆ ವಿವಿಧ ದಾಖಲೆ ಜಪ್ತಿ ಮಾಡಲಾಗಿದೆ' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಕೋರ್ಟ್ ಅನುಮತಿ ಜೊತೆಗೆ ಬಂದಿದ್ದ ಎನ್‌ಐಎ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ, ಕೊಡಗು ಜಿಲ್ಲೆಯ ಸೋಮವಾರಪೇಟೆ, ಸುಂಟಿಕೊಪ್ಪ, ಬೆಂಗಳೂರು ನಗರ ಹಾಗೂ ತಮಿಳುನಾಡಿನ ಚೆನ್ನೈನಲ್ಲಿ ಶಂಕಿತರ ಮನೆಗಳ ಮೇಲೆ ದಾಳಿ ನಡೆಸಿ ಶೋಧಿಸಿದರು.

'ಸೋಮವಾರಪೇಟೆ ತಾಲ್ಲೂಕಿನ ಮುಸ್ತಾಫಾ ಹಾಗೂ ತೌಶಿಕ್ ಮನೆ, ಸುಂಟಿಕೊಪ್ಪದಲ್ಲಿ ರಫೀಕ್ ಅವರ ಮನೆ ಮೇಲೆ ದಾಳಿ ನಡೆಸಿದ್ದು, ಅಧಿಕಾರಿಗಳು ದಾಖಲೆಗಳ ಪರಿಶೀಲನೆ, ಕುಟುಂಬದವರ ವಿಚಾರಣೆ ನಡೆಸಿದೆ. 'ಮಾಹಿತಿ ಕಲೆಹಾಕಲಾಗಿದೆ. ಯಾರನ್ನೂ ವಶಕ್ಕೆ ಪಡೆದಿಲ್ಲ' ಎಂದು ಮೂಲಗಳು ತಿಳಿಸಿವೆ.

ಏಳು ಆರೋಪಿಗಳಿಗೆ ಶೋಧ: 'ಈವರೆಗೆ 19 ಆರೋಪಿಗಳನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವವರು ಸೇರಿ 23 ಮಂದಿ ವಿರುದ್ಧ ಎನ್‌ಐಎ ಪ್ರಕರಣಗಳ ವಿಶೇಷ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಏಳು ಆರೋಪಿಗಳ ವಿರುದ್ಧ ಜಾಮೀನುರಹಿತ ಬಂಧನ ವಾರಂಟ್ ಹೊರಡಿಸಲಾಗಿದೆ. ಸುಳಿವು ನೀಡಿದವರಿಗೆ ಬಹುಮಾನ ಸಹ ಘೋಷಿಸಲಾಗಿದೆ' ಎಂದು ಎನ್‌ಐಎ ಹೇಳಿದೆ.

'ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ 2022ರ ಜುಲೈ 26ರಂದು ಪ್ರವೀಣ್ ನೆಟ್ಟಾರು ಅವರನ್ನು ಇರಿದು ಹತ್ಯೆ ಮಾಡಲಾಗಿತ್ತು. ಭಯದ ವಾತಾವರಣ ಸೃಷ್ಟಿಸಲು ನಿಷೇಧಿತ ಪಿಎಫ್‌ಐ ಸಂಘಟನೆಯ ಸದಸ್ಯರು ಹತ್ಯೆ ಮಾಡಿದ್ದರು ಎಂದು ತನಿಖೆಯಿಂದ ಗೊತ್ತಾಗಿತ್ತು' ಎಂದು ಎನ್‌ಐಎ ತಿಳಿಸಿದೆ.

ದೋಷಾರೋಪ ಪಟ್ಟಿ ಸಲ್ಲಿಕೆ: ಆರೋಪಿಗಳಾದ ಮುಸ್ತಫಾ ಪೈಚಾರ್ ಹಾಗೂ ಎಚ್‌.ವೈ.ರಿಯಾಜ್ ವಿರುದ್ಧ ಎನ್‌ಐಎ ಆಗಸ್ಟ್ 4ರಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. '240 ಸಾಕ್ಷಿಗಳ ಹೇಳಿಕೆ ಸೇರಿ 1,500 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ' ಎಂದು ತಿಳಿಸಿವೆ.

ಆರೋಪಿಗಳ ಪತ್ತೆಗಾಗಿ ಹುಡುಕಾಟ

ಬೆಳ್ತಂಗಡಿ/ಪುತ್ತೂರು: ಹತ್ಯೆ ಪ್ರಕರಣದ ಇಬ್ಬರು ಆರೋಪಿಗಳ ಪತ್ತೆಗಾಗಿ ಎನ್‌ಐಎ ಅಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಪಡಂಗಡಿ, ಪುತ್ತೂರು ತಾಲ್ಲೂಕಿನ ಕೆಯ್ಯೂರಿನಲ್ಲೂ ಶೋಧ ನಡೆಸಿದರು.

ಆರೋಪಿ ನೌಷದ್ (27) ಮನೆ ಬೆಳ್ತಂಗಡಿಯ ಪಡಂಗಡಿ ಗ್ರಾಮದ ಪೊಯ್ಯಗುಡ್ಡೆ ಕಾಲೊನಿಯಲ್ಲಿದೆ. ಅಲ್ಲಿ ಅಧಿಕಾರಿಗಳು ತಪಾಸಣೆ ನಡೆಸಿದರು. ನೌಷದ್ ತಾಯಿ ತುಲೈಕಾ, ತಂಗಿ ತಸ್ರಿಫಾ ಅವರನ್ನು ವಿಚಾರಣೆಗೆ ಒಳಪಡಿಸಿದರು ಎಂದು ಮೂಲಗಳು ತಿಳಿಸಿವೆ.

'ಎನ್‌ಐಎ ತಂಡ ನಸುಕಿನ 5.30ಕ್ಕೆ ಪಡಂಗಡಿಗೆ ಬಂದಿತ್ತು. ಮಾಹಿತಿ ತಿಳಿದು ತಸ್ರಿಫಾ, ತುಲೈಕಾ ಮನೆಗೆ ಬೀಗ ಹಾಕಿ ತೆರಳಿದ್ದರು. ಕುವೆಟ್ಟು ಗ್ರಾಮದ ಮನೆಯೊಂದರಲ್ಲಿ ಇರುವ ಮಾಹಿತಿ ಅಧಿಕಾರಿಗಳಿಗೆ ಸಿಕ್ಕಿತ್ತು. ಅಲ್ಲಿಂದ ಇಬ್ಬರನ್ನು ಪೊಯ್ಯಗುಡ್ಡೆಗೆ ಕರೆತಂದು ಮನೆ ಬೀಗ ತೆಗೆಯಿಸಿ ಪರಿಶೀಲಿಸಿದರು. ನೌಷದ್ ಪತ್ನಿ ಸೈನಾಝ್ ತಲೆಮರೆಸಿಕೊಂಡಿದ್ದು, ಆಕೆಗಾಗಿ ಶೋಧ ನಡೆದಿದೆ' ಎಂದು ಹೇಳಿವೆ.

ನೌಷದ್ ಸುಳಿವು ನೀಡಿದವರಿಗಾಗಿ ಎನ್‌ಐಎ ₹2 ಲಕ್ಷ ಬಹುಮಾನ ಘೋಷಣೆ ಮಾಡಿದೆ.

ಕೊಲೆಗೆ ಸಹಕರಿಸಿದ್ದ ಆರೋಪಿ ಅಬೂಬಕ್ಕರ್ ಸಿದ್ದೀಕ್ ಪತ್ನಿ ರಿಯಾನ ಪುತ್ತೂರು ತಾಲ್ಲೂಕಿನ ಅರಿಕ್ಕಿಲದಲ್ಲಿ ಮಸೀದಿ ಹಿಂಬದಿಯ ಮನೆಯಲ್ಲಿ ವಾಸವಿದ್ದಾರೆ. ಎರಡು ವಾಹನಗಳಲ್ಲಿ ಸ್ಥಳಕ್ಕೆ ತೆರಳಿದ್ದ ಇನ್‌ಸ್ಪೆಕ್ಟರ್ ಅರುಣ್ ನೇತೃತ್ವದ ಎನ್‌ಐಎ ಪೊಲೀಸರ ತಂಡವು ಸಂಪ್ಯ ಠಾಣೆಯ ಪೊಲೀಸರ ಸಹಕಾರದೊಂದಿಗೆ ಪರಿಶೀಲನೆ ನಡೆಸಿತು.

ಕೊಲೆ ನಡೆದ ವೇಳೆ ಸ್ಥಳದಲ್ಲೇ ಇದ್ದು, ಬಳಿಕ ಆರೋಪಿಗಳಿಗೆ ಸಹಕರಿಸಿದ ಆರೋಪ ಅಬೂಬಕ್ಕರ್ ಸಿದ್ದೀಕ್ ಮೇಲಿದೆ. ಕೃತ್ಯದ ಬಳಿಕ ಸಿದ್ದೀಕ್ ತಲೆಮರೆಸಿಕೊಂಡಿದ್ದಾನೆ. ಪತ್ನಿ ರಿಯಾನ, ಅರಿಕ್ಕಿಲದ ಸಹೋದರನ ಮನೆಯಲ್ಲಿದ್ದರು ಎಂದು ಪೊಲೀಸರು ಹೇಳಿದರು.

ಮುಡಾ ಮಾಜಿ ಆಯುಕ್ತ ನಟೇಶ್ ವಿರುದ್ಧ ಲೋಕಾಯುಕ್ತಕ್ಕೆ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಅವರು 50:50 ಅನುಪಾತದಲ್ಲಿ ನಿವೇಶನಗಳ ಹಂಚಿಕೆ ಮೂಲಕ ಅಕ್ರಮವಾಗಿ ಗಳಿಸಿದ ಹಣವನ್ನು ಪತ್ನಿ ರಶ್ಮಿ ಹೆಸರಿನಲ್ಲಿ ವಿವಿಧ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದು, ಆ ಬಗ್ಗೆ ತನಿಖೆ ನಡೆಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಗುರುವಾರ ಇಲ್ಲಿನ ಲೋಕಾಯುಕ್ತ ಎಸ್‌.ಪಿ. ಕಚೇರಿಗೆ ದೂರು ಸಲ್ಲಿಸಿದರು.

'ರಶ್ಮಿ ಅವರು ಬ್ಲೂಸ್ಟೋನ್, ವಿಪಾಸನ ಹೆಲ್ತ್ ಕೇರ್, ಅಕುನೋವ ಹೆಲ್ತ್ ಕೇರ್ ಎಂಬ ಕಂಪನಿಗಳಲ್ಲಿ ನಿರ್ದೇಶಕಿ. ಈ ಸಂಸ್ಥೆಯು ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯಲ್ಲಿ 2020ರಲ್ಲಿ ₹64.75 ಲಕ್ಷ ಮೊತ್ತಕ್ಕೆ 1 ಎಕರೆ 30 ಗುಂಟೆ ಜಮೀನು ಖರೀದಿಸಿದೆ. ಅದೇ ಸಂಸ್ಥೆಯ ಮೂಲಕ 2022ರಲ್ಲಿ ಮೈಸೂರು ನಗರದ ಬೋಗಾದಿಯಲ್ಲಿ ₹44.99 ಲಕ್ಷ ಮೌಲ್ಯದ ಫ್ಲ್ಯಾಟ್ ಖರೀದಿಸಲಾಗಿದೆ. ನಟೇಶ್ ಅವರೇ ಬೇನಾಮಿ ಹೆಸರಿನಲ್ಲಿ ಅಕ್ರಮ ಹೂಡಿಕೆ ಮಾಡಿರುವ ಸಾಧ್ಯತೆ ಇದ್ದು, ತನಿಖೆಗೆ ಒಳಪಡಿಸಬೇಕು' ಎಂದು ತಿಳಿಸಿದ್ದಾರೆ.

ಮಾಜಿ ಆಯುಕ್ತರಿಂದ ಸರ್ಕಾರಕ್ಕೆ ಬೆದರಿಕೆ: ಶ್ರೀವತ್ಸ ಆರೋಪ



ಟಿ.ಎಸ್.ಶ್ರೀವತ್ಸ

ಮೈಸೂರು: 'ಮುಡಾದ ಇಬ್ಬರು ಮಾಜಿ ಆಯುಕ್ತರು ಸರ್ಕಾರಕ್ಕೆ ಬೆದರಿಕೆ ಹಾಕುತ್ತಿದ್ದು, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸರ್ಕಾರ ಮೀನಮೇಷ ಎಣಿಸುತ್ತಿದೆ' ಎಂದು ಶಾಸಕ ಟಿ.ಎಸ್. ಶ್ರೀವತ್ಸ ಅಸಮಾಧಾನ ವ್ಯಕ್ತಪಡಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಂಡರೆ ಅಧಿಕಾರಿಗಳು ಗಡಗಡ ನಡುಗುತ್ತಿದ್ದರು. ಆದರೆ ಮಾಜಿ ಆಯುಕ್ತರಾದ ಡಿ.ಬಿ.ನಟೇಶ್ ಮತ್ತು ಜಿ.ಟಿ.ದಿನೇಶ್ ಕುಮಾರ್ ಸೇರಿ ಮುಖ್ಯಮಂತ್ರಿಯನ್ನೇ ನಡುಗಿಸುತ್ತಿದ್ದಾರೆ. ಸಚಿವ ಭೈರತಿ ಸುರೇಶ್ ಮೇಲೆ ಪ್ರಭಾವ ಬೀರಿದ್ದಾರೆ. ನಮ್ಮನ್ನು ಮುಟ್ಟಿದರೆ ಬೇರೆ ಎಲ್ಲ ಬಯಲಿಗೆ ಬರುತ್ತದೆ ಎಂದು ಬೆದರಿಕೆ ಒಡ್ಡಿರಬಹುದು' ಎಂದು ದೂರಿದರು.

'ದಟ್ಟಗಳ್ಳಿಯಲ್ಲಿ 48 ನಿವೇಶನಗಳ ಅಕ್ರಮ ಹಂಚಿಕೆಯಲ್ಲಿ ದಿನೇಶ್ ಕುಮಾರ್ ನೇರ ಪಾತ್ರವಿದೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ಪತ್ರ ಬರೆದಿದ್ದೇನೆ' ಎಂದರು.

'ಇಬ್ಬರು ಅಧಿಕಾರಿಗಳೂ ಬೇರೆ ಕಡೆ ತಮ್ಮ ಸಂಬಂಧಿಕರ ಹೆಸರಿನಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ದೂರಿದ್ದಾರೆ. ವಕ್ರತುಂಡ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ದಿನೇಶ್ ಕುಮಾರ್ ಕುಟುಂಬದ ಸದಸ್ಯರಿದ್ದಾರೆ. ಇ.ಡಿ. ಈ ಕುರಿತು ಪರಿಶೀಲಿಸಬೇಕು. ಅಕ್ರಮದಲ್ಲಿ ಯಾವ ಪಕ್ಷದವರು ಭಾಗಿಯಾಗಿದ್ದರೂ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಜೂಜಾಟದಲ್ಲಿ ₹ 80 ಲಕ್ಷ ನಷ್ಟ: ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಸೋಮನಾಥ

ಕಲಬುರಗಿ: ಆನ್‌ಲೈನ್ ಜೂಜಾಟದ ವ್ಯಸನಕ್ಕೆ ಸಿಲುಕಿ ಸಾಲ ಮಾಡಿಕೊಂಡು ಅದನ್ನು ತೀರಿಸಲಾಗದೇ ಒತ್ತಡಕ್ಕೆ ಸಿಲುಕಿದ್ದ ವಿದ್ಯಾರ್ಥಿ ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಜಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಬಿಎಸ್ಸಿ ನರ್ಸಿಂಗ್ ಅಂತಿಮ ವರ್ಷದ ವಿದ್ಯಾರ್ಥಿ, ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಡೋಣಗಾಪುರ ಗ್ರಾಮದ ನಿವಾಸಿ ಸೋಮನಾಥ ಚಿದ್ರಿ (22) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

ಆನ್‌ಲೈನ್ ಜೂಜಿನ ಮೋಹಕ್ಕೆ ಬಿದ್ದಿದ್ದ ಈತ ₹80 ಲಕ್ಷಕ್ಕೂ ಅಧಿಕ ಹಣ ಕಳೆದುಕೊಂಡಿದ್ದ. ಹಣವನ್ನು ಶೇ 4ರಿಂದ ಶೇ 10ರ ಬಡ್ಡಿ ದರದಲ್ಲಿ ತಂದಿದ್ದ. ಸಾಲಗಾರರ ಕಾಟದಿಂದ ಬೇಸತ್ತು ವೀರಶೈವ ಹಾಸ್ಟೆಲ್ ಸಮೀಪದ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಈ ಕುರಿತು ಪ್ರತಿಕ್ರಿಯಿಸಿದ ಕಲಬುರಗಿ ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್‌.ಡಿ, 'ಆನ್‌ಲೈನ್ ಜೂಜಾಟದಿಂದ ₹70 ಲಕ್ಷದಿಂದ ₹80 ಲಕ್ಷ ಹಣ ಕಳೆದುಕೊಂಡಿದ್ದ ಎಂದು ಪೋಷಕರು ದೂರು ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಸುತ್ತಿದ್ದೇವೆ' ಎಂದರು.

'ಸಿದ್ದರಾಮಯ್ಯ ಉಚ್ಚಾಟಿಸಿದ್ದು ಏಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್‌ನಲ್ಲಿದ್ದಾಗ ಪಕ್ಷದ ವೇದಿಕೆಯಲ್ಲೇ ಅಹಿಂದ ಸಮಾವೇಶ ಮಾಡಿದ್ದರೆ ಎಚ್‌.ಡಿ. ದೇವೇಗೌಡರು ನಿಮ್ಮನ್ನು ಏಕೆ ಉಚ್ಚಾಟಿಸುತ್ತಿದ್ದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಎಕ್ಸ್'ನಲ್ಲಿ ಹೇಳಿಕೆ ನೀಡಿರುವ ಅವರು, 'ಅಂದು ಅಹಂನಿಂದ ಪಕ್ಷ ವಿರೋಧಿ ಚಟುವಟಿಕೆ, ಪಿತೂರಿ ನಡೆಸಿದ್ದಕ್ಕೆ ಸಿದ್ದರಾಮಯ್ಯ ಅವರನ್ನು ಉಚ್ಚಾಟಿಸಲಾಯಿತು' ಎಂದಿದ್ದಾರೆ.

'ಮುಡಾ ಹಗರಣ ಬುಡಕ್ಕೆ ಬಂದಿರುವಾಗ ರಕ್ಷಾ ಕವಚವಾಗಿ ಅಹಿಂದ ನೆನಪಾಗುತ್ತಿದೆ. ಮೆತ್ತಿಕೊಂಡಿರುವ ಕಪ್ಪುಮಸಿ ಮರೆಮಾಚಲು ಸ್ವರಕ್ಷಣೆಗಾಗಿ ಹಾಸನದಲ್ಲಿ ಸಮಾವೇಶ ಮಾಡಿದ್ದಾರೆ' ಎಂದು ಟೀಕಿಸಿದ್ದಾರೆ.

ಅಬಕಾರಿ ಸನ್ನದಿಗೆ ಮುದ್ರಾಂಕ ಶುಲ್ಕ ಅಸಾಂವಿಧಾನಿಕ: ಹೈಕೋರ್ಟ್

ಬೆಂಗಳೂರು: 'ಅಬಕಾರಿ ಸನ್ನದುದಾರರಿಗೆ ಮುದ್ರಾಂಕ ಶುಲ್ಕ ವಿಧಿಸಿದ್ದ ಸರ್ಕಾರದ ಕ್ರಮವನ್ನು ಅಸಾಂವಿಧಾನಿಕ' ಎಂದು ಸಾರಿರುವ ಹೈಕೋರ್ಟ್, ಈ ಸಂಬಂಧ ರಾಜ್ಯ ಸರ್ಕಾರ 2015ರಲ್ಲಿ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ.

'ಕರ್ನಾಟಕ ಮದ್ಯ ಮಾರಾಟಗಾರರ ಸಂಘಗಳ ಒಕ್ಕೂಟ'ದ ಕಾರ್ಯದರ್ಶಿ ಉಡುಪಿಯ ಬಿ.ಗೋವಿಂದರಾಜ ಹೆಗ್ಡೆ 2015ರಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಕರ್ನಾಟಕ ಅಬಕಾರಿ ಕಾಯ್ದೆ–1965ರ ಅಡಿಯಲ್ಲಿ ನೀಡಲಾಗಿರುವ ಅಬಕಾರಿ ಸನ್ನದುಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ–1957ರ ಕಲಂ 32 ಎ ಮತ್ತು 53 ಎ ಅನ್ವಯವಾಗುವುದಿಲ್ಲ'. ಹಾಗಾಗಿ, ಸರ್ಕಾರ 2014ರ ಆಗಸ್ಟ್ 12ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಲಾಗುತ್ತಿದೆ' ಎಂದು ನ್ಯಾಯಪೀಠ ತಿಳಿಸಿದೆ.

ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ) ನಿಯಮ–1968ರ ಅಡಿಯಲ್ಲಿ ಅರ್ಜಿದಾರರು 2014-15ನೇ ಸಾಲಿಗೆ ಸಿಎಲ್-2 (ವೈನ್ ಸ್ಟೋರ್) ಮತ್ತು ಸಿಎಲ್-9 (ಬಾರ್ ಅಂಡ್ ರೆಸ್ಟೋರೆಂಟ್) ಅಬಕಾರಿ ಪರವಾನಗಿ ಪಡೆದುಕೊಂಡಿದ್ದರು. ಆ ಸಮಯದಲ್ಲಿ ಅಬಕಾರಿ ಇಲಾಖೆಯು ಸನ್ನದುಗಳ ಮೇಲೆ ಮುದ್ರಾಂಕ ಶುಲ್ಕ ಪಾವತಿಸುವಂತೆ ಆದೇಶಿಸಿತ್ತು.

ಯತ್ನಾಳ ತಕ್ಕ ಫಲ ಅನುಭವಿಸುತ್ತಾರೆ: ಸಾಣೇಹಳ್ಳಿ ಶ್ರೀ

ತರೀಕೆರೆ (ಚಿಕ್ಕಮಗಳೂರು): 'ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿವೇಕ ಕಳೆದುಕೊಂಡಂತೆ ಮಾತಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅದಕ್ಕೆ ತಕ್ಕ ಫಲವನ್ನು ಅನುಭವಿಸಬೇಕಾಗುತ್ತದೆ' ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತರೀಕೆರೆಯಲ್ಲಿ ಮಾಜಿ ಶಾಸಕ ಡಿ.ಎಸ್. ಸುರೇಶ್ ಅವರ ತಂದೆ ಡಿ.ಸಿ. ಶಾಂತವೀರಣ್ಣ ಅವರ ಶಿವಾಗಣಾರಾಧನೆ ಮತ್ತು ಸರ್ವ ಶರಣರ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ಸ್ವಂತ ಘಟಕ ಸ್ಥಾಪನೆಗೆ ಚಿಂತನೆ –ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ

'ನಂದಿನಿ' ದೋಸೆ ಹಿಟ್ಟು ತಯಾರಿಕೆಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಸಂಸ್ಥೆ ಉತ್ಪಾದಿಸಿದ ದೋಸೆ ಹಿಟ್ಟನ್ನು 'ನಂದಿನಿ' ಬ್ರ್ಯಾಂಡ್‌ನಡಿ ಮಾರಾಟ ಮಾಡುವ ಪ್ರಸ್ತಾವವನ್ನು ಆರು ತಿಂಗಳ ಹಿಂದೆ ತಡೆಹಿಡಿಯಲಾಗಿದೆ. ಸ್ವಂತ ಉತ್ಪಾದನಾ ಘಟಕ ನಿರ್ಮಿಸುವ ಪ್ರಸ್ತಾವ ಇದೆ' ಎಂದು ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಭೀಮಾನಾಯ್ಕ ತಿಳಿಸಿದರು.

'ನಂದಿನಿ' ಬ್ರ್ಯಾಂಡ್‌ನಡಿ ದೋಸೆ ಹಿಟ್ಟು ಮಾರಲು ಮುಂದಾದದ್ದೇ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂ.ಕೆ. ಜಗದೀಶ್ ವರ್ಗಾವಣೆಗೆ ಕಾರಣ' ಎಂದು ಸಾಮಾಜಿಕ ಜಾಲತಾಣದಲ್ಲಿ ನಡೆಯುತ್ತಿರುವ ಚರ್ಚೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ವರ್ಗಾವಣೆಗೂ ದೋಸೆ ಹಿಟ್ಟಿಗೂ ಸಂಬಂಧವೇ ಇಲ್ಲ' ಎಂದರು.

'ಹಸಿರು ಪ್ರಾಡಕ್ಟ್ಸ್ ಹೆಸರಿನ ಕಂಪನಿ ಉತ್ಪಾದಿಸುವ ದೋಸೆ ಹಿಟ್ಟನ್ನು 'ನಂದಿನಿ' ಬ್ರ್ಯಾಂಡ್ ಅಡಿ ಮಾರಾಟ ಮಾಡುವ ಪ್ರಸ್ತಾವವನ್ನು ಕೆಎಂಎಫ್ ಮಂಡಳಿ ಮುಂದಿಡಲಾಗಿತ್ತು. ಕೆಎಂಎಫ್‌ಗೆ ಉತ್ಪಾದನೆ ಮೇಲೆ ಯಾವುದೇ ನಿಯಂತ್ರಣ ಇಲ್ಲದೆ ಬ್ರ್ಯಾಂಡ್ ಬಳಕೆಗೆ ಅವಕಾಶ ಕಲ್ಪಿಸಿದರೆ ಸಮಸ್ಯೆ ಎದುರಾಗುವ ಅಪಾಯವಿದೆ. ದೋಸೆ ಹಿಟ್ಟಿನ ಗುಣಮಟ್ಟ ವ್ಯತ್ಯಾಸವಾದರೆ ಬ್ರ್ಯಾಂಡ್‌ಗೆ ಧಕ್ಕೆಯಾಗಲಿದೆ. ಹೀಗಾಗಿ, ಪ್ರಸ್ತಾವ ತಡೆ ಹಿಡಿಯಲಾಗಿತ್ತು' ಎಂದು ಹೇಳಿದರು.

'ಹಿಂದೆ ಮಂಡಿಸಿದ್ದ ಪ್ರಸ್ತಾವದ ಪ್ರಕಾರ, ದೋಸೆ ಹಿಟ್ಟು ಮಾರಾಟಕ್ಕೆ ಅನುಮತಿ ನೀಡಿದರೆ ವಾರ್ಷಿಕ ₹10 ಲಕ್ಷಗಳಷ್ಟು ಲಾಭ ಆಗುತ್ತದೆ. ಇಷ್ಟು ಚಿಕ್ಕ ಮೊತ್ತಕ್ಕೆ ನಂದಿನಿ ಬ್ರ್ಯಾಂಡ್‌ಗೆ ಧಕ್ಕೆಯಾಗುವಂತಹ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಈ ಕಾರಣದಿಂದ ದೋಸೆ ಹಿಟ್ಟು ಉತ್ಪಾದಿಸುವ ಸ್ವಂತ ಘಟಕ ಸ್ಥಾಪಿಸಿ, ನಮ್ಮ ಸಿಬ್ಬಂದಿಯಿಂದಲೇ ಉತ್ಪಾದಿಸಿ ಮಾರುಕಟ್ಟೆಗೆ ಪೂರೈಸಲು ಪ್ರಸ್ತಾವ ಮಂಡಿಸಲು ಸೂಚಿಸಿದ್ದೇವೆ' ಎಂದರು.



ಭೀಮಾನಾಯ್ಕ

ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್‌ಗೆ ಲಾಡು ಉತ್ಪಾದನೆಗೆ ಪೂರೈಕೆಯಾದ ತುಪ್ಪ ಕಳಪೆ ಗುಣಮಟ್ಟದಿಂದ ಕೂಡಿತ್ತು ಎಂಬುದು ಪರೀಕ್ಷೆಯಲ್ಲಿ ಪತ್ತೆಯಾಗಿತ್ತು. ಬಹುತೇಕ ತುಪ್ಪದ ಪೂರೈಕೆದಾರರು ಹೊರಗಿನಿಂದ ಪೂರೈಕೆಯಾದ ತುಪ್ಪವನ್ನು ತಮ್ಮ ಬ್ರ್ಯಾಂಡ್ ಅಡಿಯಲ್ಲಿ ಪೂರೈಸಿದ್ದರು. ಅಂತಹ ಸಮಸ್ಯೆಯನ್ನು ನಂದಿನಿ ಬ್ರ್ಯಾಂಡ್ ಎದುರಿಸಬಾರದು ಎಂಬ ಕಾರಣಕ್ಕಾಗಿ ದೋಸೆ ಹಿಟ್ಟಿನ ವಿಚಾರದಲ್ಲಿ ಕೆಎಂಎಫ್ ಆಡಳಿತ ಎಚ್ಚರಿಕೆಯ ಹೆಜ್ಜೆ ಇಡುತ್ತಿದೆ ಎಂದು ಹೇಳಿದರು.

ಕೆಎಂಎಫ್ ನಂದಿನಿ ಬ್ರ್ಯಾಂಡ್ ಅಡಿಯಲ್ಲಿ ಸುಮಾರು 160 ಉತ್ಪನ್ನಗಳನ್ನು ಉತ್ಪಾದಿಸಿ, ಮಾರಾಟ ಮಾಡುತ್ತಿದೆ. ಯಾವುದರಲ್ಲೂ ಗುಣಮಟ್ಟದ ಸಮಸ್ಯೆ ಆಗಿಲ್ಲ. ಅದೇ ಎಚ್ಚರಿಕೆ ದೋಸೆ ಹಿಟ್ಟಿನ ಉತ್ಪಾದನೆ ಮತ್ತು ಮಾರಾಟದ ವಿಚಾರದಲ್ಲೂ ಅಗತ್ಯ ಎಂಬುದು ಮಂಡಳಿಯ ನಿಲುವು ಎಂದರು.



ಕೇರಳದ ಲಾಬಿಗೆ ಮಣಿದು ಖಾಸಗಿ ಬ್ರ್ಯಾಂಡ್ ರಕ್ಷಿಸಲು 'ನಂದಿನಿ' ಉತ್ಪನ್ನಗಳ ಬಲಿ ಕೊಡಬೇಡಿ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಲಾಬಿ ಜತೆ ಕೈಜೋಡಿಸಿದ್ದಾರೆ.

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಕೇರಳದ ಲಾಬಿಗೆ ಮಣಿದು ಕೆಎಂಎಫ್‌ನ ಇಡ್ಲಿ ಮತ್ತು ದೋಸೆ ಹಿಟ್ಟು ಉತ್ಪನ್ನಗಳ ಬಿಡುಗಡೆ ತಡೆ ಹಿಡಿದಿದೆ ಎಂಬ ಮಾಹಿತಿ ಇದೆ. ಆದಷ್ಟು ಬೇಗ ಕೆಎಂಎಫ್‌ನಿಂದಲೇ ಈ ಉತ್ಪನ್ನಗಳು ಬಿಡುಗಡೆ ಆಗಬೇಕು

ವಿ.ಸುನಿಲ್‌ಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ



ಶುಕ್ರವಾರ, ಡಿಸೆಂಬರ್ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 337 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ
'ಗೆದ್ದವರಿಂದಷ್ಟೇ ಉದ್ಯಮವಲ್ಲ' ಅಯೋಗ್ಯ–2 ಚಿತ್ರದ ನಾಯಕ ನಟ ನೀನಾಸಂ ಸತೀಶ್ ಸಂದರ್ಶನ

ಆಳ–ಅಗಲ: ಅಪಾರ್: ಹಲವು ಸಾಧ್ಯತೆ, ಹಲವು ಸವಾಲು

ದುಬೆ ಹೇಳಿಕೆಗೆ ಕಾಂಗ್ರೆಸ್ ಆಕ್ರೋಶ 7

ಪುತ್ಥಳಿ ವಿರೂಪ: ಆರೋಪಿ ಬಂಧನ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,765	24,708	₹80,340 (ಬೆಂಗಳೂರು)	₹96,600 (ಬೆಂಗಳೂರು)	84.71

ಸಿದ್ದರಾಮಯ್ಯ ವೈಭವೀಕರಣಕ್ಕೆ ಸಮಾವೇಶ ಒತ್ತು • ಕಾಂಗ್ರೆಸ್ ನಾಯಕರಿಂದ ಒಗ್ಗಟ್ಟು ಪ್ರದರ್ಶನ

ಗೌಡರ ಕೋಟೆಯಲ್ಲಿ 'ಕೈ' ಆರ್ಭಟ

ಪ್ರಜಾವಾಣಿ ವಾರ್ತೆ

ಹಾಸನ: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ 'ಭದ್ರಕೋಟೆ' ಹಾಸನಕ್ಕೆ ಲಗ್ಗೆ ಇಟ್ಟ ಕಾಂಗ್ರೆಸ್ ಪಡೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವಕ್ಕೆ ಒಕ್ಕೊರಲ ಬೆಂಬಲ ಘೋಷಿಸಿ, ಒಗ್ಗಟ್ಟನ್ನು ಪ್ರದರ್ಶಿಸಿತು.

ಕೆಪಿಸಿಸಿ ಹಾಗೂ ಸ್ವಾಭಿಮಾನಿ ಒಕ್ಕೂಟ ಗುರುವಾರ ಇಲ್ಲಿ ಆಯೋಜಿಸಿದ್ದ 'ಜನ ಕಲ್ಯಾಣ ಸಮಾವೇಶ'ದಲ್ಲಿ ಲಕ್ಷಾಂತರ ಕಾರ್ಯಕರ್ತರು ಭಾಗವಹಿಸಿದ್ದರು. ಸಿದ್ದರಾಮಯ್ಯನವರ 'ವೈಭವೀಕರಣ'ಕ್ಕಾಗಿಯೇ ಹಮ್ಮಿಕೊಂಡಂತಿದ್ದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಅಭಿಮಾನಿ ಪಡೆ, ತಮ್ಮ ನೆಚ್ಚಿನ ನಾಯಕನ ಭಾವಚಿತ್ರವನ್ನು ಹಿಡಿದು ಘೋಷಣೆ ಮೊಳಗಿಸುತ್ತಲೇ ಇತ್ತು. ಮುಡಾ, ವಾಲ್ಮೀಕಿ ಪ್ರಕರಣಗಳನ್ನು ಮುಂದಿಟ್ಟು ವಿರೋಧ ಪಕ್ಷಗಳು ನಡೆಸುತ್ತಿರುವ ವಾಗ್ದಾಳಿಗಳಿಗೆ ಉತ್ತರ ನೀಡಿದ ಸಚಿವರು ಹಾಗೂ ಪಕ್ಷದ ನಾಯಕರು, ಸಿದ್ದರಾಮಯ್ಯ ನಾಯಕತ್ವ ಅಬಾಧಿತ ಎಂದು ಸಾರಿದರು.

6ನೇ ಪುಟ ನೋಡಿ

ದೇವೇಗೌಡರ ವಿರುದ್ಧ ಮುಖ್ಯಮಂತ್ರಿ ಕಿಡಿ



'ಮಾಜಿ ಪ್ರಧಾನಿ ದೇವೇಗೌಡರು ನನಗಿಂತ 15 ವರ್ಷ ಹಿರಿಯರು. ಅವರು ಅಷ್ಟೇ ಘನತೆಯಿಂದ ಮಾತಾಡಬೇಕಿತ್ತು. ಯಾವತ್ತೂ ಗರ್ವ ತೋರಿಸದ ನನಗೆ, ಸಿದ್ದರಾಮಯ್ಯ ಅವರ ಗರ್ವಭಂಗ ಮಾಡ್ತೀನಿ ಎಂದರು. ಇದನ್ನು ನೀವು ಒಪ್ಪಿಕೊಳ್ಳುತ್ತೀರಾ, ಸಹಿಸುತ್ತೀರಾ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಸಮಾವೇಶದಲ್ಲಿ ಮಾತನಾಡಿದ ಅವರು, 'ಕೊನೆಯ ಉಸಿರು ಇರುವವರೆಗೆ ರಾಜಕಾರಣ ಮಾಡುತ್ತೇನೆ ಎಂದು ದೇವೇಗೌಡರು ಹೇಳುತ್ತಾರೆ. ದೇವರು ಅವರಿಗೆ ಒಳ್ಳೆಯ ಆರೋಗ್ಯ ಕೊಡಲಿ. ಅವರು ರಾಜಕಾರಣವನ್ನೂ ಮಾಡಲಿ. ಆದರೆ, ಸೇಡಿನ ರಾಜಕಾರಣ ಮಾಡದಿರಲಿ' ಎಂದು ಹೇಳಿದರು.

ದೇವೇಗೌಡರು ರಾಜಕೀಯವಾಗಿ ಒಕ್ಕಲಿಗ ನಾಯಕರನ್ನು ನಿರಂತರವಾಗಿ ಮುಗಿಸುತ್ತಿದ್ದಾರೆ. ಬಚ್ಚೇಗೌಡರು, ವೈ.ಕೆ.ರಾಮಯ್ಯ, ಬೈರೇಗೌಡರು, ಕೃಷ್ಣಪ್ಪ, ಬಿ.ಎಲ್. ಶಂಕರ್, ಚಲುವರಾಯಸ್ವಾಮಿ ಸೇರಿ ಎಷ್ಟು ಮಂದಿ ಒಕ್ಕಲಿಗ ನಾಯಕರನ್ನು ಅವರು ರಾಜಕೀಯವಾಗಿ ಮುಗಿಸಿದರು? ಎಂದರು.

6ನೇ ಪುಟ ನೋಡಿ

ಬಂಡೆಯಂತೆ ಸಿದ್ದರಾಮಯ್ಯ ಹಿಂದೆ: ಡಿಕೆಶಿ



'ಈ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅವರ ಬೆನ್ನಹಿಂದೆ ಬಂಡೆಯಂತೆ ನಿಲ್ಲುವುದಾಗಿ ಮೈಸೂರಿನಲ್ಲಿ ಹೇಳಿದ್ದೇನೆ. ಈಗಲೂ ಇದ್ದೇನೆ, ನಾಳೆಯೂ ಇರುತ್ತೇನೆ. ಸಾಯುವವರೆಗೂ ಇರುತ್ತೇನೆ. ಇದು ಈ ಕನಕಪುರದ ಬಂಡೆಯ ಇತಿಹಾಸ' ಎಂದು ಶಿವಕುಮಾರ್ ಹೇಳಿದರು.

'ನಾನು ಎಲ್ಲಿ ಕೆಲಸ ಮಾಡುತ್ತೇನೋ ಅಲ್ಲಿ ಪ್ರಾಮಾಣಿಕತೆ ಯಿಂದ ಕೆಲಸ ಮಾಡುವುದು ನನ್ನ ಕರ್ತವ್ಯ' ಎಂದರು.

'ನಮ್ಮ ಪಕ್ಷದಲ್ಲಿದೆ ಒಗ್ಗಟ್ಟು, ಬಿಜೆಪಿಯಲ್ಲಿದೆ ಬಿಕ್ಕಟ್ಟು. ನಾವು ವಚನಪಾಲಕರು, ಅವರು ವಚನಭ್ರಷ್ಟರು. ಕಾಂಗ್ರೆಸ್ ಪಕ್ಷ ಬಲಿಷ್ಠವಾಗಿದ್ದರೆ ಮಾತ್ರ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಸಂಪುಟ ಸಚಿವರೆಲ್ಲರೂ ಸೇರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಈ ರಾಜ್ಯದ ಸೇವೆ ಮಾಡಿ ನಿಮ್ಮ ಋಣ ತೀರಿಸುತ್ತೇವೆ' ಎಂದು ಹೇಳಿದರು. 'ಸರ್ಕಾರದ ಶಕ್ತಿ ನೂರೆಂಟು, ಐದು ಗ್ಯಾರಂಟಿಗಳು ಪರ್ಮನೆಂಟು, 2028ರಲ್ಲಿ ನಾವೇ ಅಧಿಕಾರಕ್ಕೆ ಬರುವುದು ಹಂಡ್ರೆಡ್ ಪರ್ಸೆಂಟ್. ಇದನ್ನು ಬದಲಾವಣೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ' ಎಂದರು.

6ನೇ ಪುಟ ನೋಡಿ



ಮುಡಾ ಹಗರಣದ ಹೆಸರಿನಲ್ಲಿ ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಆಗುವುದಿಲ್ಲ. ಬದಲಾಗಿ ಉಪ ಚುನಾವಣೆಯ 3 ಸ್ಥಾನಗಳಲ್ಲಿ ಕಾಂಗ್ರೆಸ್‌ಗೆ ಜನ ಆಶೀರ್ವಾದ ಮಾಡಿದ್ದಾರೆ.

ಜಿ.ಪರಮೇಶ್ವರ, ಗೃಹ ಸಚಿವ



ಸಿದ್ದರಾಮಯ್ಯ ನಾಲ್ಕು ದಶಕಗಳಿಂದ ಕಳಂಕರಹಿತ ರಾಜಕಾರಣ ಮಾಡುತ್ತಿದ್ದಾರೆ. ಇಂತಹ ಮುಖ್ಯಮಂತ್ರಿಗೆ ಮುಡಾ ಹೆಸರಿನಲ್ಲಿ ಕಳಂಕ ತರಲು ವಿರೋಧ ಪಕ್ಷದವರು ಯತ್ನಿಸುತ್ತಿದ್ದಾರೆ.

ಲಕ್ಷ್ಮಿ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದೇಗುಲಕ್ಕೆ ದಲಿತರ ಪ್ರವೇಶ: ಪೂಜೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದಲಿತ ಯುವಕರು ದೇಗುಲ ಪ್ರವೇಶ ಮಾಡಿದ್ದ ತಾಲ್ಲೂಕಿನ ನರಸೀಪುರ ಗ್ರಾಮದ ತಿರುಮಲ ದೇವಸ್ಥಾನದಲ್ಲಿ ಎರಡು ದಿನಗಳಿಂದ ಪೂಜೆ ಸ್ಥಗಿತಗೊಂಡಿದೆ. ಪೂಜೆ ಪುನರ್ ಆರಂಭಿಸಲು ಗ್ರಾಮಸ್ಥರ ಮನವೊಲಿಸಲು ಅಧಿಕಾರಿಗಳು ಪ್ರಯತ್ನ ನಡೆಸಿದ್ದಾರೆ.

ತಾಲ್ಲೂಕಿನ ಬೆಳವಾಡಿ ಸಮೀಪದ ನರಸೀಪುರದಲ್ಲಿ 250ಕ್ಕೂ ಹೆಚ್ಚು ಕುರುಬ ಸಮುದಾಯದ ಕುಟುಂಬಗಳಿದ್ದು, ಪರಿಶಿಷ್ಟ ಜಾತಿಯ (ಆದಿ ಕರ್ನಾಟಕ) 13 ಕುಟುಂಬಗಳಿವೆ. ತಿರುಮಲ, ಬೀರಪ್ಪ, ಲಕ್ಷ್ಮೀದೇವಿ ಸೇರಿ ಸಣ್ಣಪುಟ್ಟ 9 ಗುಡಿಗಳಿವೆ. ತಿರುಮಲ ದೇವರ ಗುಡಿಯೇ ಊರ ಪ್ರಮುಖ ದೇಗುಲವಾಗಿದ್ದು, ಮುಜರಾಯಿ ಇಲಾಖೆ ಮೂಲಕ ಅರ್ಚಕರನ್ನು ನೇಮಿಸಿ ನಿರ್ವಹಣೆ ಮಾಡಲಾಗುತ್ತಿದೆ.

'ಅಸ್ಪೃಶ್ಯತೆ ಆಚರಣೆ ಕಾನೂನುಬಾಹಿರ, ಎಲ್ಲಾ ಜಾತಿಯ ಜನರಿಗೂ ದೇಗುಲದಲ್ಲಿ ಮುಕ್ತ ಅವಕಾಶ ಇದೆ ಎಂಬ ಫಲಕವನ್ನು ಮುಜರಾಯಿ ಇಲಾಖೆ ಎಲ್ಲಾ ದೇಗುಲಗಳಲ್ಲಿ ಅಳವಡಿಸಿದೆ. ಅದರಂತೆ ನಮ್ಮೂರಿನ ದೇಗುಲಕ್ಕೂ ಫಲಕ ಅಳವಡಿಸಲು ಅಧಿಕಾರಿಗಳು ಬಂದಿದ್ದರು. ಆದರೆ, ಆ ಫಲಕ ಎರಡು ವರ್ಷಗಳಿಂದ ಅಳವಡಿಕೆಯಾಗಿಲ್ಲ. ಪದೇ ಪದೇ ಕೇಳಿ ಬೇಸತ್ತಿದ್ದ ನಾವು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದೆವು' ಎಂದು ದಲಿತ ಯುವಕ ಹೇಮಂತಕುಮಾರ್ ಹೇಳಿದರು.

5ನೇ ಪುಟ ನೋಡಿ

ಮುಕ್ತ ಅವಕಾಶಕ್ಕೆ ಒಪ್ಪಿದ್ದಾರೆ: ಉಪವಿಭಾಗಾಧಿಕಾರಿ

'ಎರಡೂ ಸಮುದಾಯದವರನ್ನು ಸೇರಿಸಿ ಗುರುವಾರ ಸಂಜೆ ಸಭೆ ನಡೆಸಿದ್ದೇವೆ. ದೇಗುಲಕ್ಕೆ ಎಲ್ಲರಿಗೂ ಮುಕ್ತ ಅವಕಾಶ ನೀಡಲು ಗ್ರಾಮಸ್ಥರು ಒಪ್ಪಿದ್ದಾರೆ' ಎಂದು ಉಪವಿಭಾಗಾಧಿಕಾರಿ ದಲ್ಜಿತ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಎರಡು ದಿನ ಪೂಜೆ ನಿಂತಿದ್ದರಿಂದ ಕೆಲವು ವಿಧಿ–ವಿಧಾನಗಳನ್ನು ನೆರವೇರಿಸಬೇಕು ಎಂದು ಗ್ರಾಮಸ್ಥರು ಹೇಳಿದ್ದಾರೆ. ಶುಕ್ರವಾರ ಪೂಜೆ ಆರಂಭಿಸುವುದಾಗಿ ತಿಳಿಸಿದ್ದಾರೆ. ಒಂದು ವೇಳೆ ದಲಿತರಿಗೆ ಪ್ರವೇಶ ನಿರಾಕರಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

ನಗರದ 82ಕ್ಕೂ ಹೆಚ್ಚು ಕಡೆಗಳಲ್ಲಿ 'ನೀರು ಸಂಪರ್ಕ ಅಭಿಯಾನ'

ಕಾವೇರಿ ಹೊಸ ಸಂಪರ್ಕ: 4 ಸಾವಿರ ಅರ್ಜಿ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸೇರಿದ 110 ಹಳ್ಳಿಗಳಲ್ಲಿ ಕಾವೇರಿ ನೀರು ಪೂರೈಕೆಯ ಹೊಸ ಸಂಪರ್ಕಕ್ಕಾಗಿ ಒಂದು ತಿಂಗಳಲ್ಲಿ 4,085 ಅರ್ಜಿಗಳು ಸಲ್ಲಿಕೆಯಾಗಿವೆ. ಈವರೆಗೆ 1,142 ಹೊಸ ಸಂಪರ್ಕಗಳನ್ನು ಜಲಮಂಡಳಿ ಮಂಜೂರು ಮಾಡಿದೆ.

ನಾಲ್ಕು ವಲಯಗಳ ಪೈಕಿ ದಕ್ಷಿಣ ವಲಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದೊಂದೇ ವಲಯದಲ್ಲಿ ಶುಲ್ಕ ಸಹಿತವಾಗಿ ಸುಮಾರು ಎರಡು ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ. ಪಶ್ಚಿಮ ವಲಯದಲ್ಲಿ ಸುಮಾರು 1,700ರಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ. ಪೂರ್ವ ಮತ್ತು ಉತ್ತರ ವಲಯದಲ್ಲಿ ತಲಾ 300ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ.

'ಎರಡು ಸಾವಿರಕ್ಕೂ ಹೆಚ್ಚು ಮಂದಿಗೆ ಡಿಮ್ಯಾಂಡ್ ನೋಟಿಸ್ ವಿತರಿಸಲಾಗಿದೆ. ವಿವಿಧ ಕಾರಣಗಳಿಂದ ಸಾವಿರದ ಮುನ್ನೂರಕ್ಕೂ ಹೆಚ್ಚು ಅರ್ಜಿಗಳನ್ನು ಬಾಕಿ ಇರಿಸಲಾಗಿದೆ' ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

> **ನೀರಿನ ಕೊರತೆ ಉಲ್ಬಣಿಸಿದ ಬಳಿಕ ಕಾವೇರಿ ಸಂಪರ್ಕ ಕೇಳಿದರೆ, ತಕ್ಷಣದಲ್ಲಿ ಕೊಡುವುದು ಕಷ್ಟ. ಬೇಸಿಗೆಗೆ ಮುನ್ನವೇ ಸಂಪರ್ಕ ಪಡೆದುಕೊಂಡರೆ ಅನುಕೂಲ**
> **ರಾಮ್‌ಪ್ರಸಾತ್ ಮನೋಹರ್**
> ಅಧ್ಯಕ್ಷ, ಜಲಮಂಡಳಿ

ನಗರಕ್ಕೆ ಹೆಚ್ಚುವರಿಯಾಗಿ 775 ದಶಲಕ್ಷ ನೀರನ್ನು ಪೂರೈಸುವ ಕಾವೇರಿ 5ನೇ ಹಂತದ ಯೋಜನೆ ಉದ್ಘಾಟನೆಯಾಗಿ ಎರಡು ತಿಂಗಳು ಕಳೆದಿದೆ. ಅಂದಿನಿಂದಲೂ ಜಲಮಂಡಳಿ ಅಧಿಕಾರಿಗಳು ಕಾವೇರಿ ನೀರಿನ ಹೊಸ ಸಂಪರ್ಕ ಪಡೆಯುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ಡಿ.27ರವರೆಗೆ 'ಅಭಿಯಾನ': ಕಾವೇರಿ ಐದನೇ ಹಂತದ ಯೋಜನೆಯಡಿ ಡಿಸೆಂಬರ್ ಅಂತ್ಯದ ವೇಳೆಗೆ ಒಂದು ಲಕ್ಷ ಸಂಪರ್ಕ ನೀಡುವ ಗುರಿ ಜಲಮಂಡಳಿಯ ಮುಂದಿದೆ. ನವೆಂಬರ್ 27ರಿಂದ 110 ಹಳ್ಳಿಗಳ ವ್ಯಾಪ್ತಿಯ ಸುಮಾರು 82 ಪ್ರದೇಶಗಳಲ್ಲಿ 'ಕಾವೇರಿ ನೀರು-ಸಂಪರ್ಕ ಅಭಿಯಾನ' ಆರಂಭಿಸಿದೆ. ಡಿಸೆಂಬರ್ 27ರವರೆಗೆ ಅಭಿಯಾನ ಮುಂದುವರಿಯಲಿದೆ.



ಜಲಮಂಡಳಿ ಹಮ್ಮಿಕೊಂಡಿದ್ದ ಕಾವೇರಿ ನೀರು ಸಂಪರ್ಕ ಅಭಿಯಾನ

ಆಯಾ ವಲಯಗಳ ಮುಖ್ಯ ಎಂಜಿನಿಯರ್, ಸಹಾಯಕ ಎಂಜಿನಿಯರ್ ಸೇರಿ ಜಲಂಡಳಿ ಸಿಬ್ಬಂದಿ ಅಭಿಯಾನದಲ್ಲಿ ಭಾಗವಹಿಸಿದ್ದಾರೆ. ಅಭಿಯಾನದ ಸ್ಥಳಕ್ಕೆ ಭೇಟಿ ನೀಡಿದರೆ, ಹೊಸ ನೀರಿನ ಸಂಪರ್ಕ ಪಡೆಯುವ ಕುರಿತು ಮಾಹಿತಿ ಪಡೆಯುವ ಜೊತೆಗೆ ಸ್ಥಳದಲ್ಲೇ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪೂರ್ಣಗೊಳಿಸಬಹುದು.

ಆರಂಭದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಅರ್ಜಿಗಳು ಬಂದಿಲ್ಲ. ನಗರ ಸ್ಥಳೀಯ ಸಂಸ್ಥೆಗಳು ರೂಪಿಸಿದ್ದ ಉಚಿತ ನೀರು ಪೂರೈಕೆ ಸೌಲಭ್ಯ ಇರುವ ಕೆಲವು ಪ್ರದೇಶಗಳಲ್ಲಿ ನಾಗರಿಕರು ಹೊಸ ಸಂಪರ್ಕ ಪಡೆಯಲು ಆಸಕ್ತಿ ತೋರುತ್ತಿರಲಿಲ್ಲ. ಕೆಲವು ಕಡೆ ಸಂಪರ್ಕ ಕೊಡಿಸಲು ಮಧ್ಯವರ್ತಿಗಳು ನಿವಾಸಿಗಳಿಂದ ಹಣ ಪಡೆಯುತ್ತಿರುವ ದೂರುಗಳು ಜಲಮಂಡಳಿಗೆ ಬಂದಿದ್ದವು. ಇದನ್ನು ಮನಗಂಡ ಜಲಮಂಡಳಿ, ಅರ್ಜಿ ಹಾಗೂ ಠೇವಣಿ ಶುಲ್ಕದ ವಿವರಗಳನ್ನು ಒಳಗೊಂಡಿರುವ ಮಾಹಿತಿಯನ್ನು ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆಯನ್ನೂ ಮಾಡುತ್ತಿದೆ.

ಆನ್‌ಲೈನ್ ಮೂಲಕ ಶುಲ್ಕ: 'ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿದ ನಂತರ, ನೀರಿನ ಸಂಪರ್ಕಕ್ಕೆ ನಿಗದಿಪಡಿಸಿರುವ ಶುಲ್ಕದ ಬಗ್ಗೆ ಅರ್ಜಿದಾರರಿಗೆ ಸ್ಥಳದಲ್ಲೇ ಮಾಹಿತಿ ನೀಡಲಾಗುತ್ತದೆ. 'ಆರ್‌ಟಿಜಿಎಸ್ ಅಥವಾ ಎನ್‌ಇಎಫ್‌ಟಿ ಅಥವಾ ಡಿ.ಡಿ. ಮೂಲಕ ಪಾವತಿಸಬೇಕು. ಯಾವ ಕಾರಣಕ್ಕೂ ನಗದು ನೀಡಬಾರದು. ಶುಲ್ಕವನ್ನು ಜಲಮಂಡಳಿಯ ಅಧಿಕೃತ ಖಾತೆಗೇ ಪಾವತಿಸಬೇಕು' ಎಂದು ಜಲಮಂಡಳಿ ತಿಳಿಸಿದೆ.

ಅಂಕಿ ಅಂಶಗಳು

4085 ಸ್ವೀಕೃತ ಅರ್ಜಿ

2181 ಡಿಮ್ಯಾಂಡ್ ನೋಟಿಸ್ ಕೊಟ್ಟಿರುವುದು

1379 ಬಾಕಿ ಇರಿಸಿರುವ ಅರ್ಜಿಗಳು

ನ.1ರಿಂದ ಡಿ.2 ರವರೆಗೆ ಸಂಪರ್ಕದ ವಿವರ

ವಲಯ	ಸ್ವೀಕೃತ ಅರ್ಜಿಗಳು	ಮಂಜೂರಾದ ಸಂಪರ್ಕ
ಪೂರ್ವ	523	212
ಪಶ್ಚಿಮ	1191	194
ಉತ್ತರ	305	60
ದಕ್ಷಿಣ	2066	676

ಯುವಕ ರೈಲಿಗೆ ಸಿಕ್ಕಿ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: 'ಪುಷ್ಪ-2' ಸಿನಿಮಾ ನೋಡಿ ಬರುವುದಾಗಿ ಹೇಳಿ ಸ್ನೇಹಿತರೊಂದಿಗೆ ತೆರಳಿದ್ದ ಯುವಕ ಗುರುವಾರ ನಗರದ ಹೊರವಲಯದ ಬಾಶೆಟ್ಟಿಹಳ್ಳಿ ರೈಲು ಮೇಲ್ಸೇತುವೆಯಲ್ಲಿ ರೈಲಿಗೆ ಸಿಕ್ಕಿ ಮೃತಪಟ್ಟಿದ್ದಾನೆ.

ಆಂಧ್ರಪ್ರದೇಶದ ಪಾಲಕೊಂಡ ನಿವಾಸಿ ಪ್ರವೀಣ್(19) ಮೃತ ಯುವಕ.

ಬಾಶೆಟ್ಟಿಹಳ್ಳಿಯಲ್ಲಿ ವಾಸವಿದ್ದ ಮೃತ ಪ್ರವೀಣ್ ಬ್ಯಾಂಕ್ ವೃತ್ತ ಸಮೀಪದ ಕಾರ್ಖಾನೆಯೊಂದರಲ್ಲಿ ಕೆಲಸಮಾಡುತ್ತಿದ್ದ. ಗೆಳೆಯರೊಂದಿಗೆ ಮನೆಯಿಂದ ಹೊರಟು ರೈಲ್ವೆ ಹಳಿ ದಾಟುವ ವೇಳೆ ರೈಲಿಗೆ ಸಿಲುಕಿ ಪ್ರವೀಣ್ ಮೃತಪಟ್ಟಿದ್ದಾನೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ದೊಡ್ಡಬಳ್ಳಾಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಸ್ಥಾನ ಖಾಸಗೀಕರಣ: ಅರ್ಚಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ದೇವಸ್ಥಾನಗಳನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಖಾಸಗೀಕರಣ ಮಾಡಲು ಹುನ್ನಾರ ನಡೆಸುತ್ತಿವೆ. ಇದಕ್ಕೆ ಸರ್ಕಾರ ಮಣಿಯಬಾರದು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

'ಸರ್ಕಾರದ ಹತೋಟಿಯಲ್ಲಿಯೇ ಮುಜರಾಯಿ ದೇವಸ್ಥಾನಗಳು ಕಾರ್ಯನಿರ್ವಹಿಸಬೇಕು. ದೇವಾಲಯದ ಆಸ್ತಿಗಳನ್ನು ಕಾಪಾಡಬೇಕು. ಅರ್ಚಕರ ಮತ್ತು ದೇವಸ್ಥಾನದ ಒಳಾಂಗಣ ನೌಕರರನ್ನು 65 ವರ್ಷ ವಯಸ್ಸಿಗೆ ನಿವೃತ್ತಿ ಮಾಡುವಂತೆ ನಿಯಮ ಮಾಡಲಾಗಿದೆ. ಆದರೆ, ಅರ್ಚಕತನ ಒಂದು ಹುದ್ದೆಯಲ್ಲ. ನಿವೃತ್ತಿಯನ್ನು ರದ್ದು ಮಾಡಬೇಕು' ಎಂದು ಒಕ್ಕೂಟ ಆಗ್ರಹಿಸಿದೆ.

ಗ್ರಾಮಾಂತರ ಪ್ರದೇಶದ ದೇವಸ್ಥಾನಗಳಲ್ಲಿ ಪೂಜೆ ಸಾಮಗ್ರಿಗೆ ಮತ್ತು ಅರ್ಚಕರ ಗೌರವಧನ ಎರಡೂ ಸೇರಿದ ತಸ್ತೀಖ್‌ಗಳನ್ನು ₹10,000ಕ್ಕೆ ಏರಿಸಬೇಕು. ಅರ್ಚಕರಿಗೆ ಮತ್ತು ನೌಕರರಿಗೆ ಕನಿಷ್ಠ ₹5 ಲಕ್ಷ ಮೌಲ್ಯದ ಜೀವವಿಮೆ ನೀಡಬೇಕು. ಪ್ರಾಧಿಕಾರಗಳ ವ್ಯಾಪ್ತಿಯ ದೇಗುಲಗಳನ್ನು ಹೆಚ್ಚು ಅಭಿವೃದ್ಧಿ ಪಡಿಸಬೇಕು ಎಂದು ಕೋರಲಾಗಿದೆ.

ಒಕ್ಕೂಟದ ಅಧ್ಯಕ್ಷರೂ ಆಗಿರುವ ಸಚಿವ ದಿನೇಶ್ ಗುಂಡೂರಾವ್, ಒಕ್ಕೂಟದ ಅಧ್ಯಕ್ಷ ರಾಧಾಕೃಷ್ಣ ಕೆ.ಇ., ಉಪಾಧ್ಯಕ್ಷ ಶೇಷಾದ್ರಿ ಭಟ್ಟರ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ನಿಯೋಗದಲ್ಲಿದ್ದರು.

ಶುಕ್ರವಾರ, ಡಿಸೆಂಬರ್ 6, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಹಸ
ಜೈಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಯೋಧರೊಬ್ಬರು ಮಲ್ಲಕಂಬ ಪ್ರದರ್ಶನ ಮಾಡಿದರು



ಅಕ್ರಮ ಗಣಿಗಾರಿಕೆ: ರಾಜಧನ ₹1,221 ಕೋಟಿ, ದಂಡ ₹6,105 ಕೋಟಿ ಬಾಕಿ

ದಂಡ ವಸೂಲಿಗೆ ‘ಒಟಿಎಸ್’?

• ರಾಜೇಶ್ ರೈ ಚಟ್ಲ

ಬೆಂಗಳೂರು: ಸಂಪನ್ಮೂಲ ಕ್ರೋಡೀಕರಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಿ, ಅನುಮತಿ ಇಲ್ಲದೇ ಉಪ ಖನಿಜ ಸಾಗಿಸಿರುವ ಗುತ್ತಿಗೆದಾರರಿಂದ ‘ಒಂದು ಬಾರಿ ಪರಿಹಾರ ಯೋಜನೆ’ (ಒಟಿಎಸ್) ಮೂಲಕ ರಾಜಧನ ಮತ್ತು ದಂಡ ವಸೂಲಿಗೆ ಮುಂದಾಗಿದೆ.

ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯ ಸಂಪುಟ ಉಪ ಸಮಿತಿಯು ಈ ಕುರಿತು ಸಚಿವ ಸಂಪುಟ ಸಭೆಗೆ ಶಿಫಾರಸು ಮಾಡಿದೆ. ಶುಕ್ರವಾರ (ಡಿ. 6) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ಪ್ರಸ್ತಾವ ಮಂಡನೆಯಾಗಲಿದೆ.

ಕಲ್ಲು ಗಣಿ ಪ್ರದೇಶಗಳಲ್ಲಿ ರವಾನೆ ಪರವಾನಗಿ ಪಡೆಯದೆ ಸಾಗಿಸಿರುವ ಮತ್ತು ಒತ್ತುವರಿ ಮಾಡಿ ತೆಗೆದಿರುವ ಉಪ ಖನಿಜ ಪ್ರಮಾಣವನ್ನು ಮರು ನಿಗದಿ ಮಾಡಲು ‘ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ’ದ (ಕೆಎಸ್‌ಆರ್‌ಎಸ್‌ಎಸಿ) ಮೂಲಕ ಸರ್ವೆ ನಡೆಸಬೇಕು. ಅದರ ಆಧಾರದಲ್ಲಿ ರಾಜಧನ ಮತ್ತು ದಂಡ ವಿಧಿಸಬೇಕು. ಪರವಾನಗಿ ಪಡೆಯದೆ ಉಪ ಖನಿಜ ಸಾಗಿಸಿದ್ದರೆ ಹೆಚ್ಚುವರಿಯಾಗಿ ತೆಗೆದು ಸಾಗಿಸಿದ ಪ್ರತಿ ಟನ್‌ಗೆ ₹70ರಂತೆ ದಂಡ (ರಾಜಧನದ ಒಂದು ಪಟ್ಟು) ವಿಧಿಸಬೇಕು. ಕಲ್ಲು ಗಣಿ ಪ್ರದೇಶ ಒತ್ತುವರಿ ಮಾಡಿ ತೆಗೆದಿದ್ದರೆ ಪ್ರತಿ ಟನ್‌ಗೆ ₹140ರಂತೆ (ಎರಡು ಪಟ್ಟು) ದಂಡ ವಿಧಿಸಬೇಕು ಎಂದು ಸಚಿವ ಸಂಪುಟ ಉಪ ಸಮಿತಿ ಶಿಫಾರಸು ಮಾಡಿದೆ.

ಅಲ್ಲದೆ, ಈ ಶಿಫಾರಸು ಅನುಷ್ಠಾನಗೊಳಿಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ಕ್ಕೆ ತಿದ್ದುಪಡಿಗಳನ್ನು ಮತ್ತು ಮಾರ್ಗಸೂಚಿ ರೂಪಿಸಲು ಕೂಡಾ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಲಾಗಿದೆ ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ 2018–19ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಒಟ್ಟು 2,438 ಕಲ್ಲು ಗಣಿ ಗುತ್ತಿಗೆಗಳಲ್ಲಿ ಕೈಗೊಂಡ ಡ್ರೋನ್ ಸರ್ವೆ ವರದಿಯಂತೆ ಕಟ್ಟಡ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಸಾಗಣೆ ಪರವಾನಗಿ ಪಡೆಯದೆ ರವಾನೆ ಮಾಡಿರುವ ಮತ್ತು ಒತ್ತುವರಿ ಮಾಡಿ ತೆಗೆದಿರುವ ಪ್ರಮಾಣವನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮದ ಅನ್ವಯ ಪ್ರತಿ ಟನ್‌ಗೆ ₹60ರಂತೆ ರಾಜಧನ ₹1,221 ಕೋಟಿಯ ಐದು ಪಟ್ಟು ದಂಡ ಮೊತ್ತ ₹6,105.98 ಕೋಟಿ ವಸೂಲಿಗೆ ಗುತ್ತಿಗೆದಾರರಿಗೆ ನೋಟಿಸ್ ನೀಡಲಾಗಿತ್ತು. ಈ ನೋಟಿಸನ್ನು ಗುತ್ತಿಗೆದಾರರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಹೈಕೋರ್ಟ್ ನೀಡಿರುವ ಆದೇಶದಂತೆ ಮತ್ತೊಮ್ಮೆ ಗುತ್ತಿಗೆದಾರರ ಸಮ್ಮುಖದಲ್ಲಿ ಹೊಸತಾಗಿ ಗುತ್ತಿಗೆ ಪ್ರದೇಶಗಳ ಡಿಫರೆನ್ಶಿಯಲ್ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ ಮತ್ತು ಡ್ರೋನ್ ಸರ್ವೆ ಕಾರ್ಯ ನಡೆಸಲು ಇಲಾಖೆ ಕ್ರಮ ತೆಗೆದುಕೊಂಡಿತ್ತು. ಹೀಗಾಗಿ, 2023–24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ವತಿಯಿಂದ ಸರ್ವೆ ಕಾರ್ಯ ನಡೆಸಲಾಗಿದೆ.

5ನೇ ಪುಟ ನೋಡಿ

ಉಪ ಸಮಿತಿಯ ಶಿಫಾರಸುಗಳೇನು?

- 2018–19ನೇ ಸಾಲಿನಲ್ಲಿ ವಿಧಿಸಿದ್ದ ದಂಡ ವಸೂಲಿಗೆ ತಾಂತ್ರಿಕ, ಆಡಳಿತಾತ್ಮಕ ತೊಂದರೆಯ ಕಾರಣಕ್ಕೆ ಕೆಎಸ್‌ಆರ್‌ಎಸ್‌ಎಸಿಯಿಂದ ಹೊಸತಾಗಿ ಸರ್ವೆ ಮಾಡಿ ರಾಜಧನ, ದಂಡ ‘ಒಟಿಎಸ್’ ಮೂಲಕ ವಸೂಲಿ
- ಕೆಎಸ್‌ಆರ್‌ಎಸ್‌ಎಸಿ ವರದಿ ನೀಡಿದ ತಕ್ಷಣ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ ರಾಜಧನ ಮತ್ತು ದಂಡ ವಸೂಲು
- ಹೆಚ್ಚುವರಿಯಾಗಿ ತೆಗೆದು ಸಾಗಿಸಿದ ಪ್ರತಿ ಟನ್‌ಗೆ ₹70ರಂತೆ ದಂಡ (ರಾಜಧನದ ಒಂದು ಪಟ್ಟು)
- ಒತ್ತುವರಿ ಮಾಡಿ ಗಣಿಗಾರಿಕೆ ನಡೆಸಿದ್ದರೆ ಟನ್‌ಗೆ ₹140ರಂತೆ (ಎರಡು ಪಟ್ಟು) ದಂಡ
- ನೋಟಿಸ್ ನೀಡಿದ ಆರು ತಿಂಗಳ ಒಳಗೆ ರಾಜಧನ ಮತ್ತು ದಂಡ ಮೊತ್ತ ಸಂಗ್ರಹಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕ್ರಮ ತೆಗೆದುಕೊಳ್ಳಬೇಕು
- ನೋಟಿಸ್ ಅವಧಿಯ ಒಳಗೆ ರಾಜಧನ, ದಂಡ ಪಾವತಿಸದಿದ್ದರೆ ರಾಜಧನದ ಐದು ಪಟ್ಟು ದಂಡ, ಬಡ್ಡಿ



ಮುಖ್ಯಾಂಶಗಳು

- ಇಂದು ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವ ಮಂಡನೆ
- ದಂಡ ವಸೂಲಿ ನೋಟಿಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿರುವ ಗುತ್ತಿಗೆದಾರರು

ಮೇಲ್ಮನವಿ: ರಾಜ್ಯಪಾಲರಿಗೆ ನೋಟಿಸ್

ಮುಡಾ ಪ್ರಕರಣದ ವಿಚಾರಣೆ ಜ.25ಕ್ಕೆ • ಪ್ರತಿವಾದಿಗಳಿಗೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿದಂತೆ ರಾಜ್ಯಪಾಲರು ಮತ್ತು ಸಿಬಿಐ ಸೇರಿದಂತೆ ಮೇಲ್ಮನವಿಯ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.



ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲರು ನೀಡಿರುವ ಅನುಮತಿಗೆ ಅಸ್ತು ಎಂದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಸಿದ್ದರಾಮಯ್ಯ ಮತ್ತು ಅವರ ಬಾಮೈದ ಮಲ್ಲಿಕಾರ್ಜುನ ಸ್ವಾಮಿಗೆ ಜಮೀನು ಮಾರಾಟ ಮಾಡಿದ್ದ ಜೆ.ದೇವರಾಜು ಸಲ್ಲಿಸಿರುವ ಮೂರು ಪ್ರತ್ಯೇಕ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಸಿದ್ದರಾಮಯ್ಯ ಪರ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ರಾಜ್ಯಪಾಲರ ಅನುಮತಿಯನ್ನು ಎತ್ತಿ ಹಿಡಿಯುವ ಮೂಲಕ ಏಕಸದಸ್ಯ ನ್ಯಾಯಪೀಠವು ಪ್ರಮಾದ ಎಸಗಿದೆ’ ಎಂದು ವಿವರಿಸಲು ಯತ್ನಿಸಿದರು. ಆದರೆ, ಸಿಂಘ್ವಿ ಅವರು ತಮ್ಮ ವಿವರಣೆಯನ್ನು ಲಂಬಿಸಲು ನ್ಯಾಯಪೀಠ ಅವಕಾಶ ನೀಡಲಿಲ್ಲ.

ರಾಜ್ಯ ಸರ್ಕಾರದ ಪರವಾಗಿ ವಿಶೇಷ ಪ್ರತಿನಿಧಿಯಾಗಿ ಹಾಜರಿದ್ದ ಸುಪ್ರೀಂ ಕೋರ್ಟ್‌ನ ಮತ್ತೊಬ್ಬ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ‘ಭ್ರಷ್ಟಾಚಾರ ನಿವಾರಣಾ ಕಾಯ್ದೆ–1988ರ ಕಲಂ 17ಎ ಅಡಿ ಮುಖ್ಯಮಂತ್ರಿಯ ವಿರುದ್ಧ ತನಿಖೆಗೆ ಅನುಮತಿ ನೀಡಲು ರಾಜ್ಯಪಾಲರಿಗೆ ಅಧಿಕಾರವೇ ಇಲ್ಲ. ಈ ಪ್ರಕರಣ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಸಂಗತಿ’ ಎಂದರು.

‘ಈ ಪ್ರಕರಣದಲ್ಲಿ ತನಿಖೆಗೆ ಅನುಮತಿಸುವ ಸಕ್ಷಮ ಪ್ರಾಧಿಕಾರದ ನಿಲುವು ಮಹತ್ವದ ಸಾಂವಿಧಾನಿಕ ವಿಚಾರವಾಗಿದೆ’ ಎಂದರು.

11ನೇ ಪುಟ ನೋಡಿ

ಸಿಬಿಐ ತನಿಖೆ ಕೋರಿಕೆ ಮಧ್ಯಪ್ರವೇಶಕ್ಕೆ ನಕಾರ

‘ಮುಡಾ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಕೋರಿ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯಿಂದ ನನಗೆ ಯಾವುದೇ ರೀತಿಯ ತೊಂದರೆ ಆಗದಂತೆ ಏಕಸದಸ್ಯ ನ್ಯಾಯಪೀಠಕ್ಕೆ ನಿರ್ದೇಶನ ನೀಡಬೇಕು’ ಎಂಬ ವಿವಾದಿತ ನಿವೇಶನದ ಮೂಲ ಮಾಲೀಕ ಜೆ.ದೇವರಾಜು ಮನವಿಯನ್ನು, ‘ಈ ಹಂತದಲ್ಲಿ ಮಾನ್ಯ ಮಾಡಲಾಗದು’ ಎಂದು ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿತು.

ಜೆ.ದೇವರಾಜು ಪರ ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ದುಷ್ಯಂತ ದವೆ, ‘ಮುಡಾ ಪ್ರಕರಣವನ್ನು ಸಿಬಿಐ ತನಿಖೆ ವಹಿಸುವಂತೆ ಕೋರಲಾಗಿರುವ ಏಕಸದಸ್ಯ ನ್ಯಾಯಪೀಠದ ಮುಂದಿರುವ ರಿಟ್ ಅರ್ಜಿಯಲ್ಲಿ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ.

11ನೇ ಪುಟ ನೋಡಿ

5 ವರ್ಷಗಳಲ್ಲಿ 8.13 ಲಕ್ಷ ಮಂದಿಗೆ ನಾಯಿ ಕಡಿತ

• ವರುಣ ಹೆಗಡೆ


ಬೆಂಗಳೂರು: ರಾಜ್ಯದಲ್ಲಿ ನಾಯಿ ಕಡಿತ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದ್ದು, ಐದು ವರ್ಷಗಳಲ್ಲಿ 8.13 ಲಕ್ಷ ಮಂದಿ ನಾಯಿ ಕಡಿತಕ್ಕೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.


ಆರೋಗ್ಯ ಇಲಾಖೆಯು ನಾಯಿ ಕಡಿತವನ್ನು 2021ರಲ್ಲಿ ‘ಘೋಷಿತ ಕಾಯಿಲೆ’ಯ ವ್ಯಾಪ್ತಿಗೆ ತಂದಿದೆ. ಇದರಿಂದಾಗಿ ನಾಯಿ ಕಡಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಗಾಯಗೊಂಡವರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. ಈ ಮೂಲಕ ರೇಬಿಸ್ ಕಾಯಿಲೆ ತಡೆಗೂ ಕ್ರಮವಹಿಸಲಾಗಿದೆ. ಎಲ್ಲ ವಯೋಮಾನದವರು ನಾಯಿ ಕಡಿತಕ್ಕೆ ಒಳಗಾಗುತ್ತಿದ್ದು, ಮಕ್ಕಳು ಹಾಗೂ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ನಾಯಿಗಳ ದಾಳಿಯಿಂದ ಗಾಯಗೊಳ್ಳುತ್ತಿದ್ದಾರೆ. ಐದು ವರ್ಷಗಳಲ್ಲಿ 11 ಮಂದಿ ನಾಯಿ ಕಡಿತದಿಂದ ಮೃತಪಟ್ಟಿದ್ದಾರೆ.

ಈ ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ವರದಿಯಾದ ನಾಯಿ ಕಡಿತ ಪ್ರಕರಣಗಳ ಮಾಹಿತಿ ಇಲಾಖೆಗೆ ಸಮರ್ಪಕವಾಗಿ ದೊರೆಯುತ್ತಿರಲಿಲ್ಲ. ಖಾಸಗಿ ಆಸ್ಪತ್ರೆಗಳೂ ನಿಯಮಿತವಾಗಿ ಪ್ರಕರಣಗಳ ವಿವರವನ್ನು ಇಲಾಖೆಗೆ ವರದಿ ಮಾಡುತ್ತಿರಲಿಲ್ಲ. ಆದ್ದರಿಂದ, ನಾಯಿ ಕಡಿತವನ್ನು ‘ಘೋಷಿತ ಕಾಯಿಲೆ’ಯಡಿ ತಂದು, ಎಲ್ಲ ಪ್ರಕರಣಗಳ ವಿವರವನ್ನು ಸಮಗ್ರ ಆರೋಗ್ಯ ಮಾಹಿತಿ ವೇದಿಕೆ ಅಡಿ ದಾಖಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದಾಗಿ ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಿವೆ.

ಎಲ್ಲ ಜಿಲ್ಲೆಗಳಲ್ಲಿ ವರದಿ: ನಾಯಿ ಕಡಿತ ಪ್ರಕರಣಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವರದಿಯಾಗುತ್ತಿವೆ. ಬೆಂಗಳೂರಿನಲ್ಲಿಯೇ ಅಧಿಕ ಪ್ರಕರಣಗಳು ಖಚಿತಪಡುತ್ತಿವೆ. ಐದು ವರ್ಷಗಳಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಗರಿಷ್ಠ (76 ಸಾವಿರ) ಪ್ರಕರಣಗಳು ದೃಢಪಟ್ಟಿವೆ. ನಾಯಿ ಕಡಿತಕ್ಕೆ ರೇಬಿಸ್ ನಿರೋಧಕ ಲಸಿಕೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮೇಲ್ಮಟ್ಟ ಆಸ್ಪತ್ರೆಗಳಲ್ಲಿ, ‘ರೇಬಿಸ್ ಇಮ್ಯುನೋಗ್ಲಾಬ್ಯುಲಿನ್’ ಚುಚ್ಚುಮದ್ದನ್ನು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಮೇಲ್ಮಟ್ಟದ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ.

‘ಪಶುಸಂಗೋಪನೆ, ಕೃಷಿ, ತೋಟಗಾರಿಕೆ ಸೇರಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ, ನಾಯಿ ಕಡಿತಕ್ಕೆ ಚಿಕಿತ್ಸೆ ಹಾಗೂ ಸಾವು ತಡೆಗೆ ಕ್ರಮವಹಿಸಲಾಗಿದೆ. ನಾಯಿಗಳಿಗೂ ರೇಬಿಸ್ ಲಸಿಕೆ ಒದಗಿಸಲಾಗುತ್ತಿದೆ’ ಎಂದು ಆರೋಗ್ಯ ಇಲಾಖೆಯ ಸಮಗ್ರ ರೋಗ ಕಣ್ಗಾವಲು ಯೋಜನೆ (ಐಡಿಎಸ್‌ಪಿ) ನಿರ್ದೇಶಕ ಡಾ. ಅನ್ಸರ್ ಅಹಮದ್ ತಿಳಿಸಿದರು.







ಚಿಕಿತ್ಸೆ ಪಡೆಯದಿದ್ದಲ್ಲಿ ಅಪಾಯ: ಡಾ. ಅನ್ಸರ್ ಅಹಮದ್

‘ನಾಯಿ ಕಡಿತದಿಂದಲೇ ರೇಬಿಸ್ ಕಾಣಿಸಿಕೊಳ್ಳುವ ಸಾಧ್ಯತೆ ಜಾಸ್ತಿ. ರೇಬಿಸ್ ಸೋಂಕು ದೇಹದ ನರವ್ಯೂಹ ಸೇರಿದ ಬಳಿಕ ಬಲಿಷ್ಠಗೊಂಡು, ವ್ಯಕ್ತಿಯನ್ನು ಘಾಸಿಗೊಳಿಸುತ್ತದೆ. ನಾಯಿ ಕಚ್ಚಿದ ಗಾಯವನ್ನು ಮೊದಲು ಶುದ್ಧ ನೀರಿನಿಂದ ತೊಳೆಯಬೇಕು. ಸಾಬೂನಿನಿಂದ ಗಾಯವನ್ನು ಶುಭ್ರಗೊಳಿಸಿದಲ್ಲಿ ಸೋಂಕು ದೇಹದ ನರವ್ಯೂಹ ಸೇರುವುದನ್ನು ತಡೆಯಲು ಸಾಧ್ಯ’ ಎಂದು ಡಾ. ಅನ್ಸರ್ ಅಹಮದ್ ಅವರು ತಿಳಿಸಿದರು.

‘ಗಾಯ ದೊಡ್ಡದಾಗಿದ್ದರೆ ಅಥವಾ ರಕ್ತಸ್ರಾವ ಅಧಿಕವಾಗಿದ್ದಲ್ಲಿ ಶುದ್ಧ ಬಟ್ಟೆ ಕಟ್ಟಿಕೊಳ್ಳಬೇಕು. ಬಳಿಕ ಹತ್ತಿರದ ಆಸ್ಪತ್ರೆಗೆ ತೆರಳಿ, ರೇಬಿಸ್ ನಿರೋಧಕ ಚುಚ್ಚುಮದ್ದನ್ನು ಪಡೆಯಬೇಕು. ಕಚ್ಚಿದ ನಾಯಿ ಮೇಲೆ ಕೂಡ ನಿಗಾ ಇಡಬೇಕು. ಯಾವುದೇ ಕಾರಣಕ್ಕೂ ನಾಯಿಯನ್ನು ಸಾಯಿಸಬಾರದು’ ಎಂದು ಹೇಳಿದರು.



ನಗರದ ಯುವಿಸಿಇಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಡಾ.ಎಂ.ಸಿ.ಸುಧಾಕರ್, ಯುವಿಸಿಇ ಫೌಂಡೇಷನ್‌ನ ಅಧ್ಯಕ್ಷ ಬಿ.ವಿ ಜಗದೀಶ್, ಯುವಿಸಿಇ ಆಡಳಿತ ಮಂಡಳಿ ಅಧ್ಯಕ್ಷ ಬಿ. ಮುತ್ತುರಾಮನ್, ನಿರ್ದೇಶಕ ಸುಭಾಶಿಸ್ ತ್ರಿಪಾಠಿ, ವಿದ್ಯಾರ್ಥಿವೇತನ ಸಮಿತಿಯ ಅಧ್ಯಕ್ಷ ರಾಮು ವಸಂತರಾಮ್, ಮಾಧವ, ಕಾರ್ಯದರ್ಶಿ ಅಲೀಸ್ ಅಬ್ರಾಹಂ ಭಾಗವಹಿಸಿದ್ದರು

ಯುವಿಸಿಇ ಅಭಿವೃದ್ಧಿಗೆ ಸರ್ಕಾರ ಬದ್ಧ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿರುವ ಐಐಟಿ ಹಾಗೂ ಉನ್ನತಮಟ್ಟದ ಶೈಕ್ಷಣಿಕ ಸಂಸ್ಥೆಗಳಿಗಿಂತ ಭಿನ್ನವಾಗಿ ಹಾಗೂ ಆಕರ್ಷಕ ವಿನ್ಯಾಸದಲ್ಲಿ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು (ಯುವಿಸಿಇ) ಅಭಿವೃದ್ಧಿಗೊಳಿಸಲು ಸರ್ಕಾರ ಬದ್ಧವಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಯುವಿಸಿಇ ಹಿರಿಯ ವಿದ್ಯಾರ್ಥಿಗಳ ಸಂಘ ಹಾಗೂ ಯುವಿಸಿಇ ಫೌಂಡೇಶನ್ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಿ ಅವರು ಮಾತನಾಡಿದರು.

'ಸರ್ ಎಂ. ವಿಶ್ವೇಶ್ವರಯ್ಯ ಅವರು ಸ್ಥಾಪಿಸಿರುವ ಈ ಕಾಲೇಜನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಈಗಾಗಲೇ ಕಟ್ಟಡದ ವಿನ್ಯಾಸದ ರಚನೆಗೆ ಟೆಂಡರ್ ಆಹ್ವಾನಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಯುವಿಸಿಇ ಕಾಲೇಜು ಅಭಿವೃದ್ಧಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಬಾರಿಯ ಬಜೆಟ್‌ನಲ್ಲಿ ₹500 ಕೋಟಿ ಅನುದಾನ ಘೋಷಿಸಿ, ಪ್ರಸಕ್ತ ಸಾಲಿನಲ್ಲಿ ₹100 ಕೋಟಿಯನ್ನು ಬಿಡುಗಡೆ ಮಾಡಿದ್ದಾರೆ' ಎಂದರು.

ಇದೇ ಸಂದರ್ಭದಲ್ಲಿ 160 ವಿದ್ಯಾರ್ಥಿಗಳಿಗೆ ಸುಮಾರು ₹ 45 ಲಕ್ಷದ ವಿದ್ಯಾರ್ಥಿವೇತನ ವಿತರಿಸಲಾಯಿತು.

ನಟ ಯಶ್ ಅಭಿನಯದ ಸಿನಿಮಾಗಾಗಿ ಮರಗಳ ಹನನ ಆರೋಪ • ವಿಚಾರಣೆ ನಾಲ್ಕು ವಾರ ಮುಂದೂಡಿಕೆ

'ಟಾಕ್ಸಿಕ್' ಸೆಟ್: ತನಿಖೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಟ ಯಶ್ ಪ್ರಧಾನ ಭೂಮಿಕೆಯಲ್ಲಿರುವ ಟಾಕ್ಸಿಕ್ ಸಿನಿಮಾ ಚಿತ್ರೀಕರಣಕ್ಕಾಗಿ ಜಾಲಹಳ್ಳಿಯ ಮೀಸಲು ಅರಣ್ಯ ಪ್ರದೇಶದಲ್ಲಿ ಮರಗಳ ಹನನ ಮಾಡಲಾಗಿದೆ' ಎಂದು ಆರೋಪಿಸಿ ಚಿತ್ರ ನಿರ್ಮಾಣ ಸಂಸ್ಥೆ ಕೆವಿಎನ್ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಎಲ್‌ಎಲ್‌ಪಿ ವಿರುದ್ಧ ನಡೆಸಲಾಗುತ್ತಿರುವ ತನಿಖೆ ಮತ್ತು ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ವಿಧಿಸಿದೆ.

'ನಮ್ಮ ವಿರುದ್ಧದ ಎಫ್‌ಐಆರ್ ಮತ್ತು ಈ ಸಂಬಂಧ 8ನೇ ಎಸಿಎಂಎಂ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ 'ಕೆವಿಎನ್ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಎಲ್‌ಎಲ್‌ಪಿ' ಸಂಸ್ಥೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿಪಿನ್ ಹೆಗ್ಡೆ, 'ಜಾರಕಬಂಡೆ ಕಾವಲ್ ಮತ್ತು ಪೀಣ್ಯ ಪ್ಲಾಂಟೇಶನ್‌ನಲ್ಲಿನ 443 ಎಕರೆಯನ್ನು ಮೈಸೂರು ಸರ್ಕಾರವು 1963ರಲ್ಲಿ ಹಿಂದೂಸ್ತಾನ್ ಮೆಷಿನ್ಸ್ ಟೂಲ್ಸ್‌ಗೆ (ಎಚ್‌ಎಂಟಿ) ನೀಡಿತ್ತು. ಇದರಲ್ಲಿ ಎಚ್‌ಎಂಟಿ 18.2 ಎಕರೆ ಜಾಗವನ್ನು ಕೆನರಾ ಬ್ಯಾಂಕ್‌ಗೆ ಮಾರಾಟ ಮಾಡಿತ್ತು. ಈ ಜಾಗವನ್ನು ಕೆವಿಎನ್ ಸಂಸ್ಥೆ ಭೋಗ್ಯಕ್ಕೆ ಪಡೆದು ತಾತ್ಕಾಲಿಕವಾಗಿ ಟಾಕ್ಸಿಕ್ ಸಿನಿಮಾ ಚಿತ್ರೀಕರಣಕ್ಕಾಗಿ ಸೆಟ್ ನಿರ್ಮಿಸಿದೆ. ಆದರೆ, ಈ ಪ್ರದೇಶ ಮೀಸಲು ಅರಣ್ಯ ಎಂದು ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಆಕ್ಷೇಪಿಸಿದರು.

'ಈ ಅರ್ಜಿ ಸಲ್ಲಿಸುವುದಕ್ಕೂ ಮುನ್ನ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಥಳಕ್ಕೆ ಭೇಟಿ ನೀಡಿ ವಿಡಿಯೊ ತೆಗೆದುಕೊಂಡು ಅದನ್ನು ಟ್ವೀಟ್ ಮಾಡಿದ್ದರು ಎನ್ನಲಾಗಿದೆ. ಆದರೆ, ಜಾಲಹಳ್ಳಿ ಪ್ರದೇಶ ಅರಣ್ಯವೇ ಅಲ್ಲ ಎಂದು ಈಗ ಸರ್ಕಾರವೇ ಹೇಳುತ್ತಿದೆ. ಈ ಪ್ರದೇಶದಲ್ಲಿ 20ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳಿವೆ. ಆಸ್ಪತ್ರೆ ನಿರ್ಮಾಣಗೊಂಡಿದೆ. ಸಿನಿಮಾ ಚಿತ್ರೀಕರಣಕ್ಕೆ ಸೆಟ್ ಹಾಕಲು ₹30 ಕೋಟಿ ಖರ್ಚು ಮಾಡಲಾಗಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಅಲ್ಲಿದ್ದ ಗಿಡ ಮರಗಳನ್ನು ಕಡಿದು ಹಾಕಲಾಗಿದೆ' ಎಂದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಕೆವಿಎನ್ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಎಲ್‌ಎಲ್‌ಪಿ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ-1963 ಕಲಂ 24(ಜಿ) ಅಡಿ ದಾಖಲಿಸಿರುವ ಎಫ್‌ಐಆರ್ ಅನ್ವಯದ ತನಿಖೆ ಮತ್ತು ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು. ವಿಚಾರಣೆಯನ್ನು ನಾಲ್ಕು ವಾರ ಮುಂದೂಡಲಾಗಿದೆ.

ಪ್ರಕರಣವೇನು?: ಜಾಲಹಳ್ಳಿಯ ಎಚ್‌ಎಂಟಿ ಜಾಗವು ಮೀಸಲು ಅರಣ್ಯವಾಗಿದ್ದು, ಅಲ್ಲಿ ನಿಷೇಧವಿದ್ದರೂ ಗಿಡಗಂಟಿ ಹಾಗೂ ಮರಗಳನ್ನು ತೆರವು ಮಾಡುವ ಮೂಲಕ ಟಾಕ್ಸಿಕ್ ಸಿನಿಮಾ ಚಿತ್ರೀಕರಣಕ್ಕಾಗಿ ಸೆಟ್ ಹಾಕಲಾಗಿದೆ ಎಂಬ ಆರೋಪವಿದೆ. ಈ ಸಂಬಂಧ ಪ್ರಕರಣ ದಾಖಲಿಸಲು ಅನುಮತಿಸುವಂತೆ ಕೋರಿ ಅರಣ್ಯ ಇಲಾಖೆ ಕಳೆದ ತಿಂಗಳ 4ರಂದು 8ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವರಿಗೆ ಮನವಿ ಮಾಡಿತ್ತು. ಇದನ್ನು ಪುರಸ್ಕರಿಸಿದ್ದ ಮ್ಯಾಜಿಸ್ಟ್ರೇಟ್ ನವೆಂಬರ್ 6ರಂದು ಕರ್ನಾಟಕ ಅರಣ್ಯ ಕಾಯ್ದೆ–1963ರ ಕಲಂ 24 (ಜಿ) ಅಡಿ ಪ್ರಕರಣ ದಾಖಲಿಸಲು ಅನುಮತಿಸಿದ್ದರು. ಇದರ ಅನ್ವಯ ಎಫ್‌ಐಆರ್ ದಾಖಲಾಗಿದ್ದು ತನಿಖೆ ಆರಂಭವಾಗಿದೆ.

ಪ್ಲಾಟಿನಮ್ ಸಿಟಿ ಅಪಾರ್ಟ್‌ಮೆಂಟ್ ತೆರವಿಗೆ ಆದೇಶ

ಬೆಂಗಳೂರು: ಯಶವಂತಪುರ ಹೋಬಳಿಯ ಪೀಣ್ಯ ಗ್ರಾಮದ ಸರ್ವೆ ನಂಬರ್ 47 ಮತ್ತು 48ರಲ್ಲಿರುವ, 15 ಅಂತಸ್ತಿನ 'ಪ್ಲಾಟಿನಮ್ ಸಿಟಿ ಅಪಾರ್ಟ್‌ಮೆಂಟ್' ಕಟ್ಟಡ ತೆರವುಗೊಳಿಸುವ ನಿಟ್ಟಿನಲ್ಲಿ ಯೋಜನೆಯೊಂದನ್ನು ರೂಪಿಸಿ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಹೈಕೋರ್ಟ್ ಮಹತ್ವದ ನಿರ್ದೇಶನ ನೀಡಿದೆ.

'ಕೆಲವು ನಿವಾಸಿಗಳಿಗೆ 'ಸ್ವಾಧೀನಾನುಭವ ಪ್ರಮಾಣಪತ್ರ (ಎಸಿ) ವಿತರಿಸಲು ಬಿಡಿಎಗೆ ನಿರ್ದೇಶಿಸಬೇಕು' ಎಂದು ಕೋರಿ 'ಮೆಸರ್ಸ್ ಶೆರಿಫ್ ಕನ್‌ಸ್ಟ್ರಕ್ಷನ್' ವ್ಯವಸ್ಥಾಪಕ ಪಾಲುದಾರ ಜಿಯಾವುಲ್ಲಾ ಶೆರಿಫ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅಭಿವೃದ್ಧಿ ನಿಯಮಗಳನ್ನು ಉಲ್ಲಂಘಿಸಿ ಮತ್ತು ಅನುಮತಿ ಯೋಜನೆಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿರುವುದನ್ನು ತೆರವುಗೊಳಿಸುವಂತೆ ಕಾಲಕಾಲಕ್ಕೆ ನೀಡಲಾಗಿರುವ ಆದೇಶ ಪಾಲಿಸಲು ಹಲವು ಬಾರಿ ನಿರ್ದೇಶನ ನೀಡಲಾಗಿದ್ದರೂ ಶೆರಿಫ್ ಕನ್‌ಸ್ಟ್ರಕ್ಷನ್ ಅದನ್ನು ಪಾಲಿಸಿಲ್ಲ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

'ಕಟ್ಟಡವನ್ನು ಹೊಡೆದುರುಳಿಸಿ ಅದನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಬಿಡಿಎ ಆಯುಕ್ತರು ಇದೇ 11ರೊಳಗೆ ಯೋಜನೆ ರೂಪಿಸಬೇಕು. ಇದನ್ನು ಕಟ್ಟಡ ಬೈ-ಲಾ ಅನುಸಾರ ನಡೆಸಬೇಕು' ಎಂದು ತಾಕೀತು ಮಾಡಿದೆ.

'ಮಂಜೂರಾತಿ ಯೋಜನೆ ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವ ಅರ್ಜಿದಾರರು, ತದನಂತರ ಅಕ್ರಮ ಕಟ್ಟಡದ ಭಾಗವನ್ನು ಕೆಡವುತ್ತೇವೆ ಎಂದು ಮುಚ್ಚಳಿಕೆ ಬರೆದು ಕೊಟ್ಟಿದ್ದರು. ಆದರೆ, ಈಗ ಕಟ್ಟಡ ಕೆಡವಿದರೆ ಮೂಲ ಸ್ವರೂಪಕ್ಕೇ ಧಕ್ಕೆ ಉಂಟಾಗಲಿದೆ ಎಂಬ ಸಬೂಬು ನೀಡಿದ್ದಾರೆ. ಕಟ್ಟಡವನ್ನು ಭಾಗಶಃ ತೆರವುಗೊಳಿಸಿದರೂ ಇತರೆ ಭಾಗವನ್ನು ಉಳಿಸಿಕೊಳ್ಳುವುದು ಅಸಾಧ್ಯವಾಗಿದೆ. ಹೀಗಾಗಿ, ಇಡೀ ಕಟ್ಟಡವನ್ನು ಕೆಡವಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್ ಖರೀದಿಸಿದ್ದವರಿಗೆ ಉಂಟಾಗುವ ನಷ್ಟವನ್ನು ಅರ್ಜಿದಾರರೇ ತುಂಬಿಕೊಡಬೇಕು. ಅಪಾರ್ಟ್‌ಮೆಂಟ್ ಕೆಡವುವ ದಿನಕ್ಕೆ ಅದರ ಬೆಲೆ ಆಧರಿಸಿ ಪರಿಹಾರ ನೀಡಬೇಕು' ಎಂದು ಅರ್ಜಿದಾರರಿಗೆ ಆದೇಶಿಸಿದೆ. ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಲಾಗಿದೆ.

ಡಿಡಿ: ಆರ್‌ಬಿಐಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ನಿಗದಿತ ಅವಧಿಯಲ್ಲಿ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಅನ್ನು ಬ್ಯಾಂಕ್‌ಗೆ ಸಲ್ಲಿಸದೇ ಹೋದರೆ ಅಂತಹ ಸಂದರ್ಭಗಳಲ್ಲಿ ಡಿಡಿ ನೀಡಿದ ಗ್ರಾಹಕರ ಖಾತೆಗೆ ಸ್ವಯಂಚಾಲಿತವಾಗಿ ಹಣ ಮರುಪಾವತಿಯಾಗುವಂತೆ ಮಾರ್ಗಸೂಚಿ ರೂಪಿಸಬೇಕು' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ನಿರ್ದೇಶಿಸಿದೆ. ಈ ಸಂಬಂಧ ದೊಡ್ಡಬಳ್ಳಾಪುರದ ಸ್ಪಿನ್ನಿಂಗ್ ಮಿಲ್ಸ್ ಕಂಪನಿ ನಿರ್ದೇಶಕ ಎ.ಅಭಿಷೇಕ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಡಿಡಿ ಪಡೆದಿರುವವರು ನಿರ್ದಿಷ್ಟ ಅವಧಿಯಲ್ಲಿ ಅದನ್ನು ಬ್ಯಾಂಕ್‌ಗೆ ಸಲ್ಲಿಸದೇ ಹೋದರೆ ಅಂತಹ ಸಂದರ್ಭಗಳಲ್ಲಿ ಡಿಡಿಯ ಸ್ಥಿತಿ ಏನಾಗಲಿದೆ ಎಂಬ ಬಗ್ಗೆ ಆರ್‌ಬಿಐ ಮಾರ್ಗಸೂಚಿ ಹೊರಡಿಸಬೇಕು. ಒಂದು ವೇಳೆ ಡಿಡಿ ಪಡೆದವರು ಅದನ್ನು ಬ್ಯಾಂಕ್‌ಗೆ ಸಲ್ಲಿಸದೇ ಹೋದರೆ ನಿರ್ದಿಷ್ಟ ಅವಧಿ ಮುಗಿದ ಬಳಿಕ ಆ ಡಿಡಿಯ ಮೊತ್ತ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆಯಾಗುವಂತೆ ನೋಡಿಕೊಳ್ಳಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಆಕ್ರೋಶ

'ಐವರು ಸಿ.ಎಂ ಬಂದು ಹೋದರೂ ವಿಮಾನ ನಿಲ್ದಾಣ ಆಗಲಿಲ್ಲ'

ಪ್ರಜಾವಾಣಿ ವಾರ್ತೆ



ಎಚ್‌.ಡಿ.ದೇವೇಗೌಡ

ನವದೆಹಲಿ: ಹಾಸನ ವಿಮಾನ ನಿಲ್ದಾಣ ನಿರ್ಮಾಣಕ್ಕೆ ನಾನು ಪ್ರಧಾನಿಯಾಗಿದ್ದ ಸಂದರ್ಭದಲ್ಲೇ ಮಂಜೂರಾತಿ ನೀಡಿದ್ದೆ. ಆ ಬಳಿಕ ರಾಜ್ಯದಲ್ಲಿ ಐದು ಮುಖ್ಯಮಂತ್ರಿಗಳು ಬಂದು ಹೋದರೂ ವಿಮಾನ ನಿಲ್ದಾಣದ ಕಾಮಗಾರಿ ಪೂರ್ಣಗೊಳ್ಳಲಿಲ್ಲ ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ಗುರುವಾರ ನಡೆದ 'ಭಾರತೀಯ ವಾಯುಯಾನ ಮಸೂದೆ'ಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ವಿಮಾನ ನಿಲ್ದಾಣದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಹಾಸನದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಆಗುವುದರಿಂದ ಬೇಲೂರು-ಹಳೇಬೀಡು- ಶ್ರವಣಬೆಳಗೊಳ ತಾಣಗಳ ಪ್ರವಾಸೋದ್ಯಮ ಅಭಿವೃದ್ಧಿ ಯಾಗುತ್ತದೆ. ಜತೆಗೆ, ಜಿಲ್ಲೆಯ ಕೃಷಿ ರಫ್ತು ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಯೋಜನೆಯ ಆರ್ಥಿಕ ಮತ್ತು ಸಾಮಾಜಿಕ ಪ್ರಾಮುಖ್ಯತೆ ಬಗ್ಗೆ ವಿವರಿಸಿದ ದೇವೇಗೌಡರು, 'ಈ ವಿಮಾನ ನಿಲ್ದಾಣವು ಇಂದಿನ ಅಗತ್ಯವಾಗಿದೆ. ಇದು ರೈತರಿಗೆ ಮಾತ್ರವಲ್ಲದೆ ಈ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕೂ ಅನುಕೂಲವಾಗಲಿದೆ' ಎಂದರು.

ಹಾಸನದಲ್ಲಿ ಮೂಲಸೌಕರ್ಯಗಳ ಕೊರತೆಯಿಲ್ಲ. ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ಕಾನೂನು ಕಾಲೇಜುಗಳನ್ನು ಒಳಗೊಂಡಂತೆ ಪ್ರಮುಖ ಶಿಕ್ಷಣ ಸಂಸ್ಥೆಗಳನ್ನು ನಗರ ಒಳಗೊಂಡಿದೆ. ನಗರದಿಂದ ಕಾಫಿ ಮತ್ತು ಚಹಾವನ್ನು ರಫ್ತು ಮಾಡಲಾಗುತ್ತಿದೆ. ವಿದೇಶಿ ವಿನಿಮಯ ಗಳಿಕೆಗೆ ನಗರವು ಗಣನೀಯ ಕೊಡುಗೆ ನೀಡುತ್ತಿದೆ. ಹಾಸನದ ರೈತರು ಪ್ರತಿ ತಿಂಗಳು ಹಾಲು ಉತ್ಪಾದನೆಯಿಂದ ₹ 900 ಕೋಟಿ ಗಳಿಸುತ್ತಾರೆ' ಎಂದು ಗಮನ ಸೆಳೆದರು.

'ಲೋಕಸಭೆ ಮತ್ತು ವಿಧಾನಸಭೆ ಎರಡಕ್ಕೂ ಏಳು ಬಾರಿ ಆಯ್ಕೆಯಾಗಿರುವ ರೈತ ನಾನು. ನನ್ನ ಜೀವನದ 66 ವರ್ಷಗಳನ್ನು ಸಾರ್ವಜನಿಕ ಸೇವೆಗೆ ಮೀಸಲಿಟ್ಟಿದ್ದೇನೆ. ಹಾಸನ ವಿಮಾನ ನಿಲ್ದಾಣ ಯೋಜನೆ ಪೂರ್ಣಗೊಳಿಸಬೇಕು ಎಂಬುದು ನನ್ನ ಮಹದಾಸೆ. ಜೀವನದ ಸಂಧ್ಯಾಕಾಲದಲ್ಲಿರುವ ನನ್ನ ಬಹುದೊಡ್ಡ ಬೇಡಿಕೆ ಇದು' ಎಂದು ಅವರು ತಿಳಿಸಿದರು.

ತಾವು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಲಘು ಯುದ್ಧ ವಿಮಾನಗಳು ಹಾಗೂ 65 ಆಸನಗಳ ಸಣ್ಣ ವಿಮಾನಗಳ ಉತ್ಪಾದನೆಗೆ ಅನುಮತಿ ನೀಡಿದ್ದನ್ನು ನೆನೆದರು.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಉತ್ತರಿಸಿ, 'ವಿಮಾನ ನಿಲ್ದಾಣದ ಶೇ 60ರಷ್ಟು ಕಾಮಗಾರಿಗಳು ಮುಗಿದಿವೆ. 2025ರ ಏಪ್ರಿಲ್ ವೇಳೆಗೆ ಎಲ್ಲ ಕಾಮಗಾರಿಗಳು ಪೂರ್ಣಗೊಳ್ಳಲಿವೆ' ಎಂದು ಭರವಸೆ ನೀಡಿದರು.

ಸಭಾಪತಿ ಜಗದೀಪ ಧನಕರ್ ಅವರು ದೇವೇಗೌಡ ಕಳಕಳಿಯನ್ನು ಶ್ಲಾಘಿಸಿದರು.

ಭಾನುವಾರ ಮೆಟ್ರೊ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು ಡಿ.8ರಂದು ನಡೆಸಲಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನೇಮಕಾತಿ ಪರೀಕ್ಷೆಗೆ ಹಾಜರಾಗುವವರಿಗೆ ಅನುಕೂಲವಾಗುವಂತೆ 'ನಮ್ಮ ಮೆಟ್ರೊ' ರೈಲು ಸಂಚಾರವನ್ನು ಅಂದು ಬೆಳಿಗ್ಗೆ 5.30ಕ್ಕೆ ಆರಂಭಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ನಾಲ್ಕು ಟರ್ಮಿನಲ್‌ಗಳಾದ ಮಾದಾವರ, ರೇಷ್ಮೆ ಸಂಸ್ಥೆ, ಚಲ್ಲಘಟ್ಟ, ವೈಟ್ ಫೀಲ್ಡ್ (ಕಾಡುಗೋಡಿ) ನಿಲ್ದಾಣಗಳಿಂದ ಹಾಗೂ ಮೆಜೆಸ್ಟಿಕ್‌ನಿಂದ ಎಲ್ಲ ನಾಲ್ಕು ಟರ್ಮಿನಲ್ ಕಡೆಗೆ ಭಾನುವಾರ ಬೆಳಿಗ್ಗೆ 5.30ಕ್ಕೆ ರೈಲು ಸಂಚಾರ ಆರಂಭಗೊಳ್ಳಲಿದೆ. ಬೆಳಿಗ್ಗೆ 7ರವರೆಗೆ ಪ್ರತಿ 30 ನಿಮಿಷದ ಆವರ್ತನದಲ್ಲಿ ಮೆಟ್ರೊ ರೈಲು ಚಲಿಸಲಿದೆ. 7 ಗಂಟೆಯ ಬಳಿಕ ಎಂದಿನಂತೆ ರೈಲು ಸಂಚಾರ ಇರಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ಸಾಮಾನ್ಯ ದಿನಗಳಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ರೈಲು ಸಂಚಾರ ಆರಂಭವಾಗುತ್ತಿತ್ತು.



ರಾಜ್ಯೋತ್ಸವ ಆಚರಣೆ

ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯದ ಆವರಣದ ವಕೀಲರ ಭವನದಲ್ಲಿ ಗುರುವಾರ ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಬೆಂಗಳೂರು ವಕೀಲ ಸಂಘ, ಬೆಂಗಳೂರು ವಕೀಲರ ಸಹಕಾರ ಸಂಘ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಅವರು ನಾಡದೇವಿ ಭುವನೇಶ್ವರಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ವಕೀಲರ ಪರಿಷತ್ತಿನ ಅಧ್ಯಕ್ಷ ವಿಶಾಲ್ ರಘು ಎಚ್.ಎಲ್, ವಕೀಲರ ಸಾಹಿತ್ಯ ಕೂಟದ ಅಧ್ಯಕ್ಷ ಮಂಜುನಾಥ ಬಿ. ಗೌಡ ಉಪಸ್ಥಿತರಿದ್ದರು -ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಲು ಗಡ್ಕರಿಗೆ ಮನವಿ

ಪ್ರಜಾವಾಣಿ ವಾರ್ತೆ


ನವದೆಹಲಿ: ಬೆಂಗಳೂರು ಗ್ರಾಮಾಂತರ ಲೋಕಸಭಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಗಳ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಕೇಂದ್ರ ಭೂ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಸಂಸದ ಡಾ. ಸಿ.ಎನ್. ಮಂಜುನಾಥ್ ಮನವಿ ಸಲ್ಲಿಸಿದರು.

ಸಂಸದರ ಬೇಡಿಕೆ:

- ಆನೇಕಲ್ ಮತ್ತು ಹೊಸೂರು ರಾಷ್ಟ್ರೀಯ ಹೆದ್ದಾರಿ 44 ಹಾಗೂ 844ರಲ್ಲಿ ರೈತರಿಗೆ ಅನುಕೂಲ ಕಲ್ಪಿಸಲು ಪ್ರವೇಶ ಅನುಮತಿ ಶುಲ್ಕ ಕಡಿಮೆ ಮಾಡಬೇಕು.
- ಕುಣಿಗಲ್ ಬೈಪಾಸ್‌ನಲ್ಲಿ ಸರ್ವಿಸ್ ರಸ್ತೆಯ ಸುಧಾರಣೆ ಕಾಮಗಾರಿಯನ್ನು ಶೀಘ್ರ ಕೈಗೆತ್ತಿಕೊಳ್ಳಬೇಕು.
- ಕುಣಿಗಲ್ ಮತ್ತು ಯಡಿಯೂರು ಮಧ್ಯೆ ಇರುವ ರಾಷ್ಟ್ರೀಯ ಹೆದ್ದಾರಿಯ 75ರ ಮುಖ್ಯ ಕ್ಯಾರೇಜ್ ವೇನಲ್ಲಿ ಎಂಟು ಹೆಚ್ಚುವರಿ ಸೇತುವೆಗಳ ನಿರ್ಮಾಣ ಮಾಡಬೇಕು.
- ಕಗ್ಗಲಿಪುರ ಮತ್ತು ಉದಯಪುರ ಬೈಪಾಸ್ ನಿರ್ಮಿಸಬೇಕು.
- ಆನೇಕಲ್ ತಾಲ್ಲೂಕಿನ ನೇರಲೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ 44 ಹಾಗೂ 844ರ ಇಂಟರ್‌ಚೇಂಜ್ ಯೋಜನೆಗೆ ಮಾಡಲಾದ ಎಲ್ಲ ಬದಲಾವಣೆಗಳನ್ನು ಉಳಿಸಿಕೊಳ್ಳಬೇಕು.
- ಹುಣಸನಹಳ್ಳಿ - ಕೋಡಿಹಳ್ಳಿ - ಕನಕಪುರ– ರಾಮನಗರ - ಮಾಗಡಿ– ಪಾವಗಡ– ಆಂಧ್ರಪ್ರದೇಶ ಹೆದ್ದಾರಿ ಕಾಮಗಾರಿಯ ಉನ್ನತೀಕರಣ ಪ್ರಸ್ತಾವನೆಗೆ ಅನುಮೋದನೆ ಕೊಡಬೇಕು.

ಟಿ.ಗೋವಿಂದರಾಜುಗೆ 'ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ನೀಡುವ 'ಪ್ರೊ.ಕಿ.ರಂ.ನಾಗರಾಜ ಸಂಸ್ಕೃತಿ ಪ್ರಶಸ್ತಿ'ಗೆ ಜಾನಪದ ವಿದ್ವಾಂಸ ಟಿ. ಗೋವಿಂದರಾಜು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ವಿಮರ್ಶಕ ಪ್ರೊ.ಕಿ.ರಂ.ನಾಗರಾಜ ಅವರ ಸ್ಮರಣಾರ್ಥ ಅವರ ಶಿಷ್ಯರು, ಒಡನಾಡಿಗಳು ಹಾಗೂ ಆಪ್ತರು ಈ ಪ್ರಶಸ್ತಿ ಸ್ಥಾಪಿಸಿದ್ದಾರೆ.

ಇದೇ 25ರಂದು ಸಂಜೆ 6 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಅಧ್ಯಕ್ಷ ಆರ್.ಕೆ. ನಲ್ಲೂರು ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದ ಕೆಲವೆಡೆ ನಾಲ್ಕು ದಿನ ಸಾಧಾರಣ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ಕೆಲವೆಡೆ ಶುಕ್ರವಾರದಿಂದ ನಾಲ್ಕು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ, ವಿಜಯನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಹಾಸನ, ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಸಾಧಾರಣಕ್ಕಿಂತ ಕಡಿಮೆ ಮಳೆಯಾಗುವ ಸಂಭವವಿದೆ. ಬೆಳಗಾವಿ, ಧಾರವಾಡ, ಬಾಗಲಕೋಟೆ, ಹಾವೇರಿ ಜಿಲ್ಲೆಯ ಒಂದೆರಡು ಕಡೆ ತುಂತುರು ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಶುಕ್ರವಾರ ಹಾಗೂ ಶನಿವಾರ ಬೆಳಿಗ್ಗೆ ಮತ್ತು ಸಂಜೆಯ ಅವಧಿಯಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಮುಂಜಾನೆ ಅವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಂಜು ಕಾಣಿಸಿಕೊಳ್ಳುವ ಸಾಧ್ಯತೆ ಇರಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಅಧ್ಯಕ್ಷ ಜಾರ್ಜಿಯಸ್ ಮಾವ್ರಿಕೋಸ್

ಬಂಡವಾಳಶಾಹಿ ಆಕ್ರಮಣ: ಹೋರಾಟ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಡವಾಳಶಾಹಿಗಳು, ಬೂರ್ಜ್ವಾಗಳು ಹೆಚ್ಚು ಆಕ್ರಮಣಕಾರಿಗಳಾಗಿದ್ದಾರೆ. ಅದರ ವಿರುದ್ಧ ಪ್ರತಿಹೋರಾಟ ಕಟ್ಟದೇ ಇದ್ದರೆ ಕಾರ್ಮಿಕರ, ಶೋಷಿತರ ನಾಳೆಗಳು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಲಿದೆ ಎಂದು ಅಥೆನ್ಸ್‌ನ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಅಧ್ಯಕ್ಷ ಜಾರ್ಜಿಯಸ್ ಮಾವ್ರಿಕೋಸ್ ತಿಳಿಸಿದರು.

ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ (ಡಬ್ಲ್ಯುಎಫ್‌ಟಿಯು) ಗುರುವಾರ ಹಮ್ಮಿಕೊಂಡಿದ್ದ 'ಪ್ರಸ್ತುತ ಕಾರ್ಮಿಕ ವರ್ಗದ ಮುಂದಿರುವ ಅಂತರರಾಷ್ಟ್ರೀಯ ಸವಾಲುಗಳು, ಜಾಗತಿಕ ಕಾರ್ಮಿಕ ಚಳವಳಿಯ ಕಾರ್ಯತಂತ್ರ ಮತ್ತು ಕಾರ್ಯವಿಧಾನ, ಇತಿಹಾಸದ ಮೇಲಿನ ವಿಮರ್ಶಾತ್ಮಕ ಟಿಪ್ಪಣಿಗಳು' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು ಸಾಮ್ರಾಜ್ಯಶಾಹಿಗೆ ಪೂರಕವಾಗಿವೆ. ಸಾಮ್ರಾಜ್ಯಶಾಹಿಗಳು ಯುದ್ಧೋನ್ಮಾದದಿಂದ ವರ್ತಿಸುತ್ತಿದ್ದಾರೆ. ಅದರ ವಿರುದ್ಧ ವ್ಯಾಪಕವಾಗಿ ಮತ್ತು ಏಕತೆಯಿಂದ ಹೋರಾಡಬೇಕಿದೆ ಎಂದು ಹೇಳಿದರು.



ಗಾಂಧಿ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಡಬ್ಲ್ಯುಎಫ್‌ಟಿಯು ಕಾರ್ಯದರ್ಶಿ ಅರ್ಚೊಂಟಿಯಾ ಅನಸ್ತಸಕಿ, ಅಥೆನ್ಸ್‌ನ ಇಂಟರ್‌ನ್ಯಾಷನಲ್ ವರ್ಕರ್ಸ್ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಜಾರ್ಜಿಯಸ್ ಮಾವ್ರಿಕೋಸ್, ಎಚ್. ಮಹಾದೇವನ್, ಸ್ವದೇಶ್ ದೇಬರಾಯ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ನಮ್ಮ ನಮ್ಮ ದೇಶಗಳೊಳಗಿನ ಸಮಸ್ಯೆಗಳ ಪರಿಹಾರಕ್ಕಾಗಿ ಚಳವಳಿ ರೂಪಿಸಬೇಕು. ಅದರ ಜೊತೆಗೆ ಅಂತರರಾಷ್ಟ್ರೀಯ ಸಮಸ್ಯೆಗಳ ವಿರುದ್ಧವೂ ನಾವಿರಬೇಕು. ಪ್ಯಾಲೆಸ್ಟೀನ್ ಜನರ ಮೇಲೆ ಇಸ್ರೇಲ್ ಮಾಡಿದ ದೌರ್ಜನವನ್ನೂ ವಿರೋಧಿಸಬೇಕು. ಬೇರೆ ಯಾವುದೇ ದೇಶ ಇನ್ನೊಂದು ದೇಶದ ವಿರುದ್ಧ ಯುದ್ಧ ಸಾರಿದರೂ ವಿರೋಧಿಸಬೇಕು. ಎಲ್ಲ ತರಹದ ಹಿಟ್ಲರಿಸಂ, ಫ್ಯಾಸಿಸಂಗಳ ವಿರುದ್ಧ ನಾವಿರಬೇಕು' ಎಂದರು.

ಸಂಪತ್ತಿನಿಂದ, ಯುದ್ಧನೀತಿಯಿಂದ, ಮಿಲಿಟರಿ ಶಕ್ತಿಯಿಂದ ಜನರನ್ನು ದಮನಿಸಲಾಗುತ್ತಿದೆ. ಯುವಜನರನ್ನು ಬಂಡವಾಳಶಾಹಿಗಳು ಸುಲಭವಾಗಿ ದಾರಿ ತಪ್ಪಿಸುತ್ತಾರೆ. ಯುವಜನರ ಹಕ್ಕುಗಳು, ಉದ್ಯೋಗಿಗಳ ಹಕ್ಕುಗಳು, ಮಹಿಳೆಯರ ಹಕ್ಕುಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಬೇಕು. ಕಾರ್ಮಿಕರ ಹೋರಾಟ ಮುಗಿದು ಹೋದ ಅಧ್ಯಾಯವಲ್ಲ. ಇಂದಿಗೂ ಪ್ರಸ್ತುತ, ನಾಳೆಗೂ ಬೇಕಾಗಿದೆ. ಉತ್ತಮ ನಾಳೆಗಳಿಗಾಗಿ ಇಂದು ಚಳವಳಿ ಕಟ್ಟಬೇಕು ಎಂದು ಸಲಹೆ ನೀಡಿದರು.

ಡಬ್ಲ್ಯುಎಫ್‌ಟಿಯು ಕಾರ್ಯದರ್ಶಿ ಅರ್ಚೊಂಟಿಯಾ ಅನಸ್ತಸಕಿ. ಉಪ ಪ್ರಧಾನ ಕಾರ್ಯದರ್ಶಿ ಸ್ವದೇಶ್ ದೇಬರಾಯ್, ಮಾಜಿ ಉಪ ಪ್ರಧಾನ ಕಾರ್ಯದರ್ಶಿ ಎಚ್. ಮಹಾದೇವನ್, ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು, ಟಿಯುಸಿಸಿ, ಎಐಐಇಎ, ಕೆಪಿಬಿಇಎಫ್, ಬಿಇಎಫ್‌ಐ, ಬಿಎಸ್‌ಎನ್‌ಎಲ್‌ಇಯು, ಎಐಎಸ್‌ಜಿಇಎಫ್ ಸಂಘಟನೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

'ಶಾಸಕರಿಗೆ ಶಾಲಾ ಉಸ್ತುವಾರಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ವ್ಯವಸ್ಥೆ ಸುಧಾರಣೆ ಮತ್ತು ಮೇಲ್ವಿಚಾರಣೆಗಾಗಿ ಆಯಾ ವಿಧಾನ ಸಭಾ ಕ್ಷೇತ್ರಗಳ ಶಾಸಕರ ನೇತೃತ್ವದಲ್ಲಿ ಸಮಿತಿ ರಚಿಸುತ್ತಿರುವ ಸರ್ಕಾರದ ನಿರ್ಧಾರಕ್ಕೆ ಹಲವು ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

'ಶಾಸಕರ ನೇತೃತ್ವದಲ್ಲಿ ಸಮಿತಿ ರಚಿಸುವುದು ಕಾನೂನುಬಾಹಿರ.ಸಂವಿಧಾನದ ಪರಿಚ್ಛೇದ 21 'ಎ' ಅಡಿಯಲ್ಲಿ ಶಿಕ್ಷಣದ ಮೂಲಭೂತ ಹಕ್ಕಿನ ಜಾರಿಗಾಗಿ ರೂಪಿಸಿರುವ ಶಿಕ್ಷಣ ಹಕ್ಕು ಕಾಯ್ದೆಯ 21 ಮತ್ತು 22 ಕಲಂಗಳ ಸ್ಪಷ್ಟ ಉಲ್ಲಂಘನೆ' ಎಂದು ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯದ (ಫಾಫ್ರೆ) ಸಂಚಾಲಕ ವಿ.ಪಿ. ನಿರಂಜನಾರಾಧ್ಯ ಟೀಕಿಸಿದ್ದಾರೆ.

'ಶಿಕ್ಷಣ ಹಕ್ಕು ಕಾಯ್ದೆಯ ಅನ್ವಯ ಶಾಲೆಗಳ ಸುಧಾರಣೆ ಮತ್ತು ಮೇಲುಸ್ತುವಾರಿಗೆ ಶಾಲಾ ಹಂತದಲ್ಲೇ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸಲಾಗಿದ್ದು, ಸಮಿತಿಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿವೆ. ಸರ್ಕಾರದ ಹೊಸ ನಿರ್ಧಾರ ಯುಪಿಎ ಸರ್ಕಾರ ರೂಪಿಸಿದ್ದ ಶಿಕ್ಷಣ ಹಕ್ಕು ಕಾಯಿದೆಯನ್ನು ದುರ್ಬಲಗೊಳಿಸುವ ನಡೆ. ಶಾಸಕರ ನೇತೃತ್ವದಲ್ಲಿ ಸಮಿತಿ ರಚಿಸುವ ಬದಲು ಶಿಕ್ಷಣ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮವಹಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಸರ್ಕಾರ ಶಾಲಾ ಶಿಕ್ಷಣವನ್ನು ರಾಜಕೀಯಗೊಳಿಸಲು ಹೊರಟಿದೆ. ಸ್ಥಳೀಯ ಶಾಸಕರು ತಮ್ಮ ರಾಜಕೀಯ ಕಾರ್ಯಸೂಚಿ ತುಂಬಲು ಇದು ದಾರಿ ಮಾಡಿಕೊಡುತ್ತದೆ. ಶಾಲೆಗಳು ರಾಜಕೀಯ ವೇದಿಕೆಯಾಗುತ್ತವೆ' ಎಂದು ಆರ್‌ಟಿಇ ವಿದ್ಯಾರ್ಥಿಗಳ ಪೋಷಕರ ಸಂಘದ ಅಧ್ಯಕ್ಷ ಬಿ.ಎನ್. ಯೋಗಾನಂದ ದೂರಿದ್ದಾರೆ.

'ಸಚಿವ ಸ್ಥಾನದ ಭರವಸೆ'

ವಿಜಯಪುರ: 'ಮುಂದಿನ ಸಚಿವ ಸಂಪುಟ ಪುನರ್‌ರಚನೆ ವೇಳೆ ನನಗೆ ಅವಕಾಶ ಲಭಿಸುವ ವಿಶ್ವಾಸ ಇದೆ' ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

'ಈ ಹಿಂದೆ ವಿಜಯಪುರ ಜಿಲ್ಲೆಯಿಂದ ಇಬ್ಬರನ್ನು ಸಚಿವರನ್ನಾಗಿ ಮಾಡುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ನನಗೆ ಆಶ್ವಾಸನೆ ನೀಡಿದ್ದರು. ಹೀಗಾಗಿ ಮುಂದಿನ ಸಚಿವ ಸಂಪುಟ ಪರಿಷ್ಕರಣೆ ಸಂದರ್ಭದಲ್ಲಿ ಆಶ್ವಾಸನೆಯನ್ನು ಈಡೇರಿಸಬಹುದು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಮಂಡೂರು: ಓಂ ಶಕ್ತಿ ದೇವಸ್ಥಾನ ಉದ್ಘಾಟನೆ



ಮಂಡೂರಿನಲ್ಲಿ ಓಂ ಶಕ್ತಿ ದೇವಿಯ ದೇವಸ್ಥಾನ ಲೋಕಾರ್ಪಣೆಗೊಂಡಿತು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಂಡೂರಿನಲ್ಲಿ ನಿರ್ಮಾಣಗೊಂಡಿರುವ ಓಂ ಶಕ್ತಿ ದೇವಿಯ ದೇವಸ್ಥಾನವು ಕಳಸ, ದೀಪ, ಯಾಗ ಪೂಜೆಯೊಂದಿಗೆ ಉದ್ಘಾಟನೆಯಾಯಿತು.

ಮಂಡೂರು, ಬೂದಿಗೆರೆ, ಕಗ್ಗಲಹಳ್ಳಿ, ಯಲಹಂಕ, ರಾಮಗೊಂಡನಹಳ್ಳಿ, ಹೂನಾಯಕನಹಳ್ಳಿ, ಭುವನಹಳ್ಳಿ, ನೆಲ್ಲೂರು, ಬಿದರಹಳ್ಳಿ, ಕಾಡಾ ಅಗ್ರಹಾರ ಸೇರಿದಂತೆ ಮತ್ತಿತರ ಗ್ರಾಮಗಳ ಭಕ್ತಾದಿಗಳು ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ಓಂ ಶಕ್ತಿ ದೇವಿಗೆ ಯಾವುದೇ ಜಾತಿ ಮತವಿಲ್ಲ. ಎಲ್ಲರೂ ಭಕ್ತಿಯಿಂದ ಆರಾಧನೆ ಮಾಡಬಹುದು. ಗರ್ಭಗುಡಿಯನ್ನು ಪ್ರತಿಯೊಬ್ಬ ಭಕ್ತರು ಪ್ರವೇಶಿಸಿ ನಿಷ್ಠೆಯಿಂದ ಪೂಜಿಸಬಹುದು' ಎಂದು ಕರ್ನಾಟಕ ಓಂ ಶಕ್ತಿ ದೇವಸ್ಥಾನಗಳ ಉಪಾಧ್ಯಕ್ಷ ಡಿ.ಉದಯ ಕುಮಾರ್ ಹೇಳಿದರು.

ವೀರಗಾಸೆ ಕಲಾವಿದರ ನೃತ್ಯ ಹಾಗೂ ತಮಿಳುನಾಡಿನ ವಾದ್ಯ ಮೇಳವು ಭಕ್ತರನ್ನು ಆಕರ್ಷಿಸಿತು. ಅನ್ನದಾನ ನಡೆಯಿತು. ಶಾಸಕರಾದ ಮಂಜುಳಾ ಲಿಂಬಾವಳಿ, ಶರತ್ ಬಚ್ಚೇಗೌಡ, ಎ.ಸಿ.ಶ್ರೀನಿವಾಸ್, ಎಸ್.ದಿವಾಕರ್,ಎಸ್.ರಾಜಗೋಪಾಲ್, ಡಿ.ಉದಯ ಕುಮಾರ್, ಎಸ್.ವೆಂಕಟೇಶ್, ಮಂಜುನಾಥ್, ಕೋಮಲಮ್ಮ ಉಪಸ್ಥಿತರಿದ್ದರು.

ಸಿನಿಮಾ ಪುರವಣಿ

‘ಗೆದ್ದವರಿಂದಷ್ಟೇ ಉದ್ಯಮವಲ್ಲ’


ನೀನಾಸಂ ಸತೀಶ್

ವಿನಾಯಕ ಕೆ.ಎಸ್

ನೀನಾಸಂ ಸತೀಶ್, ರಚಿತಾ ರಾಮ್ ಜೋಡಿಯಾಗಿ ನಟಿಸಿದ್ದ ‘ಅಯೋಗ್ಯ’ ಸಿನಿಮಾ ಸೂಪರ್ ಹಿಟ್ ಆಗಿತ್ತು. ಇದೀಗ ಅದೇ ಜೋಡಿಯ ‘ಅಯೋಗ್ಯ–2’ ಚಿತ್ರ ಸೆಟ್ಟೇರುತ್ತಿದೆ. ಚಿತ್ರ ಹಾಗೂ ತಮ್ಮ ಸಿನಿಪಯಣದ ಕುರಿತು ನೀನಾಸಂ ಸತೀಶ್ ಮಾತನಾಡಿದ್ದಾರೆ.

● ಅಯೋಗ್ಯ ಕಥೆಯ ಮುಂದುವರಿಕೆಯಾ?

ಹೌದು, ಅಯೋಗ್ಯ ಚಿತ್ರದ ಕಥೆಯೇ ಮುಂದುವರಿಯುತ್ತದೆ. ಅದೊಂದು ದ್ವೇಷ ತೀರಿಸಿಕೊಳ್ಳುವ ಕಥೆ. ಊರಿನ ಮುಖಂಡನ ವಿರುದ್ಧ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದ ನಾಯಕ ಊರಿನಲ್ಲಿ ಬಾಕಿ ಉಳಿದ ಕೆಲಸಗಳನ್ನು ಮುಗಿಸುತ್ತಾನಾ? ಕೊಟ್ಟ ಆಶ್ವಾಸನೆಗಳನ್ನು ಪೂರೈಸುತ್ತಾನಾ? ಎಂಬಿತ್ಯಾದಿ ವಿಷಯಗಳನ್ನು ಇಟ್ಟುಕೊಂಡು ಕಥೆ ಮಾಡಿದ್ದೇವೆ. ಬಹುತೇಕ ‘ಅಯೋಗ್ಯ’ದ ತಂಡವೇ ಇದೆ. ನಿರ್ಮಾಪಕರು ಮಾತ್ರ ಬೇರೆ. ಆರು ವರ್ಷಗಳ ಹಿಂದೆ ‘ಅಯೋಗ್ಯ’ ಬಂದಿದ್ದು. ಆ ಸಮಯ ಬೇರೆಯಾಗಿತ್ತು. ಈಗಿನ ಸಮಯವೇ ಬೇರೆ. ಕೋವಿಡ್ ನಂತರ ಜನ ಸಿನಿಮಾ ನೋಡುವ ರೀತಿ ಬದಲಾಗಿದೆ.

● ಚಿತ್ರೀಕರಣ ಯಾವಾಗಿನಿಂದ? ಈ ಭಾಗ ಎಷ್ಟು ಭಿನ್ನ?

ಡಿ.11ರಿಂದ ಮಂಡ್ಯದ ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಇದು ಆ ಭಾಗಕ್ಕಿಂತ ಅದ್ದೂರಿಯಾಗಿರಲಿದೆ. ಜೊತೆಗೆ ಬಜೆಟ್ ಕೂಡ ಸ್ವಲ್ಪ ಹೆಚ್ಚಿದೆ. ಹೀಗಾಗಿ ನಿರ್ಮಾಣ ಸಂಸ್ಥೆ ಬದಲಾಗಿದೆ. ಈಗಿನ ಟ್ರೆಂಡ್‌ಗೆ ತಕ್ಕಂತೆ ಕಥೆ ಮಾಡಿಕೊಂಡಿದ್ದೇವೆ. ಪಾತ್ರಗಳು ಬದಲಾಗುವುದಿಲ್ಲ. ಅವುಗಳ ಪೋಷಣೆ ಸ್ವಲ್ಪ ಬದಲಾಗುತ್ತದೆ.

● ನಿಮ್ಮ ‘ಅಶೋಕ ಬ್ಲೇಡ್’ ಚಿತ್ರ ಯಾವ ಹಂತದಲ್ಲಿದೆ?

ಶೇಕಡ 80ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಜನವರಿಯಿಂದ ಮತ್ತೆ ಚಿತ್ರೀಕರಣ ಪ್ರಾರಂಭವಾಗಲಿದೆ. ಶೀರ್ಷಿಕೆ ‘ದಿ ರೈಸ್ ಆಫ್ ಅಶೋಕ’ ಎಂದು ಬದಲಾಗಿದೆ. ಅತಿಯಾದ ಬಜೆಟ್‌ನಿಂದ ಸಿನಿಮಾ ನಿಂತಿದೆ ಎಂಬುದೆಲ್ಲ ವಂದತಿ ಅಷ್ಟೆ. ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ. ಸಿನಿಮಾ ಬಿಡುಗಡೆಯಾದಾಗ ಎಲ್ಲರಿಗೂ ಒಳಿತಾಗುತ್ತದೆ ಎಂಬ ನಂಬಿಕೆ ಇದೆ. ವೃದ್ಧಿ ಕ್ರಿಯೇಷನ್ಸ್ ಜೊತೆ ನಾನು ಕೂಡ ಈ ಚಿತ್ರದ ನಿರ್ಮಾಣದಲ್ಲಿ ಕೈಜೋಡಿಸಿದ್ದೇನೆ. ಪ್ರತಿ ನಾಯಕನಿಗೂ ತಾನು ಎಷ್ಟು ರಿಕವರ್ ಮಾಡಬಲ್ಲೆ ಎಂಬ ಅರಿವು ಇರುತ್ತದೆ. ಅದಕ್ಕಿಂತ ಹೆಚ್ಚು ಬಜೆಟ್ ಖರ್ಚು ಮಾಡಿಕೊಳ್ಳಬಾರದು.

● ನಿಮ್ಮ ಮುಂದಿನ ಯೋಜನೆಗಳು?

ಸದ್ಯ ಇವೆರಡು ಸಿನಿಮಾಗಳನ್ನು ಮುಗಿಸಿಕೊಳ್ಳುವ ಯತ್ನದಲ್ಲಿರುವೆ. ಹೊಸದು ಒಪ್ಪಿಕೊಳ್ಳುತ್ತಿಲ್ಲ. ಇನ್ನೊಂದು ಕಥೆ ಕೇಳಿರುವೆ. ಒಪ್ಪಿಕೊಂಡ ಕೆಲಸಗಳು ಮುಗಿದ ಮೇಲೆ ಆ ಸಿನಿಮಾ ಘೋಷಿಸುತ್ತೇವೆ. ಈಗಲೇ ಅದರ ಬಗ್ಗೆ ಹೆಚ್ಚು ಮಾಹಿತಿ ನೀಡಲಾರೆ.

● ನಿಮ್ಮ ನಿರ್ಮಾಣ ಸಂಸ್ಥೆಯಿಂದ ಸಿನಿಮಾಗಳನ್ನು ಮಾಡುವಿರಾ?

ಮೊದಲೇ ಹೇಳಿದಂತೆ ‘ಅಶೋಕ’ ಚಿತ್ರದಲ್ಲಿ ಕೈಜೋಡಿಸಿರುವೆ. ಅದು ನಮ್ಮ ನಿರ್ಮಾಣ ಸಂಸ್ಥೆ ಸಹಭಾಗಿತ್ವದ ಎರಡನೇ ಸಿನಿಮಾ. ನಾನೇ ಒಂದು ಕತೆ ಬರೆಯುತ್ತಿದ್ದೇನೆ. ಅದನ್ನು ಮುಂದಿನ ವರ್ಷ ನಮ್ಮ ನಿರ್ಮಾಣ ಸಂಸ್ಥೆಯಿಂದಲೇ ಸಿನಿಮಾ ಮಾಡುತ್ತೇನೆ. ‘ವೃತ್ತ’ ಎಂಬ ಹೊಸಬರ ಸಿನಿಮಾವನ್ನು ಪ್ರೆಸೆಂಟ್ ಮಾಡುತ್ತಿರುವೆ. ಬಹಳ ಚೆನ್ನಾಗಿದೆ. ‘ಲೂಸಿಯಾ’ ನಂತರ ಬಂದಿರುವ ಅಂಥದ್ದೇ ರೀತಿಯ ಸಿನಿಮಾವಿದು.

● ಹಿಂದಿನ ಸಿನಿಮಾ ‘ಮ್ಯಾಟ್ನಿ’ ಉತ್ತಮ ಗಳಿಕೆ ಕಂಡಿದೆಯಾ?

‘ಮ್ಯಾಟ್ನಿ’ ನಾವು ಅಂದುಕೊಂಡಷ್ಟು ಮಟ್ಟಕ್ಕೆ ತಲುಪಲಿಲ್ಲ. ಆದರೆ ನಷ್ಟವಾಗಲಿಲ್ಲ. ಚಿತ್ರದ ಹಕ್ಕುಗಳೆಲ್ಲ ಮಾರಾಟವಾಗಿವೆ. ಟಿ.ವಿಯಲ್ಲಿಯೂ ಉತ್ತಮ ರೇಟಿಂಗ್ ಬಂದಿತ್ತು. ಚಿತ್ರಮಂದಿರಗಳಲ್ಲಿಯೂ ಗಳಿಕೆ ಕಳಪೆಯಾಗಿರಲಿಲ್ಲ. ಚಿತ್ರೋದ್ಯಮ ಎಂದರೆ ಕೇವಲ ಗೆಲುವು ಮಾತ್ರವಲ್ಲ. ಸೋಲು, ಗೆಲುವು ಎರಡೂ ಇರುತ್ತದೆ. ಚಿತ್ರೋದ್ಯಮದಿಂದ ಸಾವಿರಾರು ಜನ ಊಟ ಮಾಡುತ್ತಿದ್ದಾರೆ. ಇದೇ ಕೆಲಸ ನಂಬಿಕೊಂಡಿದ್ದಾರೆ. ಅಂಥವರಿಗೆಲ್ಲ ಚಿತ್ರೋದ್ಯಮದ ಅನ್ನ ನೀಡುತ್ತಿದೆ. ಹೀಗಾಗಿ ಸೋತ ಚಿತ್ರಗಳನ್ನು ತಾತ್ಸಾರ ಮಾಡುವುದು ಸರಿಯಲ್ಲ. ಒಬ್ಬ ನಾಯಕನ ಎಲ್ಲ ಸಿನಿಮಾಗಳು ನಿರಂತರವಾಗಿ ಗೆಲ್ಲಲು ಸಾಧ್ಯವಿಲ್ಲ. ವರ್ಷಕ್ಕೆ 150–200 ಚಿತ್ರಗಳಾಗುತ್ತವೆ. ಅದರಲ್ಲಿ ಗೆಲ್ಲುವುದೆಷ್ಟು ಎಂಬುದನ್ನು ನಾವು ನೋಡುತ್ತಲೇ ಇದ್ದೇವೆ. ಆದರೆ ಕೇವಲ ಗೆದ್ದ ಚಿತ್ರಗಳಿಂದ ಉದ್ಯಮ ಉಳಿದಿಲ್ಲ. ಈ 200 ಸಿನಿಮಾಗಳಿಂದ ಚಿತ್ರೋದ್ಯಮ ಜೀವಂತವಾಗಿರುವುದು ಎಂಬುದನ್ನು ಮರೆಯಬಾರದು.

ಮೂರು ಚಿತ್ರಗಳು ತೆರೆಗೆ


ಧೀರ ಭಗತ್ ರಾಯ್
ಸುಚರಿತಾ

ಅಲ್ಲು ಅರ್ಜುನ್ ಅಭಿನಯದ ‘ಪುಷ್ಪ–2’ ಗಾಗಿ ಕನ್ನಡ ಚಿತ್ರರಂಗ ದಾರಿ ಮಾಡಿಕೊಟ್ಟಿದೆ. ಡಿ.4ರಂದೇ ರಾಜ್ಯದ 400ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಪುಷ್ಪ–2 ತೆರೆಕಂಡಿದೆ. ಹೀಗಾಗಿ ಇಂದು (ಡಿ.6) ಮೂರು ಸಿನಿಮಾಗಳು ಮಾತ್ರ ತೆರೆ ಕಾಣುತ್ತಿವೆ.

ಧೀರ ಭಗತ್ ರಾಯ್: ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರ ‘ಧೀರ ಭಗತ್ ರಾಯ್’. ಕರ್ಣನ್ ಅವರ ಚೊಚ್ಚಲ ನಿರ್ದೇಶನದ ಚಿತ್ರವಿದು.

‘ಪುಷ್ಪ–2 ಎದುರು ತೆರೆಗೆ ಬರುತ್ತಿದ್ದೇವೆ. ತೆಲುಗಿನ ‘ಬಾಹುಬಲಿ’ ಎದುರು ‘ರಂಗಿತರಂಗ’ ಚಿತ್ರ ತೆರೆ ಕಂಡು ಯಶಸ್ವಿಯಾಗಿತ್ತು. ಅದೇ ರೀತಿ ನಮ್ಮ ಚಿತ್ರವನ್ನು ಜನ ಗೆಲ್ಲಿಸುತ್ತಾರೆ ಎಂಬ ವಿಶ್ವಾಸವಿದೆ. ‘ಜೈಭೀಮ್’, ‘ವಿಸಾರಣೈ’ ಚಿತ್ರಗಳ ಛಾಯೆ ನಮ್ಮ ಚಿತ್ರದಲ್ಲಿದೆ ಎನ್ನುತ್ತಿದ್ದಾರೆ. ‘ಧೀರ ಭಗತ್ ರಾಯ್’ ಅಸಲಿ ಕಥೆಯೇನು?, ‘ಕಾಟೇರ’ ಮುಂದುವರೆದ ಅಧ್ಯಾಯವಾ ಎಂಬುದಕ್ಕೆ ಚಿತ್ರಮಂದಿರದಲ್ಲಿಯೇ ಉತ್ತರ ಸಿಗಲಿದೆ’ ಎಂದಿದ್ದಾರೆ ನಿರ್ದೇಶಕ ಕರ್ಣನ್.

ಭೂ ಸುಧಾರಣೆ ಕಾಯ್ದೆ ಹಿನ್ನೆಲೆಯ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ರಾಕೇಶ್ ದಳವಾಯಿಗೆ ಸುಚರಿತಾ ಜೋಡಿಯಾಗಿದ್ದಾರೆ. ಶರತ್ ಲೋಹಿತಾಶ್ವ, ನೀನಾಸಂ ಅಶ್ವಥ್ ಮುಂತಾದವರು ಚಿತ್ರದಲ್ಲಿದ್ದಾರೆ.

ವೈಟ್ ಲೋಟಸ್ ಎಂಟರ್‌ಟೈನ್‌ಮೆಂಟ್ ಮತ್ತು ಶ್ರೀ ಓಂ ಸಿನಿ ಎಂಟರ್‌ಟೈನರ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ, ಸೆಲ್ವಂ ಜಾನ್ ಛಾಯಾಚಿತ್ರಗ್ರಹಣ, ಎನ್.ಎಂ ವಿಶ್ವ ಸಂಕಲನವಿದೆ.

ಗುಂಮ್ಟಿ: ಕುಡುಬಿ ಜನಾಂಗದ ಕುರಿತ ಕಥೆಯನ್ನು ಹೊಂದಿರುವ ಚಿತ್ರ ‘ಗುಂಮ್ಟಿ’. ಈ ಹಿಂದೆ ‘ಇನಾಮ್ದಾರ್’ ಸಿನಿಮಾ ನಿರ್ದೇಶಿಸಿದ್ದ ಸಂದೇಶ ಶೆಟ್ಟಿ ಆಜ್ರಿ ಆ್ಯಕ್ಷನ್ ಕಟ್ ಹೇಳಿ, ನಾಯಕನಾಗಿ ಕಾಣಿಸಿಕೊಂಡಿದ್ದಾರೆ.

‘ಇದೊಂದು ಕಲಾತ್ಮಕ ಸಿನಿಮಾವಾಗಿದ್ದು, ಕರಾವಳಿ ತೀರದ ಕುಡುಬಿ ಜನಾಂಗದ ಕಥೆಯನ್ನು ತೆರೆಮೇಲೆ ಹೇಳಲು ಹೊರಟಿದ್ದೇವೆ. ‘ಗುಂಮ್ಟಿ’ ಎಂಬುದು ಕುಡುಬಿಯವರ ಸಾಂಪ್ರದಾಯಿಕ ವಾದ್ಯವಾಗಿದ್ದು, ಅದನ್ನೇ ಚಿತ್ರದ ಶೀರ್ಷಿಕೆಯಾಗಿಸಿಕೊಂಡಿದ್ದೇವೆ’ ಎನ್ನುತ್ತಾರೆ ಸಂದೇಶ ಶೆಟ್ಟಿ.

ವಿಕಾಸ್ ಎಸ್. ಶೆಟ್ಟಿ ಬಂಡವಾಳ ಹೂಡಿದ್ದಾರೆ. ವೈಷ್ಣವಿ ನಾಡಿಗ್ ಚಿತ್ರದ ನಾಯಕಿ. ರಂಜನ್ ಛತ್ರಪತಿ, ಕರಣ್ ಕುಂದರ್, ಯಶ್ ಆಚಾರ್ಯ, ಪ್ರಭಾಕರ ಕುಂದರ್, ರಘು ಪಾಂಡೇಶ್ವರ ಮುಂತಾದವರು ಚಿತ್ರದಲ್ಲಿದ್ದಾರೆ. ಅನೀಶ್ ಡಿಸೋಜಾ ಛಾಯಾಚಿತ್ರಗ್ರಹಣ, ಶಿವರಾಜ ಮೇಹು ಸಂಕಲನವಿದೆ. ಡೊಂಡಿ ಮೋಹನ್ ಸಾಹಿತ್ಯ ರಚಿಸಿ, ಸಂಗೀತ ಸಂಯೋಜಿಸಿದ್ದಾರೆ. ಉಡುಪಿ, ಕುಂದಾಪುರ, ಕಾರವಾರ, ಶಿರಸಿ, ಹುಬ್ಬಳ್ಳಿ ಮೊದಲಾದೆಡೆ ಚಿತ್ರೀಕರಣ ಗೊಂಡಿದೆ.

ಹರಿದಾಸರ ದಿನಚರಿ: 15ನೇ ಶತಮಾನದ ದಾಸ ಶ್ರೇಷ್ಠ ಶ್ರೀ ಪುರಂದರ ದಾಸರ ದೈನಂದಿನ ಜೀವನದ ಕಥೆಯನ್ನು ಹೊಂದಿರುವ ಚಿತ್ರ ಹರಿದಾಸರ ದಿನಚರಿ. ಕರಿಗಿರಿ ಫಿಲ್ಮ್ಸ್ ನಿರ್ಮಿಸಿ, ಗಿರೀಶ್ ನಾಗರಾಜ ನಿರ್ದೇಶಿಸಿದ್ದಾರೆ. ‘ಇದು ಜೀವನಚರಿತ್ರೆಯ ಚಿತ್ರವಲ್ಲ. ಪ್ರೇಕ್ಷಕರನ್ನು ಆಳವಾದ ಭಕ್ತಿ ಮತ್ತು ಕಲಾತ್ಮಕ ಅಭಿವ್ಯಕ್ತಿಯ ಯುಗಕ್ಕೆ ಕರೆದೊಯ್ಯುವ ಒಂದು ಅನುಭವ’ ಎಂದಿದ್ದಾರೆ ನಿರ್ದೇಶಕರು.

ವಿದ್ಯಾಭೂಷಣರು ಶ್ರೀ ಪುರಂದರ ದಾಸರಾಗಿ ಕಾಣಿಸಿಕೊಂಡಿದ್ದಾರೆ. ಘನಶ್ಯಾಮ್ ಕೆ.ವಿ, ಗೋಕುಲ್ ಅಯ್ಯರ್, ವಾಸುದೇವ ಮೂರ್ತಿ ಕೆ.ಎನ್ ಮುಂತಾದವರು ಚಿತ್ರದಲ್ಲಿದ್ದಾರೆ. ರೋಣದ ಬಕ್ಕೇಶ್ ಸಂಗೀತ, ಹರಿರಾಜು.ಎಂ ಛಾಯಾಚಿತ್ರಗ್ರಹಣ, ಸುಹಾಸ್ ಜಯ್ ಸಂಕಲನವಿದೆ. ❖


ವಿಜಯ್ ಕಾರ್ತಿಕೇಯ, ಸುದೀಪ್, ಕಲೈಪುಲಿ ಎಸ್.ಧಾನು

‘ಅಮ್ಮನಿಗೆ ಸಿನಿಮಾ ತೋರಿಸಲಾಗಲಿಲ್ಲ’

ಕಿಚ್ಚ ಸುದೀಪ್ ನಟನೆಯ ‘ಮ್ಯಾಕ್ಸ್’ ಸಿನಿಮಾ ಡಿಸೆಂಬರ್ 25ರಂದು ಚಿತ್ರ ತೆರೆಗೆ ಬರುತ್ತಿದೆ. ಕಲೈಪುಲಿ ಎಸ್. ಧಾನು ಹಾಗೂ ಕಿಚ್ಚ ಕ್ರಿಯೇಷನ್ಸ್ ನಿರ್ಮಿಸಿರುವ ಚಿತ್ರಕ್ಕೆ ವಿಜಯ್ ಕಾರ್ತಿಕೇಯ ನಿರ್ದೇಶನವಿದೆ. ಚಿತ್ರತಂಡ ಇತ್ತೀಚೆಗಷ್ಟೆ ಮಾಧ್ಯಮದವರೊಂದಿಗೆ ಮಾಹಿತಿ ಹಂಚಿಕೊಂಡಿತು.

‘ನನ್ನ ತಾಯಿಗೆ ಮ್ಯಾಕ್ಸ್ ನೋಡಬೇಕು ಎನ್ನುವ ಆಸೆ ಇತ್ತು. ಸಿನಿಮಾ ಮುಗಿಯುತ್ತಿದ್ದಂತೆ ತೋರಿಸು ಎಂದಿದ್ದರು. ಆದರೆ ತೋರಿಸಲು ಸಾಧ್ಯವಾಗಿರಲಿಲ್ಲ. ಈಗ ಸಿನಿಮಾ ನೋಡಲು ಅವರೇ ಇಲ್ಲ. ನನಗೆ ಆ ಕೊರಗು ಈಗಲೂ ಇದೆ. ಆಗಾಗ ಚಿತ್ರದ ಒಂದಷ್ಟು ತುಣುಕುಗಳನ್ನು ಅವರಿಗೆ ತೋರಿಸುತ್ತಿದ್ದೆ. ಅದೊಂದು ಸಮಾಧಾನವಿದೆ. ಚಿತ್ರ ಬಿಡುಗಡೆ ಪೂರ್ವ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸಲು ನಿರ್ಮಾಪಕರು ಬಯಸಿದ್ದರು. ಆದರೆ ನಾನು ಅದಕ್ಕೆ ಅವಕಾಶ ನೀಡಿಲ್ಲ’ ಎಂದರು.

‘ನಾನು ಈ ಚಿತ್ರ ಒಪ್ಪುವುದಕ್ಕೆ ಕಾರಣ ನಿರ್ದೇಶಕ ವಿಜಯ್ ಕಾರ್ತಿಕೇಯ. ವಿಜಯ್ ಅವರು ಹೇಳಿದ ಕಥೆ ಚೆನ್ನಾಗಿರಲಿಲ್ಲ ಎಂದರೆ ಯಾವುದೂ ಇಲ್ಲಿಯವರೆಗೂ ಬರುತ್ತಿರಲಿಲ್ಲ. ಧಾನು ಅವರು ಹಿರಿಯ ನಿರ್ಮಾಪಕರು. ಅವರೇ ವಿಜಯ್ ಅವರನ್ನು ಕಳುಹಿಸಿಕೊಟ್ಟಿದ್ದರು. ವಿಜಯ್ ಹೇಳಿದ ಕಥೆ ಬಹಳ ಇಷ್ಟವಾಯಿತು. ಚೆನ್ನೈನಿಂದ ಕಥೆ ಹೇಳಲು ಒಂದು ದಿನಕ್ಕಾಗಿ ಬಂದ ಅವರನ್ನು ವಾರಗಳು ಇಲ್ಲೇ ಉಳಿಸಿಕೊಂಡು, ಅವರ ಜೊತೆಗೆ ಕುಳಿತು ಸಾಕಷ್ಟು ಚರ್ಚೆ ಮಾಡಿ, ಈ ಕಥೆಯನ್ನು ಇನ್ನಷ್ಟು ಗಟ್ಟಿಯಾಗಿ ರೂಪಿಸಲಾಯಿತು. ಈ ನಿರ್ಮಾಪಕರು ನಾನು ಸಾಮಾನ್ಯ ನಟನಾಗಿದ್ದಾಗ ‘ಕಾಕ್ಕಾ ಕಾಕ್ಕಾ’ ಚಿತ್ರದ ರಿಮೇಕ್ ಹಕ್ಕನ್ನು ನನಗೆ ಉಚಿತವಾಗಿ ಬರೆದುಕೊಟ್ಟಿದ್ದರು. ಆದರೆ ಆ ಚಿತ್ರ ಮಾಡಲು ನನ್ನಿಂದ ಸಾಧ್ಯವಾಗಿರಲಿಲ್ಲ. ಈ ಚಿತ್ರದ ಮೂಲಕ ಅವರ ಜೊತೆ ಕೆಲಸ ಮಾಡುವ ಅವಕಾಶ ಲಭಿಸಿತು’ ಎಂದು ಹಳೆಯ ವಿಷಯವನ್ನು ನೆನಪಿಸಿಕೊಂಡರು.

ವರಲಕ್ಷ್ಮೀ ಶರತ್‌ಕುಮಾರ್ ಚಿತ್ರದ ನಾಯಕಿ. ಸುಧಾ ಬೆಳವಾಡಿ, ಕರಿಸುಬ್ಬು, ಸಂಯುಕ್ತಾ ಹೊರನಾಡು, ಸುಕೃತಾ ವಾಗ್ಲೇ, ವಿಜಯ್ ಚೆಂಡೂರು ಮುಂತಾದವರು ಚಿತ್ರದಲ್ಲಿದ್ದಾರೆ.

‘ತಮಿಳು, ಹಿಂದಿ, ಮಲಯಾಳ ಸೇರಿದಂತೆ ಅನೇಕ ಭಾಷೆಗಳಲ್ಲಿ ರಜನಿಕಾಂತ್ ಸೇರಿದಂತೆ ಅನೇಕ ಹೆಸರಾಂತ ಕಲಾವಿದರ ಚಿತ್ರಗಳನ್ನು ನಿರ್ಮಾಣ ಮಾಡಿದ್ದೇನೆ. ಕನ್ನಡದಲ್ಲಿ ‘ಮ್ಯಾಕ್ಸ್’ ನನ್ನ ನಿರ್ಮಾಣದ ಮೊದಲ ಚಿತ್ರ. ಸುದೀಪ್ ಅವರ ಸಹಕಾರ, ತೊಡಗಿಸಿಕೊಳ್ಳುವಿಕೆಯಿಂದ ಚಿತ್ರ ಉತ್ತಮವಾಗಿ ಮೂಡಿ ಬಂದಿದೆ’ ಎಂದರು ನಿರ್ಮಾಪಕರು.

ಒಂದೇ ರಾತ್ರಿಯಲ್ಲಿ ನಡೆಯುವ ಎಮೋಷನಲ್ ಆ್ಯಕ್ಷನ್ ಕಥಾಹಂದರ ಹೊಂದಿರುವ ಚಿತ್ರವಿದು. ಅಜನೀಶ್ ಲೋಕನಾಥ್ ಸಂಗೀತ, ಶೇಖರ್ ಚಂದ್ರ ಛಾಯಾಚಿತ್ರಗ್ರಹಣ, ಗಣೇಶ್ ಬಾಬು ಸಂಕಲನ ಚಿತ್ರಕ್ಕಿದೆ. ❖

ಗಮನ ಸೆಳೆಯುವ X&Y ಚಿತ್ರದ ಆ್ಯಂಬು ಆಟೊ



ಆ್ಯಂಬು ಆಟೊ


ಸತ್ಯಪ್ರಕಾಶ್

‘ರಾಮಾ ರಾಮಾ ರೇ’, ‘ಒಂದಲ್ಲಾ ಎರಡಲ್ಲಾ’ ಮೊದಲಾದ ಸಿನಿಮಾಗಳನ್ನು ನಿರ್ದೇಶಿಸಿದ್ದ ಸತ್ಯಪ್ರಕಾಶ್ ನಿರ್ದೇಶಿಸಿ, ನಟಿಸಿರುವ ‘X&Y’ ಚಿತ್ರದ ಆಂಬು ಆಟೊ ಗಮನ ಸೆಳೆಯುತ್ತಿದೆ. ಆಂಬುಲೆನ್ಸ್‌ನಲ್ಲಿರುವಂತೆ ಎಲ್ಲ ಸೌಲಭ್ಯಗಳನ್ನು ಈ ಆಟೊದಲ್ಲಿ ಅಳವಡಿಸಿ, ಚಿತ್ರದಲ್ಲಿ ಇದನ್ನೊಂದು ಕಲಾವಿದನೆಂಬಂತೆ ಬಳಸಲಾಗಿದೆ.

‘ಈ ವಿಷಯ ತಿಳಿದ ಆಟೊ ಚಾಲಕರು ಗುಂಪು-ಗುಂಪಾಗಿ ನನ್ನನ್ನು ಭೇಟಿ ಮಾಡಿ, ಆಂಬು ಆಟೊ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಕೆಲವರು ತಮ್ಮ ಆಟೊಗಳನ್ನು ‘ಆಂಬು ಆಟೊ’ ಆಗಿ ಪರಿವರ್ತಿಸಿ ಸಾರ್ವಜನಿಕ ಸಹಾಯಕ್ಕಾಗಿ ಬಳಸಲು ಮುಂದಾಗಿದ್ದಾರೆ. ಇತ್ತೀಚೆಗಷ್ಟೇ ಬೆಂಗಳೂರಿನ ಸಾರಥಿ ಸೇನೆ ಆಟೊ ಚಾಲಕರ ಸಂಘ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರದಲ್ಲಿ ಈ ಆಂಬು ಆಟೊದಲ್ಲಿ ಇಸಿಜಿ ತಪಾಸಣೆ ನಡೆಸಲಾಯಿತು. ಒಟ್ಟಿನಲ್ಲಿ ಈ ಆಟೊ ಎಲ್ಲರ ಗಮನ ಸೆಳೆಯುತ್ತಿದೆ’ ಎನ್ನುತ್ತಾರೆ ಸತ್ಯಪ್ರಕಾಶ್.

ಚಿತ್ರ ಜನವರಿ ಅಂತ್ಯದಲ್ಲಿ ತೆರೆಗೆ ಬರಲಿದೆ. ‘ಎಕ್ಸ್ ಆಂಡ್ ವೈ’ ಕ್ರೋಮೋಝೋಮ್‌ಗಳನ್ನು ಪ್ರತಿನಿಧಿಸುತ್ತವೆ. ಆದರೆ, ಇದು ಕೇವಲ ಕ್ರೋಮೋಝೋಮ್‌ಗೆ ಸಂಬಂಧಪಟ್ಟಿರುವ ಚಿತ್ರವಲ್ಲ. ಇಡೀ ಸಮಾಜ ಬೆಸೆದುಕೊಂಡಿರುವುದು ಈ ಕ್ರೋಮೋಝೋಮ್ ಮೇಲೆ. ಹೀಗಾಗಿ ಈ ಶೀರ್ಷಿಕೆ’ ಎಂದಿದೆ ಚಿತ್ರತಂಡ.‘ಮ್ಯಾನ್ ಆಫ್ ದ ಮ್ಯಾಚ್’ ಚಿತ್ರದ ನಟ ಅಥರ್ವ ಪ್ರಕಾಶ್, ‘ದೂರದರ್ಶನ’ ಸಿನಿಮಾ ನಾಯಕಿ ಅಯನಾ ಹಾಗೂ ಬೃಂದಾ ಆಚಾರ್ಯ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ದೊಡ್ಡಣ್ಣ, ವೀಣಾ ಸುಂದರ್, ಸುಂದರ್ ಮೊದಲಾದವರು ತಾರಾಗಣದಲ್ಲಿದ್ದಾರೆ. ಬೆಂಗಳೂರು ಮತ್ತು ಮಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಸತ್ಯ ಪಿಕ್ಚರ್ಸ್ ಬ್ಯಾನರ್ ನಿರ್ಮಾಣದ ಈ ಚಿತ್ರಕ್ಕೆ ಲವಿತ್ ಛಾಯಾಚಿತ್ರಗ್ರಹಣ, ಕೌಶಿಕ್ ಹರ್ಷ ಸಂಗೀತ, ಬಿ.ಎಸ್.ಕೆಂಪರಾಜು ಸಂಕಲನವಿದೆ. ❖

ರೂಪಕಗಳಿಂದ ಕೂಡಿದ ‘ಯುಐ’


ಉಪೇಂದ್ರ

ಜಿ.ಮನೋಹರನ್ ಮತ್ತು ಕೆ.ಪಿ.ಶ್ರೀಕಾಂತ್ ನಿರ್ಮಾಣದ ಉಪೇಂದ್ರ ನಿರ್ದೇಶಿಸಿ, ನಟಿಸಿರುವ ‘ಯುಐ’ ಸಿನಿಮಾ ಡಿ.20ರಂದು ಬಿಡುಗಡೆಯಾಗುತ್ತಿದೆ. ರಿಲೀಸ್ ಹೊಸ್ತಿಲಲ್ಲಿ ಚಿತ್ರತಂಡ ‘ವಾರ್ನರ್’ ಎಂಬ ವಿಡಿಯೊ ರಿಲೀಸ್ ಮಾಡಿದ್ದು 2040ರ ಕಾಲಘಟ್ಟದ ‘ಡಿಸ್ಟೋಪಿಅ’– ಎಂದರೆ ನರಕಸದೃಶವಾದ ಒಂದು ಪ್ರಪಂಚಕ್ಕೆ ಕರೆದೊಯ್ದಿದ್ದಾರೆ.

‘ಜಾಗತಿಕ ತಾಪಮಾನ, ಕೋವಿಡ್ 19, ಹಣದುಬ್ಬರ, ಕೃತಕ ಬುದ್ಧಿಮತ್ತೆ, ನಿರುದ್ಯೋಗ ಮತ್ತು ಯುದ್ಧ ಇದು ವಿಶ್ವ ನಾಯಕರು ನಿಮಗೆ ಮತ್ತು ನನಗೆ ಬಿಟ್ಟು ಹೋಗಿರುವ ಕೊಡುಗೆಗಳು’ ಎನ್ನುತ್ತಾ ಹೊಸ ಪ್ರಪಂಚವೊಂದನ್ನು ತೆರೆ ಮೇಲೆ ಉಪೇಂದ್ರ ತಂದಿದ್ದಾರೆ. ಜಾತಿ–ಧರ್ಮದ ಎಳೆಯಿಟ್ಟುಕೊಂಡು ಎರಡು ಪ್ರಪಂಚಗಳನ್ನು ತೋರಿಸಿರುವ ಉಪೇಂದ್ರ ಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ ಹಾಗೂ ‘ಧಿಕ್ಕಾರಕ್ಕಿಂತ ಅಧಿಕಾರಕ್ಕೆ ಬೆಲೆ ಜಾಸ್ತಿ’ ಎಂದಿದ್ದಾರೆ. ಹೀಗೆ ವಿಭಿನ್ನವಾದ ಕಥೆಯೊಂದನ್ನು ‘ಯುಐ’ ಸಿನಿಮಾ ಮೂಲಕ ಹೇಳುವ ಮುನ್ಸೂಚನೆ ನೀಡಿದ್ದಾರೆ.

‘ವಾರ್ನರ್’ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಉಪೇಂದ್ರ, ‘‘ಸೂಪರ್’ ಸಿನಿಮಾಗೂ ‘ಯುಐ’ಗೂ ಯಾವುದೇ ಸಂಬಂಧವಿಲ್ಲ. ‘ಯುಐ’ ಸಿನಿಮಾ ರೂಪಕಗಳಿಂದ ಕೂಡಿದೆ. ಸಾಮಾನ್ಯ ಕಮರ್ಷಿಯಲ್ ಸಿನಿಮಾದಂತೆ ಈ ಸಿನಿಮಾವನ್ನು ನೋಡಿ ಮನರಂಜನೆ ಪಡೆದುಕೊಳ್ಳಬಹುದು. ಆದರೆ ಸಿನಿಮಾದೊಳಗೆ ಸೂಕ್ಷ್ಮವಾದ ಹಲವು ಪದರಗಳು ಇವೆ. ಅರ್ಥವಾಗಬೇಕಾದ ಹಲವು ವಿಷಯಗಳು ಇವೆ. ಇದನ್ನು ಗಮನಿಸುವ ಸಾಮರ್ಥ್ಯ ಪ್ರೇಕ್ಷಕನೊಳಗಿರಬೇಕು. ‘ಯುಐ’ ಒಂದು ಹೀರೊ ಕಥೆ ಅಲ್ಲ, ಇದು ನಮ್ಮ ನಿಮ್ಮ ಕಥೆ’ ಎಂದರು.

‘ಯುಐ’ ಬಿಡುಗಡೆಯಾದ ಒಂದು ವಾರದಲ್ಲೇ ‘ಮ್ಯಾಕ್ಸ್’ ಬಿಡುಗಡೆ ಕುರಿತು ಪ್ರತಿಕ್ರಿಯೆ ನೀಡಿದ ಉಪೇಂದ್ರ, ‘ರಜಾ ದಿನಗಳನ್ನು ಎಲ್ಲರೂ ಬಯಸುತ್ತಾರೆ. ಏಕೆಂದರೆ ಆ ಸಮಯದಲ್ಲಿ ಜಾಸ್ತಿ ಜನರು ಚಿತ್ರಮಂದಿರಕ್ಕೆ ಬರುತ್ತಾರೆ. ಈ ಅವಧಿಯಲ್ಲೇ ದೊಡ್ಡ ಸಿನಿಮಾಗಳು ಬರುತ್ತವೆ. ರಜಾ ದಿನಗಳು ನಿರ್ಮಾಪಕರಿಗೆ ಒಂದು ರೀತಿ ಧೈರ್ಯ ನೀಡುತ್ತವೆ. ಎರಡು ಮೂರು ಸಿನಿಮಾಗಳು ಬಿಡುಗಡೆಯಾದರೂ ಯಾವುದೇ ಸಮಸ್ಯೆಯಾಗುವುದಿಲ್ಲ’ ಎಂದರು. ❖

ಫೆ.7ಕ್ಕೆ ‘ಎಲ್ಲೋ ಜೋಗಪ್ಪ..’ ತೆರೆಗೆ


ಸಂಜನಾ ದಾಸ್

‘ಅಗ್ನಿಸಾಕ್ಷಿ’, ‘ನಾಗಿಣಿ’ ಧಾರಾವಾಹಿಗಳ ನಿರ್ದೇಶಕ ಹಯವದನ ಆ್ಯಕ್ಷನ್ ಕಟ್ ಹೇಳಿರುವ ಚೊಚ್ಚಲ ಚಿತ್ರ ‘ಎಲ್ಲೋ ಜೋಗಪ್ಪ ನಿನ್ನರಮನೆ’ ಫೆ.7ರಂದು ತೆರೆಗೆ ಬರಲಿದೆ.

ತಂದೆ ಮಗನ ಬಾಂಧವ್ಯದ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ಅಂಜನ್ ನಾಗೇಂದ್ರಗೆ ವೆನ್ಯಾ ರೈ ಜೋಡಿಯಾಗಿದ್ದಾರೆ. ದೇಶದಾದ್ಯಂತ ಸಂಚರಿಸುವ ನಾಯಕ ಮರಾಠಿ ಹುಡುಗಿಯನ್ನು ಪ್ರೀತಿಸುತ್ತಾನೆ. ಕರ್ನಾಟಕವಲ್ಲದೆ ಉತ್ತರ ಭಾರತದ ಹಲವು ಕಡೆ ಚಿತ್ರೀಕರಣಗೊಂಡಿದೆ.

ಚಿತ್ರದಲ್ಲಿ ಸಂಜನಾ ದಾಸ್ ಕೂಡ ಒಂದು ಪ್ರಮುಖ ಪಾತ್ರ ನಿಭಾಯಿಸಿದ್ದಾರೆ. ಬಿರಾದಾರ್, ಶರತ್ ಲೋಹಿತಾಶ್ವ, ದಾನಪ್ಪ, ಸ್ವಾತಿ, ದಿನೇಶ್ ಮಂಗಳೂರು, ಲಕ್ಷ್ಮೀ ನಾಡಗೌಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಚಿತ್ರಕ್ಕೆ ಶಿವಪ್ರಸಾದ್ ಸಂಗೀತ, ನಟರಾಜ್ ಮದ್ದಾಲ ಛಾಯಾಚಿತ್ರಗ್ರಹಣ, ರವಿಚಂದ್ರನ್ ಸಂಕಲನ, ವೇಣು ಹಸ್ರಾಳಿ ಸಂಭಾಷಣೆಯಿದೆ. ‘ಪೆಂಡೋರಾಸ್ ಬಾಕ್ಸ್ ಪ್ರೊಡಕ್ಷನ್’ ಮತ್ತು ‘ಕೃಷ್ಣಛಾಯಾ ಚಿತ್ರ’ ಬ್ಯಾನರ್ ಮೂಲಕ ಪವನ್ ಸಿಮಿಕೇರಿ ಹಾಗೂ ಸಿಂಧು ಹಯವದನ ಅವರು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ❖

ಪುತ್ಥಳಿ ವಿರೂಪ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಭದ್ರನಗರ ಬಸ್ ನಿಲ್ದಾಣದ ಬಳಿ ಪ್ರತಿಷ್ಠಾಪಿಸಿರುವ ತುಮಕೂರು ಸಿದ್ಧಗಂಗಾ ಮಠದ ಹಿಂದಿನ ಪೀಠಾಧಿಪತಿ ಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿ ವಿರೂಪಗೊಳಿಸಿದ್ದ ಆರೋಪದ ಅಡಿ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಗಿರಿನಗರ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ಭರತ್‌ನಗರ ನಿವಾಸಿ ಶಿವಕೃಷ್ಣ (34) ಬಂಧಿತ.

‘ಐದು ವರ್ಷಗಳ ಹಿಂದೆ ಜಯ ಕರ್ನಾಟಕ ಜನಪರ ವೇದಿಕೆ ವೀರಭದ್ರನಗರದ ಬಸ್ ನಿಲ್ದಾಣದ ಬಳಿ ಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿ ನಿರ್ಮಿಸಿತ್ತು. ಈ ಪುತ್ಥಳಿಯನ್ನು ವೇದಿಕೆ ಸದಸ್ಯರೇ ನಿರ್ವಹಣೆ ಮಾಡುತ್ತಿದ್ದಾರೆ. ನ.30ರಂದು ತಡರಾತ್ರಿ ದ್ವಿಚಕ್ರ ವಾಹನದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿ, ಪುತ್ಥಳಿ ವಿರೂಪಗೊಳಿಸಿ ಪರಾರಿ ಆಗಿದ್ದ. ಸಂಘಟನೆ ಅಧ್ಯಕ್ಷ ಪರಮೇಶ್ ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

‘ಕೆಲವು ದಿನಗಳ ಹಿಂದೆ ಫುಡ್ ಡೆಲಿವರಿ ಮಾಡಲು ಗಿರಿನಗರದ ವೀರಭದ್ರನಗರಕ್ಕೆ ಹೋಗಿದ್ದ ವೇಳೆ ಪುತ್ಥಳಿ ಇರುವುದನ್ನು ಆರೋಪಿ



ವಿರೂಪಗೊಂಡಿರುವ ಶಿವಕುಮಾರ ಸ್ವಾಮೀಜಿ ಪುತ್ಥಳಿ

ಗಮನಿಸಿದ್ದ. ನ.30ರಂದು ತಡ ರಾತ್ರಿ ಅದೇ ಜಾಗಕ್ಕೆ ಬಂದು ಪುತ್ಥಳಿ ವಿರೂಪಗೊಳಿಸಿ ಪರಾರಿ ಆಗಿದ್ದ. ವಿರೂಪಗೊಳಿಸುವ ಉದ್ದೇಶದಿಂದ ಮನೆಗೆ ಹೋಗಿ ಸುತ್ತಿಗೆ ಸಹ ತಂದಿದ್ದ’ ಎಂದು ಮೂಲಗಳು ತಿಳಿಸಿವೆ.

‘ಏಳು ವರ್ಷಗಳ ಹಿಂದೆ ಶಿವಕೃಷ್ಣ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದ. ಆರೋಪಿ ಅವಿವಾಹಿತನಾಗಿದ್ದು, ಅನಾರೋಗ್ಯ ಪೀಡಿತ’ ಎಂದಿವೆ.



ಶಿವಕೃಷ್ಣ

‘ಕೃತ್ಯ ಎಸಗಿದ ಬಳಿಕ ತನ್ನ ಮನೆಯ ಎದುರು ಧಾರ್ಮಿಕ ಕಾರ್ಯಕ್ರಮಕ್ಕೆ ಹಾಕಲಾಗಿದ್ದ ಬ್ಯಾನರ್‌ಗಳನ್ನೂ ಹರಿದು, ಕಲ್ಲು ಎಸೆದಿದ್ದ’ ಎಂದು ಪೊಲೀಸರು ತಿಳಿಸಿದರು. ಗಿರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಖಂಡಿಸಿ ಪ್ರತಿಭಟನೆ: ಘಟನೆ ಖಂಡಿಸಿ ಅಖಿಲ ಭಾರತ ವೀರಶೈವ ಮಹಾಸಭಾ ನಗರ ಘಟಕದಿಂದ ಗುರುವಾರ ಪ್ರತಿಭಟನೆ ನಡೆಯಿತು.

‘ಆಘಾತಕಾರಿ ಘಟನೆ’

‘ಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿ ವಿರೂಪಗೊಳಿಸಿರುವುದು ದುರದೃಷ್ಟಕರ ಹಾಗೂ ಆಘಾತಕಾರಿ ಘಟನೆ. ಶಾಂತಿ, ಕರುಣೆ ಮತ್ತು ಜಾತ್ಯತೀತ ಮೌಲ್ಯಗಳ ಸಂಕೇತವಾಗಿ ಪೂಜಿಸಲ್ಪಟ್ಟ ಸ್ವಾಮೀಜಿ, ಅಸಂಖ್ಯಾತ ವ್ಯಕ್ತಿಗಳಿಗೆ ಸ್ಫೂರ್ತಿ ಆಗಿದ್ದಾರೆ’ ಎಂದು ಬೆಂಗಳೂರು ಆರ್ಚ್ ಬಿಷಪ್ ಪೀಟರ್ ಮಚಾಡೊ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಏಸು ಕ್ರಿಸ್ತರನ್ನೊಳಗೊಂಡ ಕನಸಿನಿಂದ ತಾನು ಪ್ರೇರೇಪಿಸಲ್ಪಟ್ಟಿದ್ದೇನೆ’ ಎಂದು ಆರೋಪಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ ಎಂಬುದು ವರದಿಯಾಗಿದೆ. ಆತನ ತಪ್ಪೊಪ್ಪಿಗೆಯು ಆಧಾರರಹಿತ ಹಾಗೂ ಭಯಾನಕವಾಗಿದೆ. ಇಂತಹ ಹೇಳಿಕೆಗಳು ಧರ್ಮನಿಂದನೆಯಷ್ಟೇ ಮಾತ್ರವಲ್ಲ, ಕೋಮುಗಲಭೆ ಸೃಷ್ಟಿಸುವ ಪ್ರಯತ್ನದಂತಿದೆ’ ಎಂದು ತಿಳಿಸಿದ್ದಾರೆ.

‘ಪೊಲೀಸರು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು’ ಎಂದರು.

ದೇಗುಲಕ್ಕೆ ದಲಿತರ ಪ್ರವೇಶ: ಪೂಜೆ ಸ್ಥಗಿತ

ಮೊದಲ ಮುಖಪುಟದಿಂದ...

ಮಂಗಳವಾರ ಸಂಜೆ ಗ್ರಾಮಕ್ಕೆ ಬಂದ ತಹಶೀಲ್ದಾರ್ ಸುಮಂತ್ ಅವರು ಇಬ್ಬರು ದಲಿತ ಯುವಕರನ್ನು ದೇಗುಲದ ಒಳಗೆ ಕರೆದೊಯ್ದರು. ಅಂದು ದೇಗುಲದ ಕೀಲಿ ನೀಡಿದ್ದ ಗ್ರಾಮಸ್ಥರು ಮತ್ತೆ ಅದನ್ನು ಪಡೆಯಲು ಹಿಂದೇಟು ಹಾಕಿದರು. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ನಡೆಯುತ್ತಿದ್ದ ಪೂಜೆ, ಅಂದಿನಿಂದ ಸ್ಥಗಿತಗೊಂಡಿದೆ. ತಿರುಮಲ ದೇಗುಲ ಸೇರಿ ಸುತ್ತ ಇರುವ ನಾಲ್ಕೈದು ಗುಡಿಗಳ ಪೂಜೆಯನ್ನು ಕುರುಬ ಸಮುದಾಯಕ್ಕೆ ಸೇರಿದ ಅರ್ಚಕರೇ ನಡೆಸುತ್ತಿದ್ದಾರೆ. ಅಂದಿನಿಂದ ಅಷ್ಟೂ ಗುಡಿಗಳ ಪೂಜೆ ನಡೆದಿಲ್ಲ.

‘ಪುಣ್ಯ ಮಾಡಿಸಬೇಕಿದೆ’

‘ಎರಡು ದಿನ ಪೂಜೆ ಸ್ಥಗಿತಗೊಂಡಿರುವುದರಿಂದ ನೇರವಾಗಿ ಪೂಜೆ ಆರಂಭಿಸಲು ಆಗುವುದಿಲ್ಲ. ಪುರೋಹಿತರನ್ನು ಕರೆಸಿ ಪುಣ್ಯ ಮಾಡಿಸಬೇಕಿದೆ. ಪುಣ್ಯ ಕಾರ್ಯಗಳು ನಡೆದ ಬಳಿಕವೇ ನಿತ್ಯದ ಪೂಜೆಗಳನ್ನು ನಡೆಸಲಾಗುವುದು’ ಎಂದು ಗ್ರಾಮಸ್ಥರು ಹೇಳಿದರು.

‘ಮತ್ತೆ ಕಾನೂನು ಹೋರಾಟ’

‘ನಮಗೆ ಪ್ರವೇಶ ನೀಡಲು ಸದ್ಯಕ್ಕೆ ಒಪ್ಪಿಕೊಂಡಿದ್ದಾರೆ. ಅಂಬೇಡ್ಕರ್ ಭವನಕ್ಕೂ ಪ್ರತ್ಯೇಕ ಜಾಗ ಕೊಡಿಸುವ ಭರವಸೆಯನ್ನು ತಹಶೀಲ್ದಾರ್ ನೀಡಿದ್ದಾರೆ. ದೇಗುಲ ಪ್ರವೇಶ ನಿರಾಕರಿಸಿದರೆ ಮತ್ತೆ ಕಾನೂನು ಹೋರಾಟ ನಡೆಸಲಾಗುವುದು’ ಎಂದು ಹೇಮಂತ್‌ಕುಮಾರ್ ತಿಳಿಸಿದರು.

ಗುರುವಾರ ಬೆಳಿಗ್ಗೆ ಗ್ರಾಮಕ್ಕೆ ಬಂದ ಮುಜರಾಯಿ, ಸಮಾಜ ಕಲ್ಯಾಣ, ಕಂದಾಯ ಇಲಾಖೆ ಅಧಿಕಾರಿಗಳು ಎರಡೂ ಸಮುದಾಯದವರ ಸಭೆ ನಡೆಸಿದರು. ದೇಗುಲಗಳಿಗೆ ಎಲ್ಲರಿಗೂ ಮುಕ್ತ ಅವಕಾಶ ಇದೆ. ಪ್ರವೇಶ ನಿರಾಕರಿಸಿದರೆ ಅಸ್ಪೃಶ್ಯತೆ ಆಚರಣೆ ಎಂದು ತೀರ್ಮಾನಿಸಿ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

‘ಈ ವರೆಗೆ ದೇಗುಲದ ಒಳಗೆ ಬಾರದವರು ಈಗ ಬರಬೇಕು ಎಂದು ಕೇಳುತ್ತಿದ್ದಾರೆ. ಪೂಜೆ ಸೇರಿ ಎಲ್ಲವನ್ನೂ ಅವರೇ ನಿರ್ವಹಿಸಲಿ. ಜಾತ್ರೆ, ಹಬ್ಬಗಳ ಸಂದರ್ಭದಲ್ಲಿ ಹಲವು ನೇಮಗಳಿರುತ್ತವೆ. ಅವುಗಳ ಜವಾಬ್ದಾರಿಯನ್ನೂ ಅವರೇ ಹೊರಬೇಕು’ ಎಂದು ಕುರುಬ ಸಮುದಾಯದವರು ಪಟ್ಟು ಹಿಡಿದರು.

‘ನಾವು ಎಲ್ಲರಂತೆ ದೇಗುಲದ ಒಳಗೆ ನಿಂತು ಕೈ ಮುಗಿಯಲು ಅವಕಾಶ ಕೇಳುತ್ತಿದ್ದೇವೆ. ಪೂಜೆ ಮಾಡುವ ಕೆಲಸ ನಮ್ಮದಲ್ಲ, ಬೇರೆ ಜವಾಬ್ದಾರಿಗಳು ನಮಗೆ ಬೇಡ’ ಎಂದು ದಲಿತ ಯುವಕರು ಹೇಳಿದರು.

‘ಅಸ್ಪೃಶ್ಯತೆ ಆಚರಣೆ ಕಾನೂನು ಬಾಹಿರ. ಗ್ರಾಮಸ್ಥರು ಅರ್ಥ ಮಾಡಿಕೊಳ್ಳಬೇಕು’ ಎಂದು ಅಧಿಕಾರಿಗಳು ಮನವೊಲಿಸುವ ಪ್ರಯತ್ನ ಮಾಡಿದರು. ಆದರೂ ಸಂಧಾನ ಸಾಧ್ಯವಾಗದಿದ್ದಾಗ ಮೇಲಧಿಕಾರಿಗಳಿಗೆ ವರದಿ ನೀಡುವುದಾಗಿ ತಿಳಿಸಿ ವಾಪಸ್ ಹೋದರು.

ಸಂಜೆ ವೇಳೆಗೆ ಉಪವಿಭಾಗಾಧಿಕಾರಿ ದಲ್ಜಿತ್‌ಕುಮಾರ್, ತಹಶೀಲ್ದಾರ್ ಸುಮಂತ್, ಡಿವೈಎಸ್‌ಪಿ ಶೈಲೇಂದ್ರ ಸೇರಿ ಹಲವು ಅಧಿಕಾರಿಗಳು ಸ್ಥಳಕ್ಕೆ ಬಂದರು. ದೇಗುಲ ಪ್ರವೇಶಕ್ಕೆ ಎಲ್ಲರಿಗೂ ಮುಕ್ತ ಅವಕಾಶ ಇದೆ. ಕಾನೂನು ಪ್ರಕಾರ ಕ್ರಮ ಕೈಗೊಂಡರೆ ಎಲ್ಲರಿಗೂ ತೊಂದರೆಯಾಗಲಿದೆ ಎಂದು ಮನವರಿಕೆ ಮಾಡಿಸಿದರು. ಕೊನೆಗೂ ಗ್ರಾಮಸ್ಥರು ಒಪ್ಪಿಗೆ ಸೂಚಿಸಿದರು.

ಉಮಾಪತಿಗೆ ವಡ್ಡರ್ಸೆ ಪ್ರಶಸ್ತಿ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ‘ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ’ಗೆ ಪತ್ರಕರ್ತ ಡಿ.ಉಮಾಪತಿ ಆಯ್ಕೆಯಾಗಿದ್ದಾರೆ.



ಉಮಾಪತಿ

ಪ್ರಶಸ್ತಿಯು ₹2 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಶೋಕ ಹಿಂಚಿಗೇರಿ ಅವರ ಅಧ್ಯಕ್ಷತೆಯ ಸಮಿತಿ ಈ ಆಯ್ಕೆ ಮಾಡಿದೆ.

ಚಿತ್ರದುರ್ಗ ಜಿಲ್ಲೆಯವರಾದ ಡಿ. ಉಮಾಪತಿ, ‘ಕನ್ನಡಪ್ರಭ’, ‘ವಿಜಯ ಕರ್ನಾಟಕ’ ಮತ್ತು ‘ಪ್ರಜಾವಾಣಿ’ಯಲ್ಲಿ ಕೆಲಸ ಮಾಡಿದ್ದರು. ‘ನ್ಯಾಯಪಥ’ (ಗೌರಿ ಮಿಡಿಯಾ) ಮತ್ತು ‘ಈ ದಿನ’ ವೆಬ್ ಜರ್ನಲ್ ಸಂದರ್ಶಕ ಸಂಪಾದಕರಾಗಿ ಸದ್ಯ ಕಾರ್ಯನಿರ್ವಹಿಸುತ್ತಿದ್ದಾರೆ. ‘ದೆಹಲಿ ನೋಟ’ ಮತ್ತು ‘ಪದಕುಸಿಯೆ ನೆಲವಿಲ್ಲ’ ಅವರ ಕೃತಿಗಳಾಗಿವೆ.

ಸಾಮಾಜಿಕ ನ್ಯಾಯ ಕುರಿತ ವರದಿ, ವಿಶೇಷ ಲೇಖನಗಳನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ 2024ರ ಬಜೆಟ್‌ನಲ್ಲಿ ಮುಖ್ಯಮಂತ್ರಿ ಈ ಪ್ರಶಸ್ತಿ ಘೋಷಿಸಿದ್ದರು ಎಂದು ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ತಿಳಿಸಿದ್ದಾರೆ.

ದಂಡ ವಸೂಲಿಗೆ ‘ಒಟಿಎಸ್’?

ಎರಡನೇ ಮುಖಪುಟದಿಂದ...

2018–19ನೇ ಸಾಲಿನಲ್ಲಿ 30 ಜಿಲ್ಲೆಗಳಲ್ಲಿ ಕೈಗೊಂಡ ಡಿಜಿಪಿಎಸ್ ಸರ್ವೆ ವರದಿಯಂತೆ ಪರವಾನಗಿ ಪಡೆಯದೆ ಸಾಗಿಸಿದ ಮತ್ತು ಒತ್ತುವರಿ ಮಾಡಿ ತೆಗೆದಿರುವ ಉಪ ಖನಿಜದ ಪ್ರಮಾಣವು 203.54 ದಶಲಕ್ಷ ಟನ್. 2023–24ನೇ ಸಾಲಿನಲ್ಲಿ ಕೆಎಸ್‌ಆರ್‌ಎಸ್‌ಎಸಿ ಸರ್ವೆ ನಡೆಸಿ ನೀಡಿರುವ ವರದಿಯಂತೆ 20 ಜಿಲ್ಲೆಗಳಲ್ಲಿ ತೆಗೆದಿರುವ ಉಪ ಖನಿಜ ಪ್ರಮಾಣ 342.01 ದಶಲಕ್ಷ ಟನ್. ಇನ್ನೂ 11 ಜಿಲ್ಲೆಗಳಲ್ಲಿ ಕೆಎಸ್‌ಆರ್‌ಎಸ್‌ಎಸಿ ಮೂಲಕ ಸರ್ವೆ ನಡೆಯಬೇಕಿದೆ.

ಡಿಜಿಪಿಎಸ್ ಮತ್ತು ಕೆಎಸ್‌ಆರ್‌ಎಸ್‌ಎಸಿ ಈ ಎರಡೂ ಸರ್ವೆ ವರದಿಗಳ ಪ್ರಕಾರ, ಕ್ವಾರಿಗಳ ಮಾಲೀಕರು ತಾವು ಗುತ್ತಿಗೆ ಪಡೆದಿರುವ ಪ್ರದೇಶಕ್ಕಿಂತ ಹೆಚ್ಚಿನ ಜಾಗವನ್ನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಗಣಿಗಾರಿಕೆ ಮಾಡಿ ಸರ್ಕಾರಕ್ಕೆ ರಾಜಧನವನ್ನೂ ಪಾವತಿಸದೆ ಭಾರಿ ಪ್ರಮಾಣದ ಉಪ ಖನಿಜವನ್ನು ಮಾರಾಟ ಮಾಡಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದ ರಾಜಧನ ವಂಚನೆಯಾಗಿದೆ ಎಂದೂ ಮೂಲಗಳು ಹೇಳಿವೆ.

ಹಣ ಪಡೆದು ಕೊಲೆ ಆರೋಪಿ, ಡ್ರಗ್ಸ್ ಪೆಡ್ಲರ್ ಬಿಡುಗಡೆ ಮಾಡಿದ ಆರೋಪ

ಇನ್‌ಸ್ಪೆಕ್ಟರ್ ಸೇರಿ ಆರು ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ, ಕರ್ತವ್ಯ ಲೋಪ, ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನ ತೋರಿದ ಆರೋಪದ ಅಡಿ ರಾಮಮೂರ್ತಿನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್, ಪಿಎಸ್‌ಐ, ಇಬ್ಬರು ಎಎಸ್‌ಐ, ಹೆಡ್‌ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್ ಸೇರಿದಂತೆ ಆರು ಮಂದಿಯನ್ನು ಅಮಾನತು ಮಾಡಿ ಪೂರ್ವ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ಎನ್.ಸತೀಶ್ ಕುಮಾರ್ ಆದೇಶ ಹೊರಡಿಸಿದ್ದಾರೆ.



ಎಚ್. ಮುತ್ತುರಾಜ್

ಇನ್‌ಸ್ಪೆಕ್ಟರ್ ಎಚ್.ಮುತ್ತುರಾಜ್, ಪಿಎಸ್‌ಐ ಉಮೇಶ್, ಎಎಸ್‌ಐಗಳಾದ ಫ್ರೊರೋಜ್ ಖಾನ್ ಹಾಗೂ ಮಹೇಶ್, ಹೆಡ್ ಕಾನ್‌ಸ್ಟೆಬಲ್ ಮಂಜುನಾಥ್, ಕಾನ್‌ಸ್ಟೆಬಲ್ ಬಸವರಾಜ ಅಳ್ಳಳ್ಳಿ ಅವರನ್ನು ಅಮಾನತು ಮಾಡಲಾಗಿದೆ.

ಆರು ಮಂದಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೊಲೆ ಆರೋಪಿ ಬಿಟ್ಟು ಕಳುಹಿಸಿದ್ದ ಇನ್‌ಸ್ಪೆಕ್ಟರ್: 'ಕೊಲೆ ಪ್ರಕರಣವೊಂದರ ಆರೋಪಿ ಗೌರವ್ ಎಂಬಾತನನ್ನು ವಿಚಾರಣೆಗೆ ಒಳಪಡಿಸಿರಲಿಲ್ಲ. ಅಲ್ಲದೇ ಮೇಲಾಧಿಕಾರಿಗಳ ಗಮನಕ್ಕೂ ತಾರದೇ ದೋಷಾರೋಪ ಪಟ್ಟಿಯಿಂದ ಗೌರವ್ ಹೆಸರನ್ನು ಇನ್‌ಸ್ಪೆಕ್ಟರ್ ಮುತ್ತುರಾಜ್ ಕೈಬಿಟ್ಟಿದ್ದರು. ಬೀಟ್ ಸಿಬ್ಬಂದಿ ಹುಸೇನ್ ಸಾಬ್ ಗುಳೇದಗುಡ್ಡ ಹಾಗೂ ಅನಿಲ್ ಕುಮಾರ್ ಅವರ ಮೇಲೆ ಹಲ್ಲೆ ನಡೆಸಿದ್ದ ಆರೋಪಿಗಳಾದ ವಿಷ್ಣು ಹಾಗೂ ದೀಪು, ಕಿಶೋರ್‌ಕುಮಾರ್, ಸಂದೀಪ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸದೇ ಸಿಬ್ಬಂದಿಯ ಮೂಲಕ ಹಣ ಪಡೆದು ಬಿಡುಗಡೆ ಮಾಡಿದ್ದರು.

'ಇನ್ನು ಹೆಡ್ ಕಾನ್‌ಸ್ಟೆಬಲ್ ಈರಯ್ಯ ಹಿರೇಮಠ್ ಅವರು ಡ್ರಗ್ಸ್ ಪೆಡ್ಲರ್ ಟೋನಿ ಅಲಿಯಾಸ್ ಅಂಥೋಣಿ ಎಂಬಾತನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು. ಆರೋಪಿ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದೆ ಮುತ್ತುರಾಜ್ ಬಿಡುಗಡೆ ಮಾಡಿದ್ದರು' ಎಂದು ಅಮಾನತು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಸಾಕ್ಷ್ಯ ನಾಶಪಡಿಸುವ ಸಾಧ್ಯತೆ'

'ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ವಿರುದ್ಧ ಕೇಳಿ ಬಂದಿರುವ ಆರೋಪಗಳು ಗಂಭೀರ ಸ್ವರೂಪದ್ದಾಗಿದ್ದು, ಪೊಲೀಸ್ ಇಲಾಖೆಯ ಘನತೆಗೆ ಧಕ್ಕೆ ತಂದಿವೆ. ಇವರನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಮುಂದುವರಿಸಿದಲ್ಲಿ ಸಾಕ್ಷಿದಾರರಿಗೆ ಬೆದರಿಕೆ ಒಡ್ಡುವ ಮತ್ತು ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇರುತ್ತದೆ. ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ ಪ್ರಕಾರ ಇವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹2.20 ಲಕ್ಷ ಪಡೆದು ಬಿಡುಗಡೆ: 'ವಿಷ್ಣು, ದೀಪು, ಕಿಶೋರ್ ಕುಮಾರ್ ಹಾಗೂ ಸಂದೀಪ್ ಕುಮಾರ್ ಎಂಬುವರು ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಮಾಹಿತಿ ತಿಳಿದು ಪಿಎಸ್‌ಐ ಉಮೇಶ್ ಅವರು ಠಾಣೆಗೆ ಕರೆತಂದಿದ್ದರು. ಸಿಬ್ಬಂದಿ ದೂರು ನೀಡಿದ್ದರೂ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದೇ ಬಿಡುಗಡೆ ಮಾಡಿದ್ದರು. ಕಾನ್‌ಸ್ಟೆಬಲ್ ಬಸವರಾಜ್ ಅಳ್ಳಳ್ಳಿ ಅವರು ಹಲ್ಲೆ ನಡೆಸಿದ್ದವರ ಸಂಬಂಧಿಕರಿಂದ ₹2.20 ಲಕ್ಷ ಪಡೆದುಕೊಂಡಿರುವುದು ಕಂಡುಬಂದಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ಆಗಸ್ಟ್ 28ರ ರಾತ್ರಿ ಹೆಡ್‌ಕಾನ್‌ಸ್ಟೆಬಲ್ ಈರಯ್ಯ ಹಿರೇಮಠ ಅವರು ಡ್ರಗ್ ಪೆಡ್ಲರ್ ಟೋನಿ ಎಂಬಾತನನ್ನು ವಶಕ್ಕೆ ಪಡೆದು ಆತನ ಬಳಿಯಿದ್ದ ನಾಲ್ಕು ಮಾದಕ ಮಾತ್ರೆ, ಒಂದು ಚಾಕು, ₹22 ಸಾವಿರ ನಗದು ಮತ್ತು ಮೊಬೈಲ್ ಫೋನ್ ಸಮೇತ ಆರೋಪಿಯನ್ನು ಠಾಣೆಗೆ ತಂದು ಹಾಜರು ಪಡಿಸಿದ್ದರು. ವರದಿ ನೀಡಿದ್ದರೂ ಎಎಸ್‌ಐಗಳಾದ ಫ್ರೊರೋಜ್ ಖಾನ್ ಹಾಗೂ ಮಹೇಶ್, ಹೆಡ್ ಕಾನ್‌ಸ್ಟೆಬಲ್ ಮಂಜುನಾಥ್ ಅವರು ಆರೋಪಿಯ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸದೇ ಬಿಡುಗಡೆ ಮಾಡಿದ್ದರು. ಇದೇ ಪ್ರಕರಣದಲ್ಲಿ ಆರೋಪಿಯನ್ನು ಸರಿಯಾಗಿ ವಿಚಾರಣೆ ಮಾಡದೇ ಆತ ಮುಗ್ಧ ಎಂದು ಇನ್‌ಸ್ಪೆಕ್ಟರ್‌ಗೆ ಹೇಳಿದ್ದರು. ಜತೆಗೆ, ಆರೋಪಿಯನ್ನು ಬಿಡುಗಡೆ ಮಾಡಿದ್ದ ಬಗ್ಗೆ ಠಾಣೆಯ ದಾಖಲಾತಿಗಳಲ್ಲಿ ನಮೂದಿಸಿರಲಿಲ್ಲ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ಇದೇ 12ಕ್ಕೆ ಬಿಜೆಪಿ ಹಿಂದುಳಿದ ಮೋರ್ಚಾ ಪ್ರತಿಭಟನೆ

ಬೆಂಗಳೂರು: 'ನಿಗಮಗಳಿಗೆ ಅನುದಾನ ನೀಡದ ಮಾಡಿ, ಇಲ್ಲವೇ ನಿಗಮಗಳನ್ನು ಮುಚ್ಚಿಬಿಡಿ' ಎಂಬ ಘೋಷಣೆಗಳೊಂದಿಗೆ ಇದೇ 12ರಂದು ರಾಜ್ಯದ ಎಲ್ಲೆಡೆ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಅಧ್ಯಕ್ಷ ರಘು ಕೌಟಿಲ್ಯ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದುಳಿದ ವರ್ಗಗಳು ತಾವು ಪಡೆಯುತ್ತಿದ್ದ ಆರ್ಥಿಕ ನೆರವಿನಿಂದ ವಂಚಿತವಾಗಿವೆ. 'ಅರಿವು' ಯೋಜನೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಿಗುವ ಆರ್ಥಿಕ ನೆರವು ಕೂಡಾ ಸಿಗುತ್ತಿಲ್ಲ. ಸಣ್ಣ ಹಿಡುವಳಿದಾರರಿಗೆ ಗಂಗಾ ಕಲ್ಯಾಣ ಯೋಜನೆ ಸಂಪೂರ್ಣವಾಗಿ ನಿಂತುಹೋಗಿದೆ' ಎಂದರು.

'ಅಹಿಂದ ಮಂತ್ರ ಜಪಿಸುತ್ತಿದ್ದವರು ಹಿಂದುಳಿದ ವರ್ಗಗಳಿಗೆ ವಂಚನೆ ಮಾಡಿ ಆಡಳಿತ ನಡೆಸುತ್ತಿದ್ದಾರೆ. ಹಿಂದುಳಿದ ವರ್ಗಗಳ ಪರವಾಗಿದ್ದೇವೆ ಎಂದು ಹೇಳಿಕೊಂಡು ತಮ್ಮ ಮಾತುಗಳನ್ನೇ ಉಲ್ಲಂಘಿಸುತ್ತಿದ್ದಾರೆ. ರಾಜ್ಯವ್ಯಾಪಿ ಹಿಂದುಳಿದ ವರ್ಗಕ್ಕೆ ಸೇರಿದ ಆರ್ಥಿಕ, ಔದ್ಯೋಗಿಕ, ಕೃಷಿ, ಶಿಕ್ಷಣಕ್ಕೆ ಸಂಬಂಧಿಸಿದ ಅನುದಾನ ನೀಡುವುದನ್ನೇ ಸರ್ಕಾರ ನಿಲ್ಲಿಸಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.



ಆನೆ ಹಾವಳಿ ತಡೆ: ತಮಿಳುನಾಡು ಮಾದರಿ ಅಧ್ಯಯನ

ಬೆಂಗಳೂರು: ಅರಣ್ಯದಂಚಿನ ಗ್ರಾಮಗಳಲ್ಲಿ ಜೀವ ಮತ್ತು ಬೆಳೆ ಹಾನಿ ಉಂಟುಮಾಡುತ್ತಿರುವ ಕಾಡಾನೆ– ಕಾಡೆಮ್ಮೆಗಳ ಹಾವಳಿ ತಡೆಗೆ ಪರ್ಯಾಯ ಮಾರ್ಗೋಪಾಯಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ಕಾಡಾನೆ ಹಾವಳಿಗೆ ಸದ್ಯದ ಸಾಬೀತಾದ ಪರಿಹಾರ ರೈಲ್ವೆ ಬ್ಯಾರಿಕೇಡ್ ಅಳವಡಿಕೆಯಾಗಿದ್ದು, ಪ್ರತಿ ಕಿ.ಮೀ. ಅಳವಡಿಕೆಗೆ ₹1.50 ಕೋಟಿ ವೆಚ್ಚವಾಗುತ್ತಿದೆ. ಅಗತ್ಯದಷ್ಟು ರೈಲ್ವೆ ಹಳಿಗಳೂ ಸಿಗುವುದಿಲ್ಲ. ತಮಿಳುನಾಡು ಅಳವಡಿಸಿರುವ ಉಕ್ಕಿನ ಹಗ್ಗದ ತಡೆಗಳಿಗೆ (ಸ್ಟೀಲ್ ರೋಪ್) ಪ್ರತಿ ಕಿ.ಮೀ. ₹45 ಲಕ್ಷ ವೆಚ್ಚವಾಗುತ್ತದೆ. ಈ ಬಗ್ಗೆ ಪರಿಶೀಲಿಸಿ 10 ದಿನಗಳ ಒಳಗಾಗಿ ವರದಿ ಸಲ್ಲಿಸಬೇಕು ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಈಗಾಗಲೇ 312 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗಿದೆ. ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಮುನ್ನ ಮತ್ತು ಅಳವಡಿಕೆ ನಂತರದ ಜೀವಹಾನಿ ಮತ್ತು ಬೆಳೆಹಾನಿ ಕುರಿತು ತುಲನಾತ್ಮಕ ವರದಿ ಸಲ್ಲಿಸಬೇಕೆಂದು ತಿಳಿಸಿದ್ದಾರೆ.



ವ್ಹೀಲಿ ನಡೆಸುತ್ತಿದ್ದ ಯುವಕ

ವ್ಹೀಲಿ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಹೀಲಿ ನಡೆಸುವ ಪುಂಡರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ನಗರ ಸಂಚಾರ ವಿಭಾಗದ ಪೊಲೀಸರು ಗುರುವಾರ ಮತ್ತೆ ನಾಲ್ವರನ್ನು ಬಂಧಿಸಿದ್ದಾರೆ.

ಮೇಲ್ಸೇತುವೆ, ಬಡಾವಣೆಗಳಲ್ಲಿ ವ್ಹೀಲಿ ಮಾಡುತ್ತಾ ಇತರೆ ಸವಾರರಿಗೆ ತೊಂದರೆ ಉಂಟಾಗುತ್ತಿರುವ ಕುರಿತು ಸಂಚಾರ ಪೊಲೀಸರಿಗೆ ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ನೇರವಾಗಿ ದೂರುಗಳು ಬಂದಿದ್ದವು. ದೂರು ಆಧರಿಸಿ, ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ಕಾರ್ಯಾಚರಣೆ ವೇಳೆ ಐದು ಪ್ರಕರಣ ದಾಖಲಿಸಿಕೊಂಡು ನಾಲ್ಕು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ. ಬುಧವಾರ ನಡೆದ ಕಾರ್ಯಾಚರಣೆಯಲ್ಲೂ 11 ಮಂದಿಯನ್ನು ಪೊಲೀಸರು ಬಂಧಿಸಿದ್ದರು.

ದಂಡ ಸಂಗ್ರಹ: ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವ ದ್ವಿಚಕ್ರ ವಾಹನ ಸವಾರರು ಹಾಗೂ ವಾಹನ ಚಾಲಕರ ವಿರುದ್ಧವೂ ಕಾರ್ಯಾಚರಣೆ ನಡೆಸುತ್ತಿರುವ ನಗರ ಸಂಚಾರ ವಿಭಾಗದ ಪೊಲೀಸರು, ಬುಧವಾರ 1,413 ಪ್ರಕರಣ ದಾಖಲಿಸಿಕೊಂಡು, ₹6.88 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ದ್ವಿಚಕ್ರ ವಾಹನದಲ್ಲಿ ಮೂವರು ಕುಳಿತು ಸವಾರಿ ಮಾಡುತ್ತಿದ್ದವರ ವಿರುದ್ಧ 25, ನಿಷೇಧಿತ ರಸ್ತೆಯಲ್ಲಿ ವಾಹನ ಚಲಾಯಿಸುತ್ತಿದ್ದವರ ವಿರುದ್ಧ 65, ಹೆಲ್ಮೆಟ್ ರಹಿತ ಸಂಚಾರ 1,273 ಹಾಗೂ ಇತರೆ ಪ್ರಕರಣಗಳೂ ಸೇರಿದಂತೆ ಒಟ್ಟು 1,413 ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಗೂಂಡಾ ಕಾಯ್ದೆಯಡಿ ರೌಡಿ ಕಪ್ಪೆ ಬಂಧನ

ಬೆಂಗಳೂರು: ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿ, ರೌಡಿಶೀಟರ್ ಮುನಿಕೃಷ್ಣ(32) ಎಂಬಾತನನ್ನು ಈಶಾನ್ಯ ವಿಭಾಗದ ಅಮೃತಹಳ್ಳಿ ಠಾಣೆ ಪೊಲೀಸರು ಗೂಂಡಾ ಕಾಯ್ದೆಡಿ ಬಂಧಿಸಿದ್ದಾರೆ.

2012ರಿಂದಲೂ ಮುನಿಕೃಷ್ಣ ಅಲಿಯಾಸ್ ಕಪ್ಪೆ ಕೊಲೆ ಯತ್ನ, ಹಲ್ಲೆ, ಅಪಹರಣ, ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ, ಮಹಿಳೆಯರ ಮೇಲೆ ದೌರ್ಜನ್ಯ ಸೇರಿ ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿ ಆಗಿದ್ದ.

'ಈತನ ರೌಡಿ ಚಟುವಟಿಕೆ ನಿಯಂತ್ರಿಸಲು ಅಮೃತಹಳ್ಳಿ ಪೊಲೀಸ್ ಠಾಣೆ ಪೊಲೀಸರ ವರದಿ ಆಧರಿಸಿ, ಈಶಾನ್ಯ ವಿಭಾಗದ ಡಿಸಿಪಿಯವರು 2023ರಲ್ಲಿ ಮುನಿಕೃಷ್ಣನನ್ನು ನಗರ ವ್ಯಾಪ್ತಿಯಿಂದ ದಾವಣಗೆರೆ ಜಿಲ್ಲೆಗೆ ಒಂದು ವರ್ಷದ ಅವಧಿಗೆ ಗಡೀಪಾರು ಮಾಡಿದ್ದರು. ಗಡೀಪಾರು ಅವಧಿ ಮುಕ್ತಾಯವಾದ ಮೇಲೆ ನಗರಕ್ಕೆ ವಾಪಸ್ ಬಂದಿದ್ದ ಮುನಿಕೃಷ್ಣ, ಮತ್ತೆ ಹಲ್ಲೆ, ಕೊಲೆ ಯತ್ನ ಪ್ರಕರಣಗಳಲ್ಲಿ ಭಾಗಿ ಆಗಿ ತಲೆಮರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಗೂಂಡಾ ಕಾಯ್ದೆ ಅಡಿ ಮುನಿಕೃಷ್ಣನನ್ನು ಬಂಧನದಲ್ಲಿ ಇಡಲು ಡಿಸಿಪಿ ಅವರು ಆದೇಶ ಹೊರಡಿಸಿದ್ದರು. ವಿವಿಧೆಡೆ ಶೋಧ ನಡೆಸಿ ರೌಡಿಶೀಟರ್‌ನನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಆರೋಪಿ ವಿರುದ್ಧ ಇದುವರೆಗೂ ಪೋಕ್ಸೊ ಕಾಯ್ದೆಯಡಿ ಹಾಗೂ ಹಲ್ಲೆ, ಜೀವ ಬೆದರಿಕೆ ಸೇರಿದಂತೆ ಒಟ್ಟು 16 ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಹೇಳಿದರು.

ನಾಯಿ ಮೇಲೆ ಹಲ್ಲೆ: ಪ್ರಶ್ನಿಸಿದ್ದಕ್ಕೆ ನಿಂದನೆ

ಬೆಂಗಳೂರು: ಬೀದಿ ನಾಯಿಗಳನ್ನು ಅಟ್ಟಾಡಿಸಿಕೊಂಡು ಹಲ್ಲೆ ಮಾಡಿದ್ದನ್ನು ಪ್ರಶ್ನಿಸಿದಕ್ಕೆ ವ್ಯಕ್ತಿಯೊಬ್ಬರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದ್ದು, ಈ ಸಂಬಂಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬಲೂರು ಸನ್‌ಸಿಟಿ ಅಪಾರ್ಟ್‌ಮೆಂಟ್ ನಿವಾಸಿ ಮೀನುಸಿಂಗ್ ಅವರು ನೀಡಿದ ದೂರಿನ ಮೇರೆಗೆ ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಇಬ್ಬಲೂರಿನ ಸನ್‌ಸಿಟಿ ಅಪಾರ್ಟ್‌ಮೆಂಟ್ ಬ್ಲಾಕ್–6ರ ನೆಲಮಹಡಿ ಹಿಂಭಾಗದ ಜಿಮ್ ಬಳಿ ಡಿ.3ರಂದು ಘಟನೆ ನಡೆದಿದೆ.

'ಮೀನು ಸಿಂಗ್ ಅವರು ಅಂದು ಅಪಾರ್ಟ್‌ಮೆಂಟ್‌ನ ತಮ್ಮ ಫ್ಲ್ಯಾಟ್‌ನಲ್ಲಿ ಇದ್ದರು. ಈ ವೇಳೆ ಬೀದಿ ನಾಯಿಗಳು ಚೀರಾಡುವ ಶಬ್ದ ಕೇಳಿಸಿಕೊಂಡು ಹೊರಕ್ಕೆ ಬಂದಿದ್ದರು. ಆಗ ಸುಮಾರು 40 ವರ್ಷದ ವ್ಯಕ್ತಿ ಬೀದಿ ನಾಯಿಗಳನ್ನು ಅಟ್ಟಾಡಿಸಿಕೊಂಡು ಹಲ್ಲೆ ನಡೆಸುತ್ತಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಆ ವ್ಯಕ್ತಿ ಅವಾಚ್ಯ ಶಬ್ಧಗಳಿಂದ ನಿಂದಿಸಿ ಪರಾರಿ ಆಗಿದ್ದಾನೆ' ಎಂದು ಪೊಲೀಸರು ಹೇಳಿದರು.



ಅರಣ್ಯ ಇಲಾಖೆ ಅಧಿಕಾರಿಗಳು ಕೆರೆಪಾಳ್ಯದಲ್ಲಿ ಬೋನು ಇರಿಸಿದರು

ಕೆರೆಪಾಳ್ಯ: ಚಿರತೆ ಸೆರೆಗೆ ಬೋನು

ದಾಬಸ್ ಪೇಟೆ: ನರಸೀಪುರ ಪಂಚಾಯಿತಿ ವ್ಯಾಪ್ತಿಯ ಹೆಗ್ಗುಂದ ಬೆಟ್ಟದ ಕೆರೆಪಾಳ್ಯ ಭಾಗದಲ್ಲಿ ಕಾಣಿಸಿಕೊಂಡಿದ್ದ ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆ ವತಿಯಿಂದ ಬೋನು ಇಡಲಾಗಿದೆ.

ನವೆಂಬರ್ 27 ಬುಧವಾರ ಸಂಜೆ 4.30ರ ಸಮಯದಲ್ಲಿ ಬಂಡೆಯ ಮೇಲೆ ಚಿರತೆ ಕಾಣಿಸಿಕೊಂಡಿತ್ತು. ವೆಂಕಟೇಶ್ ಅವರು ರಾಗಿ ಹೊಲದ ಬಳಿ ಹೋಗಿರುವ ಸಂದರ್ಭದಲ್ಲಿ ಚಿರತೆ ಬಂಡೆಯ ಮೇಲೆ ಮಲಗಿರುವುದನ್ನು ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದರು. ಇದಾದ ಮೂರು ದಿನಕ್ಕೆ ನ.30 ಶನಿವಾರ ಚಿರತೆ ಮತ್ತೆ ಅದೇ ಭಾಗದಲ್ಲಿ ಮಧ್ಯಾಹ್ನ ಮತ್ತೆ ಸಂಜೆ ಸಮಯದಲ್ಲಿ ಬಂಡೆ ಮೇಲೆ ಮಲಗಿರುವುದನ್ನು ಸ್ಥಳೀಯರು ಕಂಡಿದ್ದರು.

ಹಗಲಿನಲ್ಲೇ ಕಾಣಿಸಿಕೊಳ್ಳುತ್ತಿರುವ ಚಿರತೆ ರಾತ್ರಿ ವೇಳೆ ಊರುಗಳಿಗೂ ಬರಬಹುದು ಎನ್ನುವ ಆತಂಕ ಸಾರ್ವಜನಿಕರು ವ್ಯಕ್ತಪಡಿಸಿದರು. ಒಂಟಿಯಾಗಿ ಹೊಲಗಳಿಗೆ ದನಗಾಹಿಗಳು, ಕುರಿಗಾಹಿಗಳು ಗಿಡ, ಬಂಡೆಗಳ ಬಳಿ ಹೋಗುವುದಕ್ಕೂ ಹೆದರುತ್ತಿರುವ ವಿಷಯವನ್ನು ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದರೂ ಬೋನು ಇಟ್ಟಿಲ್ಲ ಎಂದೂ ದೂರಿದ್ದರು. ಈ ಕುರಿತು 'ಪ್ರಜಾವಾಣಿ'ಯಲ್ಲಿ ನ.28 ಹಾಗೂ ಡಿ.1ರಂದು ವರದಿಯಾಗಿತ್ತು.

ಇದರಿಂದ ಎಚ್ಚೆತ್ತುಕೊಂಡ ಅರಣ್ಯ ಇಲಾಖೆ ಗುರುವಾರ ಬೆಟ್ಟಕ್ಕೆ ಹೊಂದಿಕೊಂಡಂತೆ ಬೋನು ಇಟ್ಟಿದೆ. 'ಚಿರತೆಯನ್ನು ಸೆರೆ ಹಿಡಿಯಲು ಬೋನಿನಲ್ಲಿ ನಾಯಿ ಕಟ್ಟಿ ಹಾಕಲಾಗಿದೆ. ಜನರು ಎಚ್ಚರಿಕೆ ವಹಿಸಬೇಕು' ಎಂದು ಅರಣ್ಯ ಅಧಿಕಾರಿಗಳು ಹೇಳಿದರು.

ಅರಣ್ಯ ಇಲಾಖೆಯು ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿ ಒಂಬತ್ತು ಬೋನು ಇಟ್ಟು ಮೂರು ಚಿರತೆಗಳನ್ನು ಸೆರೆಹಿಡಿದಿದೆ.

ಬೆಂಗಳೂರು ರೇಸ್

'ಎಲ್ಫಿನ್ ನೈಟ್' ಗೆಲ್ಲುವ ನಿರೀಕ್ಷೆ

ಕರ್ನಾಟಕ ಪೊಲೀಸ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಲ್ಫಿನ್ ನೈಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿಸ್ಟಿಕಲ್ ಏರ್ 4, ಸ್ಟಾರ್ಮ್ ಶ್ಯಾಡೊ 1, ವ್ಯಾಲೆನ್ಸಿಯಾ 7
2ನೇ ರೇಸ್: ಬರ್ನಿಂಗ್ ಆರೊ 9, ಡಾನ್ ರೈಸಿಂಗ್ 1, ಲವಿಂಗ್ ಪರ್ಲ್ 6
3ನೇ ರೇಸ್: ಬೆಸಿಲಿಕ 7, ಲಕ್ಸ್ ಎಟರ್ನ 9, ಹಬಿಬ್ಟಿ 8
4ನೇ ರೇಸ್: ಎಲ್ಫಿನ್ ನೈಟ್ 4, ಆಗಸ್ಟ್ 1, ಮ್ಯಾಗ್ನಸ್ 2
5ನೇ ರೇಸ್: ವ್ಯಾಸ 6, ಏನ್ಸಿಯೆಂಟ್ ಹಿಸ್ಟರಿ 3, ರಿಂಗ್ ಮಾಸ್ಟರ್ 2
6ನೇ ರೇಸ್: ಕೊರೊಂಥಿಯನ್ 2, ಮಾಂಟೆರಿಯೊ 3, ದಿ ಗ್ಯಾಲರಿ ಟೈಮ್ 3

ಉತ್ತಮ ಬೆಟ್: ಮಿಸ್ಟಿಕಲ್ ಏರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

'ವಿಪ್ರೋತ್ಸವ' ನಾಳೆ

ಬೆಂಗಳೂರು: ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘವು ಇದೇ ಶನಿವಾರ ಮಧ್ಯಾಹ್ನ 3 ಗಂಟೆಗೆ ಬಸವನಗುಡಿಯ ಗಾಯನ ಸಮಾಜದಲ್ಲಿ 'ವಿಪ್ರೋತ್ಸವ' ಸಮಾರಂಭ ಹಮ್ಮಿಕೊಂಡಿದೆ.

ಸಮಾರಂಭದಲ್ಲಿ ನಟ ಶ್ರೀಧರ್, ಪತ್ರಕರ್ತ ರವಿ ಹೆಗಡೆ, ಲೇಖಕ ಬಾಬು ಕೃಷ್ಣಮೂರ್ತಿ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಏಳು ಮಂದಿ ಸಾಧಕರಿಗೆ 'ಭಾರ್ಗವ ಭೂಷಣ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತದೆ. ಬ್ರಾಹ್ಮಣ ಮಹಾಸಂಘದ ರಾಷ್ಟ್ರೀಯ ಅಧ್ಯಕ್ಷ ಗೋವಿಂದ ಕುಲಕರ್ಣಿ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ. ಭಜನಾ ಮಂಡಳಿಗಳಿಂದ ಭಕ್ತಿಸಾರ ಕಾರ್ಯಕ್ರಮ, ಮೇಘಾ ಶಿವಕುಮಾರ್ ಹಾಗೂ ತಂಡದಿಂದ ದಾಸರವಾಣಿ ಹಮ್ಮಿಕೊಳ್ಳಲಾಗಿದೆ. ಸಂಜೆ 5 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮಹಾಸಂಘದ ರಾಜ್ಯಾಧ್ಯಕ್ಷ ಜೆ.ಆರ್. ಪ್ರದೀಪ್ ತಿಳಿಸಿದ್ದಾರೆ.

'ಬ್ರಾಹ್ಮಣ ಸಮಾಜವು ಎಲ್ಲ ವರ್ಗಗಳಲ್ಲಿ ಶ್ರದ್ಧೆ-ನಂಬಿಕೆ ಪುನರುತ್ಥಾನಗೊಳಿಸುವ ಗುರುತರವಾದ ಕಾರ್ಯಗಳನ್ನು ಮಾಡಬೇಕಾಗಿದೆ. ಆಧ್ಯಾತ್ಮಿಕ ಪ್ರವೃತ್ತಿ ಬೆಳೆಸಲು ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ. ಗ್ರಾಮೀಣ ಭಾಗದಲ್ಲಿ ವಾಸಿಸುವ ಹಾಗೂ ಪೌರೋಹಿತ್ಯ ಮಾಡುತ್ತಿರುವ ಬ್ರಾಹ್ಮಣರ ಸ್ಥಿತಿ ದಯನೀಯವಾಗಿದೆ. ಸಮುದಾಯದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಯ ಬಗ್ಗೆ ಸಮಾರಂಭದಲ್ಲಿ ಅವಲೋಕನ ಮಾಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕರ್ನಾಟಕ ಸುವರ್ಣ ಸಂಭ್ರಮಾಚರಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಗ್ರಾಮೀಣ ಸೊಗಡು ಕಲೆ, ಸಾಹಿತ್ಯ, ಸಂಗೀತ ಪರಂಪರೆ ಇತಿಹಾಸ ಮಾನವೀಯ ಮೌಲ್ಯ ಸಾಮಾಜಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವ ಪ್ರವೃತ್ತಿ ಕಾಣಬಹುದು' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಅಭಿಪ್ರಾಯಪಟ್ಟರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕರ್ನಾಟಕ ಸುವರ್ಣ ಸಂಭ್ರಮಾಚರಣೆಯಲ್ಲಿ ಅವರು ಮಾತನಾಡಿದರು.

'ಕನ್ನಡ ಸಂಸ್ಕೃತಿ, ಕಲೆ, ಜಾನಪದ ಸೊಗಡಿನ ಕಾರ್ಯಕ್ರಮಗಳಲ್ಲಿ ನಮ್ಮ ಸುತ್ತಮುತ್ತ ವಾಸಿಸುವ ಅನ್ಯ ಭಾಷಿಕರೂ ಭಾಗವಹಿಸುವಂತಹ ವಾತಾವರಣ ನಿರ್ಮಾಣವಾಗಬೇಕು. ಆಗ ಮಾತ್ರ ಭಾಷೆ ಪರಂಪರೆ ಶ್ರೀಮಂತಗೊಳ್ಳುತ್ತದೆ' ಎಂದರು.

ವಿದ್ಯಾರ್ಥಿಗಳು ತಮಟೆ ವಾದ್ಯ, ಡೊಳ್ಳುಕುಣಿತ, ನಗಾರಿ, ಯಕ್ಷಗಾನ, ಬೆಂಗಳೂರು ಕರಗ, ಕೆಂಗೇರಿ ಕರಗ, ವೀರಗಾಸೆ, ಕಂಸಾಳೆ, ಹುಲಿವೇಷ, ವೀರಭದ್ರನ ಕುಣಿತ, ಕರಡಿ ಕುಣಿತ, ನಂದಿಧ್ವಜ, ಹಾಲಕ್ಕಿ ಕುಣಿತ, ಹುಲಿವೇಷ, ಸೋಮನ ಕುಣಿತ, ಚಂಡೆ ವಾದ್ಯ, ಸೋಲಿಗರ ಕುಣಿತ ಸೇರಿದಂತೆ 45ಕ್ಕೂ ಹೆಚ್ಚು ಕಲೆಗಳ ಪ್ರದರ್ಶನ ನೃತ್ಯವನ್ನು ಸಾಮೂಹಿಕವಾಗಿ ಪ್ರದರ್ಶಿಸಿದರು. ಶಾಸಕ ಎಸ್.ಟಿ.ಸೋಮಶೇಖರ್, ಕಾಲೇಜು ಪ್ರಾಂಶುಪಾಲ ಲಕ್ಷ್ಮಿನಾರಾಯಣ ಅವರು ಜಾನಪದ ಕಲೆಗಳ ನೃತ್ಯಕ್ಕೆ ಹೆಜ್ಜೆ ಹಾಕಿದರು.

ಜಾನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ಜಯ ಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಂ. ಶಿವಕುಮಾರ್, ಬಿಡಿಎ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್, ಮಹಮದ್ ಫಾರೂಕ್ ಪಾಷಾ, ಅನುಪಮ ಪಂಚಾಕ್ಷರಿ, ಬಿ.ಯು. ಸುಮ, ಶಂಕರಮೂರ್ತಿ, ಅಂಬಿಕಾ ನಾಯ್ಕ್, ಸುಮಾ ಜನಾರ್ದನ್, ಆಯೇಷಾ ಸುಲ್ತಾನ್ ಉಪಸ್ಥಿತರಿದ್ದರು.

ನಾಗದೇವನಹಳ್ಳಿ ಸಮೀಪದ ಶಿರ್ಕೆಯಿಂದ ಹೊಯ್ಸಳ ಸರ್ಕಲ್, ಬಂಡೇಮಠ, ತಾವರೆಕೆರೆ ರಸ್ತೆ ರಾಘವೇಂದ್ರಸ್ವಾಮಿ ಮಠ ಮೂಲಕ ತಾಯಿ ಭುವನೇಶ್ವರಿ ಭಾವ ಚಿತ್ರದೊಂದಿಗೆ ಮೆರವಣಿಗೆ, ಜಾನಪದ ಕಲಾ ಪ್ರದರ್ಶನದೊಂದಿಗೆ ನಡೆಯಿತು.



ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕರ್ನಾಟಕ ಸುವರ್ಣ ಸಂಭ್ರಮಾಚರಣೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಶಾಸಕ ಎಸ್‌.ಟಿ. ಸೋಮಶೇಖರ್, ಪ್ರಾಂಶುಪಾಲ ಲಕ್ಷ್ಮಿನಾರಾಯಣ ಅವರು ಹೆಜ್ಜೆ ಹಾಕಿ ನೃತ್ಯ ಮಾಡಿದರು

ಪದವಿ ಪ್ರವೇಶ: 2 ಬಾರಿ ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ನಿಯಮಗಳನ್ನು ಸರಳಗೊಳಿಸಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಗುರುವಾರ ಕರಡು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.

ಪ್ರಕಟಿಸಿರುವ ಕರಡು ಯುಜಿಸಿ (ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಕನಿಷ್ಠ ಮಾನದಂಡ) ನಿಯಮಗಳು–2024 ಪ್ರಕಾರ, ವಿದ್ಯಾರ್ಥಿಗಳು ವರ್ಷದಲ್ಲಿ ಎರಡು ಪ್ರತ್ಯೇಕ ಅವಧಿಯಲ್ಲಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದು.

ಅಲ್ಲದೆ ಸ್ಟ್ರೀಮ್‌ಗಳನ್ನು ಬದಲಾಯಿಸಲೂ ಅವಕಾಶ ದೊರೆಯಲಿದೆ. ಜತೆಗೆ ಕೋರ್ಸ್‌ನಿಂದ ಹೊರಹೋಗುವ ಮತ್ತು ನಂತರ ಅದನ್ನು ಓದುವ ಅವಕಾಶ ಸಿಗಲಿದೆ.

ಮಾರ್ಗಸೂಚಿಯ ಇತರ ಪ್ರಮುಖ ಅಂಶ:

- ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದಲ್ಲಿ ಜುಲೈ–ಆಗಸ್ಟ್ ಹಾಗೂ ಜನವರಿ–ಫೆಬ್ರುವರಿ ತಿಂಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದು.
- ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಅಥವಾ 12ನೇ ತರಗತಿಯಲ್ಲಿ ಆಯ್ಕೆ ಮಾಡಿಕೊಂಡಿದ್ದ ವಿಭಾಗಗಳೇ ಅಲ್ಲದೆ, ನಿರ್ದಿಷ್ಟ ವಿಭಾಗದಲ್ಲಿ ರಾಷ್ಟ್ರಮಟ್ಟದ ಅಥವಾ ವಿಶ್ವವಿದ್ಯಾಲಯ ಮಟ್ಟದ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದು, ತನಗೆ ಆಸಕ್ತಿಯಿರುವ ಪದವಿ ಕೋರ್ಸ್ ಅನ್ನು ಪ್ರವೇಶಿಸಬಹುದು.
- ಏಕಕಾಲಕ್ಕೆ ಎರಡು ಕೋರ್ಸ್‌ಗಳನ್ನು ಅಧ್ಯಯನ ಮಾಡುವ ಆಯ್ಕೆ ವಿದ್ಯಾರ್ಥಿಗಳಿಗೆ ಇರುತ್ತದೆ.

ನಾನಾ ರೂಪದಲ್ಲಿ ಸೈಬರ್ ವಂಚನೆ: 84 ವರ್ಷದ ಅಜ್ಜನಿಂದ ₹2.95 ಕೋಟಿ ದೋಚಿದ ಖದೀಮರು

ಹಣಕ್ಕಾಗಿ ವೃದ್ಧರಿಗೆ ಸೈಬರ್ ವಂಚಕರ ಗಾಳ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚನೆ ಪ್ರಕರಣಗಳು ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದ್ದು, ಕೆಲವು ದಿನಗಳಿಂದ ಹಣ ಕಳೆದುಕೊಂಡವರು ಸೈಬರ್ ಅಪರಾಧ ಠಾಣೆಗಳಲ್ಲಿ ಹೆಚ್ಚಿನ ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆ. ಖದೀಮರು ಹೊಸ ಮಾರ್ಗಗಳ ಮೂಲಕ ಹಣ ದೋಚುತ್ತಿರುವ ಪರಿಣಾಮ, ಪ್ರಕರಣ ಪತ್ತೆ ಹಚ್ಚುವುದೂ ಸೈಬರ್ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಇದುವರೆಗೂ ಉದ್ಯಮಿಗಳು, ಮಹಿಳೆಯರನ್ನು ಹೆಚ್ಚಾಗಿ ಗುರಿಯಾಗಿಸಿ ಹಣ ದೋಚುತ್ತಿದ್ದ ವಂಚಕರು, ಇದೀಗ ಖಾತೆಯಲ್ಲಿ ಹೆಚ್ಚು ಹಣವಿದ್ದ ವೃದ್ಧರ ಮಾಹಿತಿ ಕಲೆಹಾಕಿ ಅವರಿಗೆ ಗಾಳ ಹಾಕುತ್ತಿದ್ದಾರೆ. ಅವರ ಖಾತೆಯಲ್ಲಿದ್ದ ಹಣ ಪಡೆದು ವಂಚಿಸುತ್ತಿದ್ದಾರೆ. ಹಣ ವರ್ಗಾವಣೆ ಮಾಡುವಂತೆ ಬೆದರಿಸುತ್ತಿದ್ದಾರೆ; ಭಯ ಪಡಿಸುತ್ತಿದ್ದಾರೆ.

ಸೈಬರ್ ವಂಚಕರ ಗಾಳಕ್ಕೆ ನಗರದ 84 ವರ್ಷದ ವೃದ್ಧರೊಬ್ಬರು ಸಿಲುಕಿ ₹2.95 ಕೋಟಿ ಕಳೆದುಕೊಂಡಿದ್ದಾರೆ. ದಕ್ಷಿಣ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣಾ ವ್ಯಾಪ್ತಿಯ ಪಾಪಯ್ಯ ಗಾರ್ಡನ್‌ನ 3ನೇ ಹಂತದ ನಿವಾಸಿ ಪಿ.ಎ.ಅಶ್ವತ್ ನಾರಾಯಣ್ ಹಣ ಕಳೆದುಕೊಂಡಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ.

'ವಂಚಕರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ 2008 ಹಾಗೂ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318 (ಮೋಸ) ಹಾಗೂ 319ರ (ವಂಚನೆ) ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಅಶ್ವತ್ ಅವರಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ ತನ್ನ ಹೆಸರು ಆಕಾಶ್ ಕುಲಾರಿ ಎಂದು ಪರಿಚಯಿಸಿಕೊಂಡಿದ್ದ. ತಾವು ಬಿಎಸ್‌ಎನ್‌ಎಲ್ ಬಿಲ್ ಪಾವತಿ ಮಾಡಿಲ್ಲ ಎಂದು ಹೇಳಿದ್ದ. ಅದಕ್ಕೆ ಅಶ್ವತ್ ನಾರಾಯಣ ಪ್ರತಿಕ್ರಿಯಿಸಿ, 'ಎಲ್ಲ ಬಿಲ್ ಪಾವತಿ ಮಾಡಿರುವುದಾಗಿ ತಿಳಿಸಿದ್ದರು'. ಹಲವು ವರ್ಷಗಳಿಂದ ಬಿಲ್‌ನ ಬಾಕಿ ಹಣ ಉಳಿಸಿಕೊಂಡಿದ್ದೀರಿ. ನಿಮ್ಮ ಕರೆಯನ್ನು ಪೊಲೀಸರಿಗೆ ವರ್ಗಾವಣೆ ಮಾಡುವುದಾಗಿ ಹೇಳಿದ್ದ. ಬಳಿಕ, ವಿಡಿಯೊ ಕರೆ ಮಾಡಿದ್ದ ಸೈಬರ್ ಕಳ್ಳ, ನಿಮ್ಮ ಕೆನರಾ ಬ್ಯಾಂಕ್ ಖಾತೆಯು ಪುಣೆಯಲ್ಲಿದ್ದು, ಶಿಲ್ಪಾ ಶೆಟ್ಟಿ ಅವರ ಪತಿ ತಮ್ಮ ಖಾತೆಗೆ ₹60 ಲಕ್ಷ ವರ್ಗಾವಣೆ ಮಾಡಿದ್ದಾರೆ. ನಿಮ್ಮ ಖಾತೆಗೆ ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿರುವ ಮಾಹಿತಿ ಲಭಿಸಿದೆ. ಖಾತೆಯಲ್ಲಿರುವ ಹಣದ ಮಾಹಿತಿ ನೀಡುವಂತೆ ಬೆದರಿಸಿದ್ದ. ಅಶ್ವತ್ ಅವರು ನಿಶ್ಚಿತ ಠೇವಣಿ(ಎಫ್.ಡಿ) ಸೇರಿದಂತೆ ಉಳಿತಾಯ ಖಾತೆಯಲ್ಲಿದ್ದ ಹಣದ ವಿವರವನ್ನು ವಂಚಕರಿಗೆ ನೀಡಿದ್ದರು' ಎಂದು ಪೊಲೀಸರು ಹೇಳಿದರು.



ಹಣ ವರ್ಗಾವಣೆ: 'ಹಣ ಪಾವತಿ ಮಾಡದಿದ್ದರೆ ಸುಪ್ರೀಂ ಕೋರ್ಟ್‌ಗೆ ಹೋಗಬೇಕಾಗಬಹುದು ಎಂದು ವಂಚಕ ಬೆದರಿಸಿದ್ದ. ವಯಸ್ಸಾಗಿದೆ ಎಂದು ಹೇಳಿದಾಗ ಸಹಾಯ ಮಾಡುವ ನಾಟಕವಾಡಿ, ಹಣ ವರ್ಗಾವಣೆ ಮಾಡುವಂತೆ ವಂಚಕ ಹೇಳಿದ್ದ. ಆತನ ಮಾತು ನಂಬಿದ್ದ ದೂರುದಾರರು, ಐಡಿಬಿಐ ಖಾತೆಯಲ್ಲಿ ಎಫ್.ಡಿ ಇಟ್ಟಿದ್ದ ₹2.33 ಕೋಟಿ, ಐಸಿಐಸಿಐ ಬ್ಯಾಂಕ್‌ನಲ್ಲಿನ ಎಫ್.ಡಿ ₹49 ಲಕ್ಷ, ಎಸ್‌ಬಿಐನಲ್ಲಿ ಎಫ್.ಡಿಯಿಂದ ₹13 ಲಕ್ಷವನ್ನು ಬಿಡಿಸಿ ಒಟ್ಟು ₹2.95 ಕೋಟಿಯನ್ನು ಆರ್‌ಟಿಜಿಎಸ್ ಮೂಲಕ ಹಂತ ಹಂತವಾಗಿ ವಂಚಕನ ಖಾತೆಗೆ ವರ್ಗಾಯಿಸಿದ್ದರು ಎಂಬುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ವೈಯಕ್ತಿಕ ಮಾಹಿತಿ ಕಲೆ ಹಾಕಿ ಮೋಸ

ಇನ್ನೊಂದು ಪ್ರಕರಣದಲ್ಲಿ ಅರಕೆರೆಯ ನಿವಾಸಿ ರವಿಕುಮಾರ್ ಗುಪ್ತ ಎಂಬವರಿಗೆ ₹69 ಲಕ್ಷ ವಂಚನೆ ಮಾಡಲಾಗಿದೆ.

ರವಿಕುಮಾರ್ ಅವರ ಕುಟುಂಬಸ್ಥರ ವೈಯಕ್ತಿಕ ಮಾಹಿತಿ ಕಲೆ ಹಾಕಿದ್ದ ಸೈಬರ್ ಕಳ್ಳರು, ಪರಿಚಯಸ್ಥರಂತೆ ನಟಿಸಿದ್ದರು. ಖದೀಮರ ಮಾತು ನಂಬಿದ್ದ ರವಿಕುಮಾರ್ ಅವರು ಹಣ ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದರು. ಈ ಪ್ರಕರಣದ ತನಿಖೆಯನ್ನೂ ದಕ್ಷಿಣ ವಿಭಾಗ ಸೈಬರ್ ಅಪರಾಧ ಠಾಣೆ ಪೊಲೀಸರು ನಡೆಸುತ್ತಿದ್ದಾರೆ.

'ದೂರುದಾರರಿಗೆ ವಿಶಾಲ್ ಶರ್ಮ ಎಂಬಾತ ಕರೆ ಮಾಡಿ ಡಿಎಚ್‌ಎಲ್ ಕೊರಿಯರ್‌ನ ಸಿಬ್ಬಂದಿ ಎಂದು ಪರಿಚಯ ಮಾಡಿಕೊಂಡಿದ್ದ. ದೂರುದಾರರ ವೈಯಕ್ತಿಕ ಮಾಹಿತಿ ತಿಳಿಸಿ, ತಮ್ಮ ಹೆಸರಿಗೆ ಪಾರ್ಸೆಲ್ ಬಂದಿರುವುದಾಗಿ ತಿಳಿಸಿದ್ದ. ಕರೆಯನ್ನು ಮುಂಬೈ ಪೊಲೀಸ್ ಅಧಿಕಾರಿಗಳಿಗೆ ವರ್ಗಾವಣೆ ಮಾಡುವುದಾಗಿ ಹೇಳಿ ಕರೆ ಕಡಿತ ಮಾಡಿದ್ದ. ಬಳಿಕ, ಇನ್ನೊಂದು ಸಂಖ್ಯೆಯಿಂದ ವಾಟ್ಸ್‌ಆ್ಯಪ್ ಮೂಲಕ ವಿಡಿಯೊ ಕರೆ ಮಾಡಿದ್ದ ವ್ಯಕ್ತಿ, ಸಿಬಿಐ ಅಧಿಕಾರಿಯೆಂದು ಹೇಳಿಕೊಂಡಿದ್ದ' ಎಂದು ಮೂಲಗಳು ತಿಳಿಸಿವೆ.

'ಅಪರಿಚಿತನ ಕರೆಯಿಂದ ಬೆದರಿದ ರವಿಕುಮಾರ್ ಗೋವಾ ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ವಿಮಾನದ ಮೂಲಕ ಬೆಂಗಳೂರಿಗೆ ಬಂದಿದ್ದರು. ಆಗ ಮತ್ತೆ ಕರೆ ಮಾಡಿದ್ದ ಖದೀಮ, ದೂರುದಾರ ಹಾಗೂ ಅವರ ಕುಟುಂಬದವರ ಹೆಸರು ಹೇಳಿ, ಪಾರ್ಸೆಲ್‌ಗೆ ಸಂಬಂಧಿಸಿದಂತೆ ಪ್ರಕರಣ ದಾಖಲು ಮಾಡದಿರಲು ತಮ್ಮ ಬ್ಯಾಂಕ್ ಖಾತೆ ಪರಿಶೀಲನೆ ನಡೆಸಬೇಕಿದೆ. ಪರಿಶೀಲನೆ ಬಳಿಕ ಹಣ ವಾಪಸ್ ಹಾಕುವುದಾಗಿ ತಿಳಿಸಿದ್ದ. ನಂತರ, ಆ್ಯಕ್ಸಿಸ್, ಐಸಿಐಸಿಐ ಬ್ಯಾಂಕ್ ಖಾತೆಗಳಿಂದ ₹69.8 ಲಕ್ಷವನ್ನು ಸೈಬರ್ ವಂಚಕನ ಖಾತೆಗೆ ರವಿಕುಮಾರ್ ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಸಮನ್ವಯ ಸಮಿತಿ ಸಂಸ್ಥಾಪನ ದಿನ: ಉದ್ಘಾಟನೆ: ಕೆ.ಎಸ್. ಲತಾಕುಮಾರಿ, ಭಾಷಣಕಾರ: ಚಂದ್ರಪ್ಪ, ಅತಿಥಿಗಳು: ಕೆ. ಚಿರಂಜೀವಿ, ಶೇಖ್ ಲತೀಫ್, ಕೆ.ಎಂ. ಸುರೇಶ್ ಕುಮಾರ್, ಗೋವಿಂದರಾಜು ವಿ., ಅಧ್ಯಕ್ಷತೆ: ಡಿ. ಶಿವಶಂಕರ್, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ, ಸ್ಥಳ: ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 5

62ನೇ ಉತ್ಥಾನ ದಿನಾಚರಣೆ: ಅತಿಥಿ: ಪ್ರಶಾಂತ್ ಕುಮಾರ್ ಠಾಕೂರ್, ಉಪಸ್ಥಿತಿ: ಎಂ. ನಂಜುಂಡಸ್ವಾಮಿ, ರವಿ ಡಿ. ಚನ್ನಣ್ಣನವರ್, ಅಕ್ಷಯ್ ಎಂ. ಹಾಕೆ, ಸಮೀವುಲ್ಲಾ ಖಾನ್, ಆಯೋಜನೆ: ಕರ್ನಾಟಕ ರಾಜ್ಯ ಗೃಹರಕ್ಷಕ ಮತ್ತು ಪೌರರಕ್ಷಣಾ ನಿರ್ದೇಶನಾಲಯ, ಸ್ಥಳ: ಗೃಹರಕ್ಷಕ, ಪೌರರಕ್ಷಣಾ ನಿರ್ದೇಶನಾಲಯ, ಹಲಸೂರು, ಬೆಳಿಗ್ಗೆ 9

ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ನ್ಯಾಯಮೂರ್ತಿ ಶಿವರಾಜ ಪಾಟೀಲ ದಂಪತಿಗಳಿಗೆ ವಿಶೇಷ ಆದರ್ಶ ದಂಪತಿಗಳ ಪ್ರಶಸ್ತಿ, ಸಾಧಕರಿಗೆ ನಾಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪ್ರದಾನ: ಡಿ.ವಿ. ಸದಾನಂದಗೌಡ, ಪ್ರಾಸ್ತಾವಿಕ ನುಡಿ: ಮು. ಗೋವಿಂದರಾಜು, ನಾಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು: ಸಿ. ಸೋಮಶೇಖರ್, ಆರ್.ಕೆ. ಪದ್ಮನಾಭ, ಶುಭ ಧನಂಜಯ, ಅಪ್ಪಗೆರೆ ತಿಮ್ಮರಾಜು, ಜಿ. ಬಾಬು, ಬಸವಕುಮಾರ್ ಸ್ವಾಮೀಜಿ, ಆರ್. ವೆಂಕಟಾಚಲಪತಿ, ಲಕ್ಷ್ಮಿಪತ್ತಯ್ಯ, ಗೋವಿಂದ ಬಾಬು ಪೂಜಾರಿ, ಟಿ. ಜಗದೀಶ್, ನಕ್ಷತ್ರ, ಕೆ. ಸೆಲ್ವರಾಜು, ಆಯೋಜನೆ: ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ತೃತೀಯ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾ ಯಣ, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ಆಯಿಷಾ ಫರ್ಝಾನಾ ಯು.ಟಿ., ಮಾಲಾ ಮೇರಿ ಮಾರ್ಟಿನಾ, ಆಯೋಜನೆ: ಮಹಿಳಾ ವಿಶ್ವವಿದ್ಯಾಲಯ, ಹೊರಾಂಗಣ ಸಭಾಂಗಣ, ಆರನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11

ಕುವೆಂಪು, ದ.ರಾ. ಬೇಂದ್ರೆ ಜಯಂತಿ: ಉದ್ಘಾಟನೆ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೊ.ರು. ಚನ್ನಬಸಪ್ಪ ಅವರಿಗೆ ಅಭಿನಂದನಾ ಸಮಾರಂಭ: ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಗೌರವ ಸಮರ್ಪಣೆ: ಕೆ.ವಿ. ನಾಗರಾಜಮೂರ್ತಿ, ಎಲ್.ಎನ್. ಮುಕುಂದ ರಾಜ್, ಗೊಲ್ಲಹಳ್ಳಿ ಶಿವಪ್ರಸಾದ್, ಎಸ್. ಮಹದೇವಯ್ಯ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಅಕಾಡೆಮಿ, ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ ಆವರಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ಸೈಮನ್ ಕೆನ್ನಿ ಅವರ 'ಮಿಸ್ಟಿಕ್ ಮಿರೇಜ್' ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಆಯೋಜನೆ: ಸಬ್‌ಲೈಮ್, ಸ್ಥಳ: ಗ್ಯಾಲರಿಯಾ, ಎಂಟನೇ ಮಹಡಿ, ಯು.ಬಿ. ಸಿಟಿ, ಸಂಜೆ 5ರಿಂದ

ಕೋಮುವಾದಿ ಶಕ್ತಿಗಳ ವಿರುದ್ಧ ಪ್ರತಿರೋಧ ದಿನ, ಆಯೋಜನೆ: ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಸ್ಥಳ: ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಹಾಲ್, ಕೆ.ಆರ್. ವೃತ್ತ, ಸಂಜೆ 6

ಡಾ.ಬಿ.ಆರ್. ಅಂಬೇಡ್ಕರ್ ಪರಿನಿಬ್ಬಾಣ ದಿನದ ವಿಶೇಷ

ಆಯೋಜನೆ: ಭಾರತೀಯ ಬೌದ್ಧ ಸಮಾಜ, ಸಮತಾ ಸೈನಿಕ ದಳ, ಸಾನ್ನಿಧ್ಯ: ಬುದ್ಧಮ್ಮ, ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅತಿಥಿಗಳು: ಇಂದಿರಾ ಕೃಷ್ಣಪ್ಪ, ಎಚ್.ಆರ್. ಸುರೇಂದ್ರ, ಸುಬ್ಬರಾ ಮಯ್ಯ, ಅಂಬರೀಷ ಡಿ.ಎಂ., ಸ್ಥಳ: ನಾಗಸೇನ ಬುದ್ಧ ವಿಹಾರ, ಸದಾಶಿವನಗರ, ಬೆಳಿಗ್ಗೆ 9.30

ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಭಾಷಣಕಾರರು: ಶ್ರೀನಿವಾಸ್, ಭಾಗವಹಿಸುವವರು: ಆರ್. ಮೋಹನ್ ರಾಜ್, ಸ್ವಪ್ನ ಮೋಹನ್, ಆದಿಲಕ್ಷ್ಮಿ, ಕೆ. ಮಂಜುನಾಥ್, ಸ್ಥಳ: ಆರ್‌ಪಿಐ ಕೇಂದ್ರ ಕಚೇರಿ, ಬಂಬೂ ಬಜಾರ್ ಶಿವಾಜಿನಗರ, ಬೆಳಿಗ್ಗೆ 11

ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ವಾಭಿಮಾನಿ ಸಂಕಲ್ಪ ದಿನದ ಅಂಗವಾಗಿ ಕಾಲ್ನಡಿಗೆ ಜಾಥಾ: ಪ್ರಾರಂಭವಾಗುವ ಸ್ಥಳ: ಮೈಸೂರು ಬ್ಯಾಂಕ್ ವೃತ್ತದಿಂದ ವಿಧಾನಸೌಧದ ಮುಂಭಾಗದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ, ಬೆಳಿಗ್ಗೆ 11

ಆಯೋಜನೆ: ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ, ಭಾಗವಹಿಸುವವರು: ಎಂ. ಗೋಪಿನಾಥ್, ಆರ್. ಮುನಿಯಪ್ಪ, ಮಾರಸಂದ್ರ ಮುನಿಯಪ್ಪ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಕಾನ್ಷೀರಾಮ್‌ನಗರ, ಮಧ್ಯಾಹ್ನ 12

'ಸ್ವಾಭಿಮಾನದ ಗೌರವ ನಮನ' ಕಾರ್ಯಕ್ರಮ: ಆಯೋಜನೆ: ದಲಿತ ಸಂರಕ್ಷ ಸಮಿತಿ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 5

ಬಿಬಿಎಂಪಿ ಅನುದಾನದಲ್ಲೇ ಕಾಮಗಾರಿ; ಜೂನ್ ಅಂತ್ಯಕ್ಕೆ 389 ಕಿ.ಮೀ ರಸ್ತೆ ಅಭಿವೃದ್ಧಿ

ರಸ್ತೆಗೆ 'ಬ್ರ್ಯಾಂಡ್ ಬೆಂಗಳೂರು' ಅನುದಾನ

• ಆರ್. ಮಂಜುನಾಥ್

12,878 ಕಿಮೀ ಬಿಬಿಎಂಪಿಯಲ್ಲಿರುವ ರಸ್ತೆ ಜಾಲದ ಉದ್ದ

1682.1 ಕಿ.ಮೀ ಒಟ್ಟು ಮುಖ್ಯ, ಉಪ ಮುಖ್ಯರಸ್ತೆ ಉದ್ದ

389.68 ಕಿ.ಮೀ ಅಭಿವೃದ್ಧಿಯಾಗಲಿರುವ ಮುಖ್ಯ, ಉಪ ಮುಖ್ಯರಸ್ತೆ ಉದ್ದ

₹694 ಕೋಟಿ ಒಂಬತ್ತು ವಿಭಾಗಳಲ್ಲಾಗುವ ಒಟ್ಟು ವೆಚ್ಚ

ಬೆಂಗಳೂರು: ನಗರದಲ್ಲಿರುವ ಮುಖ್ಯ, ಉಪ ಮುಖ್ಯ ರಸ್ತೆಗಳನ್ನು ಮುಂದಿನ ಮಳೆಗಾಲದ ವೇಳೆಗೆ ಪೂರ್ಣ ಸಿದ್ಧಗೊಳಿಸುವ ಉದ್ದೇಶದಿಂದ, ಎಲ್ಲ ರೀತಿಯ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಬಿಬಿಎಂಪಿ ಮುಂದಾಗಿದೆ. ಇದಕ್ಕಾಗಿ, 'ಬ್ರ್ಯಾಂಡ್ ಬೆಂಗಳೂರು' ಅನುದಾನವನ್ನು ಕಡಿತಗೊಳಿಸಲಾಗಿದೆ.

ಮುಖ್ಯ, ಉಪ ಮುಖ್ಯ ರಸ್ತೆಗಳಲ್ಲಿ ಅತಿಹೆಚ್ಚು ಗುಂಡಿಗಳಾಗಿದ್ದು, ಐದಾರು ವರ್ಷದಿಂದ ಸುಧಾರಣಾ ಕಾಮಗಾರಿ ಕೈಗೊಂಡಿರಲಿಲ್ಲ. ಗುಂಡಿಗಳನ್ನು ದುರಸ್ತಿ ಮಾಡಿದರೂ ಮತ್ತೆ ಗುಂಡಿಗಳಾಗುತ್ತಿದ್ದವು. ಹೀಗಾಗಿ, ಮೇಲ್ಮೈ ಪದರವನ್ನು ತೆರವುಗೊಳಿಸಿ ಡಾಂಬರೀಕರಣಗೊಳಿಸಲು ಬಿಬಿಎಂಪಿ ನಿರ್ಧರಿಸಿತ್ತು.

ವಿಧಾನಸಭೆ ಕ್ಷೇತ್ರಗಳನ್ನು ಒಳಗೊಂಡ ವಿಭಾಗವಾರು ಟೆಂಡರ್ ಪ್ಯಾಕೇಜ್‌ಗಳನ್ನು ಆಹ್ವಾನಿಸಲಾಗಿದ್ದು, ಆರು ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಗಡುವು ವಿಧಿಸಲಾಗಿದೆ. ಡಿಸೆಂಬರ್ 25ಕ್ಕೆ ಟೆಂಡರ್ ಅವಧಿ ಮುಕ್ತಾಯವಾಗಲಿದ್ದು, ನಂತರದ 15 ದಿನಗಳಲ್ಲಿ ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ಬಿಬಿಎಂಪಿ ಉದ್ದೇಶಿಸಿದೆ.

ಬಿಬಿಎಂಪಿಯ ಮೂಲಸೌಕರ್ಯ ವಿಭಾಗದ ವತಿಯಿಂದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಆಯಾ ವಲಯಗಳ ವತಿಯಿಂದಲೇ ಟೆಂಡರ್ ಆಹ್ವಾನಿಸಲಾಗಿದ್ದು, ಅದರ ನಿರ್ವಹಣೆಯನ್ನು ವಲಯಗಳಿಗೇ ವಹಿಸಲಾಗಿದೆ.

'2025ರ ಮೇ ಅಂತ್ಯಕ್ಕೆ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಅಲ್ಪಸ್ವಲ್ಪ ಸಮಸ್ಯೆಯಾದರೂ ಜೂನ್ ಅಂತ್ಯಕ್ಕೆ ಎಲ್ಲ ಕಾಮಗಾರಿ ಮುಗಿಸಲೇಬೇಕೆಂಬ ಉದ್ದೇಶವಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.



ಜಾಲಹಳ್ಳಿಯಿಂದ ಪೀಣ್ಯ ರಸ್ತೆ ಹಾಳಾಗಿರುವುದು

ನಿಧಿ ಕಡಿತ: ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಯೋಜನೆಗಾಗಿ 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಗೆ ನಿಗದಿಪಡಿಸಲಾಗಿರುವ ನಿಧಿಯನ್ನು ಕಡಿತಗೊಳಿಸಲಾಗಿದೆ. ರಸ್ತೆ ಅಭಿವೃದ್ಧಿಗೆ ಒಟ್ಟು ₹47.85 ಕೋಟಿ ಅನುದಾನ ಒದಗಿಸಲಾಗಿತ್ತು. ಹೆಚ್ಚುವರಿಯಾಗಿ ₹600 ಕೋಟಿ ಅನುದಾನದ ಅಗತ್ಯವಿತ್ತು. ಅದರಲ್ಲಿ ₹300 ಕೋಟಿಯನ್ನು ಬ್ರ್ಯಾಂಡ್ ಬೆಂಗಳೂರು–ಸುಗಮ ಸಂಚಾರ ಬೆಂಗಳೂರು, ವೈಬ್ರಂಟ್ ಬೆಂಗಳೂರು, ಆರೋಗ್ಯ ಬೆಂಗಳೂರು ವಿಭಾಗದ ಅನುದಾನದಲ್ಲಿ ಒದಗಿಸಲಾಗಿದೆ.

ಉಳಿದ ₹360 ಕೋಟಿಯನ್ನು 2024–25ನೇ ಸಾಲಿನ 'ಪರಿಷ್ಕೃತ ಆಯವ್ಯಯ'ದ ಇತರೆ ಶೀರ್ಷಿಕೆಗಳಿಂದ ಉಳಿತಾಯವಾಗುವ ಅನುದಾನದಲ್ಲಿ ಭರಿಸಿಕೊಳ್ಳಲು ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ನೀಡಿದೆ.

'ಸುಗಮ ಸಂಚಾರ'ಕ್ಕೆ ₹880 ಕೋಟಿ ಮೀಸಲಿರಿಸಲಾಗಿತ್ತು. ಇದರಲ್ಲಿ ಈ ಸಾಲಿನಲ್ಲಿ ₹730 ಕೋಟಿ ವೆಚ್ಚವಾಗಲಿದ್ದು, ಸುರಂಗ ರಸ್ತೆ ಯೋಜನೆಗೆ ಒದಗಿಸಿರುವ ₹200 ಕೋಟಿಯಲ್ಲಿ ₹100 ಕೋಟಿ ಹಾಗೂ ಕೆ–ರೈಡ್ ಯೋಜನೆ ಅನುದಾನದಲ್ಲಿ ₹50 ಕೋಟಿ ಸೇರಿದಂತೆ ಒಟ್ಟು ₹150 ಕೋಟಿ ಉಳಿತಾಯವಾಗಲಿದೆ. ಅದೇ ರೀತಿ, 'ವೈಬ್ರಂಟ್ ಬೆಂಗಳೂರು'ನಲ್ಲಿ ₹265 ಕೋಟಿಯಲ್ಲಿ ₹90 ಕೋಟಿ ಉಳಿಯಲಿದೆ, 'ಆರೋಗ್ಯ ಬೆಂಗಳೂರು'ನಲ್ಲಿ ₹215 ಕೋಟಿ ಉಳಿತಾಯ ನಿರೀಕ್ಷಿಸಿ, ಅದನ್ನು ರಸ್ತೆ ಅಭಿವೃದ್ಧಿಗೆ ವರ್ಗಾಯಿಸಲಾಗಿದೆ.

ಎಲ್ಲೆಲ್ಲಿ ಎಷ್ಟು ರಸ್ತೆ ಅಭಿವೃದ್ಧಿ?

ವಿಭಾಗ	ಎಷ್ಟು ರಸ್ತೆ	ಎಷ್ಟು ಉದ್ದ	ಮೊತ್ತ
ಮಹದೇವಪುರ	30	82 ಕಿ.ಮೀ	₹140 ಕೋಟಿ
ಯಲಹಂಕ	36	69.45 ಕಿ.ಮೀ	₹97.50 ಕೋಟಿ
ಪೂರ್ವ	51	76.85 ಕಿ.ಮೀ	₹95 ಕೋಟಿ
ದಕ್ಷಿಣ	30	34.90 ಕಿ.ಮೀ	₹95 ಕೋಟಿ
ರಾಜರಾಜೇಶ್ವರಿ ನಗರ	16	34.83 ಕಿ.ಮೀ	₹95 ಕೋಟಿ
ಪಶ್ಚಿಮ	19	23.40 ಕಿ.ಮೀ	₹71.50 ಕೋಟಿ
ಬೊಮ್ಮನಹಳ್ಳಿ	22	34.60 ಕಿ.ಮೀ	₹45 ಕೋಟಿ
ಕೆ.ಆರ್. ಪುರ	8	19.55 ಕಿ.ಮೀ	₹35 ಕೋಟಿ
ದಾಸರಹಳ್ಳಿ	6	14.10 ಕಿ.ಮೀ	₹20 ಕೋಟಿ
ಒಟ್ಟು	218	389.68 ಕಿ.ಮೀ	₹694 ಕೋಟಿ

₹100 ಕೋಟಿ ಸುರಂಗ ರಸ್ತೆ ಅನುದಾನದಲ್ಲಿ ಉಳಿತಾಯದ ನಿರೀಕ್ಷೆ

₹300 ಕೋಟಿ 'ಬ್ರ್ಯಾಂಡ್ ಬೆಂಗಳೂರು' ಅನುದಾನದಿಂದ ರಸ್ತೆಗೆ

₹360 ಕೋಟಿ 'ಪರಿಷ್ಕೃತ ಆಯವ್ಯಯ'ದಂತೆ ಇತರೆ ಶೀರ್ಷಿಕೆಗಳಿಂದ ಉಳಿತಾಯ

ಅಭಿವೃದ್ಧಿ ಮಾದರಿ ವಿನ್ಯಾಸ

ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳನ್ನು ಅಭಿವೃದ್ಧಿಪಡಿಸಲು ಒಂದು ನಿಗದಿತ ಮಾದರಿ–ವಿನ್ಯಾಸ ಹಾಗೂ ಸುಧಾರಿತ ನಿರ್ವಹಣಾ ಪದ್ಧತಿಯನ್ನು ಸಿದ್ಧಪಡಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ. ಅದರಂತೆ, ಈ ಕಾಮಗಾರಿಗಳನ್ನು ನಡೆಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಸೂಚಿಸಿದೆ.

- ಹಾಳಾದ ರಸ್ತೆ ಮೇಲ್ಮೈಯನ್ನು ಮಿಲ್ಲಿಂಗ್ ಮಾಡುವುದು
- ರಸ್ತೆ ಬದಿ ಚರಂಡಿ ಇಲ್ಲದ ಪ್ರದೇಶಗಳಲ್ಲಿ ಎನ್.ಪಿ-3 ಪೈಪ್ ಅಳವಡಿಸಿ, ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ಚರಂಡಿಯಿಂದ ಹೂಳನ್ನು ಸಂಪೂರ್ಣ ತೆರವುಗೊಳಿಸಿ ಚರಂಡಿ ಚಾವಣಿಯನ್ನು ಮರು ನಿರ್ಮಿಸುವುದು
- ರಸ್ತೆಯಿಂದ ಚರಂಡಿಗೆ ನೀರು ಸರಾಗವಾಗಿ ಹರಿಯುವಂತೆ ಮಾಡಲು ಗ್ರೇಟಿಂಗ್ ನಿರ್ಮಿಸುವುದು
- ಪಾದಚಾರಿ ಮಾರ್ಗವನ್ನು ಕಾಂಕ್ರೀಟ್ ತಳಪಾಯದೊಂದಿಗೆ ನಿರ್ಮಿಸುವುದು
- ರಸ್ತೆಬದಿ ರಸ್ತೆ ಲೈನ್ ಮತ್ತು ಪಾದಚಾರಿ ಮಾರ್ಗವನ್ನು ಗುರುತಿಸಲು ಕರ್ಬ್ ಸ್ಟೋನ್‌ಗಳನ್ನು ಅಳವಡಿಸಿ, ಸಮತಟ್ಟು ಮಾಡುವುದು.

'ವಿಶ್ವ ಮಣ್ಣು ದಿನಾಚರಣೆ': ಪರಿಸರವಾದಿ ಸುರೇಶ್ ಹೆಬ್ಳೀಕರ್ ಅಭಿಮತ

'ಮಣ್ಣಿನ ರಕ್ಷಣೆ ನಮ್ಮೆಲ್ಲರ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೀವ ವೈವಿಧ್ಯದ ಭಾಗವಾಗಿರುವ ಮಣ್ಣು, ಮರ, ಗಿಡ, ಹುಲ್ಲುಗಾವಲು ನದಿ, ಹಳ್ಳ–ಕೊಳ್ಳ, ಪ್ರಾಣಿ–ಪಕ್ಷಿಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ' ಎಂದು ಪರಿಸರವಾದಿ ಸುರೇಶ್ ಹೆಬ್ಳೀಕರ್ ಹೇಳಿದರು.

ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನವಿಜ್ಞಾನ ವಿಭಾಗ ಗುರುವಾರ ಆಯೋಜಿಸಿದ್ದ 'ವಿಶ್ವ ಮಣ್ಣು ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭೂಮಿಯಲ್ಲಿರುವ ಹುಲ್ಲು ಸಹ ಶೇಕಡಾ 24ರಷ್ಟು ಇಂಗಾಲವನ್ನು ಹೀರುವ ಹಾಗೂ ಅಪಾರ ಪ್ರಮಾಣದ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಇದರಲ್ಲಿ ಅನೇಕ ಸೂಕ್ಷ್ಮಾಣು ಜೀವಿಗಳು ಆಶ್ರಯ ಪಡೆದುಕೊಳ್ಳುತ್ತವೆ. ಆದ್ದರಿಂದ, ಒಂದು ಹುಲ್ಲುಕಡ್ಡಿಯನ್ನೂ ನಿರ್ಲಕ್ಷಿಸದೇ ಎಲ್ಲವನ್ನೂ ಸಂರಕ್ಷಿಸಬೇಕಿದೆ' ಎಂದು ತಿಳಿಸಿದರು.

'ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದ ಜನರಲ್ಲಿ ಮೊಬೈಲ್ ಗೀಳು ಹೆಚ್ಚಾಗಿದೆ. ಮಣ್ಣು, ಕೃಷಿ, ಪರಿಸರ ಹಾಗೂ ಭೂಮಿಯ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಡಾಂಬರೀಕರಣ ಹಾಗೂ ಕಾಂಕ್ರೀಟ್ ಹಾಕುವ ಮೂಲಕ ನೀರು ಇಂಗುವ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ, ಜೀವ ವೈವಿಧ್ಯಕ್ಕೆ ಧಕ್ಕೆ ಆಗುತ್ತಿದೆ. ಪರಿಸರದ ಬಗ್ಗೆ ನಮ್ಮ ಮುಂದಿನ ಪೀಳಿಗೆ ಕಂಪ್ಯೂಟರ್ ನೋಡಿ ತಿಳಿದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ನಗರದ ವಿವಿಧ ಕಾಲೇಜುಗಳಿಂದ ಬಂದಿದ್ದ ಸಾವಿರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, ಕುಲಸಚಿವ ಕೆ.ಸಿ. ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ, ಡೀನ್ ಎನ್.ಬಿ. ಪ್ರಕಾಶ್ ಉಪಸ್ಥಿತರಿದ್ದರು.



ಜಿಕೆವಿಕೆ ಆವರಣದಲ್ಲಿ ಗುರುವಾರ ನಡೆದ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮವನ್ನು ಮಕ್ಕಳೊಂದಿಗೆ ಕೇಕ್ ಕತ್ತರಿಸುವ ಮೂಲಕ ಚಾಲನೆ ನೀಡಲಾಯಿತು. ಸುರೇಶ್ ಹೆಬ್ಳೀಕರ್, ಎಸ್.ವಿ.ಸುರೇಶ ಪಾಲ್ಗೊಂಡಿದ್ದರು

ಮಕ್ಕಳನ್ನು ಕಿಟಕಿ ಕಂಬಿಗೆ ಕಟ್ಟಿದ ಅಧೀಕ್ಷಕಿ

ಚಿಕ್ಕಬಳ್ಳಾಪುರ: ನಗರದ ಬಾಲಕಿಯರ ಸರ್ಕಾರಿ ಬಾಲಮಂದಿರದ ಮಕ್ಕಳನ್ನು ಕಿಟಕಿಯ ಕಂಬಿಗೆ ಕಟ್ಟಿ ಹಾಕಿ ಥಳಿಸಿ, ಸ್ವಚ್ಛತೆ ಕೆಲಸ ಮಾಡಿಸಿದ ಆರೋಪದ ಮೇಲೆ ಬಾಲಮಂದಿರದ ಅಧೀಕ್ಷಕಿ ಎಂ. ಮಮತಾ ಮತ್ತು ಸ್ವಚ್ಛತಾ ಸಿಬ್ಬಂದಿ ಸರಸ್ವತಮ್ಮ ವಿರುದ್ಧ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಮಂದಿರದಲ್ಲಿ ಆಶ್ರಯ ಪಡೆದ ಮಕ್ಕಳ ಮೇಲೆ ದೈಹಿಕ ದೌರ್ಜನ್ಯ ಎಸಗಿ ಬಾಲನ್ಯಾಯ ಕಾಯ್ದೆ ಉಲ್ಲಂಘಿಸಿದ ಆರೋಪದ ಮೇಲೆ ವಾರ್ಡನ್ ಮತ್ತು ಸ್ವಚ್ಛತಾ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ನೌತಾಜ್ ನಗರದ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಅಧೀಕ್ಷಕಿ ಮಮತಾ ಅವರು ಬಾಲಮಂದಿರದ 10 ವರ್ಷದ ಬಾಲಕಿಯನ್ನು ಕಿಟಕಿಯ ಕಂಬಿಗೆ ಕಟ್ಟಿ ಹಾಕಿದ್ದು, ಮತ್ತೊಬ್ಬ ಬಾಲಕಿಯನ್ನು ಕೋಲಿನಿಂದ ಥಳಿಸಿ, ಒದ್ದಿದ್ದಾರೆ. ಮಂದಿರದ ಸ್ವಚ್ಛತಾ ಸಿಬ್ಬಂದಿ ಸರಸ್ವತಮ್ಮ ತಾನು ಮಾಡಬೇಕಾದ ಸ್ವಚ್ಛತೆ ಕೆಲಸಗಳನ್ನು ಮಕ್ಕಳಿಂದ ಮಾಡಿಸುತ್ತಿದ್ದಾರೆ. ಮಕ್ಕಳನ್ನು ಹೊಡೆಯಲು ವಾರ್ಡನ್‌ಗೆ ಕೋಲು ಮತ್ತು ಪೈಪ್ ತಂದುಕೊಟ್ಟಿದ್ದಾರೆ. ಅವಾಚ್ಯವಾಗಿ ಬೈಯುತ್ತಾರೆ. ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿದ್ದಾರೆ ಎಂದು ಮಕ್ಕಳ ಕಲ್ಯಾಣ ಸಮಿತಿ ಮಾಜಿ ಸದಸ್ಯೆ ನಾಗಮಣಿ ಅವರು ಹೈಕೋರ್ಟ್ ಬಾಲನ್ಯಾಯ ಸಮಿತಿ ಉಪಕಾರ್ಯದರ್ಶಿಗೆ ದೂರು ನೀಡಿದ್ದರು.

ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಾಲಮಂದಿರಕ್ಕೆ ಭೇಟಿ ನೀಡಿದ್ದರು. ಈ ವೇಳೆ ಮಕ್ಕಳು ತಮ್ಮ ಮೇಲೆ ಆಗಿರುವ ದೌರ್ಜನ್ಯಗಳ ಬಗ್ಗೆ ಮಾಹಿತಿ ನೀಡಿದ್ದರು. ನ್ಯಾಯಾಧೀಶರು ಆಹಾರ ಪರೀಕ್ಷಿಸಿದ್ದು, ಆಹಾರದಲ್ಲಿ ಹುಳುಗಳು ಪತ್ತೆಯಾಗಿವೆ.

ಬಾಲಮಂದಿರದ ಸಮಸ್ಯೆಗಳನ್ನು ನ್ಯಾಯಾಧೀಶರು, ಜಿಲ್ಲಾಧಿಕಾರಿ ಅವರ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಸೂಚಿಸಿದ್ದರು.

'ಮಮತಾ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ. ಶಿಸ್ತು ಕ್ರಮಕೈಗೊಳ್ಳಲು ನಾನು ಸರ್ಕಾರಕ್ಕೆ ವರದಿ ನೀಡಿದ್ದೇನೆ. ಅವರನ್ನು ಕರ್ತವ್ಯದಿಂದಲೂ ಬಿಡುಗಡೆಗೊಳಿಸಿದ್ದೇವೆ' ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ನಿವೇಶನ, ಹಕ್ಕುಪತ್ರ ನೀಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಬೈಯಪ್ಪನಹಳ್ಳಿ ಮತ್ತು ಚಿಕ್ಕಬನಹಳ್ಳಿಯ ಬಡ ಕುಟುಂಬಗಳಿಗೆ ನಿವೇಶನ ಮತ್ತು ಹಕ್ಕುಪತ್ರಗಳನ್ನು ನೀಡುವಂತೆ ಒತ್ತಾಯಿಸಿ ಪ್ರಜಾ ವಿಮೋಚನಾ ಚಳವಳಿಯ ಪದಾಧಿಕಾರಿಗಳು ಜಿಲ್ಲಾಧಿಕಾರಿ ಜಗದೀಶ್ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಘಟಕದ ಅಧ್ಯಕ್ಷ ಆನೇಕಲ್ ಕೃಷ್ಣಪ್ಪ ಮಾತನಾಡಿ, 'ಬೀದರಹಳ್ಳಿ ಹೋಬಳಿಯ ಬೈಯಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 27 ಮತ್ತು ಚಿಕ್ಕಬನಹಳ್ಳಿ ಗ್ರಾಮದ 11ರಲ್ಲಿ ನೂರಾರು ಬಡ ಕುಟುಂಬಗಳು ವಾಸಿಸುತ್ತಿವೆ. ಇಲ್ಲಿನ ಬಡ ಜನರಿಗೆ ನಿವೇಶನ ಮತ್ತು ಹಕ್ಕುಪತ್ರಗಳನ್ನು ನೀಡಬೇಕು. ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವ ಒತ್ತುವರಿದಾರರ ವಿರುದ್ಧ ಕ್ರಮ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.



ಪ್ರಜಾ ವಿಮೋಚನಾ ಚಳವಳಿಯ ಪದಾಧಿಕಾರಿಗಳು ಜಿಲ್ಲಾಧಿಕಾರಿ ಜಗದೀಶ್ ಅವರಿಗೆ ಮನವಿ ಸಲ್ಲಿಸಿದರು

'ಚಿಕ್ಕಬನಹಳ್ಳಿಯ ಜೈ ಭೀಮ್ ನಗರದಲ್ಲಿ ಸರ್ಕಾರಿ ಕೆರೆಯ ಕೋಡಿ ಜಾಗ ಒತ್ತುವರಿಯಾಗಿದೆ. ಇದರಿಂದ ಮನೆಗಳಿಗೆ ಮಳೆನೀರು ನುಗುತ್ತಿದೆ. ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಗುಂಜೂರಿನಲ್ಲಿ ಅಂಬೇಡ್ಕರ್ ಭವನ ನಿರ್ಮಿಸಬೇಕು' ಎಂದು ಮನವಿ ಮಾಡಿದರು.

ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ದೇವರಾಜು, ಬೆಂಗಳೂರು ವಿಭಾಗೀಯ ಅಧ್ಯಕ್ಷ ಎಸ್. ಕೆ.ಮಾದೇಶ್, ರವಿ, ರವಿಕುಮಾರ್, ಗಣೇಶ್, ಮುನಿರಾಜು, ಅಪ್ಸರ್ ಅಲಿ, ಪರಶುರಾಮ್, ಕೊಪ್ಪ ಮುನಿಯಪ್ಪ, ರಾಮಾಂಜಿ, ಮಂಜುನಾಥ್, ವಿಜಯ್ ಕುಮಾರ್ ಉಪಸ್ಥಿತದ್ದರು.

'ಜಾತಿಗಣತಿ ವರದಿ ಜಾರಿ ನಿಶ್ಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ (ಜಾತಿವಾರು ಜನಗಣತಿ) ವರದಿಯನ್ನು ಜಾರಿಗೆ ತರುವುದಕ್ಕೆ ಕೆಲವು ಶಕ್ತಿಗಳು ವಿರೋಧ ವ್ಯಕ್ತಪಡಿಸುತ್ತಿವೆ. ಆದರೂ ವರದಿಯನ್ನು ಅಂಗೀಕರಿಸಿ, ಶಿಫಾರಸುಗಳನ್ನು ಜಾರಿಗೆ ತರುವುದು ನಿಶ್ಚಿತ' ಎಂದು ವಿಧಾನ ಪರಿಷತ್ ಸದಸ್ಯರೂ ಆಗಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ದೆಹಲಿಯಲ್ಲಿ ನಡೆದ 'ಆಲ್ ಇಂಡಿಯಾ ಫೆಡರೇಷನ್ ಸೋಷಿಯಲ್ ಜಸ್ಟೀಸ್'ನ ಮೂರನೇ ಸಮ್ಮೇಳನದಲ್ಲಿ 'ದಿ ಕಾಸ್ಟ್ ಸೆನ್ಸಸ್, ವುಮೆನ್ ರೈಟ್ಸ್ ಆ್ಯಂಡ್ ರಿಸರ್ವೇಶನ್ಸ್; ದಿ ಫಿಲ್ಲರ್ಸ್ ಆಫ್ ಸೋಶಿಯಲ್ ಜಸ್ಟೀಸ್' ಕುರಿತು ಅವರು ವಿಚಾರ ಮಂಡಿಸಿದರು.

'ಜಾತಿ ವ್ಯವಸ್ಥೆಯಲ್ಲಿ ಶತಮಾನಗಳಿಂದ ಯಾವುದೇ ಅಡ್ಡಿ, ಆತಂಕಗಳಿಲ್ಲದೆ ಎಲ್ಲ ರೀತಿಯ ಫಲ ಉಣ್ಣುತ್ತಿರುವವರಿಗೆ ಜಾತಿವಾರು ಜನಗಣತಿ ವರದಿ ಬಗ್ಗೆ ಭಯ ಉಂಟಾಗಿದೆ. ಅದಕ್ಕಾಗಿ ಜಾತಿವಾರು ಜನಗಣತಿಯ ಪರವಾಗಿ ಮಾತನಾಡುವವರನ್ನು ಸಮಾಜ ಒಡೆಯುವವರು ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ದೂರಿದರು.



ಹರಿಪ್ರಸಾದ್

ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ಮೀಸಲಾತಿಯನ್ನು ಶೇಕಡ 75ಕ್ಕೆ ಏರಿಸಬೇಕು. ಅದಕ್ಕಾಗಿ ಜಾತಿವಾರು ಜನಗಣತಿ ಆಗಬೇಕು ಎಂದು ಕಾಂಗ್ರೆಸ್ ಪ್ರತಿಪಾದಿಸುತ್ತಿದೆ. ಅಷ್ಟೇ ಅಲ್ಲ ಮೀಸಲಾತಿ ಹೆಚ್ಚಳದ ನಿರ್ಧಾರವನ್ನು ತಮಿಳುನಾಡು ಮಾದರಿಯಲ್ಲಿ ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸಿ, ರಕ್ಷಣೆ ಒದಗಿಸಬೇಕು. ಇಲ್ಲದಿದ್ದರೆ ನ್ಯಾಯಾಲಯ ಅದನ್ನು ಅಸಿಂಧು ಮಾಡುವ ಸಾಧ್ಯತೆ ಇದೆ ಎಂದರು.

ಮೀಸಲಾತಿಯನ್ನು ಪ್ರತಿಭೆ ಮತ್ತು ಸಾಮರ್ಥ್ಯದ ವಿರೋಧಿ ಎಂದು ಬಿಂಬಿಸಲಾಗುತ್ತಿದೆ. ಮೀಸಲಾತಿಯು ಎಲ್ಲ ವರ್ಗಗಳಿಗೆ ನ್ಯಾಯದ ಸಮಾನ ಹಂಚಿಕೆ ಮಾಡುತ್ತದೆ. ಆದ್ದರಿಂದ ಮೀಸಲಾತಿ ಮತ್ತು ಪ್ರತಿಭೆಯನ್ನು ಬೇರ್ಪಡಿಸಿಯೇ ನೋಡಬೇಕಾಗಿದೆ. ಹೀಗಾಗಿ ಮೀಸಲಾತಿ ಹಕ್ಕು ನೀಡುವ ಸಂವಿಧಾನದ 335 ವಿಧಿಯನ್ನು ತಿದ್ದುಪಡಿ ಮಾಡಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಮಹಾತ್ಮಾ ಗಾಂಧಿ, ವಿವೇಕಾನಂದ ಮತ್ತಿತರ ಮಹನೀಯರು ಹಿಂದೂ ಧರ್ಮವನ್ನು ಪಾಲಿಸಿದ್ದಾರೆ. 'ಹಿಂದೂ ರಾಷ್ಟ್ರ' ಎಂಬುದನ್ನು ರಾಜಕೀಯ ಪಕ್ಷದ ಘೋಷಣೆಯಾಗಿ ನೀಡಿದವರು ಸಾವರ್ಕರ್. 'ಹಿಂದೂ ರಾಷ್ಟ್ರ'ಕ್ಕೂ ಹಿಂದೂ ಧರ್ಮಕ್ಕೂ ಯಾವುದೇ ಸಂಬಂಧ ಇಲ್ಲ. 'ಹಿಂದೂ ರಾಷ್ಟ್ರ'ದ ಹೆಸರಿನಲ್ಲಿ ಜನರನ್ನು ಮೂರ್ಖರನ್ನಾಗಿ ಮಾಡಲಾಗುತ್ತಿದೆ ಎಂದು ಅವರು ಎಚ್ಚರಿಸಿದರು.

ನರಸಿಂಹಮೂರ್ತಿಗೆ 'ಸಾ.ಕೃ. ಪ್ರಕಾಶ್ ಪ್ರಶಸ್ತಿ'

ಬೆಂಗಳೂರು: ವಿಕ್ರಮ್ ಪ್ರಕಾಶನ ನೀಡುವ 'ಸಾ.ಕೃ.ಪ್ರಕಾಶ್ ಪ್ರಶಸ್ತಿ'ಗೆ ಹಾಸ್ಯ ಸಾಹಿತಿ ಎಂ. ಎಸ್. ನರಸಿಂಹಮೂರ್ತಿ ಆಯ್ಕೆಯಾಗಿದ್ದಾರೆ.



ಹಾಸ್ಯ ಲೇಖಕ ಹಾಗೂ ಕಾದಂಬರಿಕಾರ ಸಾ.ಕೃ. ಪ್ರಕಾಶ್ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ. ಅವರು 'ಸುಧಾ' ವಾರ ಪತ್ರಿಕೆಗೆ ಎರಡು ವರ್ಷಗಳ ಕಾಲ 'ಹಾಸ್ಯದ ಹೊನಲು' ನಗೆ ಚಟಾಕಿಗಳನ್ನು ಬರೆದಿದ್ದರು. 20ಕ್ಕೂ ಹೆಚ್ಚು ಹಾಸ್ಯ ಸಂಕಲನ ಹಾಗೂ 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಇದೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ಬಸವನಗುಡಿಯ ನ್ಯಾಷನಲ್ ಕಾಲೇಜಿನ ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಡಾ.ಎಂ.ಲೀಲಾವತಿ ದೇಗುಲ' ಸ್ಮಾರಕ ಉದ್ಘಾಟನೆ: ಸಚಿವ ಮುನಿಯಪ್ಪ ಅಭಿಮತ

'ತಾಯಿಗೆ ಸ್ಮಾರಕ: ಎಲ್ಲರಿಗೂ ವಿನೋದ್ ಮಾದರಿ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ತಾಯಿಗೆ ದೇಗುಲ ರೀತಿಯ ಸ್ಮಾರಕ ನಿರ್ಮಾಣ ಮಾಡುವ ಮೂಲಕ ಲೀಲಾವತಿ ಅವರ ಪುತ್ರ ವಿನೋದ್‌ರಾಜ್ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದಾರೆ. ತಾಯಿಯ ಋಣ ತೀರಿಸುವ ಪ್ರಯತ್ನ ಮಾಡಿದ್ದಾರೆ' ಎಂದು ಆಹಾರ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸೋಲದೇವನಹಳ್ಳಿಯಲ್ಲಿ 'ಡಾ. ಎಂ.ಲೀಲಾವತಿ ದೇಗುಲ' ಸ್ಮಾರಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ತಾಯಿ–ಮಗನ ಬಾಂಧವ್ಯಕ್ಕೆ ಲೀಲಾವತಿ ಹಾಗೂ ಪುತ್ರ ವಿನೋದ್ ರಾಜ್ ಅವರು ಸಾಕ್ಷಿಯಾಗಿದ್ದಾರೆ. ತಂದೆ–ತಾಯಿ ಇರುವಾಗಲೇ ಮರೆಯುವವರಿರುವಾಗ ವಿನೋದ್ ಸಮಾಜಕ್ಕೆ ಮಾದರಿಯಾಗಿದ್ದಾರೆ. ಈ ಭಾಗದ ಜನರ ಶ್ರೇಯೋವೃದ್ದಿಗೆ ಹಾಗೂ ಸಂಕಷ್ಟ ಸ್ಪಂದಿಸುವ ಕಾರ್ಯವನ್ನು ಲೀಲಾವತಿ ಅವರು ಮಾಡುತ್ತಿದ್ದರು. ಅವರ ಕಾರ್ಯವನ್ನು ಪುತ್ರ ವಿನೋದ್‌ರಾಜ್ ಮುಂದುವರೆಸುತ್ತಿರುವುದು ಸ್ವಾಗತಾರ್ಹ' ಎಂದರು

ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಲೀಲಾವತಿ ಅಮ್ಮನವರು ಸಾಕಷ್ಟು ದಶಕ ಕಲಾ ಕ್ಷೇತ್ರದಲ್ಲಿ ಕಲೆಯ ಮೂಲಕ ಜನರ ಮನದಲ್ಲಿ ಸಾಂಸ್ಕೃತಿಕ ಚಿಂತನೆಯನ್ನು ನೆಲೆಸುವಂತೆ ಮಾಡಿದ್ದಾರೆ. ಮಾತೃದೇವೋ ಭವ ಎಂಬಂತೆ ತಾಯಿ ಸ್ಥಾನ ಅಂತ್ಯತ ಪವಿತ್ರ ಸ್ಥಾನ. ತಾಯಿ ಹೆಸರಿನಲ್ಲಿ ದೇವಾಲಯ ನಿರ್ಮಾಣದ ಜತೆಗೆ ಸಮಾಜ ಕಾರ್ಯಕ್ಕೆ ಮುಂದಾಗಿರುವ ಪುತ್ರ ವಿನೋದ್ ರಾಜ್ ಕಾರ್ಯ ಶ್ಲಾಘನೀಯ' ಎಂದು ಹೇಳಿದರು.

ಬಸವಣ್ಣ ದೇವರ ಮಠದಶ್ರೀ ಸಿದ್ದಲಿಂಗಸ್ವಾಮೀಜಿ ಮಾತನಾಡಿ, 'ಲೀಲಾವತಿ ಅವರು ಮಾಡಿರುವ ಸೇವೆ ಸಮಾಜಕ್ಕೆ ಮಾದರಿಯಾಗಿದೆ. ತಾಯಿ ನೆನಪಿಯಾಗಿ ಸಾಕಷ್ಟು ಸಮಾಜ ಮುಖಿ ಕಾರ್ಯಗಳೊಂದಿಗೆ ದೇಗುವ ನಿರ್ಮಾಣ ಮಾಡಿದ್ದು ಸಂತೋಷಕರ ಸಂಗತಿ' ಎಂದರು.



ಸಚಿವ ಕೆ.ಎಚ್ ಮುನಿಯಪ್ಪ ಡಾ.ಎಂ.ಲೀಲಾವತಿ ದೇಗುಲ' ಸ್ಮಾರಕಕ್ಕೆ ಪುಷ್ಪ ಸಮರ್ಪಿಸಿದರು

'ತಾಯಿ ಅವರ ಸ್ಮಾರಕವನ್ನು ನನ್ನ ಆಸೆಯಂತೆ ನಿರ್ಮಾಣ ಮಾಡಿದ್ದೇನೆ. ಅಮ್ಮನವರ ಸಮಾಧಿ ಕೇವಲ ಸಮಾಧಿ ಅಲ್ಲ ಅದು ಒಂದು ಆಧ್ಯಾತ್ಮಿಕ ಕ್ಷೇತ್ರವನ್ನಾಗಿ ಮಾಡುತ್ತೇವೆ. ಪ್ರತಿನಿತ್ಯ ದಾಸೋಹ ವ್ಯವಸ್ಥೆಯನ್ನು ಮಾಡಲಾಗಿದೆ' ಎಂದು ನಟ ವಿನೋದ್‌ರಾಜ್ ತಿಳಿಸಿದರು.

ರಕ್ತದಾನ ಶಿಬಿರ: ಲೀಲಾವತಿ ಅವರ ದೇಗುಲ ಉದ್ಘಾಟನಾ ಸಮಾರಂಭದ ಅಂಗವಾಗಿ ಅಮೂಲ್ಯ ಸ್ವಯಂ ಪ್ರೇರಿತ ರಕ್ತ ಕೇಂದ್ರದಿಂದ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ 80 ಯೂನಿಟ್ ರಕ್ತ ಸಂಗ್ರಹವಾಯಿತು.

ಕಲಾವಿದರಾದ ಕುಮಾರ್ ಗೋವಿಂದ್, ಅಭಿಜಿತ್, ಗಿರಿಜಾ ಲೋಕೇಶ್, ಪದ್ಮವಾಸಂತಿ, ಲಕ್ಷ್ಮೀ ದೇವಮ್ಮ ಬ್ಯಾಂಕ್‌ಜನಾರ್ದನ್, ಹೊನ್ನಹಳ್ಳಿ ಕೃಷ್ಣ, ಸುದರ್ಶನ್, ಸುಮಿತ್ರಾಗುರು ನಿರ್ದೇಶಕ ಉಮೇಶ್, ಮುದ್ದುರಾಜ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂತೋಷ್‌ನಾಯಕ್, ಯಂಟಗಾನಹಳ್ಳಿ ಗ್ರಾ.ಪಂ ಅಧ್ಯಕ್ಷ ರಾಹುಲ್‌ಗೌಡ, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾಧ್ಯಕ್ಷ ಸಿ.ಆರ್.ಗೌಡ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಸಿ.ಎಂ.ಗೌಡ, ಉದ್ಯಮಿ ಚಿಕ್ಕಹನುಮೇಗೌಡ, ಮುಖಂಡ ಮಂಜುನಾಥಯ್ಯ, ಕುಮಾರ್ ಅವರು ಉಪಸ್ಥಿತರಿದ್ದರು.

'ಹವಾಮಾನ ಬದಲಾವಣೆಯಿಂದ ಆರೋಗ್ಯ ಸಮಸ್ಯೆ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವಾಮಾನ ಬದಲಾವಣೆಯಿಂದ ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ, ಅಕಾಲಿಕ ಮಳೆ, ವಾಯು ಮಾಲಿನ್ಯ ಹೆಚ್ಚುತ್ತಿದೆ. ಇದರಿಂದ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿದ್ದು, ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ' ಎಂದು ಆರ್ಟಿಸ್ಟ್ ಫಾರ್ ಹರ್ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಹೇಮಾ ದಿವಾಕರ್ ಹೇಳಿದರು.

ಸಸ್ಟೇನಬಲ್ ಆಕ್ಷನ್ ಫಾರ್ ಕ್ಲೈಮೇಟ್ ಆ್ಯಂಡ್ ಹೆಲ್ತ್ ಇನಿಷಿಯೇಟಿವ್, ಯುಎಸ್‌ಎಐಡಿ ಮಿಷನ್ ಮತ್ತು ಆರ್ಟಿಸ್ಟ್ ಫಾರ್ ಹರ್ ಸಂಸ್ಥೆಗಳ ಸಹಯೋದಲ್ಲಿ ಗುರುವಾರ ನಡೆದ 'ಹವಾಮಾನ ಪ್ರತಿರೋಧಕ ಆರೈಕೆಗಾಗಿ ಮಾರ್ಗಗಳು–ಖಾಸಗಿ ಆರೋಗ್ಯ ಸೇವಾ ಕೇಂದ್ರಗಳ ಪಾತ್ರ' ಎಂಬ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಸಾರ್ವಜನಿಕ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಉತ್ಪತ್ತಿಯಾಗುವ ವೈದ್ಯಕೀಯ ತ್ಯಾಜ್ಯವನ್ನು ಸಮಪರ್ಕವಾಗಿ ನಿರ್ವಹಣೆ ಮಾಡುವುದರ ಜೊತೆಗೆ ಸರಿಯಾಗಿ ವಿಲೇವಾರಿ ಮಾಡಬೇಕು. ಈ ಬಗ್ಗೆ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯಲ್ಲಿ ಜಾಗೃತಿ ಮೂಡಿಸಬೇಕು. ಪರಿಸರಕ್ಕೆ ಆಗುತ್ತಿರುವ ಹಾನಿಯನ್ನು ತಪ್ಪಿಸಬೇಕಿದೆ ಎಂದು ಹೇಮಾ ದಿವಾಕರ್ ಹೇಳಿದರು.

'ರೋಗಿಗಳ ಆರೈಕೆಯನ್ನು ಸುಧಾರಿಸಲು ಸರ್ಕಾರ ನೀತಿಯೊಂದನ್ನು ರೂಪಿಸಬೇಕು. ಅದು ವೈಜ್ಞಾನಿಕ ತಳಹದಿಯನ್ನು ಹೊಂದಿರಬೇಕು' ಎಂದರು.

'ಈಗಾಗಲೇ ದೊಡ್ಡ ಆಸ್ಪತ್ರೆಗಳು ಈ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿವೆ. ಮಧ್ಯಮ ಮತ್ತು ಚಿಕ್ಕ ಆಸ್ಪತ್ರೆಗಳಲ್ಲಿಯೂ ಉತ್ಪತ್ತಿಯಾಗುವ ವೈದ್ಯಕೀಯ ತ್ಯಾಜ್ಯ ಸರಿಯಾದ ಕ್ರಮದಲ್ಲಿ ವಿಲೇವಾರಿ ಮಾಡಬೇಕು. ಪರಿಸರಕ್ಕೆ ಹಾನಿಯಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಹೇಮಾ ದಿವಾಕರ್ ಹೇಳಿದರು.

ಆರ್ಟ್‌ಪಾರ್ಕ್ ಕಾರ್ಯಕ್ರಮದ ನಿರ್ದೇಶಕ ಡಾ. ಭಾಸ್ಕರ್ ರಾಜ್‌ಕುಮಾರ್, ಅಲೆಕ್ಸ್ ಥಾಮಸ್, ರಿಷಬ್ ಚೋಪ್ರಾ ಉಪಸ್ಥಿತರಿದ್ದರು.



ಕಾರ್ಯಾಗಾರದಲ್ಲಿ ಡಾ. ಹೇಮಾ ದಿವಾಕರ್, ಯುಎಸ್‌ಎಐಡಿಯ ರೂಬೆನ್ ಎಸ್., ಡಾ.ಮಹಮ್ಮದ್ ಷರೀಫ್ ಮತ್ತು ಅಲೆಕ್ಸ್ ಥಾಮಸ್ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಜಾರ್ಖಂಡ್ ಸಂಪುಟಕ್ಕೆ 11 ಮಂದಿ ಸೇರ್ಪಡೆ

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಗುರುವಾರ ಸಚಿವ ಸಂಪುಟ ವಿಸ್ತರಿಸಿದ್ದು, 11 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಆರು ಮತ್ತು ಮಿತ್ರ ಪಕ್ಷಗಳಾಗಿರುವ ಕಾಂಗ್ರೆಸ್‌ನ ನಾಲ್ವರು ಮತ್ತು ಆರ್‌ಜೆಡಿ ಪಕ್ಷದ ಒಬ್ಬರು ಸಂಪುಟದಲ್ಲಿ ಸ್ಥಾನ ಪಡೆದರು.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜೆಎಂಎಂ ನೇತೃತ್ವದ ಮೈತ್ರಿಕೂಟವು ಸ್ಪಷ್ಟ ಬಹುಮತ ಪಡೆದಿತ್ತು. ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರು ನ.28ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. 81 ಸದಸ್ಯ ಬಲದ ವಿಧಾನಸಭೆಯಲ್ಲಿ ಮೈತ್ರಿಕೂಟವು 56 ಸ್ಥಾನಗಳನ್ನು ಪಡೆದಿತ್ತು.

ಸಚಿವರಾದ 11 ಜನರಲ್ಲಿ ಆರು ಮಂದಿ ಹೊಸಬರು. ಉಳಿದಂತೆ ನಾಲ್ವರು ಎರಡನೇ ಬಾರಿಗೆ ಮತ್ತು ಒಬ್ಬರು ಮೂರನೇ ಬಾರಿಗೆ ಸಚಿವರಾಗಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಸಂತೋಷ್ ಕುಮಾರ್ ಗ್ಯಾಂಗ್ವಾರ್ ಅವರು ಪ್ರಮಾಣವಚನ ಬೋಧಿಸಿದರು.

ಜಾರ್ಖಂಡ್ ವಿಧಾನಸಭೆಯ ಅಧಿವೇಶನವು ಡಿಸೆಂಬರ್ 9 ರಿಂದ 12ರವರೆಗೂ ನಡೆಯಲಿದೆ. ಜೆಎಂಎಂ ಪಕ್ಷದ ಹಿರಿಯ ಶಾಸಕ ಸ್ಟೀಫನ್ ಮರಂಡಿ ಅವರು ಹಂಗಾಮಿ ಸ್ಪೀಕರ್ ಆಗಿ ಈಗಾಗಲೇ ನೇಮಕಗೊಂಡಿದ್ದಾರೆ.



ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಶಿವಸೇನಾ ನಾಯಕ ಹಾಗೂ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗೌರವ ಅರ್ಪಿಸಿದರು. ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್, ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ , ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಇದ್ದರು ಪಿಟಿಐ ಚಿತ್ರ



ಬಾಲಿವುಡ್ ನಟರಾದ ರಣಬೀರ್ ಕಪೂರ್ ಮತ್ತು ರಣವೀರ್ ಸಿಂಗ್ ಅವರು ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಮತ್ತು ಅವರ ಪತ್ನಿ ಅಂಜಲಿ ಜೊತೆ ಸಂತಸ ಹಂಚಿಕೊಂಡ ಕ್ಷಣ ಪಿಟಿಐ ಚಿತ್ರ

ಏಕನಾಥ ಶಿಂದೆ, ಅಜಿತ್ ಪವಾರ್ ಉಪ ಮುಖ್ಯಮಂತ್ರಿ • ಸಮಾರಂಭದಲ್ಲಿ ಪ್ರಧಾನಿ ಮೋದಿ ಭಾಗಿ

ಸಿ.ಎಂ ಆಗಿ ಫಡಣವೀಸ್ ಪ್ರಮಾಣ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಗುರುವಾರ ಸಂಜೆ ಪ್ರಮಾಣ ವಚನ ಸ್ವೀಕರಿಸಿದರು. ಇದರಿಂದಾಗಿ, ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾಗಿ, ಮಹಾಯುತಿ ಮೈತ್ರಿಕೂಟಕ್ಕೆ ಭಾರಿ ಬಹುಮತ ದೊರೆತ ಸರಿಸುಮಾರು ಎರಡು ವಾರಗಳ ನಂತರ ಮಹಾರಾಷ್ಟ್ರದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಂತಾಗಿದೆ.

ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ನಾಯಕರಾದ ಏಕನಾಥ ಶಿಂದೆ ಮತ್ತು ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಶಿಂದೆ ಅವರು ಎಂದಿನಂತೆ ಪೂರ್ಣ ತೋಳಿನ ಬಿಳಿ ಅಂಗಿ, ಬಿಳಿ ಪ್ಯಾಂಟ್ ಧರಿಸಿದ್ದರು. ಫಡಣವೀಸ್ ಮತ್ತು ಪವಾರ್ ಅವರು ನಸುಗೆಂಪು ಬಣ್ಣದ ಜಾಕೆಟ್ ಧರಿಸಿದ್ದರು.

ಉಪ ಮುಖ್ಯಮಂತ್ರಿಯಾಗಿ ಸಂಪುಟ ಸೇರುವಂತೆ ಶಿಂದೆ ಅವರಿಗೆ ಶಿವಸೇನಾ ಶಾಸಕರೇ ಒತ್ತಾಯ ಮಾಡಿದ್ದರು ಎನ್ನಲಾಗಿದೆ.

ದಕ್ಷಿಣ ಮುಂಬೈನ ವಿಶಾಲವಾದ ಆಜಾದ್ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಯಿತು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ಜೆ.ಪಿ. ನಡ್ಡಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ, ನಿರ್ಮಲಾ ಸೀತಾರಾಮನ್, ಪೀಯೂಷ್ ಗೋಯಲ್ ಮತ್ತು ಶಿವರಾಜ್ ಸಿಂಗ್ ಚೌಹಾಣ್, ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಮಹಾಯುತಿ ಮೈತ್ರಿಕೂಟದ ಸಹಸ್ರಾರು ಮಂದಿ ಕಾರ್ಯಕರ್ತರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಫಡಣವೀಸ್, ಶಿಂದೆ ಮತ್ತು ಪವಾರ್ ಹೊರತುಪಡಿಸಿದರೆ ಬೇರೆ ಯಾರೂ ಪ್ರಮಾಣ ವಚನ ಸ್ವೀಕರಿಸಿಲ್ಲ. ಮಹಾರಾಷ್ಟ್ರ ವಿಧಾನಸಭೆಯ ಚಳಿಗಾಲದ ಅಧಿವೇಶನವು ಆರಂಭವಾಗುವ ಮೊದಲು, ಮುಂದಿನ ವಾರದಲ್ಲಿ ಸಂಪುಟ ವಿಸ್ತರಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಫಡಣವೀಸ್, ಶಿಂದೆ ಮತ್ತು ಪವಾರ್ ಅವರಿಗೆ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರು ಪ್ರಮಾಣ ವಚನ ಬೋಧಿಸಿದರು. 40 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರಿಗೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಪೊಲೀಸರು ವಿಶೇಷವಾದ ವ್ಯವಸ್ಥೆ ಕಲ್ಪಿಸಿದ್ದರು. ಸರಿಸುಮಾರು ಎರಡು ಸಾವಿರ ಮಂದಿ ಅತಿಗಣ್ಯ ವ್ಯಕ್ತಿಗಳಿಗೆ ಪ್ರತ್ಯೇಕವಾದ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಕ್ರಮದ ಭದ್ರತೆಗಾಗಿ ನಾಲ್ಕು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಮುಖರು

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ, ಮುಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್.

ನಟ ಶಾರೂಖ್ ಖಾನ್, ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ, ಅಂಬಾನಿ ಅವರ ಮಗ ಅನಂತ್ ಮತ್ತು ಸೊಸೆ ರಾಧಿಕಾ, ಟಾಟಾ ಟ್ರಸ್ಟ್ಸ್ ಅಧ್ಯಕ್ಷ ನೋಯಲ್ ಟಾಟಾ, ಉದ್ಯಮಿ ಕುಮಾರಮಂಗಲಂ ಬಿರ್ಲಾ.

ಇದೊಂದು ಬಹಳ ಸುಂದರವಾದ ದಿನ. ಇದು ಸಂತಸದ ಸಂದರ್ಭ. ಜವಾಬ್ದಾರಿ ಹೆಚ್ಚಾಗಿದೆ.
ಅಮೃತಾ,
ದೇವೇಂದ್ರ ಫಡಣವೀಸ್ ಅವರ ಪತ್ನಿ

ಈ ತಂಡವು ಅನುಭವ ಮತ್ತು ಚೈತನ್ಯದ ಮಿಶ್ರಣ. ಈ ತಂಡದ ಸಾಮೂಹಿಕ ಯತ್ನದ ಫಲವಾಗಿ 'ಮಹಾಯುತಿ'ಗೆ ಮಹಾರಾಷ್ಟ್ರದಲ್ಲಿ ಐತಿಹಾಸಿಕ ಜನಾದೇಶ ದೊರೆತಿದೆ.
ನರೇಂದ್ರ ಮೋದಿ, ಪ್ರಧಾನಿ
(ಫಡಣವೀಸ್, ಶಿಂದೆ ಮತ್ತು ಪವಾರ್ ಅವರಿಗೆ ಅಭಿನಂದನೆ ಸಲ್ಲಿಸಿ ಪ್ರಕಟಿಸಿದ ಎಕ್ಸ್ ಬರಹ)

'ಪ್ರೋಬಾ–3' ಉಪಗ್ರಹ ಕಕ್ಷೆಗೆ

ಶ್ರೀಹರಿಕೋಟಾ (ಆಂಧ್ರ ಪ್ರದೇಶ) (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಸ್ಥೆಯು (ಇಸ್ರೊ) ಯುರೋಪಿಯನ್ ಸ್ಪೇಸ್ ಏಜೆನ್ಸಿ (ಇಎಸ್‌ಎ) ಕೈಗೊಂಡಿರುವ 'ಪ್ರೋಬಾ–3' ಮಿಷನ್‌ನ ಉಪಗ್ರಹಗಳನ್ನು ಗುರುವಾರ ಯಶಸ್ವಿಯಾಗಿ ಕಕ್ಷೆಗೆ ಸೇರಿಸಿತು.

'ಪ್ರೋಬಾ–3' ಹೊತ್ತ ಪಿಎಸ್‌ಎಲ್‌ವಿ–ಸಿ59 ರಾಕೆಟ್‌ಅನ್ನು ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಸಂಜೆ 4.04ಕ್ಕೆ ಉಡಾವಣೆ ಮಾಡಲಾಯಿತು. 'ಟೇಕಾಫ್ ಆದ 18 ನಿಮಿಷಗಳ ಬಳಿಕ ಎರಡು ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸಲಾಯಿತು' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

ಪ್ರೋಬಾ–3 (ಪ್ರೊಜೆಕ್ಟ್ ಫಾರ್ ಆನ್‌ಬೋರ್ಡ್ ಅಟಾನಮಿ) ಮಿಷನ್, ಅವಳಿ ಉಪಗ್ರಹಗಳನ್ನು ಒಳಗೊಂಡಿದೆ. ಈ ಉಪಗ್ರಹಗಳ ಒಳಗೆ ಎರಡು ಬಾಹ್ಯಾಕಾಶ ನೌಕೆಗಳನ್ನು ಇರಿಸಲಾಗಿದೆ. ಉಪಗ್ರಹಗಳು ತಮ್ಮ ಕಕ್ಷೆಯಲ್ಲಿ ಜತೆಯಾಗಿ ಸಂಚರಿಸಲಿದ್ದು, ಸೂರ್ಯನ ಹೊರಗಿನ ವಾತಾವರಣವನ್ನು ಅಧ್ಯಯನ ಮಾಡಲಿವೆ.

ಇಸ್ರೊದ ವಾಣಿಜ್ಯ ವಿಭಾಗ 'ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್' (ಎನ್‌ಎಸ್‌ಐಎಲ್) ತನ್ನ ಈಚೆಗಿನ ಕಾರ್ಯಾಚರಣೆಯಾಗಿ, ಇಎಸ್‌ಎನ ಎರಡು ಉಪಗ್ರಹಗಳನ್ನು ಉಡಾವಣೆ ಮಾಡುವ ಒಪ್ಪಂದ ಮಾಡಿಕೊಂಡಿತ್ತು.

'ಪಿಎಸ್‌ಎಲ್‌ವಿಯು ಈ ಹಿಂದೆಯೂ ಉಪಗ್ರಹಗಳನ್ನು ಜಿಯೊಸ್ಟೇಷನರಿ ಕಕ್ಷೆಗೆ ಸೇರಿಸಿತ್ತು. ಆದರೆ ಉಪಗ್ರಹಗಳನ್ನು 60 ಸಾವಿರ ಕಿ.ಮೀ. ಎತ್ತರದಲ್ಲಿರುವ ಕಕ್ಷೆಗೆ ಸೇರಿಸಿದ್ದು ಇದೇ ಮೊದಲು. ಇದು ವಿಶೇಷ ಸಾಧನೆ' ಎಂದು ಎನ್‌ಎಸ್‌ಐಎಲ್ ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಿ.ರಾಧಾಕೃಷ್ಣನ್ ತಿಳಿಸಿದರು.

ಈ ಉಡಾವಣೆಯು ಇಸ್ರೊ ನಡೆಸುತ್ತಿರುವ ಸೌರ ಅಧ್ಯಯನ ಯೋಜನೆಗೆ ಬೇಕಾದ ಪ್ರಮುಖ ಒಳನೋಟಗಳನ್ನು ಒದಗಿಸಲಿದೆ. ಇಸ್ರೊ, ತನ್ನ 'ಆದಿತ್ಯ ಎಲ್–1' ಉಪಗ್ರಹದ ಮೂಲಕ ಸೂರ್ಯನ ಬಗ್ಗೆ ಅಧ್ಯಯನ ಕೈಗೊಂಡಿದೆ.

ಮುಖ್ಯಮಂತ್ರಿ ಸ್ಥಾನ ಬಿಡದಿರಲು ಸಮಾವೇಶ: ವಿಜಯೇಂದ್ರ ಟೀಕೆ

ಪ್ರಜಾವಾಣಿ ವಾರ್ತೆ



ಬಿ.ವೈ. ವಿಜಯೇಂದ್ರ

ಕಲಬುರಗಿ/ ಯಾದಗಿರಿ: 'ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡುವುದಿಲ್ಲ ಎಂಬ ಸಂದೇಶವನ್ನು ಸಾರಲು ಸಿದ್ದರಾಮಯ್ಯ ಅವರು ಹಾಸನ ಸಮಾವೇಶ ಆಯೋಜಿಸಿದ್ದರು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಾಸನ ಸಮಾವೇಶ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನವಾಗಿತ್ತು. ಕುರ್ಚಿ ಬಿಟ್ಟುಕೊಡುವುದಿಲ್ಲ ಎಂದು ಧಮ್ಕಿ ಹಾಕಲು ಸಮಾವೇಶ ಆಯೋಜಿಸಿದ್ದರು. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲು ಕಾಯುತ್ತಿದ್ದಾರೆ. ಹಾಗಾಗಿ ಅವರು ಅಲ್ಲಿಗೆ ಹೋಗಿ ಕಾರ್ಯಕ್ರಮವನ್ನು ಹೈಜಾಕ್ ಮಾಡಲು ಯತ್ನಿಸಿದ್ದಾರೆ' ಎಂದು ಟೀಕಿಸಿದರು.

'ಯಾವ ಪುರುಷಾರ್ಥಕ್ಕಾಗಿ ಹಾಸನದ ಸಮಾವೇಶವನ್ನು ಸಿದ್ದರಾಮಯ್ಯ ಆಯೋಜಿಸಿದ್ದಾರೆ? ಮುಡಾ ಹಗರಣ ಮರೆ ಮಾಚಿ, ಕುರ್ಚಿ ಉಳಿಸಿಕೊಳ್ಳಲು ಮಾಡಿರುವ ಸರ್ಕಸ್ ಇದಾಗಿದೆ. ಜನರ ಸಮಸ್ಯೆಗಳನ್ನು ಬದಿಗೊತ್ತಿ ಇವರು ಸಮಾವೇಶ ಮಾಡಿದ್ದಾರೆ' ಎಂದು ಅವರು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

'ಅಧಿಕಾರ ಹಂಚಿಕೆಯ ಒಪ್ಪಂದ ಆಗಿದೆ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಾರೆ. ಒಪ್ಪಂದ ಆಗಿಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಏನಾಗಿದೆ, ಏನಿಲ್ಲ ಎಂಬುದನ್ನು ಅವರೇ ಜನರಿಗೆ ತಿಳಿಸಬೇಕು. ಇವರಿಬ್ಬರ ನಡುವೆ ರಾಜ್ಯದ ಜನ ಅತಂತ್ರರಾಗಿದ್ದಾರೆ. ಕಾಂಗ್ರೆಸ್‌ನಲ್ಲಿ ಅಧಿಕಾರಕ್ಕಾಗಿ ಜಿದ್ದಾಜಿದ್ದಿ ಶುರುವಾಗಿದ್ದು, ನಾಲ್ಕು ಗೋಡೆಗಳ ಮಧ್ಯೆ ಇರುವುದು ಅಧಿವೇಶನದ ನಂತರ ಹೊಡೆದಾಡುವ ಮಟ್ಟಕ್ಕೆ ಹೋಗುತ್ತದೆ' ಎಂದರು.

ನೌಕರರ ಚುನಾವಣೆ, ಪ್ರಜಾಸತ್ತಾತ್ಮಕ ವೇದಿಕೆಗೆ ಮುನ್ನಡೆ: ಕೃಷ್ಣಮೂರ್ತಿ

ಬೆಂಗಳೂರು: ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಗೆ ನಡೆದ ಚುನಾವಣೆಯಲ್ಲಿ 21 ಜಿಲ್ಲೆಗಳಲ್ಲಿ ಪ್ರಜಾಸತ್ತಾತ್ಮಕ ವೇದಿಕೆಯ ಬೆಂಬಲಿಗರು ಆಯ್ಕೆಯಾಗಿದ್ದಾರೆ ಎಂದು ರಾಜ್ಯ ಸಂಘದ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಕೃಷ್ಣಮೂರ್ತಿ, ಖಜಾಂಚಿ ಸ್ಥಾನದ ಆಕಾಂಕ್ಷಿ ಶಿವರುದ್ರಯ್ಯ ಹೇಳಿದ್ದಾರೆ.

ಕೆಲ ದಿನಗಳ ಹಿಂದೆ ನಡೆದಿದ್ದ ತಾಲ್ಲೂಕು ಘಟಕ ಹಾಗೂ ಯೋಜನಾ ಘಟಕಗಳ ಚುನಾವಣೆಯಲ್ಲಿ ವೇದಿಕೆಯ ಬೆಂಬಲಿಗರು 146 ತಾಲ್ಲೂಕುಗಳಲ್ಲಿ ಆಯ್ಕೆಯಾಗಿದ್ದರು. ಈಗ 21 ಜಿಲ್ಲೆಗಳಲ್ಲಿ ವೇದಿಕೆಯ ಬೆಂಬಲಿಗ ಅಧ್ಯಕ್ಷರು, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯರು ಆಯ್ಕೆಯಾಗಿದ್ದಾರೆ ಎಂದಿದ್ದಾರೆ.

ಹಿಂದಿನ ಅವಧಿಯಲ್ಲಿ ಆಯ್ಕೆಯಾಗಿದ್ದ ಪದಾಧಿಕಾರಿಗಳ ಸರ್ವಾಧಿಕಾರಿ ಧೋರಣೆ ವಿರುದ್ಧ ನೌಕರರು ತೀರ್ಪು ನೀಡಿದ್ದು, ಡಿ. 27ರಂದು ನಡೆಯುವ ರಾಜ್ಯ ಸಂಘದ ಚುನಾವಣೆಯಲ್ಲಿ ಹೊಸ ಆಡಳಿತ ಮಂಡಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಚುನಾವಣೆ ಫಲಿತಾಂಶ ಕುರಿತು ಬುಧವಾರ ಹೇಳಿಕೆ ನೀಡಿದ್ದ ರಾಜ್ಯ ಸಂಘದ ಹಾಲಿ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಜಿಲ್ಲಾ, ತಾಲ್ಲೂಕು ಹಾಗೂ ಯೋಜನಾ ಘಟಕ ಹಾಗೂ ರಾಜ್ಯ ಪರಿಷತ್ ಸ್ಥಾನದ ಚುನಾವಣೆಯಲ್ಲಿ ಶೇ 95ರಷ್ಟು ತಮ್ಮ ಬೆಂಬಲಿಗರೇ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದರು.

ಗೌಡರ ಕೋಟೆಯಲ್ಲಿ 'ಕೈ' ಆರ್ಭಟ

ಮೊದಲ ಮುಖಪುಟದಿಂದ..

ಜೆಡಿಎಸ್‌ನ ಬಲಿಷ್ಠ ನೆಲೆಯಲ್ಲಿಯೇ, ನಿಂತ ಕಾಂಗ್ರೆಸ್ ನಾಯಕರು ದೇವೇಗೌಡ, ಎಚ್‌. ಡಿ. ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು. ಕಾಂಗ್ರೆಸ್ ಸರ್ಕಾರದ ಸಾಧನೆಯನ್ನು ಪದೇ ಪದೇ ಉಲ್ಲೇಖಿಸಿದ ನಾಯಕರು, ರಾಜ್ಯಕ್ಕೆ–ದೇಶಕ್ಕೆ ಕಾಂಗ್ರೆಸ್ ಏಕೆ ಬೇಕು ಎಂದು ಮನವರಿಕೆ ಮಾಡಿಕೊಡುವ ಯತ್ನ ಮಾಡಿದರು.

ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಎಲ್ಲ ನಾಯಕರೂ, ಬಿ.ಆರ್.ಅಂಬೇಡ್ಕರ್ ಹಾಗೂ ಸಂವಿಧಾನ ಆಶಯಗಳನ್ನು ಕಾಪಾಡಬೇಕಾದ ಅನಿವಾರ್ಯದ ಕುರಿತು ಮತ್ತೆ ಪ್ರಸ್ತಾಪಿಸಿದರು. 'ಜೈ ಭೀಮ್' ಘೋಷಣೆಯನ್ನೂ ಕೂಗಿ ಕಾರ್ಯಕರ್ತರನ್ನು ಹುರಿದುಂಬಿಸಿದರು.

ಒಕ್ಕಲಿಗ ಸಮುದಾಯದ ರಾಜಕೀಯ ಪ್ರಾಬಲ್ಯ ಇರುವ ಹಾಸನ ಜಿಲ್ಲೆಯಲ್ಲಿ 'ಅಹಿಂದ' ಸಮುದಾಯವನ್ನು ಪಕ್ಷದ ತೆಕ್ಕೆಗೆ ತೆಗೆದುಕೊಳ್ಳುವ ಮುನ್ನುಡಿಯಂತೆ ನಡೆದ ಸಮಾವೇಶವು, 2028ರ ವಿಧಾನಸಭೆ ಚುನಾವಣೆಯ ತಾಲೀಮಿನಂತಿತ್ತು.

'2028ರಲ್ಲಿ ಹಾಸನದಲ್ಲಿ ಎಲ್ಲ ಕ್ಷೇತ್ರವನ್ನು ಗೆಲ್ಲಿಸಿಕೊಡಿ' ಎಂದು ಮನವಿ ಮಾಡಿದ ಡಿ.ಕೆ. ಶಿವಕುಮಾರ್, 'ಸ್ವಾಭಿಮಾನ–ಜನ ಕಲ್ಯಾಣ ಯಾತ್ರೆಗೆ ಇಲ್ಲಿಂದಲೇ ಚಾಲನೆ ನೀಡಿದ್ದೇವೆ' ಎಂದೂ ಹೇಳಿದರು.

ಆರಂಭದಲ್ಲಿ 'ಸ್ವಾಭಿಮಾನಿ ಒಕ್ಕೂಟ' ರೂಪಿಸಿದ್ದ ಸಮಾವೇಶ, ಕಾಂಗ್ರೆಸ್ ಪಕ್ಷವನ್ನು ಒಳಗೊಂಡಿಲ್ಲ ಎಂಬ ಅಪಸ್ವರ ಎದ್ದಿತ್ತು. ಕೆಪಿಸಿಸಿ ನೇತೃತ್ವದಲ್ಲೇ ಸಮಾವೇಶ ಮುನ್ನಡೆಸುವುದಾಗಿ ಡಿ.ಕೆ. ಶಿವಕುಮಾರ್ ಪ್ರಕಟಿಸಿದ್ದರು. ಕಾಂಗ್ರೆಸ್ ನೇತೃತ್ವದಲ್ಲೇ ಸಮಾವೇಶ ನಡೆಸಲು ತಾವೇ ಸೂಚಿಸಿದ್ದಾಗಿ ಸಿದ್ದರಾಮಯ್ಯ ಸ್ಪಷ್ಟನೆಯನ್ನೂ ಕೊಟ್ಟರು.

ಸಮಾವೇಶದಲ್ಲಿ ಮಾತನಾಡಿದ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, 'ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಸರ್ವರ ಪರವಾಗಿ ಕೆಲಸ ಮಾಡುತ್ತಿರುವುದರಿಂದಲೇ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್, ಈಗ ಸಿದ್ದರಾಮಯ್ಯ ಅವರ ಮೇಲೆ ಕೇಂದ್ರದ ಬಿಜೆಪಿ ಸರ್ಕಾರ ದಾಳಿ ಮಾಡುತ್ತಿದೆ. ಇದು ರಾಜ್ಯದ ಜನರ ಮೇಲಿನ ದಾಳಿ' ಎಂದು ದೂರಿದರು.



ಹಾಸನದಲ್ಲಿ ಗುರುವಾರ ನಡೆದ 'ಜನಕಲ್ಯಾಣ ಸಮಾವೇಶ'ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವರಾದ ಕೆ.ಎನ್. ರಾಜಣ್ಣ, ಕೆ.ವೆಂಕಟೇಶ್, ಕೆ.ಎಚ್. ಮುನಿಯಪ್ಪ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲಾ, ಸಚಿವ ಶಿವರಾಜ್ ತಂಗಡಗಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ.ಜಿ. ಪರಮೇಶ್ವರ ಡಾ.ಎಚ್.ಸಿ. ಮಹದೇವಪ್ಪ, ರಹೀಂ ಖಾನ್, ಎಚ್.ಕೆ. ಪಾಟೀಲ ಭಾಗವಹಿಸಿದ್ದರು

ಗೌಡರ ವಿರುದ್ಧ ಮುಖ್ಯಮಂತ್ರಿ ಕಿಡಿ

ಮೊದಲನೇ ಮುಖಪುಟದಿಂದ..

ಈ ಪಾಪದ ಹೊರೆಯನ್ನು ಹೊರಬೇಕಾಗುತ್ತದೆ ಎಂದು ದೇವೇಗೌಡರಿಗೆ, ಒಕ್ಕಲಿಗ ನಾಯಕರಾಗಿದ್ದ ಕೃಷ್ಣಪ್ಪ ಆಗಲೇ ಹೇಳಿದ್ದರು. ಸಾಲು ಸಾಲು ಒಕ್ಕಲಿಗ ನಾಯಕರನ್ನು ರಾಜಕೀಯವಾಗಿ ಮುಗಿಸಿದ್ದರ ಫಲವನ್ನು ಈಗ ದೇವೇಗೌಡರು ನೋಡುವಂತಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

'ಹಾಸನದ ಹೆಣ್ಣುಮಕ್ಕಳು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಕೇಂದ್ರ ಸರ್ಕಾರ ರಾಜ್ಯದ ರೈತರ ಪಾಲಿನ ಸಾಲದಲ್ಲಿ ಶೇ 58 ರಷ್ಟನ್ನು ಕಡಿತಗೊಳಿಸಿದೆ. ಇದರಿಂದ ಹಾಸನದ ರೈತರು ಮತ್ತು ರಾಜ್ಯದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರ ಮಗ ಎಂದುಕೊಂಡಿರುವ ಕುಮಾರಸ್ವಾಮಿಯವರು ಏಕೆ ಕೇಂದ್ರ ಸರ್ಕಾರವನ್ನು ಪ್ರಶ್ನಿಸುತ್ತಿಲ್ಲ' ಎಂದು ಕೇಳಿದರು.

'ಕುಮಾರಸ್ವಾಮಿಯವರು ಮೇಕೆದಾಟು ವಿಚಾರದಲ್ಲಿ ಮೌನ ಆಗಿರುವುದು ಏಕೆ? ಬೆಂಗಳೂರಿನ ಜನರಿಗೆ ನೀರು ಬೇಕಾಗಿದೆ. ಕೊಡಿಸಲಿ' ಎಂದು ಸವಾಲು ಹಾಕಿದರು.

'ಹಾಸನದ ಮಹಾನ್ ನಾಯಕರ ಮೊಮ್ಮಗ ನಿಖಿಲ್ ಕುಮಾರ್‌ನನ್ನು ಚನ್ನಪಟ್ಟಣದಲ್ಲಿ , ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಅವರ ಮೊಮ್ಮಗ, ನಿಕಟಪೂರ್ವ ಮುಖ್ಯಮಂತ್ರಿ ಮಗನನ್ನು ಶಿಗ್ಗಾವಿಯಲ್ಲಿ ಜನ ಸೋಲಿಸಿ ನಮಗೆ ಆಶೀರ್ವದಿಸಿದ್ದಾರೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಹಾಸನ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ. ಇದು ಶತಸಿದ್ಧ' ಎಂದರು.

ಬಂಡೆಯಂತೆ ಸಿದ್ದರಾಮಯ್ಯ ಹಿಂದೆ: ಡಿಕೆಶಿ

ಮೊದಲ ಮುಖಪುಟದಿಂದ

'ಬಿಜೆಪಿ ಹಾಗೂ ಜೆಡಿಎಸ್ ಸುಳ್ಳಿನ ಸರಮಾಲೆಗಳಿಗೆ ಸಂಡೂರು, ಶಿಗ್ಗಾವಿ, ಚನ್ನಪಟ್ಟಣದಲ್ಲಿ ಜನ ಉತ್ತರ ನೀಡಿದ್ದಾರೆ' ಎಂದರು.

'ಚುನಾವಣೆ ಸಮಯದಲ್ಲಿ ಚನ್ನಪಟ್ಟಣಕ್ಕೆ ಬಂದು ಕಣ್ಣೀರು ಹಾಕುವ ಕುಮಾರಸ್ವಾಮಿ ಅವರೇ ನಿಮ್ಮ ಸಾಕ್ಷಿ ಗುಡ್ಡೆ ಏನು? ಹಾಸನದಲ್ಲಿ ದೇವೇಗೌಡರ ಕುಟುಂಬದ ಸಾಕ್ಷಿ ಗುಡ್ಡೆ ಏನು? ನಾನು ನಿಮ್ಮ ಕುಟುಂಬದ ಮಾಜಿ ಸಂಸದರ ಸಾಕ್ಷಿ ಗುಡ್ಡೆ ಬಗ್ಗೆ ಮಾತನಾಡುವುದಿಲ್ಲ. ಅದರ ಬಗ್ಗೆ ಮಾತನಾಡಲು ನನಗೆ ಅಸಹ್ಯವಾಗುತ್ತದೆ' ಎಂದು ಶಿವಕುಮಾರ ಹೇಳಿದರು.

'ಹಾಸನದ ಇತಿಹಾಸ ನೋಡಿದರೆ ನೋವಾಗುತ್ತದೆ. ಅನೇಕ ರಾಜಕಾರಣಿಗಳು, ಕುಟುಂಬಗಳ ಕಣ್ಣಲ್ಲಿ ನೀರು ತರಿಸಿದ್ದಾರೆ. ಹಾಸನಾಂಬೆ ತಾಯಿ ಆ ಕಣ್ಣೀರು ಒರೆಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಈ ತಾಯಂದಿರ ಸ್ವಾಭಿಮಾನ ಕಾಪಾಡಲು ನಾವು ಈ ಸಮಾವೇಶ ಹಮ್ಮಿಕೊಂಡಿದ್ದೇವೆ. ಇದು ಹಾಸನದ ದೊಡ್ಡ ಇತಿಹಾಸ' ಎಂದರು.

ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲು

ಶಿವಮೊಗ್ಗ: ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳಕಾರಿಯಾಗಿ ಮಾತನಾಡಿ ಕೋಮು ದ್ವೇಷ ಹರಡಲು ಪ್ರಯತ್ನಿಸಿದ ಆರೋಪದ ಮೇಲೆ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ವಿರುದ್ಧ ಇಲ್ಲಿನ ಕೋಟೆ ಠಾಣೆ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಾಂಗ್ಲಾದಲ್ಲಿ ಇಸ್ಕಾನ್ ಸಂಸ್ಥೆಯ ಸ್ವಾಮಿ ಚಿನ್ಮಯಾನಂದ ದಾಸ್ ಅವರನ್ನು ಬಂಧಿಸಿರುವುದನ್ನು ವಿರೋಧಿಸಿ ಹಾಗೂ ಹಿಂದೂಗಳ ಮೇಲಿನ ದೌರ್ಜನ್ಯ ನಿಲ್ಲಿಸುವಂತೆ ಒತ್ತಾಯಿಸಿ ಹಿಂದೂ ಹಿತರಕ್ಷಣಾ ಸಮಿತಿಯಿಂದ ಮಂಗಳವಾರ ನಗರದ ಗಾಂಧಿ ಪಾರ್ಕ್ ಎದುರು ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ್ದ ಕೆ.ಎಸ್. ಈಶ್ವರಪ್ಪ, 'ಮುಸ್ಲಿಮರು ಅನ್ನ ಹಾಕಿದ ಮನೆಗೆ ಕನ್ನ ಹಾಕುವ ರಕ್ತದವರು. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನೋಡಿದರೆ ಅದು ಮನದಟ್ಟಾಗುತ್ತದೆ' ಎಂದು ಹೇಳಿದ್ದರು.

ಕಾಂಗ್ರೆಸ್ ಪಕ್ಷದವರ ಬಗ್ಗೆ ಪ್ರಚೋದನಕಾರಿಯಾಗಿ ಮಾತನಾಡಿದ್ದಕ್ಕೆ 15 ದಿನಗಳ ಹಿಂದೆ ಇಲ್ಲಿನ ಜಯನಗರ ಠಾಣೆ ಪೊಲೀಸರು ಕೆ.ಎಸ್.ಈಶ್ವರಪ್ಪ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದರು.

ರಾಜ್ಯಮಟ್ಟದ ಹ್ಯಾಕಥಾನ್ ನಾಳೆಯಿಂದ



ದರ್ಶನ್ ಪುಟ್ಟಣ್ಣಯ್ಯ

ಬೆಂಗಳೂರು: ಪುಟ್ಟಣ್ಣಯ್ಯ ಫೌಂಡೇಶನ್ ವತಿಯಿಂದ ಗ್ರಾಮೀಣ ಯುವಕರಿಗೆ ಆರ್ಥಿಕ ಸಾಕ್ಷರತೆಯ ಅರಿವು ಮೂಡಿಸಲು ಡಿಸೆಂಬರ್ 7 ಮತ್ತು 8ರಂದು ರಾಜ್ಯಮಟ್ಟದ ಹ್ಯಾಕಥಾನ್ ಅನ್ನು ಮಂಡ್ಯ ಜಿಲ್ಲೆಯ ಪಾಂಡವಪುರದ ವಿಜಯ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಶನ್ ಸಂಸ್ಥಾಪಕ ಹಾಗೂ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ, 'ಶನಿವಾರ ಬೆಳಿಗ್ಗೆ 9 ಗಂಟೆಯಿಂದ ಭಾನುವಾರ ಬೆಳಿಗ್ಗೆ 9 ಗಂಟೆಯವರೆಗೆ 24 ಗಂಟೆಯ 'ಫಿನ್–ಎ–ಥಾನ್' ಶೀರ್ಷಿಕೆ ಅಡಿಯಲ್ಲಿ ಹ್ಯಾಕಥಾನ್ ನಡೆಯಲಿದೆ. ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಸಹಕಾರವನ್ನು ಉತ್ತೇಜಿಸಲು ಅವಕಾಶ ನೀಡಲಾಗುತ್ತಿದೆ. ಗ್ರಾಮೀಣ ಸಮುದಾಯಗಳನ್ನು ಆಧುನಿಕ ಪರಿಹಾರೋಪಾಯಗಳ ಮೂಲಕ ಶಕ್ತಿ ನೀಡಿ ಅವರ ಜೀವನ ಮಟ್ಟವನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ರಾಜ್ಯದ ವಿವಿಧ ಶಿಕ್ಷಣ ಸಂಸ್ಥೆಗಳ 55 ತಂಡಗಳನ್ನು ಆಯ್ಕೆಯಾಗಿದ್ದು, ಎರಡು ದಿನಗಳ ಈ ಹ್ಯಾಕಥಾನ್‌ನಲ್ಲಿ ತಾವು ರೂಪಿಸಿದ ಪರಿಹಾರಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಈ ಸ್ಪರ್ಧೆಯಲ್ಲಿ ಆಯ್ಕೆಯಾಗುವ ಉತ್ತಮ ತಂಡಗಳಿಗೆ ಬಹುಮಾನವನ್ನೂ ನೀಡಲಾಗುತ್ತದೆ' ಎಂದು ತಿಳಿಸಿದರು.

ಅಧಿವೇಶನ: ವಿಶೇಷ ವಿಮಾನ ಸಂಚಾರ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ನಡೆಯುವ ವಿಧಾನಮಂಡಲ ಚಳಿಗಾಲದ ಅಧಿವೇಶನ ಹಿನ್ನೆಲೆಯಲ್ಲಿ ಇಂಡಿಗೋ ಏರ್‌ಲೈನ್ಸ್ ಸಂಸ್ಥೆಯು ಡಿಸೆಂಬರ್ 9 ರಿಂದ 19ರವರೆಗೆ ಬೆಳಗಿನ ಅವಧಿಯಲ್ಲಿ ಬೆಳಗಾವಿ-ಬೆಂಗಳೂರು ಮಧ್ಯೆ ವಿಶೇಷ ವಿಮಾನ ಸಂಚಾರ ಕಲ್ಪಿಸಿದೆ. ಇದರ ಕುರಿತು ಸಂಸದರಾದ ಜಗದೀಶ ಶೆಟ್ಟರ್ ಮತ್ತು ಈರಣ್ಣ ಕಡಾಡಿ ಅವರು ಮನವಿ ಸಲ್ಲಿಸಿದ್ದರು.

ಬೆಂಗಳೂರಿನಿಂದ ವಿಮಾನ ಬೆಳಿಗ್ಗೆ 6ಕ್ಕೆ ಹೊರಟು 7ಕ್ಕೆ ಬೆಳಗಾವಿ ತಲುಪುವುದು. ಅದೇ ವಿಮಾನ ಬೆಳಗಾವಿಯಿಂದ ಬೆಳಿಗ್ಗೆ 7.30ಕ್ಕೆ ಹೊರಟು 8.30ಕ್ಕೆ ಬೆಂಗಳೂರು ತಲುಪಲಿದೆ ಎಂದು ಪ್ರಕಟಣೆ ತಿಳಿಸಿದೆ.

13 ಅಧಿವೇಶನಗಳ ಒಟ್ಟು ಖರ್ಚು ₹154.3 ಕೋಟಿ, ಈ ಬಾರಿ ಭದ್ರತೆಗೆ ₹ 5.5 ಕೋಟಿ

11 ದಿನಗಳ ಅಧಿವೇಶನಕ್ಕೆ ₹19.3 ಕೋಟಿ ವೆಚ್ಚ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನ ಸೌಧದಲ್ಲಿ ಡಿಸೆಂಬರ್ 9ರಿಂದ 19ರವರೆಗೆ ನಡೆಯುವ 13ನೇ ಚಳಿಗಾಲದ ಅಧಿವೇಶನಕ್ಕೆ ₹19.3 ಕೋಟಿಗೂ ಹೆಚ್ಚು ವೆಚ್ಚ ಅಂದಾಜಿಸಲಾಗಿದೆ. ಪ್ರತಿ ವರ್ಷ ವೆಚ್ಚದಲ್ಲಿ ಶೇ 10ರಷ್ಟು ಹೆಚ್ಚಳ ಆಗುವುದು ಸಹಜ. ಆದರೆ, ಈ ಬಾರಿ ಅದನ್ನೂ ಕಡಿಮೆ ಮಾಡಲು ಜಿಲ್ಲಾಡಳಿತ ಕಸರತ್ತು ನಡೆಸಿದೆ.

ಅಧಿವೇಶನದ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಕಳೆದ ವರ್ಷ (2023) ₹17 ಕೋಟಿ ಅಂದಾಜಿಸಲಾಗಿತ್ತು. ಕೊನೆಗೆ ₹23 ಕೋಟಿ ವೆಚ್ಚವಾಗಿತ್ತು. 2022ರಲ್ಲಿ ₹17.50 ಕೋಟಿ ವೆಚ್ಚವಾಗಿತ್ತು. 2012ರಲ್ಲಿ ನಡೆದ ಮೊದಲ ಅಧಿವೇಶನಕ್ಕೆ ₹7.39 ಕೋಟಿ ವೆಚ್ಚವಾಗಿತ್ತು. ಪ್ರತಿವರ್ಷ ನಿರೀಕ್ಷೆಗೂ ಮೀರಿ ವೆಚ್ಚ ಹೆಚ್ಚುತ್ತಿದೆ.

ಈ ಬಾರಿ ಜಿಲ್ಲಾಡಳಿತ ₹13.8 ಕೋಟಿ ಮತ್ತು ಪೊಲೀಸ್ ಇಲಾಖೆ ₹5.5 ಕೋಟಿ ವೆಚ್ಚ ಮಾಡಲು ಸಿದ್ಧವಾಗಿವೆ. ಇದರೊಂದಿಗೆ ಲೋಕೋಪಯೋಗಿ, ಸಾರಿಗೆ, ಪೊಲೀಸ್, ಹೆಸ್ಕಾಂ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗಳೂ ತಮ್ಮ ಇಲಾಖೆಯ ಅನುದಾನ ಬಳಸಿಕೊಳ್ಳುತ್ತವೆ. ಅಧಿವೇಶನ ಮುಗಿದ ಬಳಿಕ ಅದರ ಲೆಕ್ಕ ಸಿಗಲಿದೆ ಎಂಬುದು ಅಧಿಕಾರಿಗಳ ಮಾತು.

ಎಲ್ಲಕ್ಕಿಂತ ಹೆಚ್ಚು ವೆಚ್ಚ ವಸತಿ ಹಾಗೂ ಊಟಕ್ಕೆ ಆಗುತ್ತದೆ. ಅದರಲ್ಲೇ ಉಳಿತಾಯ ಮಾಡಲು ಅಧಿಕಾರಿಗಳು ಯೋಚಿಸಿದ್ದಾರೆ. ಕಳೆದ ಬಾರಿ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ಊಟಕ್ಕೆ ಪ್ರತಿದಿನ ₹5 ಲಕ್ಷ ಖರ್ಚಾಗಿದೆ.

ಈವರೆಗೆ ₹154.3 ಕೋಟಿ ವೆಚ್ಚ: 2023ರವರೆಗೆ ಒಟ್ಟು 12 ಅಧಿವೇಶನಗಳು ನಡೆದಿದ್ದು, ₹154.3 ಕೋಟಿ ಹಣ ಖರ್ಚಾಗಿದೆ. 2006ರಲ್ಲಿ ಮೊದಲ ಚಳಿಗಾಲದ ಅಧಿವೇಶನ ನಡೆಯಿತು. ಆಗ ಸುವರ್ಣ ವಿಧಾನಸೌಧ ನಿರ್ಮಿಸಿರಲಿಲ್ಲ. ಕೆಎಲ್‌ಇ ಸಂಸ್ಥೆಯ ಡಾ.ಜೀರಗೆ ಸಭಾಂಗಣದಲ್ಲಿ ತಾತ್ಕಾಲಿಕ ಸದನ ನಿರ್ಮಿಸಲಾಗಿತ್ತು. 2009ರಲ್ಲಿ ನಡೆದ ಎರಡನೇ ಅಧಿವೇಶನವೂ ಇಲ್ಲೇ ನಡೆದಿತ್ತು. 2012ರಿಂದ ಸೌಧದಲ್ಲಿ ನಡೆಯುತ್ತಿವೆ.


ಶಾಸಕರ ಭವನದ್ದೇ ಚಿಂತೆ: ಸುವರ್ಣ ವಿಧಾನಸೌಧದ ಬಳಿ ಶಾಸಕರ ಭವನ ನಿರ್ಮಿಸಿಲ್ಲ. ಇದಕ್ಕೆ ಕನಿಷ್ಠ ₹300 ಕೋಟಿ ಬೇಕು ಎಂದು ಅಂದಾಜಿಸಲಾಗಿದೆ. ಇಷ್ಟು ದೊಡ್ಡ ಮೊತ್ತ ಸುರಿದರೂ ಬಳಕೆಯಾಗುವುದು 10 ದಿನ ಮಾತ್ರ. ಹಾಗಾಗಿ, ಇದು ಅವೈಜ್ಞಾನಿಕ ಎಂಬುದು ಕೆಲ ಅಧಿಕಾರಿಗಳ ಅಭಿಪ್ರಾಯ.

ಆದರೆ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, 'ಸಮಯ ಬಂದಾಗ ಬೆಳಗಾವಿ ಎರಡನೇ ರಾಜಧಾನಿಯೂ ಆಗುತ್ತದೆ. ಶಾಸಕರ ಭವನವೂ ನಿರ್ಮಾಣವಾಗುತ್ತದೆ' ಎಂದು ಆಗಾಗ್ಗೆ ಹೇಳುತ್ತಲೇ ಇದ್ದಾರೆ.

ಮುಖ್ಯಮಂತ್ರಿ ಸೇರಿ ಸಚಿವರು, ಶಾಸಕರು, ವಿಧಾನಸಭೆ ಮತ್ತು ವಿಧಾನ ಪರಿಷತ್ ಸಚಿವಾಲಯದ ಅಧಿಕಾರಿಗಳು, ಪತ್ರಕರ್ತರು, ಮಾರ್ಷಲ್‌ಗಳು, ವಾಹನಗಳ ಚಾಲಕರೆಲ್ಲರೂ ಬೆಳಗಾವಿ ನಗರದಲ್ಲೇ ವಾಸ್ತವ್ಯ ಹೂಡಬೇಕು. ಪ್ರತಿದಿನ ಇಲ್ಲಿಂದ ಸೌಧಕ್ಕೆ ಹೋಗಬೇಕು. ಹೀಗಾಗಿ, ವಸತಿಯ ಜತೆಗೆ ಸಾರಿಗೆ ವೆಚ್ಚವೂ ಬೆಳೆಯುತ್ತಿದೆ.



ಚಳಿಗಾಲದ ಅಧಿವೇಶನ ಸಿದ್ಧತೆಗಾಗಿ, ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂದೆ ಕಾರ್ಮಿಕರು ಪುಷ್ಪವನ ಸಿದ್ಧಪಡಿಸುವಲ್ಲಿ ನಿರತರಾಗಿದ್ದರು





ಈ ಸಲ ಜಿಲ್ಲಾಡಳಿತದಿಂದ ₹13.8 ಕೋಟಿ ವೆಚ್ಚ ಮಾಡಲಾಗುತ್ತಿದೆ. ಅವಕಾಶ ಇರುವ ಕಡೆ ವೆಚ್ಚ ತಗ್ಗಿಸಲು ಉಪಾಯ ಮಾಡಲಾಗಿದೆ
ಮೊಹಮ್ಮದ್ ರೋಷನ್,
ಜಿಲ್ಲಾಧಿಕಾರಿ



ಪೊಲೀಸ್ ಇಲಾಖೆ ₹5.5 ಕೋಟಿ ವೆಚ್ಚ ಮಾಡಲಿದೆ. ಇದರಲ್ಲಿ ಸಿಬ್ಬಂದಿ ವಸತಿ, ಊಟ, ಭದ್ರತೆ, ಆರೋಗ್ಯ, ಸಾರಿಗೆ ಎಲ್ಲವೂ ಸೇರಿವೆ
ಯಡಾ ಮಾರ್ಟಿನ್ ಮಾರ್ಬನ್ಯಾಂಗ್,
ಪೊಲೀಸ್ ಕಮಿಷನರ್

ಚಂದ್ರನ ಮೂಲಕ ಬ್ರಹ್ಮಾಂಡದ ಅಧ್ಯಯನ



ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದ ವಿಜ್ಞಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2040ರ ವೇಳೆಗೆ ಚಂದ್ರನ ಅಂಗಳದಲ್ಲಿ ಮಾನವನನ್ನು ಇಳಿಸುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಹತ್ವದ ಯೋಜನೆಗೆ ದೇಶದ ಪ್ರಮುಖ ವಿಜ್ಞಾನ ಸಂಶೋಧನಾ ಸಂಸ್ಥೆಗಳು ಕೈಜೋಡಿಸಿವೆ.

ಚಂದ್ರನನ್ನು ಕೇಂದ್ರವಾಗಿಟ್ಟುಕೊಂಡು ಬ್ರಹ್ಮಾಂಡದ ಅಧ್ಯಯನ ನಡೆಸುವ ಉದ್ದೇಶದಿಂದ ಇಲ್ಲಿನ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಭಾರತದ ಮುಂದಿನ ಚಂದ್ರಯಾನಗಳು ಮತ್ತು ಬ್ರಹ್ಮಾಂಡದ ಅಧ್ಯಯನ ಕುರಿತು ಮೂರು ದಿನಗಳ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ವಿಜ್ಞಾನಿಗಳು, ಖಗೋಳಶಾಸ್ತ್ರಜ್ಞರು ಮತ್ತು ಉದ್ಯಮಗಳ ಪ್ರತಿನಿಧಿಗಳು ಭಾಗವಹಿಸಿ ಮಹತ್ವದ ವಿಷಯಗಳನ್ನು ಚರ್ಚಿಸಿದರು.

'ಚಂದ್ರನ ಮೇಲೆ ಮಾನವನನ್ನು ಕಳುಹಿಸಿ ಅಲ್ಲಿನ ಅಧ್ಯಯನಕ್ಕೆ ಮಾತ್ರ ಸೀಮಿತವಾಗದೆ, ಬ್ರಹ್ಮಾಂಡದ ಬಗ್ಗೆಯೂ ಸಂಶೋಧನೆ ನಡೆಸಿ ಮಾಹಿತಿಗಳನ್ನು ಕಲೆ ಹಾಕಲು ನಿರ್ಧರಿಸಲಾಗಿದೆ. ಭೂಮಿ ಅಥವಾ ಬಾಹ್ಯಾಕಾಶದ ಇತರ ಸ್ಥಳಕ್ಕಿಂತ ಬ್ರಹ್ಮಾಂಡದ ಅಧ್ಯಯನಕ್ಕೆ ಚಂದ್ರನ ಮೇಲಿನ ವಾತಾವರಣವೇ ಅತ್ಯಂತ ಪ್ರಶಸ್ತ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟರು' ಎಂದು ರಾಮನ್ ಸಂಶೋಧನಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಆಸ್ಟ್ರೊನಾಮಿಕಲ್ ಸೊಸೈಟಿ ಆಫ್ ಇಂಡಿಯಾ (ಎಎಸ್‌ಐ) ವಿಚಾರಸಂಕಿರಣವನ್ನು ಹಮ್ಮಿಕೊಂಡಿತ್ತು. ಇದರಲ್ಲಿ, ರಾಮನ್ ಸಂಶೋಧನಾ ಸಂಸ್ಥೆ (ಆರ್‌ಆರ್‌ಐ) ಮತ್ತು ಯು.ಆರ್.ರಾವ್ ಸ್ಯಾಟಿಲೈಟ್ ಸೆಂಟರ್ (ಯುಆರ್‌ಎಸ್‌ಸಿ), ಇಸ್ರೊ ಮತ್ತು ಇತರ ಸಂಸ್ಥೆಗಳ ಸಂಶೋಧಕರೂ ಸೇರಿ 60 ಮಂದಿ ಭಾಗವಹಿಸಿದ್ದರು. ಚಂದ್ರನ ಮೇಲಿಂದ ಬಾಹ್ಯಾಕಾಶದ ಹವಾಮಾನವನ್ನು ಅರ್ಥೈಸುವುದು, ಭವಿಷ್ಯದ ಚಂದ್ರಯಾನಗಳ ಮೂಲಕ ಖಗೋಳದ ಪ್ರಯೋಗಗಳನ್ನು ನಡೆಸುವುದು, ಮುಖ್ಯವಾಗಿ ಅತಿನೇರಳೆ ಮತ್ತು ಕ್ಷ-ಕಿರಣಗಳನ್ನು ಗಮನಿಸುವುದು, ಚಂದ್ರನ ರೇಡಿಯೊ ನಿಶ್ಶಬ್ದತೆ ಬಳಸಿ ಬ್ರಹ್ಮಾಂಡದಲ್ಲಿ ಅನ್ವೇಷಣೆ ನಡೆಸುವುದು, ಉಲ್ಕೆಗಳು ಮತ್ತು ಕಾಸ್ಮಿಕ್ ಕಿರಣಗಳ ಅಧ್ಯಯನ ನಡೆಸುವ ಕುರಿತು ಚರ್ಚೆ ನಡೆದಿದೆ.

ಅಮೆರಿಕದ ಉದ್ಯಮಿ ಜತೆ ರಾಹುಲ್ ಗಾಂಧಿಗೆ ನಂಟು: ಬಿಜೆಪಿ ಸಂಸದ ನಿಶಿಕಾಂತ್ ಆರೋಪ

ದುಬೆ ಹೇಳಿಕೆ: ಕಾಂಗ್ರೆಸ್ ಆಕ್ರೋಶ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಅಮೆರಿಕದ ಉದ್ಯಮಿ ಜಾರ್ಜ್ ಸೊರೊಸ್ ಜತೆ ನಂಟು ಇದೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿದ್ದು, ಲೋಕಸಭೆಯಲ್ಲಿ ಗುರುವಾರ ಕಾಂಗ್ರೆಸ್–ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಯಿತು.

ದುಬೆ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಉದ್ಯಮಿ ಗೌತಮ್ ಅದಾನಿ ಅವರ 'ಮೆಗಾ ಭ್ರಷ್ಟಾಚಾರ'ವನ್ನು ಬಯಲಿಗೆಳೆಯುವವರ ತೇಜೋವಧೆ ಮಾಡುವ ಕೆಲಸವನ್ನು 'ಅದಾನಿ ಏಜೆಂಟ'ರಿಗೆ ವಹಿಸಲಾಗಿದೆ ಎಂದು ತಿರುಗೇಟು ನೀಡಿದೆ.

ದುಬೆ ಆರೋಪಗಳಿಗೆ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಲೋಕಸಭೆ ಕಲಾಪವನ್ನು ಎರಡು ಸಲ ಮುಂದೂಡಲಾಯಿತು. ಹೇಳಿಕೆ ವಾಪಸ್ ಪಡೆದು ದುಬೆ ಅವರು ಕ್ಷಮೆಯಾಚಿಸುವಂತೆ ಮಾಡಬೇಕು ಎಂದು ಕಾಂಗ್ರೆಸ್ ಸದಸ್ಯರು, ಸ್ಪೀಕರ್ ಓಂ ಬಿರ್ಲಾ ಅವರನ್ನು ಒತ್ತಾಯಿಸಿದರು.

ದುಬೆ ಹೇಳಿದ್ದು ಏನು?: ಶೂನ್ಯ ವೇಳೆಯಲ್ಲಿ ಮಾತನಾಡಿದ ದುಬೆ, ಕಾಂಗ್ರೆಸ್ ನೇತೃತ್ವದ ವಿಪಕ್ಷಗಳು ಫ್ರಾನ್ಸ್‌ನ ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಆಧರಿಸಿ ಸಂಸತ್ ಕಲಾಪದ ಹಳಿತಪ್ಪಿಸಲು ಪ್ರಯತ್ನಿಸಿವೆ ಎಂದು ಆರೋಪಿಸಿದರು.

ಅಮೆರಿಕ ಶ್ರೀಮಂತ ಹೂಡಿಕೆದಾರ ಸೊರೊಸ್, ತನಿಖಾ ಪತ್ರಕರ್ತರ ಸಂಘಟನೆಯಾದ 'ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಯೋಜನೆ' (ಒಸಿಸಿಆರ್‌ಪಿ) ಹಾಗೂ ಕಾಂಗ್ರೆಸ್ ಪಕ್ಷ ಪರಸ್ಪರ ಸಂಪರ್ಕ ಸಾಧಿಸಿ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿಗೆ ಮಸಿ ಬಳಿಯಲು ಪ್ರಯತ್ನಿಸಿವೆ ಎಂದು ಹೇಳಿದರು.

ಭಾರತದಲ್ಲಿ ಅಭಿವೃದ್ಧಿಪಡಿಸಿದ ಕೋವಿಡ್ 19 ಲಸಿಕೆ, ಹಿಂಡನ್‌ಬರ್ಗ್ ವರದಿ, ಪೆಗಾಸಸ್ ವಿವಾದ ಸೇರಿದಂತೆ ಒಸಿಸಿಆರ್‌ಪಿ ಪ್ರಕಟಿಸಿದ ವಿವಿಧ ವಿಷಯಗಳನ್ನು ಎತ್ತಿಕೊಂಡು ಸಂಸತ್ ಕಲಾಪಕ್ಕೆ ಅಡ್ಡಿಪಡಿಸಲು ಕಾಂಗ್ರೆಸ್ ಈ ಹಿಂದೆ ಪ್ರಯತ್ನಿಸಿದೆ ಎಂದು ದೂರಿದರು.



ವಿರೋಧ ಪಕ್ಷಗಳ ಸದಸ್ಯರು ಗುರುವಾರ ಸಂಸತ್ ಆವರಣದಲ್ಲಿ ಕಪ್ಪು ಜಾಕೆಟ್ ಧರಿಸಿ ಪ್ರತಿಭಟಿಸಿದರು –ಪಿಟಿಐ ಚಿತ್ರ

ಕಪ್ಪು ಜಾಕೆಟ್ ಧರಿಸಿದ ವಿಪಕ್ಷ ಸದಸ್ಯರು

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಲಂಚ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಬೇಕು ಎಂದು ಆಗ್ರಹಿಸಿ 'ಇಂಡಿಯಾ' ಮೈತ್ರಿಕೂಟದ ಸಂಸದರು ಸಂಸತ್ ಆವರಣದಲ್ಲಿ ಗುರುವಾರ ಕಪ್ಪು ಜಾಕೆಟ್ ಧರಿಸಿ ಪ್ರತಿಭಟನೆ ನಡೆಸಿದರು.

'ಮೋದಿ–ಅದಾನಿ ಏಕ್ ಹೆ', 'ಅದಾನಿ ಸೇಫ್ ಹೆ' (ಮೋದಿ ಮತ್ತು ಅದಾನಿ ಇಬ್ಬರೂ ಒಂದೇ, ಅದಾನಿ ಸುರಕ್ಷಿತರಾಗಿದ್ದಾರೆ) ಎಂಬ ಬರಹ ಇದ್ದ ಬ್ಯಾಜ್ ಅನ್ನು ಜಾಕೆಟ್‌ನಲ್ಲಿ ಪ್ರದರ್ಶಿಸಿದರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಒಳಗೊಂಡಂತೆ ಕಾಂಗ್ರೆಸ್, ಆರ್‌ಜೆಡಿ ಮತ್ತು ಎಡಪಕ್ಷಗಳ ಸಂಸದರು ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಅದಾನಿ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಚರ್ಚೆಯಾಗಬೇಕು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಈ ವಿಷಯದಲ್ಲಿ ಮೌನ ಮುರಿಯಬೇಕು ಎಂದು ರಾಹುಲ್ ಹಾಗೂ ಪ್ರಿಯಾಂಕಾ ಆಗ್ರಹಿಸಿದರು. ವಿರೋಧ ಪಕ್ಷಗಳ ಸಂಸದರು ಸಂಸತ್ ಭವನದ 'ಮಕರ ದ್ವಾರ'ದ ಬಳಿ ಮಂಗಳವಾರ ಮತ್ತು ಬುಧವಾರವೂ ಪ್ರತಿಭಟನೆ ನಡೆಸಿದ್ದರು.

ಸ್ಪೀಕರ್ ಎಚ್ಚರಿಕೆ: ಸಂಸತ್ತಿನಲ್ಲಿ ತ್ರಿವರ್ಣ ಧ್ವಜವನ್ನು ಹೊರತುಪಡಿಸಿ ಯಾವುದೇ ಬ್ಯಾಜ್‌ಗಳನ್ನು ಧರಿಸಬಾರದು ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿಪಕ್ಷಗಳ ಸದಸ್ಯರಿಗೆ ಎಚ್ಚರಿಕೆ ನೀಡಿದರು.

ಸಂಬಿತ್ ವಿರುದ್ಧ ಸ್ಪೀಕರ್‌ಗೆ ಪತ್ರ

ನವದೆಹಲಿ: ರಾಹುಲ್ ಗಾಂಧಿ ವಿರುದ್ಧ 'ಮಾನಹಾನಿಕರ ಭಾಷೆ' ಬಳಸಿದ ಬಿಜೆಪಿ ಸಂಸದ ಸಂಬಿತ್ ಪಾತ್ರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಕೋರಿ ಕಾಂಗ್ರೆಸ್ ಸಂಸದ ಮಣಿಕಂ ಟ್ಯಾಗೋರ್ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

ಪಾತ್ರ ಅವರ ನಡವಳಿಕೆಯು ಸಂಸದರು ಪಾಲಿಸಬೇಕಿರುವ ಸಭ್ಯತೆ ಮತ್ತು ನೈತಿಕತೆಯ 'ಸ್ಪಷ್ಟ ಉಲ್ಲಂಘನೆ' ಎಂದು ಪತ್ರದಲ್ಲಿ ಆರೋಪಿಸಿದ್ದಾರೆ.

ನವದೆಹಲಿಯಲ್ಲಿ ಗುರುವಾರ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ಸಂಸದರಾದ ಸಂಬಿತ್ ಮತ್ತು ಕೆ.ಲಕ್ಷ್ಮಣ್ ಅವರು, 'ಅಮೆರಿಕದ ಉದ್ಯಮಿ ಜಾರ್ಜ್ ಸೊರೊಸ್ ಮತ್ತು ಕೆಲವು ಏಜೆನ್ಸಿಗಳ ಜತೆ ರಾಹುಲ್ ಗಾಂಧಿ ನಂಟು ಹೊಂದಿದ್ದಾರೆ. ಇವರು ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದ್ದರು.

ಪಾತ್ರ ಅವರ ಸುದ್ದಿಗೋಷ್ಠಿಯನ್ನು ಉಲ್ಲೇಖಿಸಿ ನಿಶಿಕಾಂತ್ ದುಬೆ ಅವರು ಸಂಸತ್ತಿನಲ್ಲಿ ರಾಹುಲ್ ವಿರುದ್ಧ ಆರೋಪ ಮಾಡಿದ್ದಾರೆ.

ವಿರೋಧ ಪಕ್ಷಗಳ ಹಲವು ಮುಖಂಡರು ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಕಲಾಪದಲ್ಲಿ ಪ್ರಸ್ತಾಪಿಸಿದ್ದಾರೆ. ಆ ವರದಿಗಳು ಭಾರತದಲ್ಲಿ ಸಂಸತ್ ಅಧಿವೇಶನ ಆರಂಭವಾಗುವುದಕ್ಕೆ ಕೆಲವೇ ದಿನಗಳ ಮುನ್ನ ಪ್ರಕಟಗೊಂಡಿವೆ ಎಂದು ಹೇಳಿದರು.

ದುಬೆ ಅವರು ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಪ್ರಶ್ನೆಗಳನ್ನು ಕೇಳಲು ಮುಂದಾದಾಗ, ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದರು.

ಕಾಂಗ್ರೆಸ್ ಸಂಸದರು ಗದ್ದಲ ಎಬ್ಬಿಸಿದ್ದರಿಂದ ಸ್ಪೀಕರ್, ಕಲಾಪವನ್ನು ಮಧ್ಯಾಹ್ನ 2ರವರೆಗೆ ಮುಂದೂಡಿದರು. ಕಲಾಪ ಪುನರಾರಂಭವಾದಾಗಲೂ ಗದ್ದಲ ನಿಲ್ಲಲಿಲ್ಲ. ಇದರಿಂದ ಕಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಕಾಂಗ್ರೆಸ್ ಪ್ರತಿಭಟನೆ

ದುಬೆ ಅವರು ರಾಹುಲ್ ಗಾಂಧಿ ವಿರುದ್ಧ 'ಅವಹೇಳನಕಾರಿ ಭಾಷೆ' ಬಳಸಿದ್ದನ್ನು ಖಂಡಿಸಿ ಕಾಂಗ್ರೆಸ್ ಸದಸ್ಯರು ಸಂಸತ್ ಭವನದ ಮಕರ ದ್ವಾರದ ಬಳಿ ಪ್ರತಿಭಟನೆ ನಡೆಸಿ, ಘೋಷಣೆಗಳನ್ನು ಕೂಗಿದರು.

'ಸಂಸತ್ತಿನಲ್ಲಿ ಈ ರೀತಿಯ ಅವಹೇಳನಕಾರಿ ಹೇಳಿಕೆಯನ್ನು ಎಂದೂ ಬಳಸಿಲ್ಲ. ರಾಹುಲ್ ಗಾಂಧಿ ಅವರು ಅದಾನಿ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಆರಂಭಿಸಿದ ದಿನದಿಂದಲೂ, ಅದಾನಿ ಏಜೆಂಟ್‌ಗಳು ಅವರನ್ನು ನಿಂದಿಸಲು ಶುರು ಮಾಡಿದ್ದಾರೆ. ಏನೇ ಆದರೂ, ರಾಹುಲ್ ಅವರ ಧನಿ ಅಡಗಿಸಲು ಸಾಧ್ಯವಿಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹೇಳಿದರು.

> **ರಾಹುಲ್ ಗಾಂಧಿ ಅವರು ಅದಾನಿ ವಿರುದ್ಧ ಮಾತನಾಡಿದಾಗಲೆಲ್ಲಾ ಸಂಸತ್ತಿನಲ್ಲಿರುವ 'ಅದಾನಿ ಸ್ಲೀಪರ್ ಸೆಲ್'ಗಳು ಸಕ್ರಿಯಗೊಳ್ಳುತ್ತವೆ**
> **ಗೌರವ್ ಗೊಗೋಯಿ**, ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ

ಸ್ಟಾರ್ಟ್ ಅಪ್ ನಲ್ಲಿ ಕರ್ನಾಟಕ ರಾಜ್ಯ ಹಿಂದುಳಿಯುತ್ತಿದೆ ಎಂದು ಎಚ್ಚರಿಕೆ ನೀಡಿದ : ಪ್ರಶಾಂತ್ ಪ್ರಕಾಶ್

• ರಾಮಯ್ಯ ಎವಲ್ಯೂಟ್ ಕಾರ್ಯಕ್ರಮ • ಸ್ಟಾರ್ಟ್ ಅಫ್ ಅವಾರ್ಡ್ 2024

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ಸ್ಟಾರ್ಟ್ ಅಪ್ ಕೇಂದ್ರವಾಗಿದ್ದ ಬೆಂಗಳೂರು ನವೋದ್ಯಮಿ ಸೃಷ್ಟಿಸುವಲ್ಲಿ ಹಿಂದೆ ಬೀಳುತ್ತಿದ್ದು, ಇದೇ ಅವಕಾಶ ಬಳಕೆ ಮಾಡಿಕೊಂಡ ದೆಹಲಿ ಹೆಚ್ಚಿನ ಸ್ಟಾರ್ಟ್ ಅಪ್ ರೂಪಿಸಿ ಮುಂದೆ ಬರುತ್ತಿದೆ. ಇದನ್ನು ನಮ್ಮ ರಾಜ್ಯದ ನವೋದ್ಯಮಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಕರ್ನಾಟಕ ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಅಧ್ಯಕ್ಷ ಹಾಗೂ ಎಕ್ಸೆಲ್ ಇಂಡಿಯಾದ ಫಂಡಿಂಗ್ ಪಾರ್ಟ್ನರ್ ಪ್ರಶಾಂತ್ ಪ್ರಕಾಶ್ ಎಚ್ಚರಿಕೆ ನೀಡಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ರಾಮಯ್ಯ ಎವಲ್ಯೂಟ್ ಸ್ಟಾರ್ಟ್ ಅಫ್ ಅವಾರ್ಡ್ 2024 ಕಾರ್ಯಕ್ರಮ ದಲ್ಲಿ ಆಯ್ಕೆಯಾದ ಸ್ಟಾರ್ಟ್ ಅಪ್ ಸೃಷ್ಟಿಸಿದವರನ್ನು ಅಭಿನಂದಿಸಿ ಮಾತನಾಡಿದ ಅವರು, 2025 ರ ವೇಳೆಗೆ ದೇಶದಲ್ಲಿ 25-30 ಸ್ಟಾರ್ಟ್ ಅಪ್ ಕಂಪನಿಗಳು ಆರಂಭಿಕ ಸಾರ್ವಜನಿಕ ಕೊಡುಗೆ(ಐಪಿಒ) ಅನ್ನು ಬಿಡುಗಡೆ ಮಾಡುತ್ತಿವೆ. ಇದರಲ್ಲಿ ದೆಹಲಿ ಮೂಲದ 5 ಕಂಪನಿಗಳು ಇವೆ. ಬೇರೆ ರಾಜ್ಯದ ಬೆಳವಣಿಗೆ ನೋಡಿದರೆ, ನಮ್ಮ ರಾಜ್ಯದವರು ಸಮಯ ವ್ಯರ್ಥ ಮಾಡುತ್ತಿದ್ದಾರೆಯೇ ಎನಿಸುತ್ತದೆ. ನಿಮ್ಮಲ್ಲಿರುವ ಹಿಂಜರಿಕೆಯ ಆಲೋಚನೆ ಬಿಟ್ಟು ಮುಂದೆ ಬಂದು ಹೊಸ ಆವಿಷ್ಕಾರವನ್ನು ಮಾಡಿ ತೋರಿಸಿ ಎಂದರು.

ದಿನವಿಡೀ ನಡೆದ ಕಾರ್ಯಕ್ರಮದಲ್ಲಿ ಶ್ರೀ ಕೋದಂಡರಾಮ್ ಮತ್ತು ಶ್ರೀ ಆನಂದರಾಮ್ ಸೇರಿದಂತೆ ಗೋಕುಲ ಎಜುಕೇಶನ್ ಟ್ರಸ್ಟ್‌ನ ಪ್ರಮುಖ ಟ್ರಸ್ಟಿಗಳು ಭಾಗವಹಿಸಿದ್ದರು, ಅವರು ನಾವೀನ್ಯತೆಯನ್ನು ಬೆಳೆಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ತಮ್ಮ ಭಾಷಣದಲ್ಲಿ, ಶ್ರೀ. ಕೋದಂಡರಾಮ್ ಅವರು ಹೇಳಿದರು, "ನಮ್ಮ ದೃಷ್ಟಿಯು ನೆಲದ ಕಲ್ಪನೆಗಳನ್ನು ಪೋಷಿಸುವ ಮತ್ತು ಭಾರತದ ಮುಂದಿನ ಯುನಿಕಾರ್ನ್‌ಗಳ ಅಭಿವೃದ್ಧಿಯನ್ನು ಬೆಂಬಲಿಸುವ ಪರಿಸರ ವ್ಯವಸ್ಥೆಯನ್ನು ರಚಿಸುವುದು. ಈ ಸ್ಟಾರ್ಟ್‌ಅಪ್‌ಗಳಿಗೆ ಅಭಿವೃದ್ಧಿಗೆ ಸಹಾಯ ಮಾಡಲು ಅಗತ್ಯವಾದ ಸಂಪನ್ಮೂಲಗಳು, ಮಾರ್ಗದರ್ಶನ ಮತ್ತು ಧನಸಹಾಯವನ್ನು ರಾಮಯ್ಯ ಎವೊಲ್ಯೂಟ್ ಒದಗಿಸುವುದನ್ನು ಮುಂದುವರಿಸುತ್ತದೆ.



ಸಮರ್ಥ ನಾಗಭೂಷಣಂ, ಸಹ ಸಂಸ್ಥಾಪಕ, ರಾಮಯ್ಯ ಎವೊಲುಟ್, ಎಂ.ಆರ್‌ಆನಂದರಾಮ್, ನಿರ್ದೇಶಕರು, ರಾಮಯ್ಯ ಸಮೂಹ ಸಂಸ್ಥೆಗಳು, ಎಂ.ಆರ್‌ಕೋದಂಡರಾಮ್, ನಿರ್ದೇಶಕರು, ರಾಮಯ್ಯ ಸಮೂಹ ಸಂಸ್ಥೆಗಳು, ಡಾ.ಎಚ್‌ವಿ.ಪಾರ್ಶ್ವನಾಥ್, IAS (ನಿವೃತ್ತ) ಮುಖ್ಯ ಕಾರ್ಯನಿರ್ವಾಹಕ, GEF (Eng. ಮತ್ತು ಸಾಮಾನ್ಯ ವಿಜ್ಞಾನ), ಪ್ರಶಾಂತ್ ಪ್ರಕಾಶ್, ಸ್ಥಾಪಕ ಪಾಲುದಾರ, ACCEL ಇಂಡಿಯಾ, ಡಾ. ಎನ್ ವಿ ಆರ್ ನಾಯ್ಡು, ಪ್ರಾಂಶುಪಾಲರು, ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ

> **ವಿದ್ಯಾರ್ಥಿಗಳು ಮೊದಲು ಕನಸು ಕಾಣಬೇಕು. ಇದನ್ನು ನನಸು ಮಾಡಲು ಶ್ರಮ, ಬದ್ಧತೆ, ಬುದ್ಧಿವಂತಿಕೆಯಿಂದ ಕೆಲಸ ಮಾಡಬೇಕು. ಅಂದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ. ಆವಿಷ್ಕಾರ ಮಾಡುವಾಗ ತಾಳ್ಮೆ ಇರಬೇಕು. ಬರುವ ಒತ್ತಡ ಮತ್ತು ಸಂಕಷ್ಟವನ್ನು ಎದುರಿಸುವ ಧೈರ್ಯ ಇರಬೇಕು'**
> **ಕೋದಂಡ ರಾಮಯ್ಯ,** ವ್ಯವಸ್ಥಾಪಕ ನಿರ್ದೇಶಕರು, ರಾಮಯ್ಯ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್

ರಾಮಯ್ಯ ಎವಲ್ಯೂಟ್ ಸಹ ಸಂಸ್ಥಾಪಕ ಡಾ. ಸಮರ್ಥ ನಾಗಭೂಷಣ್, ನಾವು ಈ ಎವಲ್ಯೂಟ್ ಅನ್ನು 2021 ರಿಂದ ನಡೆಸಿಕೊಂಡು ಬರುತ್ತಿದ್ದೇವೆ. ಇಂದು ಕಂಪನಿಯು ಎರಡು ಪಟ್ಟು ಬೆಳವಣಿಗೆ ಸಾಧಿಸಿದೆ. ನಾವು ಜಾಗತಿಕ ಮಟ್ಟಕ್ಕಿಂತ ಭಾರತ ಅಭಿವೃದ್ಧಿ ಕಾಣುವಂತಹ ಯೋಜನೆಗಳಿಗೆ ಹೆಚ್ಚಿನ ಆರ್ಥಿಕ ಸಹಾಯ ಮಾಡಿದ್ದೇವೆ. ಇಂದು 400 ಅರ್ಜಿಗಳು ಬಂದಿದ್ದವು. ಅಂತಿಮವಾಗಿ 21 ಕಂಪನಿಗಳನ್ನು ಆಯ್ಕೆ ಮಾಡಲಾಗಿದೆ. ಮುಂದಿನ ವರ್ಷಗಳಲ್ಲಿ ಜಾಗತಿಕ ಮಟ್ಟದ ಯೋಜನೆಗಳಿಗೂ ಹೆಚ್ಚಿನ ಸಹಾಯ ಮಾಡುತ್ತವೆ ಎಂದರು.

ಗೋಕುಲ ಎಜುಕೇಷನ್ ಟ್ರಸ್ಟ್ ನ ಟ್ರಸ್ಟಿ ಎಂ.ಆರ್. ಆನಂದ ರಾಮ್, ಆರ್‌ಐಟಿ ಪ್ರಾಂಶುಪಾಲ ಡಾ.ಎನ್.ವಿ.ಆರ್. ನಾಯ್ಡು, ಕಾರ್ಯಕಾರಿ ನಿರ್ದೇಶಕ ಡಾ.ಎಚ್.ವಿ.ಪಾಶ್ವನಾಥ, ಶೈಕ್ಷಣಿಕ ಸಲಹೆಗಾರ ಡಾ.ಕರಿಸಿದ್ದಪ್ಪ, ರಾಮಯ್ಯ ಎವಲ್ಯೂಟ್ ಸಿಇಒ ಡಾ.ಎಂ.ಟಿ.ಅರವಿಂದ ಇತರರು ಇದ್ದರು.

'ಜನರಿಗೆ ಕಾನೂನಿನ ಭಯ ಇಲ್ಲ'

ನವದೆಹಲಿ (ಪಿಟಿಐ): 'ರಸ್ತೆ ಅಪಘಾತ ಪ್ರಕರಣಗಳಲ್ಲಿ ಸಾವುಗಳ ಸಂಖ್ಯೆ ಏರುತ್ತಿದೆ. ಜನರಿಗೆ ಕಾನೂನಿನ ಬಗ್ಗೆ ಭಯ ಅಥವಾ ಗೌರವ ಇಲ್ಲವಾಗಿದೆ' ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಸ್ವತಃ ನಾನೇ ಅಪಘಾತಕ್ಕೆ ಗುರಿಯಾಗಿದ್ದೆ. ಈ ಸಮಸ್ಯೆ ಕುರಿತು ನಾನು ಸೂಕ್ಷ್ಮತೆ ಉಳ್ಳವನಾಗಿದ್ದೇನೆ' ಎಂದರು.

'ಅಪಘಾತಗಳಲ್ಲಿ ಸಾವಿನ ಸಂಖ್ಯೆ ತಗ್ಗಿಸಲು ಸರ್ಕಾರ ಶ್ರಮವಹಿಸುತ್ತಿದೆ. ರಸ್ತೆ ನಿರ್ವಹಣೆ, ವಾಹನಗಳ ನಿರ್ವಹಣೆ, ಕಾನೂನು ಜಾರಿ ಮತ್ತು ಜನ ಜಾಗೃತಿಯಿಂದ ಮಾತ್ರ ಇದು ಸಾಧ್ಯ' ಎಂದು ಹೇಳಿದರು.

'ಈ ಸಮಾಜದ ಅತಿದೊಡ್ಡ ಸಮಸ್ಯೆ ಎಂದರೆ ಕಾನೂನಿನ ಬಗ್ಗೆ ಗೌರವ ಅಥವಾ ಭೀತಿ ಇಲ್ಲದಿರುವುದು. ಹೆಲ್ಮೆಟ್ ಧರಿಸುವುದಿಲ್ಲ, ರೆಡ್ ಸಿಗ್ನಲ್ ಕಂಡರೂ ವಾಹನ ನಿಲ್ಲಿಸುವುದಿಲ್ಲ' ಎಂದು ಹೇಳಿದರು.

'ಹೆಲ್ಮೆಟ್ ಧರಿಸದ ಕಾರಣಕ್ಕೆ 30 ಸಾವಿರ ಜನರು ಸತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಪ್ರತಿಪಕ್ಷದ ನಾಯಕನಾಗಿದ್ದಾಗ ನಾನೇ ಸ್ವತಃ ಅಪಘಾತಕ್ಕೆ ಗುರಿಯಾಗಿದ್ದೆ. ಕಾಲಿಗೆ ನಾಲ್ಕು ಕಡೆ ತೀವ್ರ ಪೆಟ್ಟಾಗಿತ್ತು' ಎಂದು ಗಡ್ಕರಿ ಹೇಳಿದರು.

'ರಸ್ತೆ ಸಂಚಾರ ನಿಯಮಗಳನ್ನು ಪಾಲಿಸದ, ಅನುಷ್ಠಾನಗೊಳ್ಳದ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ನಾವು ದಂಡದ ಮೊತ್ತ ಹೆಚ್ಚಿಸಿದ್ದೇವೆ. ಆದರೂ, ಜನರು ಸಂಚಾರ ನಿಯಮಗಳನ್ನು ಪಾಲಿಸುತ್ತಿಲ್ಲ' ಎಂದು ನಿತಿನ್ ಗಡ್ಕರಿ ಅಭಿಪ್ರಾಯಪಟ್ಟರು.



> **ಅಪಘಾತಗಳ ನಿಯಂತ್ರಣಕ್ಕಾಗಿ ಜನರ ಸಹಕಾರ ಹೆಚ್ಚು ಅಗತ್ಯ. ಸಾರ್ವಜನಿಕರು, ಮಾಧ್ಯಮಗಳ ಸಹಕಾರವಿಲ್ಲದೆ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಕಷ್ಟ**
> **ನಿತಿನ್ ಗಡ್ಕರಿ,** ಕೇಂದ್ರ ಭೂಸಾರಿಗೆ ಸಚಿವ

ಅಂಕಿ ಅಂಶಗಳು

30,000 ಹೆಲ್ಮೆಟ್ ಧರಿಸದ ಕಾರಣಕ್ಕೆ ಮೃತಪಟ್ಟವರ ಸಂಖ್ಯೆ

1.68 ಲಕ್ಷ ಈ ವರ್ಷ ರಸ್ತೆ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ

₹ 40,000 ಕೋಟಿ ಅಪಘಾತ ವಲಯಗಳಲ್ಲಿ ಮುಂಜಾಗ್ರತೆಗೆ ವ್ಯಯಿಸುವ ಮೊತ್ತ

ಸೆಂಗರ್‌ಗೆ ಮಧ್ಯಂತರ ಜಾಮೀನು



ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್‌ಗೆ ವೈದ್ಯಕೀಯ ಕಾರಣಗಳಿಗಾಗಿ ದೆಹಲಿ ಹೈಕೋರ್ಟ್ ಎರಡು ವಾರಗಳ ಮಧ್ಯಂತರ ಜಾಮೀನು ನೀಡಿದೆ.

'ದೆಹಲಿಯ ಏಮ್ಸ್‌ಗೆ ದಾಖಲಾಗಬೇಕು' ಎಂದು ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಹಾಗೂ ಅಮಿತ್ ಶರ್ಮಾ ಅವರಿದ್ದ ಪೀಠ ಹೇಳಿದೆ. ಕುಲದೀಪ್ ಆರೋಗ್ಯ ಸ್ಥಿತಿಯ ಕುರಿತು ವರದಿ ನೀಡುವಂತೆ ನ್ಯಾಯಾಲಯ ಏಮ್ಸ್‌ಗೆ ಆದೇಶಿಸಿದೆ. ಮುಂದಿನ ವಿಚಾರಣೆಯನ್ನು ಡಿ.20ಕ್ಕೆ ಮುಂದೂಡಲಾಗಿದೆ.

ಅಪರಾಧಿ ಪತ್ತೆ ಆದೇಶ ರದ್ದು

ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣವೊಂದರಲ್ಲಿ ಅಪರಾಧಿ ಎಂದು ನ್ಯಾಯಾಲಯ ಘೋಷಿಸಿದ ನಂತರ ತಲೆಮರೆಸಿಕೊಂಡಿರುವ ತಿಮೊತಿ ಎಲ್. ಚಾಂಗ್‌ಸಾಂಗ್ ಎಂಬುವನನ್ನು ಪತ್ತೆ ಮಾಡುವಂತೆ ಮಣಿಪುರ ಹೈಕೋರ್ಟ್, ಸಿಬಿಐಗೆ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಪಡಿಸಿದೆ.

ಮಣಿಪುರ ಹೈಕೋರ್ಟ್‌ನ ಆದೇಶವು ಅನಗತ್ಯವಾಗಿತ್ತು ಎಂದು ಹೇಳಿರುವ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ಪೀಠವು, ಸಿಬಿಐ ಅಧಿಕಾರಿಗಳನ್ನು ಈ ಹೊಣೆಯಿಂದ ಮುಕ್ತಗೊಳಿಸಿದೆ.

ಈ ವ್ಯಕ್ತಿಯನ್ನು ಪತ್ತೆ ಮಾಡುವ ಕೆಲಸವನ್ನು ಮಣಿಪುರ ಪೊಲೀಸರು ಈಗಾಗಲೇ ಕೈಗೆತ್ತಿಕೊಂಡಿದ್ದಾರೆ ಎಂದು ಸಿಬಿಐ, ಮಣಿಪುರ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

'ರಾಜ್ಯ ಸರ್ಕಾರವು ಅಪರಾಧಿಯನ್ನು ಪತ್ತೆ ಮಾಡಲು ವಿಶೇಷ ತಂಡವೊಂದನ್ನು ರಚಿಸಿದೆ. ಹೀಗಾಗಿ, ಹೈಕೋರ್ಟ್ ಆದೇಶ ಅನಗತ್ಯವಾಗಿತ್ತು. ಅಪರಾಧಿಯನ್ನು ಪತ್ತೆ ಮಾಡಲು ರಾಜ್ಯ ಸರ್ಕಾರವು ಎಲ್ಲ ಪ್ರಯತ್ನ ನಡೆಸಬೇಕು' ಎಂದು ಪೀಠವು ಹೇಳಿದೆ.

ಒಂದು ವೇಳೆ ಮಣಿಪುರ ಸರ್ಕಾರವು ಕೇಂದ್ರ ಗೃಹ ಸಚಿವಾಲಯಕ್ಕೆ ಮನವಿ ಸಲ್ಲಿಸಿದಲ್ಲಿ, ಕೇಂದ್ರವು ಎಲ್ಲ ಸಹಕಾರ ಒದಗಿಸಬೇಕು ಎಂದು ಸೂಚಿಸಿದೆ.



'ಸುಪ್ರೀಂ' ನ್ಯಾಯಮೂರ್ತಿಯಾಗಿ ಮನಮೋಹನ್ ಪ್ರಮಾಣ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಮನಮೋಹನ್ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಪ್ರಮಾಣವಚನ ಬೋಧಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಒಟ್ಟು ಹುದ್ದೆಗಳ ಸಂಖ್ಯೆ 34 ಇದ್ದು ಇದೀಗ ಸಿಜೆಐ ಸೇರಿ ನ್ಯಾಯಮೂರ್ತಿಗಳ ಸಂಖ್ಯೆ 33ಕ್ಕೆ ಏರಿದೆ. ಒಂದು ಸ್ಥಾನ ಖಾಲಿ ಇದೆ.

61 ವರ್ಷದ ಮನಮೋಹನ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯನ್ನಾಗಿ ನೇಮಿಸುವಂತೆ ನ.28ರಂದು ಕೊಲಿಜಿಯಂ ಶಿಫಾರಸು ಮಾಡಿತ್ತು. ಡಿ.3ರಂದು ಮನಮೋಹನ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿತ್ತು.

2008ರ ಮಾ.13ರಂದು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡ ಮನಮೋಹನ್ ಅವರು, 2024ರ ಸೆ.29ರಿಂದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.



ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಜೆಐ ಸಂಜೀವ್ ಖನ್ನಾ (ಎಡ) ಅವರು ಮನಮೋಹನ್ ಅವರಿಗೆ ಪ್ರಮಾಣವಚನ ಬೋಧಿಸಿದರು –ಪಿಟಿಐ ಚಿತ್ರ

ಮಾಜಿ ಸರಪಂಚರ ಹತ್ಯೆಗೈದ ನಕ್ಸಲರು

ಬಿಜಾಪುರ (ಛತ್ತೀಸಗಢ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಎರಡು ಪ್ರತ್ಯೇಕ ಘಟನೆಗಳಲ್ಲಿ ಗ್ರಾಮ ಪಂಚಾಯಿತಿಯ ಇಬ್ಬರು ಮಾಜಿ ಅಧ್ಯಕ್ಷರನ್ನು ನಕ್ಸಲರು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಬುಧವಾರ ಸಂಜೆ ನೈಮೇಡ್ ಪ್ರದೇಶದಿಂದ ಸುಖ್‌ರಾಮ್ ಅವ್ಲಾಮ್ ಅವರನ್ನು ಅಪಹರಿಸಿದ್ದ ನಕ್ಸಲರು, ಅವರನ್ನು ಹತ್ಯೆ ಮಾಡಿ ಶವವನ್ನು ರಾತ್ರಿ ರಸ್ತೆ ಬದಿ ಎಸೆದು ಹೋಗಿದ್ದರು.

ಇದೇ ರೀತಿ ಸುಕ್ಕು ಪಾರ್ಸ ಅವರನ್ನು ಬಿರಿಯಭೂಮಿ ಗ್ರಾಮದಿಂದ ಅಪಹರಿಸಿದ್ದ ನಕ್ಸಲರು ಬುಧವಾರ ಹತ್ಯೆ ಮಾಡಿ, ಶವವನ್ನು ಗ್ರಾಮದ ಬಳಿ ಎಸೆದು ಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. 'ಪೊಲೀಸರಿಗೆ ಸಹಕರಿಸುತ್ತಿದ್ದ ಕಾರಣಕ್ಕೆ ಅವ್ಲಾಮ್‌ನನ್ನು ಹತ್ಯೆ ಮಾಡಿದ್ದೇವೆ' ಎಂದು ಗಂಗಲೂರು ಪ್ರದೇಶ ನಕ್ಸಲ್ ಸಂಘಟನೆಯು ಭಿತ್ತಿಪತ್ರದ ಮೂಲಕ ತಿಳಿಸಿದೆ.

ಬಿಜೆಪಿಯ ಸಕ್ರಿಯ ಕಾರ್ಯಕರ್ತನಾಗಿದ್ದ ಕಾರಣಕ್ಕೆ ಸುಕ್ಕು ಪಾರ್ಸ ಅವರನ್ನು ಹತ್ಯೆ ಮಾಡಿರುವುದಾಗಿ ಭೈರಂಗಢ ಪ್ರದೇಶ ನಕ್ಸಲ್ ಸಂಘಟನೆ ಹೇಳಿಕೊಂಡಿದೆ. ಪಾರ್ಸ ಶವದ ಬಳಿ ಭಿತ್ತಿ ಪತ್ರ ದೊರೆತಿದೆ ಎಂದು ಪೊಲೀಸರು ಹೇಳಿದರು. 'ಗ್ರಾಮದ ಬಿಜೆಪಿ ಕಾರ್ಯಕರ್ತರು ಪಕ್ಷವನ್ನು ಬಿಡದಿದ್ದರೆ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ನಕ್ಸಲರು ಬೆದರಿಕೆ ಹಾಕಿದ್ದಾರೆ. ಎರಡು ಪ್ರದೇಶಗಳಲ್ಲಿ ನಕ್ಸಲರ ಪತ್ತೆಗಾಗಿ ತೀವ್ರ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಿ'

ನವದೆಹಲಿ: ಮೈಸೂರು ಜಿಲ್ಲೆಯ ಹಿನಕಲ್ ಗ್ರಾಮದಲ್ಲಿ ವಿಜಯನಗರ ಟೌನ್‌ಶಿಪ್ ನಿರ್ಮಾಣಕ್ಕಾಗಿ 1986ರಲ್ಲಿ ಸ್ವಾಧೀನಪಡಿಸಿಕೊಂಡ ಎರಡು ಎಕರೆ ಜಾಗದ ಮಾರುಕಟ್ಟೆ ಮೌಲ್ಯವನ್ನು ಪರಿಹಾರವಾಗಿ ಅದರ ಮಾಲೀಕರಿಗೆ ನೀಡಬೇಕು ಎಂದು ಸುಪ್ರೀಂ ಕೋರ್ಟ್, ಕರ್ನಾಟಕ ಸರ್ಕಾರಕ್ಕೆ ಹೇಳಿದೆ.

ಭೂಸ್ವಾಧೀನದ ಪರಿಹಾರ ಮೊತ್ತವನ್ನು ಇಷ್ಟು ದೀರ್ಘ ಅವಧಿಯವರೆಗೆ ತಡೆಹಿಡಿಯುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾಂ ಅವರಿದ್ದ ಪೀಠವು ಹೇಳಿತು. ದೀರ್ಘ ಕಾಲದವರೆಗೆ ಭೂಮಾಲೀಕರಿಗೆ ಪರಿಹಾರ ನಿರಾಕರಿಸುವುದು ಸಂವಿಧಾನದ 300ಎ ವಿಧಿ (ಆಸ್ತಿಯ ಹಕ್ಕು) ಉಲ್ಲಂಘನೆಯಾಗಿದೆ ಎಂದಿತು.

ಮೈಸೂರು ಜಿಲ್ಲೆಯಲ್ಲಿ ಸರ್ಕಾರ ಸ್ವಾಧೀನಪಡಿಸಿಕೊಂಡ ಜಮೀನಿನ ಪರಿಹಾರಕ್ಕಾಗಿ ಕಾಯುತ್ತಿದ್ದ ಭೂ ಮಾಲೀಕರಾದ ಜಯಲಕ್ಷ್ಮಮ್ಮ ಹಾಗೂ ಇತರರ ಪರ ವಾದ ಮಂಡಿಸಿದ ಹಿರಿಯ ವಕೀಲ ಆನಂದ್ ಸಂಜಯ್ ಎಂ. ನೂಲಿ ಅವರ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಿತು.

ಪರಿಹಾರ ತಡೆಹಿಡಿಯುವಿಕೆಯನ್ನು ಸಮರ್ಥಿಸಲು ಕಾನೂನಿನಲ್ಲಿರುವ ಯಾವುದೇ ಕಾರಣಗಳನ್ನು ಮುಂದಿಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಪೀಠ ಅಭಿಪ್ರಾಯಪಟ್ಟಿತು.

2019ರ ಜೂನ್ 1ರಂದು ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯದ ಪ್ರಕಾರ ಭೂಮಾಲೀಕರಿಗೆ ಪರಿಹಾರ ನೀಡುವಂತೆ ವಿಶೇಷ ಭೂಸ್ವಾಧೀನ ಅಧಿಕಾರಿಗೆ ಆದೇಶಿಸಿತು.



ಮೆರವಣಿಗೆ ಸಿಖ್ಖರ ಒಂಬತ್ತನೇ ಗುರು, ಗುರು ತೇಜ್ ಬಹದ್ದೂರ್ ಅವರ ಹುತಾತ್ಮ ದಿನದ ಮುನ್ನಾದಿನವಾದ ಗುರುವಾರ ಸಿಖ್ ಸಮುದಾಯದವರು ಅಮೃತಸರದಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಮುಸ್ಲಿಂ ವೈದ್ಯರಿಗೆ ಮನೆ ಮಾರಾಟ ಖಂಡಿಸಿ ಪ್ರತಿಭಟನೆ

ಮೊರಾದಾಬಾದ್ (ಉತ್ತರ ಪ್ರದೇಶ) (ಪಿಟಿಐ): ಹಿಂದೂ ಧರ್ಮದ ವೈದ್ಯರೊಬ್ಬರು ಮುಸ್ಲಿಂ ಧರ್ಮದ ವೈದ್ಯರೊಬ್ಬರಿಗೆ ತಮ್ಮ ಮನೆ ಮಾರಾಟ ಮಾಡಿದ್ದನ್ನು ವಿರೋಧಿಸಿ 'ಟಿಡಿಐ ಸೊಸೈಟಿ'ಯ ನಿವಾಸಿಗಳು ಪ್ರತಿಭಟನೆ ನಡೆಸಿದ್ದಾರೆ.

ಡಾ.ಅಶೋಕ್ ಬಜಾಜ್ ಅವರು ಡಾ.ಇಕ್ರಾ ಚೌಧರಿ ಅವರಿಗೆ ತಮ್ಮ ಮನೆ ಮಾರಾಟ ಮಾಡಿದ್ದಾರೆ. 'ಅಶೋಕ್ ಬಜಾಜ್ ಅಪ್ನಾ ಮಕಾನ್ ವಾಪಸ್ ಲೋ' (ಅಶೋಕ್ ಬಜಾಜ್ ಅವರೇ ತಮ್ಮ ಮನೆಯನ್ನು ವಾಪಸ್ ಪಡೆಯಿರಿ) ಎಂಬ ಬ್ಯಾನರ್ ಹಿಡಿದು ಸೊಸೈಟಿಯ ನಿವಾಸಿಗಳು ಪ್ರತಿಭಟನೆ ನಡೆಸಿದ್ದಾರೆ.

'ಮಾರಾಟ ಮಾಡಿದ ಮನೆಯು ದೇವಸ್ಥಾನಕ್ಕೆ ಹತ್ತಿರದಲ್ಲಿದೆ. ಜೊತೆಗೆ, ಈ ಸೊಸೈಟಿ ಅಡಿ ಸುಮಾರು 400ಕ್ಕೂ ಹೆಚ್ಚು ಹಿಂದೂ ಕುಟುಂಬಗಳು ಇವೆ. ಬೇರೆ ಧರ್ಮದವರು ಇಲ್ಲಿ ಬಂದು ಇರುವುದು ನಮಗೆ ಇಷ್ಟವಿಲ್ಲ' ಎಂದು ಪ್ರತಿಭಟನಕಾರರು ಹೇಳಿದರು.

'ಬೇರೆ ಧರ್ಮದವರು ಬಂದು ವಾಸ ಮಾಡಲು ಆರಂಭಿಸಿದರೆ, ಇಲ್ಲಿನ ವಾತಾವರಣವೇ ಬದಲಾಗಿ ಬಿಡುತ್ತದೆ. ಅನಾವಶ್ಯಕವಾಗಿ ಹಲವು ಬದಲಾವಣೆ ಗಳಾಗುತ್ತವೆ. ನಿಧಾನವಾಗಿ ಬೇರೆ ಸಮುದಾಯದವರು ಬಂದು ವಾಸಿಸಲು ಆರಂಭಿಸುತ್ತಾರೆ. ನಂತರ ಹಿಂದೂಗಳು ಇಲ್ಲಿಂದ ಹೊರಹೋಗುತ್ತಾರೆ' ಎಂದರು.



ಸೊಸೈಟಿಯ ಅಧ್ಯಕ್ಷ ಅಮಿತ್ ವರ್ಮಾ ಅವರೂ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಡಾ.ಅಶೋಕ್ ಅವರಾಗಲಿ, ಡಾ.ಇಕ್ರಾ ಅವರಾಗಲಿ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

> **ಮುಸ್ಲಿಂ ಧರ್ಮದವರೊಬ್ಬರಿಗೆ ಮನೆಯನ್ನು ಮಾರಾಟ ಮಾಡಿದ ಸಂಬಂಧ 'ಟಿಡಿಐ ಸೊಸೈಟಿ'ಯ ನಿವಾಸಿಗಳು ದೂರು ನೀಡಿದ್ದಾರೆ. ಸಂಬಂಧಪಟ್ಟವರ ಜೊತೆಗೆ ಮಾತುಕತೆ ನಡೆಸುತ್ತಿದ್ದೇವೆ. ಈ ಸಮಸ್ಯೆಗೆ ಒಮ್ಮತದ ಮೂಲಕ ಪರಿಹಾರವೊಂದನ್ನು ಕಂಡುಹಿಡಿಯಲಿದ್ದೇವೆ**
> **ಅನುಜ್ ಕುಮಾರ್ ಸಿಂಗ್,** ಮೊರಾದಾಬಾದ್ ಜಿಲ್ಲಾ ಮ್ಯಾಜಿಸ್ಟ್ರೇಟರ್

ಮುರುಗನ್ ವಿರುದ್ಧದ ಮೊಕದ್ದಮೆ ರದ್ದು

ನವದೆಹಲಿ (ಪಿಟಿಐ): 2020ರ ಡಿಸೆಂಬರ್‌ನಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಕೇಂದ್ರ ಸಚಿವ ಎಲ್. ಮುರುಗನ್ ಅವರ ವಿರುದ್ಧ ಚೆನ್ನೈನ ಮುರಸೋಳಿ ಟ್ರಸ್ಟ್ ದಾಖಲಿಸಿದ್ದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಪಡಿಸಿದೆ.

ಟ್ರಸ್ಟ್‌ನ ಪ್ರತಿಷ್ಠೆಗೆ ಧಕ್ಕೆ ತರುವ ಉದ್ದೇಶವು ಮುರುಗನ್ ಅವರಿಗೆ ಇರಲಿಲ್ಲ ಎಂದು ಅವರ ಪರ ವಕೀಲರು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠಕ್ಕೆ ಸ್ಪಷ್ಟಪಡಿಸಿದರು. ಈ ಹೇಳಿಕೆಯನ್ನು ಆಲಿಸಿದ ಪೀಠವು, ಮೊಕದ್ದಮೆಯನ್ನು ರದ್ದುಪಡಿಸಿತು.

ಟ್ರಸ್ಟ್‌ಗೆ ಹಾನಿ ಉಂಟುಮಾಡುವ ಉದ್ದೇಶ ತಮಗೆ ಇರಲಿಲ್ಲ ಎಂಬುದನ್ನು ಮುರುಗನ್ ಅವರು ಸ್ಪಷ್ಟಪಡಿಸಿರುವ ಕಾರಣ, ಮಾನನಷ್ಟ ಮೊಕದ್ದಮೆಯನ್ನು ಮುಂದುವರಿಸುವ ಉದ್ದೇಶ ತಮಗೆ ಇಲ್ಲ ಎಂದು ಟ್ರಸ್ಟ್ ಪರ ವಕೀಲರು ಬಹಳ ಘನತೆಯಿಂದ ಹೇಳಿದ್ದಾರೆ ಎಂಬುದನ್ನು ಪೀಠವು ದಾಖಲಿಸಿದೆ.



'ಪ್ರತಿವಾದಿ ಟ್ರಸ್ಟ್‌ನವರು ತೋರಿದ ಘನತೆಗೆ ನಮ್ಮ ಮೆಚ್ಚುಗೆಯನ್ನು ದಾಖಲಿಸುತ್ತಿದ್ದೇವೆ' ಎಂದು ಪೀಠವು ಹೇಳಿದೆ.

ಮಾನನಷ್ಟ ಮೊಕದ್ದಮೆಯನ್ನು ರದ್ದುಪಡಿಸಲು ನಿರಾಕರಿಸಿದ ಮದ್ರಾಸ್ ಹೈಕೋರ್ಟ್‌ನ ಕ್ರಮವನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದೆ. ಜೊತೆಗೆ, ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯನ್ನು ರದ್ದುಪಡಿಸಿದೆ.

ಹೈದರಾಬಾದ್‌ನ ಚಿತ್ರಮಂದಿರದಲ್ಲಿ ನಡೆದ ದುರಂತ

ಅಲ್ಲು ನೋಡಲು ನೂಕುನುಗ್ಗಲು: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ಪ್ರಸಿದ್ಧ ಸಂಧ್ಯಾ ಚಿತ್ರಮಂದಿರದಲ್ಲಿ ಬುಧವಾರ ರಾತ್ರಿ ನಡೆದ ನಟ ಅಲ್ಲು ಅರ್ಜುನ್ ನಟನೆಯ 'ಪುಷ್ಪ 2: ದಿ ರೂಲ್' ಸಿನಿಮಾ ಪ್ರದರ್ಶನದ ವೇಳೆ ದುರ್ಘಟನೆ ವೊಂದು ನಡೆದಿದ್ದು, 39 ವರ್ಷದ ರೇವತಿ ಮೃತಪಟ್ಟಿದ್ದಾರೆ. ಆಕೆಯ 8 ವರ್ಷದ ಮಗ ಶ್ರೀತೇಜ್‌ನ ಆರೋಗ್ಯ ಸ್ಥಿತಿ ಗಂಭೀರವಾಗಿದೆ.



ಅಲ್ಲು ಅರ್ಜುನ್

ರೇವತಿ ಅವರು ಪತಿ ಹಾಗೂ ತಮ್ಮ ಇಬ್ಬರು ಮಕ್ಕಳೊಂದಿಗೆ ಸಿನಿಮಾ ವೀಕ್ಷಿಸಲು ಬಂದಿದ್ದರು. ಚಿತ್ರಮಂದಿರದಲ್ಲಿ ನಟನ ಅಭಿಮಾನಿಗಳು ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಅಭಿಮಾನಿಗಳ ಜೊತೆಯಲ್ಲಿ ಸಿನಿಮಾ ವೀಕ್ಷಿಸಲು ಅಲ್ಲು ಅರ್ಜುನ್ ಚಿತ್ರಮಂದಿರಕ್ಕೆ ಬಂದಿದ್ದರು. ನಟನನ್ನು ನೋಡಲು ಚಿತ್ರಮಂದಿರದೊಳಗೆ ನೂಕುನುಗ್ಗಲಿನ ಸ್ಥಿತಿ ನಿರ್ಮಾಣವಾಯಿತು.

'ಚಿತ್ರ ವೀಕ್ಷಣೆಗಾಗಿ ಚಿತ್ರಮಂದಿರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರೂ ನೂಕುನುಗ್ಗಲು ಆಗಲಿಲ್ಲ. ಆದರೆ, ಅಲ್ಲು ಅರ್ಜುನ್ ಅವರು ಬರುತ್ತಿದ್ದಂತೆ ಪರಿಸ್ಥಿತಿ ಬದಲಾಯಿತು. ಪತ್ನಿ ಹಾಗೂ ಇಬ್ಬರು ಮಕ್ಕಳು ಮೊದಲೇ ಚಿತ್ರಮಂದಿರದ ಒಳಗಿದ್ದರು. ಜನ ಒಳಗೆ ನುಗ್ಗುತ್ತಿದ್ದಂತೆಯೇ ಅವರಿಗೆ ಉಸಿರುಗಟ್ಟಿದೆ' ಎಂದು ರೇವತಿ ಅವರ ಪತಿ ಭಾಸ್ಕರ್ ಹೇಳಿದರು. ಪ್ರಜ್ಞೆತಪ್ಪಿ ಬಿದ್ದ ಮಹಿಳೆ ಹಾಗೂ ಮಗುವಿಗೆ ಪೊಲೀಸರು ತಕ್ಷಣದಲ್ಲಿಯೇ ಸಿಪಿಆರ್ ಮಾಡಿ ಪ್ರಥಮ ಚಿಕಿತ್ಸೆ ನೀಡಿದರು. ಬಳಿಕ ತೇಜ್‌ಗೆ ಎಚ್ಚರವಾಯಿತು. ನಂತರ ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ರೇವತಿ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಭಾಸ್ಕರ್ ಅವರಿಗೆ ಇತ್ತೀಚೆಗಷ್ಟೇ ಯಕೃತ್ ಕಸಿ ಚಿಕಿತ್ಸೆ ಆಗಿತ್ತು. ರೇವತಿ ಅವರೇ ಯಕೃತ್ ದಾನ ಮಾಡಿದ್ದರು. ಭಾಸ್ಕರ್ ಅವರು ಈಗಷ್ಟೇ ಗುಣಮುಖರಾಗುತ್ತಿದ್ದು, ನಿರುದ್ಯೋಗಿಯಾಗಿದ್ದಾರೆ.

ಮಹಿಳೆಯ ಕುಟುಂಬಸ್ಥರು ನೀಡಿದ ದೂರಿನ ಆಧಾರದಲ್ಲಿ ಅಲ್ಲು ಅರ್ಜುನ್, ಅವರ ಭದ್ರತಾ ತಂಡ ಮತ್ತು ಚಿತ್ರಮಂದಿರದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

> **ನಮ್ಮ ಮಗ ಅಲ್ಲು ಅರ್ಜುನ್ ಅವರ ದೊಡ್ಡ ಅಭಿಮಾನಿ. ಇವನಿಗಾಗಿಯೇ ಸಿನಿಮಾ ನೋಡಲು ಬಂದಿದ್ದೆವು. ಚಿತ್ರಮಂದಿರದ ವಿರುದ್ಧ ಕ್ರಮ ಕೈಗೊಳ್ಳಿ**
> **ಭಾಸ್ಕರ್,** ಮೃತ ರೇವತಿ ಪತಿ

> **ಚಿತ್ರಮಂದಿರಕ್ಕೆ ಭೇಟಿ ನೀಡುವ ಕುರಿತು ಸಿನಿಮಾ ತಂಡ ಮುಂಚಿತವಾಗಿ ಮಾಹಿತಿ ನೀಡಿರಲಿಲ್ಲ. ಚಿತ್ರಮಂದಿರದ ಆಡಳಿತವು ಯಾವುದೇ ಸಿದ್ಧತೆ ಮಾಡಿಕೊಂಡಿರಲಿಲ್ಲ**
> ಪೊಲೀಸರ ಹೇಳಿಕೆ

> **ಘಟನೆಯಿಂದ ನೋವಾಗಿದೆ. ರೇವತಿ ಅವರ ಕುಟುಂಬದವರ ಜೊತೆ ನಾವಿದ್ದೇವೆ. ನಮ್ಮ ಕೈಯಲ್ಲಾದ ಎಲ್ಲ ಸಹಾಯವನ್ನೂ ಮಾಡುತ್ತೇವೆ**
> **ಮೈತ್ರಿ ಮೂವಿ ಮೇಕರ್ಸ್,** 'ಪುಷ್ಪಾ 2: ದಿ ರೂಲ್' ಸಿನಿಮಾದ ನಿರ್ಮಾಣ ಸಂಸ್ಥೆ

ಹಡಗಿನಲ್ಲಿದ್ದ 12 ಸಿಬ್ಬಂದಿ ರಕ್ಷಣೆ

ಪೋರಬಂದರ್ (ಪಿಟಿಐ): ಉತ್ತರ ಹಿಂದೂ ಮಹಾಸಾಗರದಲ್ಲಿ ಮುಳುಗುವ ಸ್ಥಿತಿಯಲ್ಲಿದ್ದ ಸರಕುಸಾಗಣೆ ಹಡಗಿನಲ್ಲಿದ್ದ 12 ಸಿಬ್ಬಂದಿಯನ್ನು ಭಾರತೀಯ ಕರಾವಳಿ ರಕ್ಷಣಾಪಡೆ ಸಿಬ್ಬಂದಿ ರಕ್ಷಿಸಿದ್ದಾರೆ.

'ಭಾರತೀಯ ಕರಾವಳಿ ರಕ್ಷಣಾ ಪಡೆ ಮತ್ತು ಪಾಕಿಸ್ತಾನ ಸಮುದ್ರಮಾರ್ಗ ರಕ್ಷಣಾ ಸಂಸ್ಥೆ (ಪಿಎಂಎಸ್‌ಎ) ಜಂಟಿಯಾಗಿ ಈ ರಕ್ಷಣಾ ಕಾರ್ಯವನ್ನು ಕೈಗೊಂಡಿದ್ದವು. ಮಾನವೀಯ ನೆಲೆಯ ಈ ಕಾರ್ಯದಲ್ಲಿ ಉಭಯ ದೇಶಗಳ ಸಿಬ್ಬಂದಿ ನಡುವೆ ಕಾರ್ಯಾಚರಣೆಯುದ್ದಕ್ಕೂ ಉತ್ತಮ ಸಂವಹನ ಇತ್ತು' ಎಂದು ಹೇಳಿಕೆ ತಿಳಿಸಿದೆ.

'ಎಂಎಸ್‌ವಿ ಎಐ ಪಿರನ್‌ಪಿರ್' ಹೆಸರಿನ ಹಡಗು ಗುಜರಾತ್‌ನ ಪೋರಬಂದರ್‌ನಿಂದ ಇರಾನ್‌ನ ಅಬ್ಬಾಸ್ ಬಂದರಿಗೆ ತೆರಳುತ್ತಿತ್ತು. ಭಾರತದ ಜಲಗಡಿಯ ಹೊರಗೆ ಹಾಗೂ ಪಾಕಿಸ್ತಾನದ ಶೋಧ ಮತ್ತು ರಕ್ಷಣಾ ವಲಯದಲ್ಲಿ ಹಡಗು ಆಪತ್ತಿಗೆ ಸಿಲುಕಿದ್ದಾಗ ರಕ್ಷಣಾ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರಕುಸಾಗಣೆ ಹಡಗು ಡಿ.2ರಂದು ಪೋರಬಂದರ್‌ನ ಬಂದರಿನಿಂದ ನಿರ್ಗಮಿಸಿತ್ತು. ಮಾರ್ಗಮಧ್ಯೆ ಬುಧವಾರ ಬೆಳಗಿನಜಾವ ಪ್ರವಾಹ ಮತ್ತು ನೀರಿನ ಏರಿಳಿತದ ಪರಿಣಾಮ ಮುಳುಗಲು ಆರಂಭಿಸಿತ್ತು. ಆಪತ್ತು ಕುರಿತ ಕರೆ ಬಂದ ಕೂಡಲೇ ಜಾಗೃತರಾದ ಕರಾವಳಿ ಕಾವಲು ಪಡೆಯ ಸಿಬ್ಬಂದಿ ಪೊರಬಂದರ್‌ನ ಐಸಿಜಿ ಪ್ರಾದೇಶಿಕ ಕಚೇರಿಗೆ ತುರ್ತು ಮಾಹಿತಿ ನೀಡಿದ್ದು, ಪಾಕ್ ಸಂಸ್ಥೆಗೂ ನೆರವು ಕೋರಲಾಯಿತು ಎಂದು ತಿಳಿಸಿದೆ.

ರಕ್ಷಣಾ ಕಾರ್ಯದ ಹಡಗು 'ಸಾರ್ಥಕ್' ಸ್ಥಳ ತಲುಪಿಸಿದ್ದು, ಹಡಗಿನಲ್ಲಿದ್ದ 12 ಸಿಬ್ಬಂದಿ ರಕ್ಷಿಸಲಾಯಿತು. ಬಳಿಕ ವೈದ್ಯಕೀಯ ಚಿಕಿತ್ಸೆ ನೆರವು ನೀಡಿ, ಪೋರಬಂದರ್ ಬಂದರಿಗೆ ಕರೆತರಲಾಯಿತು ಎಂದು ಹೇಳಿಕೆ ವಿವರಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ. ಆದರ್ಶ ಇಲ್ಲದೆ ಬದುಕಿದರೆ ಬದುಕಿಗೆ ಅವಮಾನ.

-ಸ್ವಾಮಿ ವಿವೇಕಾನಂದ

ಫಲವಂತಿಕೆ ದರ ಕುಸಿತ: ಭಾಗವತ್ ಸಲಹೆ ದೇಶಕ್ಕೆ ಒಳಿತು ಮಾಡುವುದಿಲ್ಲ

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಜನಸಂಖ್ಯೆಯ ಬೆಳವಣಿಗೆಯ ದರ ಕುಸಿಯುತ್ತಿದೆ ಎಂದು ಕಳವಳ ವ್ಯಕ್ತಪಡಿಸುವುದು ಹೊಸದೇನೂ ಅಲ್ಲ. ಆದರೆ, ಪ್ರತಿ ಕುಟುಂಬವೂ ಕನಿಷ್ಠ ಮೂರು ಮಕ್ಕಳನ್ನು ಹೊಂದಿರಬೇಕು ಎಂದು ಅವರು ಇತ್ತೀಚೆಗೆ ನೀಡಿದ ನಿರ್ದಿಷ್ಟವಾದ ಸಲಹೆ ಹೊಸ ವಿಚಾರ. ಯಾವುದೇ ಸಮಾಜದಲ್ಲಿ ಫಲವಂತಿಕೆಯ ದರವು 2.1ಕ್ಕಿಂತ ಕಡಿಮೆ ಇದ್ದರೆ ಆ ಸಮಾಜ ನಶಿಸಿಹೋಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಭಾರತದಲ್ಲಿ ಫಲವಂತಿಕೆ ದರವು ಇದಕ್ಕಿಂತ ಕಡಿಮೆ ಇದೆ ಎಂದು ಭಾವಿಸಲಾಗಿದೆ. ಹಾಗಿದ್ದರೂ ಕೆಲವು ರಾಜ್ಯಗಳಲ್ಲಿ ಈ ದರವು 2.1ಕ್ಕಿಂತ ಹೆಚ್ಚೇ ಇದೆ. ಭಾಗವತ್ ಅವರು ಈ ಹಿಂದೆ ‘ಜನಸಂಖ್ಯಾ ಅಸಮತೋಲನ’ದ ಕುರಿತು ಮಾತನಾಡಿದ್ದರು. ಮಾನವ ಸಂಪನ್ಮೂಲದಿಂದ ದೊರಕುವ ಅನುಕೂಲಗಳು ಭಾರತಕ್ಕೆ ದೊರಕದೇ ಹೋಗಬಹುದು ಎಂದೂ ಹೇಳಿದ್ದರು. ಜನಸಂಖ್ಯೆ ಎಂಬುದು ಸಂಘ ಪರಿವಾರವು ಸದಾ ಜಪಿಸುವ ವಿಚಾರ. ಮುಸ್ಲಿಮರ ಸಂಖ್ಯೆಯು ಹಿಂದೂಗಳ ಸಂಖ್ಯೆಯನ್ನು ಮೀರಿ ಹೋಗಲಿದೆ ಎಂಬುದನ್ನು ಸಂಘ ಪರಿವಾರವು ಹಲವು ಬಾರಿ ಹೇಳಿದೆ. ಮುಸ್ಲಿಂ ಸಮುದಾಯದ ಜನಸಂಖ್ಯೆಯ ಈಗಿನ ಬೆಳವಣಿಗೆಯ ದರದಲ್ಲಿ ಅದು ಸಾಧ್ಯವೇ ಇಲ್ಲ ಎಂಬುದು ಅರಿವಿದ್ದಾಗಲೂ ಈ ವಿಚಾರವನ್ನು ಪ್ರಸ್ತಾಪಿಸಲಾಗುತ್ತಿದೆ. ಮುಸ್ಲಿಂ ಸಮುದಾಯದ ಜನಸಂಖ್ಯೆಯ ಬೆಳವಣಿಗೆ ದರ ಕೂಡ ಕುಸಿಯುತ್ತಿದೆ ಮತ್ತು ಹಲವು ಪ್ರದೇಶಗಳಲ್ಲಿ ಫಲವಂತಿಕೆಯ ದರ ಅಪೇಕ್ಷಿತ ದರಕ್ಕಿಂತಲೂ ಕಡಿಮೆ ಇದೆ ಎಂಬುದನ್ನು ಹಲವು ಸಮೀಕ್ಷೆಗಳು ತೋರಿಸಿಕೊಟ್ಟಿವೆ.



ಕುಟುಂಬದಲ್ಲಿ ಎಷ್ಟು ಮಕ್ಕಳು ಇರಬೇಕು ಎಂದು ನಿರ್ಧರಿಸುವುದು ದಂಪತಿಯ ವಿವೇಚನೆಗೆ ಬಿಟ್ಟ ವಿಚಾರ. ಅದು ವೈಯಕ್ತಿಕ ಆಯ್ಕೆ

ಎಲ್ಲ ಸಮುದಾಯಗಳ ಕುಟುಂಬಗಳೂ ಹೆಚ್ಚು ಮಕ್ಕಳನ್ನು ಹೊಂದಬೇಕೇ ಎಂಬುದನ್ನು ಭಾಗವತ್ ಸ್ಪಷ್ಟಪಡಿಸಿಲ್ಲ. ಜನನಪ್ರಮಾಣ ಕುಸಿಯುತ್ತಿದೆ ಎಂಬುದು ಇಡೀ ದೇಶದ ಸಮಸ್ಯೆ ಎಂಬ ರೀತಿಯಲ್ಲಿ ಭಾಗವತ್ ಅವರು ಮಾತನಾಡಿದ್ದಾರೆ. ಆದರೆ, ಜನಸಂಖ್ಯೆಯ ವಿಚಾರದಲ್ಲಿ ಆರ್‌ಎಸ್‌ಎಸ್ ತನ್ನ ಸಂಕುಚಿತ ನಿಲುವನ್ನು ಕೈಬಿಟ್ಟಿದೆ ಎಂಬುದಕ್ಕೆ ಪುರಾವೆಗಳೇನೂ ಇಲ್ಲ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಆಗಲೀ ಅದರ ನೇತೃತ್ವದ ಸರ್ಕಾರವಾಗಲೀ ಈ ವಿಚಾರದಲ್ಲಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಸಣ್ಣ ಕುಟುಂಬವೇ ಸರ್ಕಾರದ ಅಧಿಕೃತ ನೀತಿಯಾಗಿ ಈಗಲೂ ಇದೆ. ಈ ನಿಯಮಕ್ಕೆ ಬದ್ಧವಾಗಿ ಇರುವುದು ದೇಶಭಕ್ತಿಯ ಒಂದು ರೂಪ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಹಿಂದೆ ಹೇಳಿದ್ದರು. ಜನಸಂಖ್ಯೆ ಹೆಚ್ಚಳದಿಂದ ಎದುರಾಗುವ ಸವಾಲುಗಳನ್ನು ಎದುರಿಸಲು ಏನೇನು ಮಾಡಬಹುದು ಎಂಬುದನ್ನು ಅಧ್ಯಯನ ಮಾಡಲು ಸರ್ಕಾರ ಸಮಿತಿಯೊಂದನ್ನು ರಚಿಸಲಿದೆ ಎಂದು ಸರ್ಕಾರ ಘೋಷಿಸಿದೆ. ಸದ್ಯದ ಸ್ಥಿತಿಯಲ್ಲಿ ಅಂತೂ ಜನಸಂಖ್ಯೆ ಹೆಚ್ಚಳವು ದೇಶಕ್ಕೆ ಒಂದು ಸಮಸ್ಯೆಯೇ ಆಗಿದೆ. ಭಾರತವು ಜಗತ್ತಿನಲ್ಲಿಯೇ ಈಗ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ಅಷ್ಟೇ ಅಲ್ಲ, ನಮ್ಮ ದೇಶದ ಜನಸಂಖ್ಯೆಯು 2030ರ ಹೊತ್ತಿಗೆ 150 ಕೋಟಿ ದಾಟಲಿದೆ ಮತ್ತು 2050ರ ಹೊತ್ತಿಗೆ 166 ಕೋಟಿ ಆಗಲಿದೆ ಎಂದು ಅಂದಾಜಿಸಲಾಗಿದೆ. ಈಗಿನ ದರದಲ್ಲಿ ಜನಸಂಖ್ಯೆಯು ಬೆಳವಣಿಗೆಯಾದರೆ ಜೀವನದ ಗುಣಮಟ್ಟವನ್ನು ಇನ್ನಷ್ಟು ಉತ್ತಮಪಡಿಸಲು ಸರ್ಕಾರಗಳಿಗೆ ಸಾಧ್ಯವಾಗುವುದಿಲ್ಲ. ಉತ್ತಮ ಗುಣಮಟ್ಟದ ಮೂಲಸೌಕರ್ಯಗಳನ್ನು ಒದಗಿಸುವುದು ಕೂಡ ಕಷ್ಟವಾಗುತ್ತದೆ.

ದೇಶದ ಕೆಲವು ಭಾಗಗಳಲ್ಲಿ ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಫಲವಂತಿಕೆ ದರದ ಕುಸಿತದಿಂದ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳು ಉಂಟಾಗಿವೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಈ ಕುರಿತು ಈಚೆಗೆ ಕಳವಳವನ್ನೂ ವ್ಯಕ್ತಪಡಿಸಿದ್ದಾರೆ. ಈ ಕಳವಳಗಳಿಗೆ ನ್ಯಾಯಸಮ್ಮತವಾದ ಪರಿಹಾರಗಳನ್ನು ಕಂಡುಕೊಳ್ಳುವ ಅಗತ್ಯ ಇದೆ. ಆದರೆ, ರಾಷ್ಟ್ರ ಮಟ್ಟದಲ್ಲಿ ಜನಸಂಖ್ಯಾ ನೀತಿಯನ್ನು ಬದಲಾಯಿಸಿದರೆ ಅದರಿಂದ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚು. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಪರಿಣಾಮವಾಗಿ ಫಲವಂತಿಕೆಯ ದರ ತಗ್ಗಿದೆ. ಕುಟುಂಬದಲ್ಲಿ ಎಷ್ಟು ಮಕ್ಕಳು ಇರಬೇಕೆಂದು ನಿರ್ಧರಿಸುವುದು ದಂಪತಿಗೆ ಬಿಟ್ಟ ವಿಚಾರ. ಅದು ವೈಯಕ್ತಿಕ ಆಯ್ಕೆ. ಕುಟುಂಬದಲ್ಲಿ ಎಷ್ಟು ಮಕ್ಕಳು ಇರಬೇಕು ಎಂಬುದು ಮಹಿಳೆಗೆ ಆಕೆಯ ದೇಹದ ಮೇಲೆ ಇರುವ ಹಕ್ಕಿನ ವಿಚಾರವೂ ಹೌದು. ಜೊತೆಗೆ ಅದು ಆಕೆಯ ನಿರ್ಧಾರದ ವ್ಯಾಪ್ತಿಯಲ್ಲಿ ಇರುವ ವಿಚಾರ. ಈ ವಿಷಯದಲ್ಲಿ ಸರ್ಕಾರದ ಹಸ್ತಕ್ಷೇಪವು ಯಾವುದೇ ದೇಶದಲ್ಲಿಯೂ ಪರಿಣಾಮಕಾರಿ ಆಗಿಲ್ಲ. ಭಾಗವತ್ ಅವರು ವ್ಯಕ್ತಪಡಿಸಿರುವ ವಿಚಾರವು ಕೋಮು ಲೇಪನ ಹೊಂದಿರಲಿ ಇಲ್ಲದಿರಲಿ, ಅದು ದೇಶಕ್ಕೆ ಒಳಿತನ್ನಂತೂ ಮಾಡುವುದಿಲ್ಲ.

ದಿನದ ಟ್ವೀಟ್

ಮನೆ ಹಾಳು ಮಾಡಿದ ಆಟಗಳು



ನಿನ್ನೆ ರಾತ್ರಿ ಮನೆ ಹತ್ತಿರ ಇಬ್ಬರು ಯುವಕರ ನಡುವೆ ಜೋರು ಹೊಡೆದಾಟ. ಹದಿನೈದು ನಿಮಿಷವಾದರೂ ನಿಲ್ಲದ ಜಗಳದ ಸದ್ದಿಗೆ ಹೊರಬಂದು ಏನು ಅಂತ ನೋಡಿದರೆ ವಿಷಯ ಇಷ್ಟು: ಒಬ್ಬ ಇನ್ನೊಬ್ಬನಿಗೆ ಐವತ್ತು ಸಾವಿರ ರೂಪಾಯಿ ಸಾಲ ಕೊಟ್ಟಿದ್ದಾನೆ. ಅವನು ಅದನ್ನು ಆನ್‌ಲೈನ್ ರಮ್ಮಿ ಆಡಿ ಕಳೆದಿದ್ದಾನೆ. ಸಾಲ ತೀರಿಸದೇ ಕಣ್ತಪ್ಪಿಸಿ ಓಡಾಡುತ್ತಿದ್ದವನು ಸಾಲ ಕೊಟ್ಟವನ ಕೈಗೆ ಸಿಕ್ಕಿದ್ದಾನೆ. ಇಬ್ಬರೂ ಬೀದಿಯಲ್ಲಿ ಬಡಿದಾಡಿ-ಕೊಂಡಿದ್ದಾರೆ. ಈ ಆನ್‌ಲೈನ್ ರಮ್ಮಿ, ಗೇಮ್ಸ್ ಎಷ್ಟು ಮನೆ ಹಾಳು ಮಾಡಿವೆಯೋ...

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



6 ತಿಂಗಳಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರವನ್ನು ಕಿತ್ತೆಸೆಯುವುದಾಗಿ ಎಚ್‌.ಡಿ. ದೇವೇಗೌಡ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರು ಉಪಚುನಾವಣೆ ಸಂದರ್ಭದಲ್ಲಿ ಹೇಳಿದ್ದರು. ಕಿತ್ತೆಸೆಯಲು ಕಾಂಗ್ರೆಸ್ ಪಕ್ಷವು ಹಾಸನದಲ್ಲಿ ಬೆಳೆಯುವ ಆಲೂಗಡ್ಡೆ ಅಥವಾ ಕಡಲೆ ಗಿಡವಲ್ಲ.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 6-12-1999

• ಭಾರತದ ಯುಕ್ತಾಮುಖಿ ವಿಶ್ವಸುಂದರಿ

ಲಂಡನ್, ಡಿ. 5 (ರಾಯಿಟರ್ಸ್)– ಮುಂಬೈನ ಇಪ್ಪತ್ತರ ಹರೆಯದ ತರುಣಿ ಯುಕ್ತಾಮುಖಿ ಅವರು ಇಲ್ಲಿ ನಡೆದ ಶತಮಾನದ ಕೊನೆಯ ವರ್ಣರಂಜಿತ ಸೌಂದರ್ಯ ಸ್ಪರ್ಧೆಯಲ್ಲಿ ವಿಶ್ವಸುಂದರಿಯಾಗಿ ಆಯ್ಕೆಯಾದರು.

‘ಎಂಥ ಸಂದರ್ಭದಲ್ಲಿಯೂ ಸಮಚಿತ್ತವನ್ನು ಕಾಪಾಡಿಕೊಳ್ಳುವ ನನ್ನ ಗುಣ ಇಂದು ನನ್ನನ್ನು ಈ ಸ್ಥಾನದಲ್ಲಿ ನಿಲ್ಲಿಸಿದೆ’ ಎಂದು ಯುಕ್ತಾಮುಖಿ ಅವರು ಗೆಲುವಿನ ಬಳಿಕ ಖುಷಿಯಿಂದ ಹೇಳಿಕೊಂಡರು.

ಸ್ಪರ್ಧೆ ನಡೆಯುತ್ತಿದ್ದ ಸಭಾಂಗಣದ ಹೊರಗೆ ಮಹಿಳಾವಾದಿ ಪ್ರತಿಭಟನ-ಕಾರರು ಪೊಲೀಸ್ ತಡೆಯನ್ನು ಭೇದಿಸಿ ತೀರ್ಪುಗಾರರ ಮೇಲೆ ಕೈಬಾಂಬುಗಳನ್ನು ಎಸೆದರು. ‘ವಿಶ್ವಸುಂದರಿ ಸ್ಪರ್ಧೆಯ ಹೆಸರಿನಲ್ಲಿ ಕಾಮೋತ್ತೇಜಕ ದನಗಳ ವಹಿವಾಟು ನಡೆಯುತ್ತಿದೆ’. ‘ಮಹಿಳೆಯರ ಶರೀರ ಮಾರಾಟಕ್ಕೆ ಇರುವುದಲ್ಲ’ ಎಂಬ ಘೋಷಣೆಗಳನ್ನು ಪ್ರತಿಭಟನಕಾರರು ಕೂಗುತ್ತಿದ್ದರು.

• ಆಲಮಟ್ಟಿ: ಕಳವಳ ಅಗತ್ಯವಿಲ್ಲ ಸಚಿವ ಎಚ್‌.ಕೆ. ಪಾಟೀಲ

ವಿಜಾಪುರ, ಡಿ. 5– ಆಲಮಟ್ಟಿ ಅಣೆಕಟ್ಟೆ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯದ ಜನತೆ ಕಳವಳಪಡುವ ಅಗತ್ಯವಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿ ಪೂರ್ಣಗೊಳಿಸಲು ಸತತ ಪ್ರಯತ್ನ ನಡೆಸಲಾಗುವುದು ಎಂದು ಭಾರಿ ನೀರಾವರಿ ಸಚಿವ ಎಚ್‌.ಕೆ. ಪಾಟೀಲ ಅವರು ಇಂದು ಇಲ್ಲಿ ನುಡಿದರು.

ಖಾಸಗಿ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ ಹೋರಾಟ ಸಮಿತಿಯ ಮನವಿ ಪತ್ರ ಸ್ವೀಕರಿಸಿದ ಬಳಿಕ ಮಾತನಾಡಿದರು.

ನ್ಯಾಯಾಲಯದಲ್ಲಿ ರಾಜ್ಯಕ್ಕೆ ನ್ಯಾಯ ಸಿಗುವ ಬಗ್ಗೆ ಅವರು ವಿಶ್ವಾಸವನ್ನು ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 6-12-1974

• ವಿರೋಧಿ ನಾಯಕರಿಗೆ ಷರತ್ತು ರಹಸ್ಯವಾಗಿ ವರದಿ ತೋರಿಸಲು ಒಪ್ಪಿಗೆ

ನವದೆಹಲಿ, ಡಿ. 5– ಆಮದು ಲೈಸೆನ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ಮಂಡಲಿ ಸಲ್ಲಿಸಿರುವ ವರದಿಯನ್ನು ಸಂಸತ್‌ನ ಉಭಯ ಸದನಗಳ ಅಧ್ಯಕ್ಷರ ಸಮ್ಮುಖದಲ್ಲಿ ವಿರೋಧಿ ನಾಯಕರಿಗೆ ತೋರಿಸಲು ಕೇಂದ್ರ ಸಂಪುಟ ಇಂದು ನಿರ್ಧರಿಸಿತು.

ಆದರೆ, ವರದಿಯ ವಿವರಗಳನ್ನು ತಿಳಿಯಲು ವಿರೋಧಿ ನಾಯಕರು ರಹಸ್ಯ ಪಾಲನೆ ಪ್ರತಿಜ್ಞೆ ಕೈಗೊಳ್ಳಬೇಕೆಂದು ಸರ್ಕಾರ ಷರತ್ತು ಹಾಕಿದೆ.

ಸರ್ಕಾರದ ಈ ಸಲಹೆಯನ್ನು ಪರಿಶೀಲಿಸಲು ವಿರೋಧ ಪಕ್ಷಗಳ ನಾಯಕರು ಕಾಲಾವಕಾಶ ಕೇಳಿದ್ದಾರೆ.

• ಬುದ್ಧಿಜೀವಿಗಳ ಜತೆ ಹೆಚ್ಚು ನಿಕಟ ಸಂಬಂಧ: ಕಾಂಗ್ರೆಸ್ಸಿನ ಬಯಕೆ

ಬೆಂಗಳೂರು, ಡಿ. 5– ಬುದ್ಧಿಜೀವಿಗಳಿಂದ ‘ಈವರೆಗೆ ದೂರವಿದ್ದ’ ಕಾಂಗ್ರೆಸ್ ಪಕ್ಷವು ಅವರೊಡನೆ ಹೆಚ್ಚು ಹೆಚ್ಚು ನಿಕಟ ಸಂಬಂಧ ಹೊಂದಲು ಬಯಸಿದೆ.

ದೊಡ್ಡಬಳ್ಳಾಪುರ ಶಿಬಿರದಿಂದ ಹೊರಹೊಮ್ಮಿದ ಅಂಶಗಳಲ್ಲಿ ಇದೊಂದು.

ವಕೀಲರು, ಶಿಕ್ಷಕರು, ವೈದ್ಯರು, ವಿಜ್ಞಾನಿಗಳ ವೇದಿಕೆಗಳನ್ನು ಹೊಂದಲು ಆಲೋಚಿಸುತ್ತಿರುವುದಾಗಿ ಕೆಪಿಸಿಸಿ ಅಧ್ಯಕ್ಷ ಶ್ರೀ ಕೆ.ಎಚ್. ಪಾಟೀಲರು ವರದಿಗಾರರಿಗೆ ತಿಳಿಸಿದರು.

ಹವಾಮಾನ ವೈಪರೀತ್ಯಕ್ಕೆ ಮಲೆನಾಡಿನ ರೈತರ ಬದುಕು ಹೈರಣಾಗಿದೆ

‘ಫೆಂಜಲ್’ ಮತ್ತು ಅಡಿಕೆಯ ಸಂಕಷ್ಟ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಆ ಕುಟುಂಬಕ್ಕೆ ಇರುವುದು ಬರೀ ಮೂರು ಎಕರೆ ಭತ್ತ ಬೆಳೆಯುವ ಗದ್ದೆ. ಈ ಬಾರಿ ಮಳೆಗಾಲ ತುಸು ಮುಂಚೆ ಪ್ರಾರಂಭವಾಗಿತ್ತು. ಹಾಗಾಗಿ ಭತ್ತದ ಸಸಿಯನ್ನು ನಾಟಿ ಮಾಡಿದ್ದರು. ಫಸಲು ಚೆನ್ನಾಗಿಯೇ ಇತ್ತು. ಕಟಾವು ಮಾಡಿದ ದಿನವೇ ಧಾರಾಕಾರ ಮಳೆ ಸುರಿದು, ಅರ್ಧಕ್ಕಿಂತ ಹೆಚ್ಚು ಭತ್ತ ನೀರುಪಾಲಾಯಿತು. ಕುಟುಂಬದ ಶ್ರಮ ಮತ್ತು ವರ್ಷದ ಕೂಳು ಮಣ್ಣುಪಾಲಾಯಿತು. ಅವರಿಗೆ ಆರ್ಥಿಕವಾಗಿ ಭರಿಸಲಾರದ ನಷ್ಟವೂ ಆಯಿತು.

ಮೋಚಾ, ಬಿಪರ್‌ಜಾಯ್ (2023), ತೇಜ್, ಹಮೂನ್, ರೆಮಲ್ (2024)... ಎಂತಹ ವಿಚಿತ್ರ ಹೆಸರುಗಳು ಎಂದು ಹುಬ್ಬೇರಿಸದಿರಿ. ಅತ್ತ ಬಂಗಾಳ-ಕೊಲ್ಲಿಯಲ್ಲಿ, ಇತ್ತ ಅರಬ್ಬಿ ಸಮುದ್ರದಲ್ಲಿ ವಾತಾವರಣದ ಬಿಸಿಯೇರಿಕೆಯ ಕಾರಣಕ್ಕೆ ಉದ್ಭವಿಸಿ, ಹೆಚ್ಚು ಹಾನಿಗೆ ಕಾರಣವಾದ ಚಂಡಮಾರುತಗಳ ಹೆಸರುಗಳಿವು. ಈಗ ಹೊಸದಾಗಿ ಬಂದಿರುವುದರ ಹೆಸರು ಫೆಂಜಲ್!

ಮಲೆನಾಡಿನ ಜನರಿಗೆ ಚಂಡಮಾರುತದಿಂದ ಬರುವ ಮಳೆ ಮತ್ತದರ ಪರಿಣಾಮ ತೀರಾ ಹೊಸದೇನಲ್ಲ. ಎಲ್ಲೋ ಹತ್ತಿಪ್ಪತ್ತು ವರ್ಷಗಳಿಗೊಮ್ಮೆ ಫಸಲು ಕಟಾವು ಮಾಡುವಾಗ, ಗುಡುಗು-ಸಿಡಿಲು, ವಿಪರೀತ ಗಾಳಿಯ ಸಮೇತ ಮಳೆ ಸುರಿದು, ಪೈರೆಲ್ಲಾ ಕೊಚ್ಚಿಹೋದ ಉದಾಹರಣೆಗಳಿವೆ. ಆದರೆ, 21ನೇ ಶತಮಾನದ ಆದಿಯಲ್ಲಿ ತನ್ನ ಆವರ್ತನವನ್ನು ಹೆಚ್ಚು ಮಾಡಿಕೊಂಡ ಚಂಡಮಾರುತಗಳು ಪದೇ ಪದೇ ಅಪ್ಪಳಿಸುತ್ತಿರುವುದು ಇಲ್ಲಿನ ಜನರ ಬದುಕಿಗೆ ಸಂಕಷ್ಟವೊಡ್ಡಿದೆ. ಹಿಂದಿನ ಐವತ್ತು ವರ್ಷಗಳಲ್ಲಿ ಸುರಿದ ಮಳೆಯ ಗತಿಗೂ ಹಾಲಿ ಬರುತ್ತಿರುವ ಮಳೆಯ ಗತಿಗೂ ಅಜಗಜಾಂತರ. ಈ ಸಲ ಜೂನ್ 7ಕ್ಕೆ ಮಳೆಗಾಲ ಪ್ರಾರಂಭವಾದರೂ ಅದಕ್ಕೆ ಮುಂಗಾರು ಮಳೆಯ ಲಕ್ಷಣವಿರಲಿಲ್ಲ. ಹದವಾಗಿ ಬೀಳಬೇಕಾದ ಮಳೆ ತಾಳತಪ್ಪಿ ಯದ್ವಾತದ್ವ ಸುರಿಯಿತು. ವಾರದಲ್ಲಿ ಸುರಿಯಬೇಕಾದ ವಾಡಿಕೆ ಮಳೆ ಐದಾರು ತಾಸಿನಲ್ಲಿ ಸುರಿದರೆ, ಅದರ ಪರಿಣಾಮ ಬೇರೆಯಾಗಿ ಇರುತ್ತದೆ. ಹವಾಮಾನ ವೈಪರೀತ್ಯವು ಎಲ್ಲರಿಗೂ ಸಂಕಷ್ಟ ತರುತ್ತದೆ. ಅದರಲ್ಲೂ ಅತಿಹೆಚ್ಚು ಬಳಲುವವರು ಕೃಷಿಕರು.

2023 ಅನ್ನು ಅತಿಹೆಚ್ಚು ‘ಭೂಮಿ ಬಿಸಿ’ಯಾದ ವರ್ಷವೆಂದು ಪರಿಗಣಿಸಲಾಗಿತ್ತು. 2024, ಎಲ್ಲ ದಾಖಲೆಗಳನ್ನೂ ಮುರಿದು ಇನ್ನೂ ಹೆಚ್ಚು ಬಿಸಿಯಿಂದ ಕೂಡಿತ್ತು. ವಾತಾವರಣದಲ್ಲಿ ಬಿಸಿ ಹೆಚ್ಚಾದಾಗ, ಚಂಡಮಾರುತದ ವಿದ್ಯಮಾನಗಳು ಹೆಚ್ಚು ಹೆಚ್ಚು ಸಂಭವಿಸುತ್ತವೆ. ಇದೊಂದು ರೀತಿ ವಿಷಚಕ್ರವಿದ್ದಂತೆ. ಮಲೆನಾಡಿನಲ್ಲಿ ಅಡಿಕೆ, ಭತ್ತ ಮತ್ತು ಕಾಫಿ ಮುಖ್ಯ ಬೆಳೆ. ಪಾರಂಪರಿಕವಾಗಿ ಅಡಿಕೆ ಬೆಳೆಯುವ ಪ್ರದೇಶದಲ್ಲಿ ಹೆಚ್ಚು ಬಿಸಿಲು ಬೀಳದಂತೆ, ಮಲೆನಾಡಿನ ಸೊಪ್ಪಿನಬೆಟ್ಟಗಳು ಅಡಿಕೆ ಮರಕ್ಕೆ ರಕ್ಷಣೆ ನೀಡುತ್ತಿದ್ದವು. ಸೊಪ್ಪಿನಬೆಟ್ಟದಿಂದ ಲಭ್ಯವಾಗುವ ಹಸಿರೆಲೆಯನ್ನು ಗೊಬ್ಬರಕ್ಕಾಗಿಯೂ ನೆಲಕ್ಕೆ ಬಿದ್ದ ಒಣಎಲೆಯನ್ನು ಮುಚ್ಚುಗೆಯಾಗಿಯೂ ಬಳಸುತ್ತಿದ್ದರು. ದಿನ ಕಳೆದಂತೆ ಸೊಪ್ಪಿನಬೆಟ್ಟಗಳು ಒತ್ತುವರಿಯಾಗಿ, ಕೃಷಿ ಜಮೀನಾಗಿಯೋ ಅಥವಾ ಬಡಾವಣೆಗಳಾಗಿಯೋ ಬದಲಾದವು. ದನಗಳಿಗೆ ಮೀಸಲಿಟ್ಟ ಗೋಮಾಳಗಳು ಕಣ್ಮರೆಯಾದವು. ಹಿಂದೆ, ಜಾನುವಾರುಗಳನ್ನು ಸಾಕದ ಕೃಷಿಕರು ಕಾಣಸಿಗುತ್ತಿರಲಿಲ್ಲ. ಈಗ ಜಾನುವಾರುಗಳ ಅಗತ್ಯವೇ ಇಲ್ಲದೆ ಕೃಷಿ ಚಟುವಟಿಕೆ ನಡೆಯುತ್ತಿದೆ. ಲಾಭಕ್ಕಾಗಿಯೇ ಮಾರಾಟ ಮಾಡುವ ಎರೆಹುಲು-ಗೊಬ್ಬರದಲ್ಲಿ ಪೌಷ್ಟಿಕಾಂಶಗಳು ಎಷ್ಟಿವೆ ಮತ್ತು ಏನಿವೆ ಎನ್ನುವ ಅರಿವು ಕೃಷಿಕನಿಗಿಲ್ಲ. ಇದರಿಂದಾಗಿ ಒಳಸುರಿ ವೆಚ್ಚವೂ ಹೆಚ್ಚಾಗುತ್ತಿದೆ. ಅತ್ತ ಕೃಷಿ ಪದ್ಧತಿ ಬದಲಾದ ಹಾಗೆಯೇ, ಇತ್ತ ಹವಾಗುಣ ವೈಪರೀತ್ಯವೂ ತನ್ನ ವಿರಾಟ್ ಸ್ವರೂಪವನ್ನು ತೋರಿಸಲು ತೊಡಗಿತು.

ಜಾಗತೀಕರಣದ ಪರಿಣಾಮವಾಗಿ ವಿದೇಶಿ ಅಡಿಕೆ ಯಾವುದೇ ಅಡೆತಡೆ ಇಲ್ಲದೆ ಭಾರತದ ಮಾರುಕಟ್ಟೆ ಪ್ರವೇಶ ಮಾಡಿದ್ದರಿಂದ, ದರದಲ್ಲಿ ಏರುಪೇರಾಗಿ, ಪಾರಂಪರಿಕವಾಗಿ ಅಡಿಕೆ ಬೆಳೆಯುವ ಕೃಷಿಕರಿಗೆ ಹೊಡೆತ ಬಿದ್ದಿದೆ. ಹವಾಮಾನ ವೈಪರೀತ್ಯವೆಂಬ ಜಾಗತಿಕ ವಿದ್ಯಮಾನವೂ ಮಲೆನಾಡಿನ ರೈತರನ್ನು ಹೈರಣಾಗಿಸುತ್ತಿರುವುದು ಗಮನಿಸಬೇಕಾದ ಅಂಶ.

ಸಾಮಾನ್ಯವಾಗಿ ಮೇ ತಿಂಗಳಲ್ಲಿ ಒಂದು ಬಾರಿ ಅರಬ್ಬಿ ಸಮುದ್ರದಲ್ಲೋ ಅಥವಾ ಬಂಗಾಳಕೊಲ್ಲಿಯಲ್ಲೋ ಚಂಡಮಾರುತವೆದ್ದು, ಗುಡುಗು-ಸಿಡಿಲು-ಗಾಳಿ ಸಮೇತ ಮಳೆ ಸುರಿಯುತ್ತಿತ್ತು. ಅಡಿಕೆ ಮತ್ತು ಬೇರೆ ಯಾವುದೇ ಕೃಷಿಗೆ ಇದು ಪೂರಕವಾಗಿತ್ತು. ಅತೀ ಅಪರೂಪಕ್ಕೊಮ್ಮೆ ಡಿಸೆಂಬರ್‌ನಲ್ಲೂ ಚಂಡಮಾರುತ ಅಬ್ಬರಿಸಿದ್ದುಂಟು. ಆದರೆ, ಕೃಷಿಕನಿಗೆ ಅಷ್ಟು ಬಾಧೆಯಾಗುತ್ತಿರಲಿಲ್ಲ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಡಿಸೆಂಬರ್ ಹೊತ್ತಿಗೆ ಅಡಿಕೆ ಬೆಳೆದು ಕಟಾವಿಗೆ ಸಿದ್ಧವಾಗುತ್ತದೆ. ಡಿಸೆಂಬರ್‌ನಲ್ಲಿ ಅಪ್ಪಳಿಸುವ ಚಂಡಮಾರುತಗಳು ನೇರವಾಗಿ ಬೆಳೆಗೆ ಹಾನಿ ಮಾಡುತ್ತಿರಲಿಲ್ಲ. ಹೊಸನಗರ ತಾಲ್ಲೂಕಿನ ಹಲವೆಡೆ ಎರಡು ತಿಂಗಳ ಹಿಂದೆ ಅಪ್ಪಳಿಸಿದ ಚಂಡಮಾರುತದ ಹೊಡೆತಕ್ಕೆ ಸಿಲುಕಿದ ಅಡಿಕೆ ಮರಗಳು ಒಂದಕ್ಕೊಂದು ರಭಸವಾಗಿ ಡಿಕ್ಕಿ ಹೊಡೆದು ಅಡಿಕೆ ಫಸಲು ಉದುರಿತು. ಶೇ 50-60ರಷ್ಟು ಎಳೆ ಫಸಲು ನಾಶವಾಯಿತು.

ಇದಕ್ಕೂ ಮೊದಲು ಬಂದ ಕೊಳೆ ರೋಗದಿಂದ ಶೇ 20ರಷ್ಟು ಫಸಲು ನಾಶವಾಗಿತ್ತು. ಇದೇ ಹೊತ್ತಿಗೆ ಎಲೆಚುಕ್ಕಿ ರೋಗವೂ ತನ್ನ ಪ್ರತಾಪವನ್ನು ತೋರಿಸಿತು. ಎಲೆಚುಕ್ಕಿ ರೋಗದಿಂದ ಮರವನ್ನೇ ಕಳೆದುಕೊಳ್ಳು-ವಂತಾಯಿತು. ನೂರು ವರ್ಷಗಳ ಹಿಂದೆ ಅಡಿಕೆಗೆ ವಿಪರೀತ ಕೊಳೆರೋಗ ಆವರಿಸಿತ್ತು. ದೂರದೃಷ್ಟಿಯುಳ್ಳ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ರಾಜರಾಗಿದ್ದರು. ಅಡಿಕೆ ಕೊಳೆರೋಗದಿಂದ ಸಂಕಷ್ಟಕ್ಕೆ ಒಳಗಾಗಿದ್ದ ರೈತರ ಬವಣೆಗೆ ಸ್ಪಂದಿಸಲು ಕೋಲ್ಮನ್ ಎಂಬ ವಿಜ್ಞಾನಿಯನ್ನು ಮಲೆನಾಡಿಗೆ ಕಳುಹಿಸಿ-ಕೊಟ್ಟರು. ಬದ್ಧತೆಯಿದ್ದ ಆ ವಿಜ್ಞಾನಿ, ಸತತ ಸಂಶೋಧನೆ ನಡೆಸಿ, ಕೊಳೆರೋಗಕ್ಕೆ ಕಾರಣವಾಗುವ ಶಿಲೀಂಧ್ರಗಳ ನಿಯಂತ್ರಣಕ್ಕೆ ಒಂದು ಔಷಧ ಕಂಡುಹಿಡಿದರು. ಅದನ್ನೇ ಬೋರ್ಡೋ ಮಿಕ್ಸರ್ ಎಂಬ ಹೆಸರಿನಲ್ಲಿ ಈಗಲೂ ಬಳಸ-ಲಾಗುತ್ತಿದೆ. ಅದಕ್ಕೆ ಪರ್ಯಾಯ ಔಷಧವನ್ನು ನೂರು ವರ್ಷಗಳ ನಂತರದಲ್ಲೂ ನಮ್ಮ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಕಂಡುಹಿಡಿಯದೇ ಇರುವುದು ಕೃಷಿಕರ ಬದುಕಿನ ದುರಂತ.



1962ರಲ್ಲೇ ಕೇರಳದಲ್ಲಿ ಕಂಡುಬಂದ ಎಲೆಚುಕ್ಕಿ ರೋಗ ಸರ್ವವ್ಯಾಪಿಯಾಗಿರಲಿಲ್ಲ. ಬೆಳೆಗಳನ್ನು ನಾಶ ಮಾಡುವ ಶಿಲೀಂಧ್ರಗಳಿಗೆ ತೇವಾಂಶಭರಿತ ವಾತಾವರಣ ಪೂರಕವಾಗಿರುತ್ತದೆ. ದೀರ್ಘಕಾಲಿಕ ಮಳೆ ಅಥವಾ ಮೋಡ ಮುಸುಕಿದ ವಾತಾವರಣ ಹೆಚ್ಚು ದಿನ ಇದ್ದಲ್ಲಿ, ಶಿಲೀಂಧ್ರಗಳು ತಮ್ಮ ಸಂಖ್ಯೆಯನ್ನು ಅಷ್ಟೇ ಬೇಗ ವೃದ್ಧಿಸಿಕೊಳ್ಳುತ್ತವೆ. ಈಗ್ಗೆ ಏಳೆಂಟು ವರ್ಷಗಳ ಹಿಂದಿನವರೆಗೂ ಈ ಭಾಗದಲ್ಲಿ ಎಲೆಚುಕ್ಕಿ ರೋಗ ಇರಲಿಲ್ಲವೆಂದು ತೋಟಗಾರಿಕಾ ಅಧಿಕಾರಿಗಳು ಹೇಳುತ್ತಾರೆ. ಶಿಲೀಂಧ್ರಗಳಿಗೆ ಪೂರಕ ವಾತಾವರಣ-ವನ್ನು ಸೃಷ್ಟಿಸುತ್ತಿರುವುದು ಇದೇ ಚಂಡಮಾರುತಗಳು ಹಾಗೂ ಆ ಮೂಲಕ ಸುರಿಯುವ ಅಕಾಲಿಕ ಮಳೆ. ಋತುಮಾನಗಳೇ ದಿಕ್ಕು ತಪ್ಪುತ್ತಿರುವ ಈ ಹೊತ್ತಿನಲ್ಲಿ ಅಡಿಕೆಗೆ ಮತ್ತೊಂದು ಅಪಾಯ ಎದುರಾಗಿದೆ. ಸಾಮಾನ್ಯವಾಗಿ ಜೂನ್-ಜುಲೈ ತಿಂಗಳಲ್ಲಿ ಸಕ್ರಿಯವಾಗಿರುತ್ತಿದ್ದ ಬಸವನ ಹುಳುಗಳು ತೇವಾಂಶಪೂರಕ ವಾತಾವರಣದಲ್ಲಿ ಈಗ ಡಿಸೆಂಬರ್‌ನಲ್ಲೂ ಕಾಣಿಸಿಕೊಳ್ಳುತ್ತಿವೆ. ಅಷ್ಟೇ ಅಲ್ಲ, ಈ ಹುಳುಗಳು ಅಡಿಕೆ ಹೂಗೊಡು (ಸಿಂಗಾರ-ಹಿಂಗಾರ) ತೆರೆಯುವಾಗ ನಿಧಾನಕ್ಕೆ ಸಿಂಗಾರದೊಳಗೆ ಸೇರಿಕೊಂಡು, ಹೂಗಳನ್ನೇ ಆಹಾರವಾಗಿ ಮಾಡಿಕೊಳ್ಳು-ತ್ತವೆ. ಬಹುತೇಕ ಹೂಗಳು ಪರಾಗಸ್ಪರ್ಶಕ್ಕೂ ಮುನ್ನವೇ ನಾಶವಾಗುತ್ತಿವೆ.

ಹವಾಮಾನ ವೈಪರೀತ್ಯಕ್ಕೆ ಹೊಂದಿಕೊಳ್ಳುವುದು ಜೀವವೈವಿಧ್ಯ ಮತ್ತು ಸಸ್ಯವೈವಿಧ್ಯಕ್ಕೆ ಸವಾಲಾಗಿದೆ. ಏಕಜಾತಿಯ ಬೆಳೆಗಳನ್ನೇ ನಂಬಿಕೊಳ್ಳುವ ರೈತರ ಮನೋಧೋರಣೆಯಿಂದಾಗಿ ಪೀಡೆಕೀಟಗಳು ವಿಜೃಂಭಿಸುತ್ತಿವೆ. ಹವಾಮಾನ ವೈಪರೀತ್ಯದ ವಿಪರೀತ ಪರಿಣಾಮಗಳನ್ನು ಎದುರಿಸುವ ಅಥವಾ ಅದರೊಂದಿಗೆ ಬದುಕುವ ಹೊಸ ಮಾದರಿಯನ್ನು ಆಯಾ ಪ್ರದೇಶದ ರೈತರೇ ಕಂಡುಕೊಳ್ಳಬೇಕು. ಉದಾಹರಣೆಗೆ, ಅಡಿಕೆ ತೋಟದಲ್ಲಿ ಮಿಶ್ರಬೆಳೆಯಾಗಿ ಏಲಕ್ಕಿ, ಕಾಳುಮೆಣಸು, ಜಾಯಿಕಾಯಿಯಂತಹ ಒಣಗಿಸಿ, ಉತ್ತಮ ದರ ಬಂದಾಗ ಮಾರಬಹುದಾದ ಬೆಳೆಗಳು ಮತ್ತು ಬಾಳೆ, ವೀಳ್ಯದೆಲೆ ಮುಂತಾದ ತಕ್ಷಣಕ್ಕೆ ಆರ್ಥಿಕ ನೆರವನ್ನು ನೀಡುವ ಬೆಳೆಗಳು ಅಡಿಕೆ ಬೆಳೆಗಾರರ ಸಂಕಷ್ಟಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡಬಲ್ಲವು.

ಜಾಗತಿಕ ತಾಪಮಾನ ಏರಿಕೆಯನ್ನು ಯಾವುದೋ ಒಂದು ಪ್ರದೇಶದ ಜನರಾಗಲೀ ಅಥವಾ ಒಂದು ದೇಶವಾಗಲೀ ನಿಯಂತ್ರಣಕ್ಕೆ ತರಲು ಸಾಧ್ಯವಿಲ್ಲ. ಎಲ್ಲ ದೇಶಗಳ ನಾಯಕರು ತಮ್ಮ ಪ್ರತಿಷ್ಠೆಯನ್ನು ಬದಿಗಿಟ್ಟು, ಒಮ್ಮತಕ್ಕೆ ಬಂದರೆ ಮಾತ್ರ, ಭೂಬಿಸಿಯೇರಿಕೆಯನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಲು ಸಾಧ್ಯ. ಹಾಗೆಯೇ ಸ್ಥಳೀಯ ಸಮಸ್ಯೆಗಳಿಗೆ ಆಯಾ ಭಾಗದ ರೈತರೇ ಪರಿಹಾರ ಹುಡುಕಿಕೊಳ್ಳುವುದು ಈ ಹೊತ್ತಿನ ತುರ್ತು.

ಚುರುಮುರಿ



ಹೆಸರು-ಅಡ್ಡ ಹೆಸರು!

• ಬಿ.ಎನ್. ಮಲ್ಲೇಶ್

‘ದುಬ್ಬೀರ, ಈ ಚಂಡಮಾರುತಗಳಿಗೆ ಹೆಸರು ಯಾರಿಡ್ತಾರಲೆ?’ ಗುಡ್ಡೆ ಕೇಳಿದ.

‘ಏನೋಪ್ಪ ಗೊತ್ತಿಲ್ಲ...’ ಎಂದ ದುಬ್ಬೀರ.

‘ಲೇಯ್, ಅದು ಯಾರಾದ್ರು ಇಡ್ಲಿ, ಹಾಸನ ಕಾಂಗ್ರೆಸ್ ಸಮಾವೇಶಕ್ಕೆ ಏನು ಹೆಸರಿಟ್ರು ಅದ್ನ ಹೇಳ್ರಿ ಮೊದ್ಲು’ ತೆಪರೇಸಿ ಕೇಳಿದ.

‘ಅದು ಸ್ವಾಭಿಮಾನಿ ಜನಕಲ್ಯಾಣ ಕಾಂಗ್ರೆಸ್ ಸಮಾವೇಶ ಅಂತ ಆತಂತೆ...’

‘ಅಷ್ಟುದ್ದನಾ?’

‘ಮತ್ತೆ ಎಲ್ಲರ್ನೂ ಸಮಾಧಾನ ಮಾಡ್ಬೇಕಲ್ಲಪ?’ ಕೊಟ್ರೇಶಿ ನಕ್ಕ.

‘ಅಲ್ಲ, ಈ ಹೆಸರುಗಳಿಗಿಂತ ಅಡ್ಡ ಹೆಸರೇ ಬಾಳ ಫೇಮಸ್ ನೋಡು, ರಾಜಾಹುಲಿ, ಟಗರು, ಬಂಡೆ, ಬ್ರದರ್... ಯಾರು ಅಂತ ಹೇಳಾದೇ ಬ್ಯಾಡ, ಟಕ್ ಅಂತ ಗೊತ್ತಾಗಿಬಿಡ್ತಾವು...’

‘ಕರೆಕ್ಟ್, ಹಂಗೇ ಕೆಲ ಹೆಂಡ್ತೀದೀರು ತಮ್ಮ ಗಂಡಂದಿರಿಗೆ ‘ತಲೆನೋವು’ ಅಂತ ಹೆಸರಿಟ್ಟಿ-ದ್ರಂತೆ. ಗೆಳತೀರ ಜತಿ ಫೋನಲ್ಲಿ ಮಾತಾಡುವಾಗ ‘ಏನೇ ತಲೆನೋವು ಹೋತಾ?’ ಅಂತ ಕೇಳಿದ್ರೆ ಅತ್ತಕಡಿಂದ ‘ಇಲ್ಲ ಕಣೆ ಇನ್ನೂ ಇಲ್ಲೇ ಕೂತಿದೆ’ ಅಂತ ಜೋಕ್ ಮಾಡ್ತಿದ್ರಂತೆ’.

‘ಅದು ಹಳೇ ಜೋಕ್ ಕಣಲೆ, ಕೆಲ ಮಕ್ಕಳು ತಮ್ಮ ಅಪ್ಪಂದಿರಿಗೆ ‘ಕಿರಿಕ್ ಪಾರ್ಟಿ’ ಅಂತ ಹೆಸ-ರಿಟ್ಟಿದಾರಂತೆ, ಅದು ಗೊತ್ತಾ?’ ದುಬ್ಬೀರ ಕೇಳಿದ.

‘ಒಳ್ಳೆ ಕತೆ’ ಎಂದ ತೆಪರೇಸಿ, ಅದಿರ್ಲಿ ಡೆಲ್ಲೀಲಿ ಯತ್ನಾಳ ಚಂಡಮಾರುತ ತಣ್ಣಗಾದಂಗೈತಿ?’ ಎಂದ.

‘ಹೈಕಮಾಂಡ್ ಒತ್ತಡ... ವಾಯುಭಾರ ಕುಸಿತ ಕಮ್ಮಿಯಾಗಿರಬೇಕು...’ ಗುಡ್ಡೆ ನಕ್ಕ.

‘ಈ ಸಮುದ್ರದ ಮ್ಯಾಗಿನ ಚಂಡಮಾರುತ ಬಿಡ್ರಲೆ, ಅಡುಗಿ ಮನಿ ಒಳಗಿನ ಚಂಡಮಾರುತನ ಹೆಂಗೆ ತಣ್ಣಗೆ ಮಾಡಬೇಕು ಅದ್ನ ಹೇಳ್ರಿ’ ಎಂದ ಕೊಟ್ರೇಶಿ.

‘ಅದು ಬಾಳ ಈಸಿ, ಅಡುಗಿ ಮನೇಲಿ ಚಂಡಮಾರುತ ಎಳ್ತಿದ್ದಂಗೆ ಪಟಕ್ಕನ್ನದೆ ಬಾತ್ ರೂಂಗೆ ಹೋಗಿ ಕದ ಹಾಕ್ಕಂಡ್ರೆ ಮುಗೀತು, ಅದು ಸ್ವಲ್ಪ ಹೊತ್ತು ಹಾರ್‍ಯಾಡಿ ತಂತಾನೇ ತಣ್ಣಗಾಗ್ತತಿ’ ಎಂದ ದುಬ್ಬೀರ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಫುಟ್‌ಪಾತ್: ನಡಿಗೆ ಹಿತಕರವಾಗಲಿ

ಬಳಕೆಗೆ ಯೋಗ್ಯ ರೀತಿಯಲ್ಲಿ ಪಾದಚಾರಿ ಮಾರ್ಗಗಳನ್ನು ನಿರ್ವಹಿಸಬೇಕಾದ ಹೊಣೆಯನ್ನು ನಮ್ಮ ಸ್ಥಳೀಯ ಸರ್ಕಾರಗಳು ಮರೆತೇಬಿಟ್ಟಿವೆ

• ಬಿ.ಎಸ್. ಭಗವಾನ್

ರಸ್ತೆ ಬದಿಯ ಫುಟ್‌ಪಾತ್ ಅಥವಾ ಪಾದಚಾರಿ ಮಾರ್ಗವು ಸಾರ್ವಜನಿಕರ ಸುರಕ್ಷಿತ ನಡಿಗೆಗೆ ಒದಗಿಸಿದ ಹಾದಿ. ಮನೆಯಿಂದ ನಡೆದು ಹೊರಟವರಿಗೆ ಫುಟ್‌ಪಾತ್ ಮೇಲೆಯೇ ಜೋಪಾನವಾಗಿ ಹೋಗುವಂತೆ ಹಿತನುಡಿ ಸಲ್ಲಿರುತ್ತದೆ. ಆಫೀಸಿಗೆ, ಶಾಲೆಗೆ, ಅಂಗಡಿಗೆ, ಆಸ್ಪತ್ರೆಗೆ ತೆರಳುವ ಮಾತಿರಲಿ ಬಸ್ಸು, ರೈಲು ಹಿಡಿಯಲೂ ಪಾದಚಾರಿ ಮಾರ್ಗ ಅನಿವಾರ್ಯ. ಬ್ಯಾಂಕ್ ಅಥವಾ ಅಂಚೆ ಕಚೇರಿಯು ಮನೆಗೆ ಹತ್ತಿರವಿದ್ದರೂ ಅದನ್ನು ತಲುಪಲು ಸಹ ಫುಟ್‌ಪಾತ್ ಸುಗಮವಾಗಿರಬೇಕಲ್ಲವೇ?

ಸ್ವಚ್ಛ ಪಾದಚಾರಿ ಮಾರ್ಗವು ಪರಿಸರ ಹಾಗೂ ಆರೋಗ್ಯಸ್ನೇಹಿ. ರಸ್ತೆಯ ಬದಿಯಲ್ಲಿ ನಡೆಯಬಯಸುವ ಅಥವಾ ನಡೆಯುವ ಅಗತ್ಯವುಳ್ಳ ಎಲ್ಲರಿಗೂ ಫುಟ್‌ಪಾತ್ ಕಲ್ಪಿಸಲೇಬೇಕು. ಅದು ಮೂಲಭೂತ ಅಗತ್ಯಗಳಲ್ಲೊಂದು. ಸುಸ್ಥಿರ ಫುಟ್‌ಪಾತ್‌ಗಳಿಲ್ಲದ ನಾಗರಿಕತೆ ಅಪೂರ್ಣ. ಆದರೆ, ಆಗಿರುವುದೇನು? ಅಷ್ಟೋ ಇಷ್ಟೋ ಅಗಲದ ಪಾದಚಾರಿ ಮಾರ್ಗಗಳು ಬಹುಬಗೆಗಳಲ್ಲಿ ಒತ್ತುವರಿಯಾಗಿರುತ್ತವೆ. ಬೈಕ್, ಕಾರು, ಮಿನಿಬಸ್‌ಗಳು ಅಲ್ಲಿ ನಿಂತಿರುತ್ತವೆ. ಫುಟ್‌ಪಾತ್‌ಗಳಲ್ಲೇ ವಾಹನಗಳನ್ನು ತೊಳೆಯುವ ಮತ್ತು ಜಾನುವಾರು-ಗಳನ್ನು ಕಟ್ಟುವ ಉದಾಹರಣೆಗಳೇನು ಕಡಿಮೆಯೇ? ದೃಷ್ಟಿ ಹಾಯಿಸಿದ ಕಡೆಯೆಲ್ಲಾ ಇಟ್ಟಾಡುವ ಕಟ್ಟಡ ಸಾಮಗ್ರಿಗಳು, ಕೇಬಲ್‌ಗಳು. ಕಬ್ಬಿಣದ ಸರಳುಗಳಿಂದ ಹಂದರ ತಯಾರಿಸಲು, ಮರಗೆಲಸಕ್ಕೂ ಪಾದಚಾರಿ ಮಾರ್ಗವೇ ಆಗಬೇಕು.

ತಮ್ಮ ಮನೆ ವಿಶಾಲವಾಗಿದ್ದರೂ ಅದರ ಮಾಲೀಕರು ಫುಟ್‌ಪಾತ್ ಒತ್ತುವರಿ ಮಾಡಿರುವ ನಿದರ್ಶನಗಳು ವಿರಳವೇನಲ್ಲ. ವಿಲೇವಾರಿಯಾಗದ ತ್ಯಾಜ್ಯಕ್ಕೂ ಪಾದಚಾರಿ ಮಾರ್ಗದ ಮೋಹ! ಮಲಿನ ನೀರನ್ನು ನಗರದ ಹೊರಕ್ಕೆ ಹರಿಸುವ ಚರಂಡಿ ನಗರದ ಜೀವನಾಡಿ. ಬಿಟ್ಟ ಬಿರುಕಿನ ಮೂಲಕ ತ್ಯಾಜ್ಯದಿಂದ ಚರಂಡಿ ಭರ್ತಿಗೊಂಡರೆ ಆಗುವ ರಂಪ ಗೊತ್ತಿರುವುದೇ. ಅವೈಜ್ಞಾನಿಕ ರಚನೆಯಿಂದಾಗಿ ಫುಟ್‌ಪಾತ್‌ನಲ್ಲಿ ಅಲ್ಲಲ್ಲಿ ನೀರು ನಿಲ್ಲುವುದುಂಟು. ಮಳೆಗಾಲದಲ್ಲಿ ಅಲ್ಲಲ್ಲಿ ಹಳ್ಳಕೊಳ್ಳಗಳ ಸೃಷ್ಟಿ!

ರಸ್ತೆಯಲ್ಲಿ ಸಂಚಾರ ತೀವ್ರ ದಟ್ಟಣೆ ಅಥವಾ ಕೆಂಪು ಸಿಗ್ನಲ್‌ನಿಂದ ಪಾರಾಗಲು ಕೆಲವು ಬೈಕ್ ಸವಾರರಿಗೆ ಫುಟ್‌ಪಾತ್ ರಾಜಮಾರ್ಗವಾಗುತ್ತದೆ. ಅವರು ಅಲ್ಲಿ ಅಪಾಯಕಾರಿ ವೇಗದಿಂದ ಸಾಗುತ್ತಾರೆ. ಸಾರ್ವಜನಿಕರ ಸುರಕ್ಷತೆಗೆ ಇರುವ ಹಾದಿಯಲ್ಲೇ ಅಪಘಾತದ ಸಂಭವವೆಂದರೆ ಅದೆಂಥ ವಿಪರ್ಯಾಸ? ವಾಹನಗಳು ದೀರ್ಘಾವಧಿಗೆ ನಿಂತರೆ ಫುಟ್‌ಪಾತ್‌ಗೆ ಹೊಂದಿಸಿದ ಚಪ್ಪಡಿಕಲ್ಲುಗಳು, ಹಾಸುಬಿಲ್ಲೆಗಳು ಸೀಳಿ ಭಾರಿ ಕಂಟಕಕ್ಕೆ ಬಾಗಿಲು ತೆರೆದಿರುತ್ತದೆ. ಮುಸ್ಸಂಜೆಯ ನಂತರ ದೀಪಗಳ ವ್ಯವಸ್ಥೆಯಿರದಿದ್ದರಂತೂ ಆತಂಕ ಅಧಿಕ. ಬೆಂಗಳೂರಿನಂತಹ ಮಹಾನಗರದಲ್ಲಿ ಕೆಲವೆಡೆ ಫುಟ್‌ಪಾತ್ ಮೇಲಿನ ನಡಿಗೆ ಒಂದು ಸೂಕ್ಷ್ಮ ಸರ್ಕಸ್.

ಪಾದಚಾರಿ ಮಾರ್ಗವು ಯಾವಾಗ ಅಪಾಯಕರ ಎನ್ನಿಸುವುದೊ ಆಗ ನಡಿಗೆಗೆ ಜನ ರಸ್ತೆಯನ್ನೇ ಅವಲಂಬಿಸತೊಡಗುತ್ತಾರೆ. ವೃದ್ಧರೆಂದರೆ ವಾಹನಗಳಿಂದ ತಪ್ಪಿಸಿಕೊಡು ಓಡಾಡುವವರು ಎಂದಾಗಬಾರದು! ದೂಡುಗಾಡಿಗಳಲ್ಲಿ ಹಣ್ಣು, ತರಕಾರಿ, ಹೂವು, ಸೊಪ್ಪು ಸದೆಯಿಟ್ಟು ಮಾರುವವರ ಹಿತಾಸಕ್ತಿ ಕಡೆಗಣಿಸಲಾಗದು. ಮಂದಿಗೆ ಅಗತ್ಯ ವಸ್ತುಗಳು ನ್ಯಾಯಯುತ ಬೆಲೆಗೆ ದೊರಕಿಸುವ ಅವರು ತಮಗೂ ಜೀವನೋಪಾಯಕ್ಕೆ ದಾರಿ ಮಾಡಿಕೊಂಡವರು. ಅವರಿಗೆ ‘ಬೈಸಿಕಲ್ ಲೇನ್’ ಮಾದರಿಯಲ್ಲಿ ಕೆಲವೆಡೆಯಾದರೂ ಫುಟ್‌ಪಾತ್‌ನಲ್ಲೇ ವಿಶೇಷ ಸ್ಥಳಾವಕಾಶ ಕಲ್ಪಿಸಿದರೆ ಸುಸ್ಥಿರ ಫುಟ್‌ಪಾತ್‌ಗೆ ಅಡ್ಡಿಯೇನಾಗದು.

ರಸ್ತೆಗಳಲ್ಲಿ ಜನರ ಸಂಚಾರ ಗಮನಿಸಿ ಅದಕ್ಕೆ ತಕ್ಕಂತೆ ಸಮರ್ಪಕ ವಿನ್ಯಾಸಗಳಲ್ಲಿ ನಿರ್ಮಾಣಗೊಂಡ ಪಾದಚಾರಿ ಮಾರ್ಗಗಳು ಸಹಜವಾಗಿಯೇ ಪಾದಚಾರಿ ಸ್ನೇಹಿಯಾಗಿರುತ್ತವೆ. ಅಂದಹಾಗೆ ಹಲವು ಬಡಾವಣೆಗಳಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಕಾರುಗಳು ನಿಂತಿರುವುದರಿಂದ ಬೀದಿಗಳಲ್ಲೂ ಕಾಲುದಾರಿ ಎನ್ನುವುದು ಇರುವುದಿಲ್ಲ. ಕಾರು ಖರೀದಿಸುವ ಮುನ್ನ ಅದಕ್ಕೆ ಪಾರ್ಕಿಂಗ್ ಸ್ಥಳ ಯೋಜಿಸದಿದ್ದರೆ ಎಡವಟ್ಟು ಕಟ್ಟಿಟ್ಟ ಬುತ್ತಿ. ಕೊಳ್ಳುವ ವಾಹನದ ಉದ್ದ, ಅಗಲ ಕನಿಷ್ಠವಾದಷ್ಟೂ ಅನ್ಯರಿಗಾಗುವ ಕಿರಿಕಿರಿ ತಪ್ಪುವುದು. ಅದೇ ರೀತಿ, ಮನೆ ಆವರಣದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿಕೊಳ್ಳುವುದು ಮುಖ್ಯವಾಗಬೇಕು. ಬೀದಿ, ರಸ್ತೆಗಳು ವಾಹನಗಳ ‘ಶೋರೂಮ್’ ಅಲ್ಲ.



ಪಾದಚಾರಿಗಳ ಅನುಕೂಲಕ್ಕಿರುವ ಮೇಲ್ಸೇತುವೆ-ಗಳನ್ನು ಬಳಸದೇ ಇರುವುದು ಸಹ ಫುಟ್‌ಪಾತ್‌ಗಳ ಮೇಲೆ ಒತ್ತಡ ಹೆಚ್ಚಲು ಕಾರಣವಾಗುತ್ತದೆ. ದಾರಿಗಳನ್ನು ಉಪಯೋಗಿಸುವುದೂ ಅವುಗಳ ನಿರ್ವಹಣೆಯ ಒಂದು ಭಾಗ. ನಡಿಗೆ– ಪಾದಚಾರಿ ಮಾರ್ಗ ಹಾಗೂ ಆರೋಗ್ಯದ ನಡುವೆ ದೃಢವಾದ ನಂಟಿದೆ. ಎಲ್ಲರೂ ಜಿಮ್‌ಗೆ ಹೋಗುವಷ್ಟು ಆರ್ಥಿಕವಾಗಿ ಶಕ್ತರಲ್ಲ. ಶ್ರೀಸಾಮಾನ್ಯನ ಜಿಮ್ ಆದ ಫುಟ್‌ಪಾತ್ ನಡಿಗೆ ಹಿತಾನುಭವ ನೀಡಬೇಕು. ಬ್ರಿಟನ್ನಿನ ‘ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಕೇರ್ ಫಾರ್ ಎಕ್ಸಲೆನ್ಸ್’ ದಿನಕ್ಕೆ 10,000 ಹೆಜ್ಜೆಗಳ ನಡಿಗೆ ನಮ್ಮ ದಿನಚರಿ-ಯಲ್ಲಿರಬೇಕು ಎಂದಿದೆ. ರಮಣೀಯವೂ ಶಾಂತವೂ ಆದ ಹಾದಿಯಲ್ಲಿ ನಮ್ಮನ್ನು ನಡೆಯುವಂತೆ ಮಾಡುವ ಫುಟ್‌ಪಾತ್ ಕಳೆದುಹೋಗದಂತೆ ನೋಡಿಕೊಳ್ಳುವುದು ಸರ್ಕಾರದ್ದಷ್ಟೆ ಅಲ್ಲ, ಸಾರ್ವಜನಿಕರದ್ದೂ ಹೊಣೆ.

ಸರ್ಕಾರಗಳು ರಸ್ತೆಗಳ ನಿರ್ಮಾಣಕ್ಕೆ ಅಪಾರವಾಗಿ ಹಣ ವೆಚ್ಚ ಮಾಡುತ್ತವೆ. ಇದಕ್ಕೆ ಹೋಲಿಸಿದರೆ ಪಾದಚಾರಿ ಮಾರ್ಗಗಳಿಗೆ ವಿನಿಯೋಗಿಸುವ ಹಣ ತೀರಾ ಕಡಿಮೆ. ಬಳಕೆಗೆ ಯೋಗ್ಯ ರೀತಿಯಲ್ಲಿ ಪಾದಚಾರಿ ಮಾರ್ಗಗಳನ್ನು ನಿರ್ವಹಿಸಬೇಕಾದ ಹೊಣೆಯನ್ನು ನಮ್ಮ ಸ್ಥಳೀಯ ಸರ್ಕಾರಗಳು ಮರೆತೇಬಿಟ್ಟಿವೆ. ಆಗಿಂದಾಗ್ಗೆ ನೆನಪಿಸುವ ಜವಾಬ್ದಾರಿಯನ್ನು ನಾಗರಿಕರು ಮರೆಯಬಾರದು.

ವಾಚಕರ ವಾಣಿ

ಸಿನಿಮಾ: ಮರೀಚಿಕೆಯಾದ ವಾಸ್ತವ ಪ್ರಜ್ಞೆ

ಸಿನಿಮಾ ಮಾಧ್ಯಮವು ವಾಸ್ತವತೆಯಿಂದ ದೂರ ಸರಿಯುತ್ತಿದೆ. ಜನರ ಬದುಕಿಗೆ ಹತ್ತಿರವಲ್ಲದ ಸಿನಿಮಾಗಳ ಅಬ್ಬರ ಹೆಚ್ಚುತ್ತಿದೆ ಎಂಬ ಹಿರಿಯರೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ರಾಜಕುಮಾರ ಕುಲಕರ್ಣಿ (ಸಂಗತ, ಡಿ.5) ಮಂಡಿಸಿದ ಅಭಿಪ್ರಾಯ ಚಿಂತನಾರ್ಹವಾಗಿದೆ.

ಅತಿಮಾನುಷ ಸಾಹಸ, ಅಸಹನೀಯ ಕ್ರೌರ್ಯ, ಹೊಡೆದಾಟ ಹಾಗೂ ದೃಶ್ಯವೈಭವವೇ ಇಂದಿನ ಸಿನಿಮಾಗಳ ಜೀವಾಳ. ಸಿನಿಮಾ ಅತ್ಯಂತ ಪ್ರಭಾವಿ ಮಾಧ್ಯಮ. ಅದು, ನಕಾರಾತ್ಮಕ ನೆಲೆಯಲ್ಲೂ ಆಗಬಹುದು, ಸಕಾರಾತ್ಮಕವಾಗಿಯೂ ಸಂಭವಿಸಬಹುದು. ಹೀಗೊಂದು ಕಾಲವಿತ್ತು. ವಾರಪೂರ್ತಿ ದುಡಿದು ದಣಿದ ಮೈ ಮನಸ್ಸು ಹಗುರವಾಗಿ-ಸಿಕೊಳ್ಳಲು ಇದ್ದ ದಾರಿ ಎಂದರೆ ವಾರಾಂತ್ಯದಲ್ಲಿ ಸಿನಿಮಾ ನೋಡುವುದಾಗಿತ್ತು. ಆದರೆ, ಈಗ ಸಿನಿಮಾದಿಂದ ಮನಸ್ಸು ಮುದಗೊಳ್ಳುವುದಿಲ್ಲ. ಪ್ರೇಕ್ಷಕರನ್ನು ಯೋಚನೆಗೆ ಹಚ್ಚುವ ಚಿತ್ರಗಳು ವಿರಳ. ಒಂದು ವೇಳೆ ಅಂತಹ ಸಿನಿಮಾಗಳು ಬಿಡುಗಡೆಯಾದರೂ ಆ ಸಿನಿಮಾ ಹೆಸರು ಜನರ ಕಿವಿಗೆ ಬೀಳುವ ಮುಂಚೆಯೇ ಚಿತ್ರಮಂದಿರದಿಂದ ಹೊರಬಿದ್ದಿರುತ್ತದೆ.

ಸಿನಿಮಾದ ಉದ್ದೇಶ ಮನರಂಜನೆ ಅಷ್ಟೇ ಅಲ್ಲ. ಹಾಗಂತ ಸಿನಿಮಾಗಳೆಲ್ಲವೂ ಸಾಮಾಜಿಕ ಸಂದೇಶ ನೀಡಲೇಬೇಕು ಎಂದು ಬಯಸುವುದೂ ತಪ್ಪಾಗುತ್ತದೆ. ಆದರೆ, ಅದರಲ್ಲಿ ಕಲಾತ್ಮಕತೆ ಇರಬೇಕು, ಸಾಹಿತ್ಯ–ಸಂಗೀತ, ಅಭಿನಯ ಎಲ್ಲವೂ ಹದವಾಗಿ ಮೇಳೈಸಬೇಕು. ಪಡ್ಡೆಹುಡುಗರನ್ನು ದಾರಿ ತಪ್ಪಿಸುವಂತಹ ಕೆಲಸ ಸಿನಿಮಾಗಳಿಂದ ಆಗಕೂಡದು.

ಮಂಜುನಾಥ್ ಹಾಲವರ್ತಿ, ಕೊಪ್ಪಳ

ಸರ್ಕಾರಿ ಆಸ್ಪತ್ರೆಗಳ ಸುಧಾರಣೆ ಇಂದಿನ ಅಗತ್ಯ

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣವಾಗಲಿರುವ ಕಟ್ಟಡದ ಶಂಕುಸ್ಥಾಪನೆಯ ಸಂದರ್ಭದಲ್ಲಿ, ‘ಬಡವರು ದುಬಾರಿ ವೆಚ್ಚವನ್ನು ಭರಿಸಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಿಲ್ಲ. ಅದಕ್ಕಾಗಿಯೇ ಸರ್ಕಾರಿ ಆಸ್ಪತ್ರೆಗಳ ಅಗತ್ಯವಿದೆ’ ಎಂದು (ಪ್ರ.ವಾ., ಡಿ.5) ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಜೊತೆಗೆ, ‘ನನ್ನನ್ನೂ ಒಳಗೊಂಡಂತೆ ಬಹುತೇಕ ರಾಜಕಾರಣಿಗಳು ಸರ್ಕಾರಿ ಆಸ್ಪತ್ರೆಗೆ ಹೋಗುವುದಿಲ್ಲ’ ಎಂಬ ಸತ್ಯವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ.

ಸರ್ಕಾರಿ ಆಸ್ಪತ್ರೆಗಳನ್ನು ಇನ್ನಷ್ಟು ಬಲಪಡಿಸುವ ಅಗತ್ಯ ಇದೆ. ಅಂತೆಯೇ ಅಗತ್ಯಬಿದ್ದಾಗ ಇನ್ನು ಮುಂದಾದರೂ ಮುಖ್ಯಮಂತ್ರಿಯವರು ಸರ್ಕಾರಿ ಆಸ್ಪತ್ರೆಗಳತ್ತ ಮುಖ ಮಾಡುವ ಮನಸ್ಸು ಮಾಡಿ, ಉಳಿದ ರಾಜಕಾರಣಿಗಳಿಗೆ ಮಾದರಿಯಾಗಬೇಕು. ಅಧಿಕಾರಸ್ಥರು ಸರ್ಕಾರಿ ಆಸ್ಪತ್ರೆಗಳನ್ನು ಬಳಸಲು ಆರಂಭಿಸಿದರೆ ಆಸ್ಪತ್ರೆಗಳ ಸುಧಾರಣೆ ತನ್ನಿಂದತಾನೆ ಸಾಧ್ಯವಾಗುತ್ತದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಅಮಾಯಕ ಜನರಿಗೇಕೆ ಹಿಂಸೆ?

ಬಂದೂಕುಧಾರಿಗಳಾದ ನಕ್ಸಲೀಯರಿಗೆ ಪ್ರಾಣಭಯದಿಂದ ಊಟ ಕೊಟ್ಟಿದ್ದಕ್ಕಾಗಿ, ಕಾಡಿನ ಒಂಟಿ ಮನೆಗಳಲ್ಲಿ ವಾಸ ಮಾಡುತ್ತಿರುವ ಅಮಾಯಕ ಜನರು ನಕ್ಸಲ್‌ನಿಗ್ರಹ ದಳದವರಿಂದ ಹಿಂಸೆ ಅನುಭವಿಸಬೇಕಾಗಿದೆ. ಈ ಮುಗ್ಧರದ್ದು ‘ಇತ್ತ ದರಿ, ಅತ್ತ ಪುಲಿ’ ಎನ್ನುವ ಸ್ಥಿತಿಯಾಗಿದೆ. ನಕ್ಸಲೀಯರು ತಮ್ಮ ಮನೆಗೆ ಬಂದು ಹೋದ ಸಂಗತಿಯನ್ನು ಸ್ಥಳೀಯ ಪೊಲೀಸರಿಗೆ ತಿಳಿಸಿದರೆ, ಈ ಜನರಿಗೆ ನಕ್ಸಲೀಯರಿಂದ ಪ್ರತೀಕಾರದ ಭಯ. ಒಂದು ವೇಳೆ ಈ ವಿಷಯವನ್ನು ಪೊಲೀಸರಿಗೆ ತಿಳಿಸದಿದ್ದರೆ, ಅವರ ಕೆಂಗಣ್ಣಿಗೆ, ಹಿಂಸೆಗೆ ಗುರಿಯಾಗಬೇಕಾಗುತ್ತದೆ. ಹೀಗಿರುವಾಗ ಕಾನನಗಳ ನಡುವೆ ಒಂಟಿ ಮನೆಗಳಲ್ಲಿ ವಾಸಿಸುತ್ತಿರುವ, ರಕ್ಷಣೆಯಿಲ್ಲದ ಇಂತಹ ಅಮಾಯಕ ಜನರು ನೆಮ್ಮದಿಯಿಂದ ಬದುಕುವುದಾದರೂ ಹೇಗೆ?

ನರೇಂದ್ರ ಘೋರ್ಪಡೆ, ಭದ್ರಾವತಿ

ಕ್ರಿಕೆಟ್ ಕ್ರೇಜ್‌ನ ಹಿಂದಿನ ರಹಸ್ಯ ಹಣ!

‘ಟೆಕ್ ಕಂಪನಿಯ ಮುಖ್ಯಸ್ಥರೊಬ್ಬರಿಗೆ ವಾರ್ಷಿಕ ₹66.25 ಕೋಟಿ ಸಂಬಳ, ವಿರಾಟ್ ಕೊಹ್ಲಿಗೆ ಎರಡು ತಿಂಗಳ ಕಾಲ ಐಪಿಎಲ್ ಕ್ರಿಕೆಟ್ ಆಡಲು ₹17 ಕೋಟಿ. ಬ್ಯಾಟ್ ಹಿಡಿದು ಕ್ರಿಕೆಟ್ ಮೈದಾನಕ್ಕೆ ಹೋಗಲೋ ಲ್ಯಾಪ್‌ಟಾಪ್ ಹಿಡಿದು ಎ.ಸಿ. ಕ್ಯಾಬಿನ್‌ಗೆ ತೆರಳಲೋ’ ಎನ್ನುವ ಜೋಕ್, 13 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ ಎನ್ನುವ ಹುಡುಗನನ್ನು ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ₹1.10 ಕೋಟಿ ನೀಡಿ ಖರೀದಿಸಿದ್ದನ್ನು ನೋಡಿದಾಗ ನೆನಪಾಗುತ್ತದೆ. ಇಂದಿನ ಹುಡುಗರು ಕ್ರಿಕೆಟ್ ಮೈದಾನಕ್ಕೆ ಧಾವಿಸುವುದರ ಹಿಂದಿನ ರಹಸ್ಯ ಇದು. ಕ್ರಿಕೆಟ್‌ಗೆ ಅಂಟಿರುವ ಪ್ರಸಿದ್ಧಿ, ಹಣ, ಮತ್ತು ಜನಪ್ರಿಯತೆ ಎದುರು ಬೇರೆ ಎಲ್ಲವೂ ಶೂನ್ಯ. ಬ್ರಿಟಿಷರು ಬಿಟ್ಟು ಹೋದ ಕ್ರೀಡೆ ಬಗೆಗೆ ಅದೆಷ್ಟು ಮೋಹ?

ರಮಾನಂದ ಶರ್ಮಾ, ಬೆಂಗಳೂರು

ಮಣ್ಣಿನ ಮಹತ್ವ ಅರಿಯೋಣ

ಗುರುರಾಜ್ ಎಸ್. ದಾವಣಗೆರೆ ಅವರ ‘ರಕ್ಷಿಸಿಕೊಳ್ಳೋಣ ಜೀವ ಖಜಾನೆ’ (ಪ್ರ.ವಾ., ಡಿ.5) ಶೀರ್ಷಿಕೆಯ ಲೇಖನ ಅರ್ಥಪೂರ್ಣವಾಗಿದೆ. ಆಧುನಿಕ ಬೇಸಾಯ ಪದ್ಧತಿಗೆ ಈಗ ಎಲ್ಲರೂ ಮಾರುಹೋಗಿದ್ದಾರೆ. ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆ ವಿಪರೀತಕ್ಕೆ ಹೋಗಿರುವುದರಿಂದ ಹಣ್ಣು, ತರಕಾರಿ ಎಲ್ಲವೂ ವಿಷಕಾರಿಯಾಗಿವೆ. ಬೆಳೆ ಬೆಳೆಯುವ ಭೂಮಿಯು ಫಲವತ್ತತೆ ಕಳೆದುಕೊಳ್ಳತೊಡಗಿದೆ. ಮಣ್ಣಿನ ಮಹತ್ವ ನಮಗೆ ಇನ್ನೂ ಅರಿವಾಗದೇ ಇರುವುದರಿಂದ ಸಂರಕ್ಷಣೆಯ ಮಾತು ದೂರವೇ ಉಳಿಯಿತು.

ಮಣ್ಣು ಸಂರಕ್ಷಣೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸರ್ಕಾರ ವ್ಯಾಪಕವಾಗಿ ಮಾಡಬೇಕಿದೆ. ಕಾರ್ಯಾಗಾರ, ಕರಪತ್ರ ಹಂಚುವ ಜತೆಗೆ ಬೀದಿ ನಾಟಕದ ಮೂಲಕ ತಿಳಿವಳಿಕೆ ನೀಡಬೇಕಿದೆ. ಬಿಗಿಯಾದ ನಿಯಮ ರೂಪಿಸುವುದರಿಂದ, ಸಾವಯವ ಕೃಷಿಗೆ ಉತ್ತೇಜನ ನೀಡುವುದರಿಂದ ಮಣ್ಣಿನ ಆರೋಗ್ಯ ಕಾಪಾಡಬಹುದು. ‘ಗಲ್ಲಿ ಪ್ಲಗ್’ ಮಾಡುವ ಮೂಲಕ ಮಣ್ಣು ಕೊಚ್ಚಿ ಹೋಗುವುದನ್ನು ತಡೆಗಟ್ಟಬಹುದಾಗಿದೆ.

ಎಚ್‌.ಎನ್‌.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಶೈಕ್ಷಣಿಕ ಜೀವನದ ಉದ್ದಕ್ಕೂ ತಮ್ಮ ಅಂಕಪಟ್ಟಿ, ಪಠ್ಯೇತರ ಚಟುವಟಿಕೆಗಳ ಸಾಧನೆ ಸೇರಿದಂತೆ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವ ಆಧಾರ್ ಮಾದರಿಯ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಯೋಜನೆ 'ಅಪಾರ್' ಅನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಯೋಜನೆಯನ್ನು ರಾಜ್ಯದಲ್ಲೂ ಅನುಷ್ಠಾನಗೊಳಿಸಲಾಗುತ್ತಿದೆ. ಇದು ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಶೈಕ್ಷಣಿಕ ಸಂಸ್ಥೆಗಳು, ಔದ್ಯೋಗಿಕ ಕಂಪನಿಗಳಿಗೆ ಕೂಡ ಉಪಯುಕ್ತ ಎನ್ನುವುದು ಸರ್ಕಾರದ ಪ್ರತಿಪಾದನೆ. ವಿದ್ಯಾರ್ಥಿಯ ಶೈಕ್ಷಣಿಕ ಪಾಸ್‌ಪೋರ್ಟ್‌ನಂತೆ ಇದು ಕೆಲಸ ಮಾಡಲಿದೆ ಎಂದೂ ಅದು ಹೇಳಿದೆ. ಆದರೆ, ಆಧಾರ್ ಕಾರ್ಡ್‌ನಂತೆಯೇ, ಇಲ್ಲಿಯೂ ಗುರುತಿನ ಚೀಟಿಯಲ್ಲಿನ ದತ್ತಾಂಶದ ಗೋಪ್ಯತೆ ಕಾಪಾಡಿಕೊಳ್ಳುವುದು ಹೇಗೆ ಎನ್ನುವ ಪ್ರಶ್ನೆಗಳೂ ಎದುರಾಗಿವೆ

ಅಪಾರ್ ಹಲವು ಸಾಧ್ಯತೆ ಸವಾಲು

ಏನಿದು 'ಅಪಾರ್'?

ದೇಶದ ನಾಗರಿಕರಿಗೆ ನೀಡಲಾಗಿರುವ 'ಆಧಾರ್' ರೀತಿಯಲ್ಲಿಯೇ ವಿದ್ಯಾರ್ಥಿಗಳಿಗೆ ನೀಡಲಾಗುವ ಒಂದು ಗುರುತಿನ ಸಂಖ್ಯೆ. ಕೇಂದ್ರದ ಶಾಲಾ ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ರ ಅಡಿಯಲ್ಲಿ 'ಒಂದು ದೇಶ, ವಿದ್ಯಾರ್ಥಿಗೆ ಒಂದು ಗುರುತಿನ ಚೀಟಿ' ಆಶಯಕ್ಕನುಗುಣವಾಗಿ ಜಾರಿಗೆ ತರಲಾಗಿರುವ ಯೋಜನೆ.

'ಅಪಾರ್' ಎನ್ನುವುದು, ಸ್ವಯಂಪ್ರೇರಿತ ಶಾಶ್ವತ ಶೈಕ್ಷಣಿಕ ಖಾತೆ ನೋಂದಣಿ (AUTOMATIC PERMANENT ACADEMIC ACCOUNT REGISTRY) ಸಂಕ್ಷಿಪ್ತ ರೂಪ. ದೇಶದ ಶಾಲಾ ವಿದ್ಯಾರ್ಥಿಗಳಿಗೆ ಏಕರೂಪದ ಮತ್ತು ಸುಲಭವಾಗಿ ಲಭ್ಯವಾಗುವ, 12 ಅಂಕಿಗಳನ್ನು ಹೊಂದಿರುವ ಒಂದು ಕಾರ್ಡ್ ನೀಡಲಾಗುತ್ತದೆ. ಇದು ವಿದ್ಯಾರ್ಥಿಗಳ ಜೀವಮಾನದ ದಾಖಲೆಯಾಗಿದ್ದು, ಇದು ಒಂದು ರೀತಿಯ ಶೈಕ್ಷಣಿಕ ಪಾಸ್‌ಪೋರ್ಟ್ ಆಗಿದೆ.

ಹೇಗೆ ಕೆಲಸ ಮಾಡುತ್ತದೆ?

'ಅಪಾರ್' ವಿದ್ಯಾರ್ಥಿಯು ದಾಖಲೆಗಳನ್ನು ಕಾಪಾಡಿಕೊಳ್ಳುವ ಒಂದು ಸರಳೀಕೃತ ಯೋಜನೆ. ವಿದ್ಯಾರ್ಥಿ ಪಡೆದ ಪದವಿಗಳು, ವಿದ್ಯಾರ್ಥಿ ವೇತನ, ಪ್ರಶಸ್ತಿಗಳು ಸೇರಿದಂತೆ ಎಲ್ಲ ರೀತಿಯ ಶೈಕ್ಷಣಿಕ ಮಾಹಿತಿ, ವಿವರಗಳನ್ನು ಇದು ಒಳಗೊಂಡಿರುತ್ತದೆ. ವಿದ್ಯಾರ್ಥಿ ಜೀವನದ ಉದ್ದಕ್ಕೂ ಅವರೊಂದಿಗೆ ಇರುವ ಈ ಚೀಟಿಯು, ಉನ್ನತ ಶಿಕ್ಷಣ ಪಡೆಯುವ ಸಂದರ್ಭದಲ್ಲಿ, ಒಂದು ಕೋರ್ಸ್‌ನಿಂದ ಮತ್ತೊಂದು ಕೋರ್ಸ್‌ಗೆ ಪ್ರವೇಶ ಪಡೆಯುವ ಹಂತದಲ್ಲಿ ವಿದ್ಯಾರ್ಥಿಗೆ ಮತ್ತು ಶಿಕ್ಷಣ ಸಂಸ್ಥೆಗೆ ತುಂಬಾ ಉಪಯುಕ್ತವಾಗುತ್ತದೆ.

'ಅಪಾರ್' ಗುರುತಿನ ಚೀಟಿಯನ್ನು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ (ಎಬಿಸಿ) ಮತ್ತು ಡಿಜಿಲಾಕರ್ ಜತೆ ಜೋಡಣೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರವು ಮಾನವ ಸಂಪನ್ಮೂಲ ಇಲಾಖೆಯ ಮೂಲಕ ಜಾರಿಗೆ ತಂದಿರುವ 'ರಾಷ್ಟ್ರೀಯ ಶೈಕ್ಷಣಿಕ ಕಣಜ' (National Academic Depository) ಯೋಜನೆಯಲ್ಲಿ ವಿವಿಧ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಹಲವು ಬಗೆಯ ಪ್ರಮಾಣಪತ್ರಗಳನ್ನು ಡಿಜಿಟಲೀಕರಣ ಮಾಡುತ್ತಿದೆ. ಆ ದಾಖಲೆಗಳು ನೇರವಾಗಿ 'ಅಪಾರ್'ಗೆ ಬರುತ್ತವೆ. ಹೀಗೆ ವಿದ್ಯಾರ್ಥಿಯ ಶೈಕ್ಷಣಿಕ ಬದುಕಿಗೆ ಸಂಬಂಧಿಸಿದ ಎಲ್ಲ ದಾಖಲೆಗಳೂ ಒಂದೆಡೆ ಸಿಗಲು ಸಾಧ್ಯವಾಗುತ್ತದೆ ಎನ್ನುವುದು ಕೇಂದ್ರ ಸರ್ಕಾರದ ವಾದ.

ನೋಂದಣಿ ಹೇಗೆ?

- ಅಪಾರ್ ಐಡಿಗಾಗಿ ಪೋಷಕರು ಹೊರಗಡೆ ಎಲ್ಲೂ ಹೋಗಬೇಕಾಗಿಲ್ಲ. ಮಕ್ಕಳು ಓದುತ್ತಿರುವ ಶಾಲೆಗಳ ಮೂಲಕವೇ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸೃಜಿಸಲಾಗುತ್ತದೆ
- ಮಕ್ಕಳು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ ಪೋಷಕರ ಅನುಮತಿ ಕಡ್ಡಾಯ
- ಶಾಲಾ ದಾಖಲಾತಿ ಸಮಯದಲ್ಲಿ ನೀಡಲಾದ ದಾಖಲೆಗಳ ಆಧಾರದಲ್ಲಿ ಮಕ್ಕಳ ಗುರುತನ್ನು ದೃಢೀಕರಿಸಲಾಗುತ್ತದೆ
- ಪರಿಶೀಲನೆಯ ಬಳಿಕ ಅಪಾರ್ ಐಡಿಯನ್ನು ನೀಡಲಾಗುತ್ತದೆ. ನಂತರ, ಅದನ್ನು ಡಿಜಿಲಾಕರ್‌ಗೆ ಸೇರಿಸಲಾಗುತ್ತದೆ

DigiLocker

ನೋಂದಣಿಗೆ ಬೇಕಾಗುವ ದಾಖಲೆಗಳು/ಮಾಹಿತಿ

- ವಿದ್ಯಾರ್ಥಿಯ ವಿಶಿಷ್ಟ ಗುರುತಿನ ಸಂಖ್ಯೆ (ಪಿಇಎನ್–PEN)
- ವಿದ್ಯಾರ್ಥಿಯ ಹೆಸರು, ಜನ್ಮ ದಿನಾಂಕ, ಲಿಂಗ, ಮೊಬೈಲ್ ಸಂಖ್ಯೆ, ಆಧಾರ್ ಸಂಖ್ಯೆ, ತಾಯಿಯ ಹೆಸರು, ತಂದೆಯ ಹೆಸರು
- ಮಕ್ಕಳು, ಶಿಕ್ಷಕರು ಮತ್ತು ಶಾಲೆಗಳ ಮಾಹಿತಿಗಳನ್ನು ನಿರ್ವಹಿಸಲು ಬಳಸುವ ಸಮಗ್ರ ದತ್ತಾಂಶ ಹೊಂದಿರುವ ಯುಡಿಐಎಸ್‌ಇ+ (ಶಿಕ್ಷಣಕ್ಕಾಗಿ ಇರುವ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ+) ಪೋರ್ಟಲ್‌ನಲ್ಲಿರುವ ಹೆಸರು, ವಿದ್ಯಾರ್ಥಿಯ ಆಧಾರ್ ಕಾರ್ಡ್‌ನಲ್ಲಿರುವ ಹೆಸರಿನೊಂದಿಗೆ ಹೊಂದಿಕೆಯಾಗಬೇಕು



ದತ್ತಾಂಶ ಸುರಕ್ಷತೆಯ ಆತಂಕ

'ಅಪಾರ್' ಐಡಿಯಿಂದಾಗಿ ಹಲವು ಪ್ರಯೋಜನಗಳಿವೆ ಎಂದು ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ, ಮಕ್ಕಳು ಮತ್ತು ಪೋಷಕರ ಮಾಹಿತಿ ಹಾಗೂ ಇತರ ದತ್ತಾಂಶಗಳ ಸುರಕ್ಷತೆ ಬಗ್ಗೆ ಆತಂಕವೂ ವ್ಯಕ್ತವಾಗಿದೆ. ದತ್ತಾಂಶಗಳ ಸುರಕ್ಷತೆ ಮತ್ತು ಗೋಪ್ಯವಾಗಿ ಇರಿಸಲು 'ಅಪಾರ್' ಆದ್ಯತೆ ನೀಡುತ್ತಿದೆ. ಖಾಸಗಿತನ ಮತ್ತು ಸುರಕ್ಷತೆಯನ್ನು ಖಾತರಿ ಪಡಿಸಿಕೊಳ್ಳುವುದಕ್ಕಾಗಿ ಅಗತ್ಯವಿರುವ ಸರ್ಕಾರದ ಸಂಸ್ಥೆಗಳೊಂದಿಗೆ ಮಾತ್ರ ಮಾಹಿತಿಗಳನ್ನು ಹಂಚಿಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ.

ಹಾಗಿದ್ದರೂ, ಪೋಷಕರು, ಶಿಕ್ಷಣ ತಜ್ಞರು. ಶಿಕ್ಷಕರ ವಲಯದಲ್ಲಿರುವವರು ಮಾಹಿತಿ ಸೋರಿಕೆಯಾಗುವ, ಅವುಗಳನ್ನು ದುರ್ಬಳಕೆ ಮಾಡುವ ಸಾಧ್ಯತೆ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿದ್ದಾರೆ.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು, ಗಂಡು ಮಕ್ಕಳ ವೈಯಕ್ತಿಕ, ಶೈಕ್ಷಣಿಕ ಮಾಹಿತಿಗಳನ್ನು ರಕ್ಷಿಸಲು ಕಾನೂನಾತ್ಮಕ ವ್ಯವಸ್ಥೆ ಇಲ್ಲ. 'ಅಪಾರ್' ಐಡಿಯನ್ನು ಡಿಜಿಲಾಕರ್‌ನೊಂದಿಗೆ, ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ ಖಾತೆಯೊಂದಿಗೆ ಜೋಡಿಸಲಾಗುತ್ತದೆ. ಇದರಿಂದ ಇತರ ಸಚಿವಾಲಯಗಳು, ಸಂಸ್ಥೆಗಳಿಗೂ ಸುಲಭವಾಗಿ ಮಾಹಿತಿಗಳು ಸಿಗುವಂತಾಗುತ್ತವೆ ಎನ್ನುವುದು ಮತ್ತೊಂದು ಆತಂಕ.

'ಅಪಾರ್' ಐಡಿ ಪಡೆಯುವುದು ಕಡ್ಡಾಯವಲ್ಲ, ಪೋಷಕರ ಅನುಮತಿ ಪಡೆಯದೇ ಶಾಲೆಗಳು ಐಡಿ ಸೃಷ್ಟಿಸುವಂತಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಕೆಲವು ಶಾಲೆಗಳು ಎಲ್ಲ ಮಕ್ಕಳಿಗೂ ಇದನ್ನು ಕಡ್ಡಾಯಗೊಳಿಸಿವೆ. ಪೋಷಕರಿಂದ ಸಹಿ ಹಾಕಿಸುವಂತೆ ಹೇಳಿ ಮಕ್ಕಳ ಮೂಲಕ ಅನುಮತಿ ಪತ್ರ ಪ್ರತಿಯನ್ನು ಕಳುಹಿಸಲಾಗುತ್ತಿದೆ ಎಂಬ ದೂರುಗಳು ಇವೆ. ರಾಜ್ಯ ಸರ್ಕಾರಗಳು 'ಅಪಾರ್' ಐಡಿಯನ್ನು ಮಾಡಿಸಲು ಶಾಲೆಗಳಿಗೆ ಗಡುವು ವಿಧಿಸಿರುವ ಕುರಿತಾಗಿಯೂ ವರದಿಯಾಗಿದೆ.

ಸರ್ಕಾರದ ಯೋಜನೆಗಳ ಲಾಭವನ್ನು ಪಡೆಯುವುದಕ್ಕೆ 'ಅಪಾರ್' ಐಡಿ ಕಡ್ಡಾಯವಲ್ಲ ಎಂದು ಕೇಂದ್ರ ಹೇಳಿದೆ. ಆಧಾರ್ ಸಂಖ್ಯೆಯ ಬಗ್ಗೆಯೂ ಕೇಂದ್ರ ಸರ್ಕಾರದ ನಿಲುವು ಇದೇ ಆಗಿದೆ. ಆದರೆ, ಸರ್ಕಾರದ ಇಲಾಖೆಗಳು ಎಲ್ಲದಕ್ಕೂ ಆಧಾರ್ ಕಾರ್ಡ್ ಅನ್ನೇ ಕೇಳುತ್ತಿವೆ. ಆಧಾರ್ ಸಂಖ್ಯೆ ಹೊಂದಿರುವುದು ಈಗ ಅನಿವಾರ್ಯವಾಗಿದೆ. 'ಅಪಾರ್' ಐಡಿ ವಿಚಾರದಲ್ಲೂ ಇದೇ ರೀತಿ ಆಗಬಹುದು ಎಂಬ ಆತಂಕವೂ ಪೋಷಕರಲ್ಲಿದೆ. ಶಿಕ್ಷಣ ಮತ್ತು ಪೋಷಕರ ವಲಯದಲ್ಲಿ ವ್ಯಕ್ತವಾಗಿರುವ ಆತಂಕಗಳನ್ನು ದೂರ ಮಾಡುವ ಸವಾಲು ಕೇಂದ್ರ ಸರ್ಕಾರದ ಮುಂದಿದೆ.

ಕರ್ನಾಟಕದಲ್ಲೂ ಅನುಷ್ಠಾನ

ರಾಜ್ಯದಲ್ಲೂ 'ಅಪಾರ್' ಜಾರಿಗೆ ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ. ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳ ಒಂದು ಕೋಟಿಗೂ ಹೆಚ್ಚು ಮಕ್ಕಳಿಗೆ ಅಪಾರ್ ಐಡಿ ನೀಡುವ ಗುರಿಯನ್ನು ಹೊಂದಿದೆ. ರಾಜ್ಯದಲ್ಲಿ ಈಗಾಗಲೇ ವಿದ್ಯಾರ್ಥಿ ಸಾಧನೆ ನಿಗಾ ವ್ಯವಸ್ಥೆ (ಎಸ್‌ಎಟಿಎಸ್) ಇದೆ. ಹೀಗಿರುವಾಗ ಮತ್ತೊಂದು ವ್ಯವಸ್ಥೆಯ ಅಗತ್ಯವಿದೆಯೇ ಎಂದು ಶಿಕ್ಷಣ ತಜ್ಞರು ಪ್ರಶ್ನಿಸುತ್ತಿದ್ದಾರೆ. ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಿಗೆ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರುವುದಾಗಿ ಘೋಷಿಸಿದೆ. ಹೀಗಿರುವಾಗ ರಾಜ್ಯದಲ್ಲೂ ಅಪಾರ್ ಅನುಷ್ಠಾನ ಮಾಡುತ್ತಿರುವುದು, ಸರ್ಕಾರದ ನಿಲುವಿಗೆ ವಿರುದ್ಧವಲ್ಲವೇ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಫೆ.13, 2024	ಸೆ.2, 2024	34 ಕೋಟಿ
ಅಪಾರ್ ಯೋಜನೆಗೆ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಚಾಲನೆ	ಶಾಲಾ ಮಟ್ಟದಲ್ಲಿ ಅಪಾರ್ ಐಡಿ ಆಂದೋಲನ ಆರಂಭ	ಈವರೆಗೆ ನೋಂದಣಿ ಆಗಿರುವ ಅಪಾರ್ ಐಡಿ

ಏನು ಉಪಯೋಗ?

ವಿದ್ಯಾರ್ಥಿಗಳಿಗೆ ಇದು ಒಂದು ಡಿಜಿಟಲ್ ದಾಖಲಾತಿ. ಅವರ ಸಮಗ್ರ ಶೈಕ್ಷಣಿಕ ದಾಖಲೆ, ಪಠ್ಯೇತರ ಚಟುವಟಿಕೆಗಳಲ್ಲಿ ಮಾಡಿದ ಸಾಧನೆಗಳ ದತ್ತಾಂಶವನ್ನು ಇದು ಒಳಗೊಂಡಿರುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಕೌಶಲ ತರಬೇತಿ ಸಂಸ್ಥೆಗಳು ಮೂಲಕ ವಿದ್ಯಾರ್ಥಿಯ ಹಿನ್ನೆಲೆ, ಅವರ ಸಾಧನೆ ಸೇರಿದಂತೆ ಕೋರ್ಸ್ ಪ್ರವೇಶ ಅಥವಾ ಉದ್ಯೋಗ ನೀಡುವುದಕ್ಕೆ ಅಗತ್ಯವಾದ ಮಾಹಿತಿಯನ್ನು ಈ ಐಡಿ ಮೂಲಕ ಸುಲಭವಾಗಿ ಪಡೆಯಬಹುದು. ವಿವಿಧ ಪ್ರವೇಶ ಪರೀಕ್ಷೆ ಮತ್ತು ಉದ್ಯೋಗ ನೀಡುವ ವೇಳೆ ದಾಖಲಾತಿಗಳ ಪರಿಶೀಲನೆ ಮಾಡುವುದೂ ಇದರಿಂದ ಸುಲಭವಾಗಲಿದೆ.

ವಿದ್ಯಾರ್ಥಿಗಳು ಆಗಿಂದಾಗ್ಗೆ ತಮ್ಮ ಶೈಕ್ಷಣಿಕ ಪಯಣವನ್ನು ಪರಿಶೀಲಿಸಬಹುದಾಗಿದೆ. ಪರೀಕ್ಷೆಗಳಲ್ಲಿ ತಮ್ಮ ಸಾಧನೆ, ಸಾಮರ್ಥ್ಯಕ್ಕೆ ತಕ್ಕಂತೆ ಭವಿಷ್ಯದ ಯೋಜನೆಗಳನ್ನು ರೂಪಿಸಿಕೊಳ್ಳಲೂ ಇದು ಸಹಾಯಕವಾಗಿದೆ. ಕಾಲದಿಂದ ಕಾಲಕ್ಕೆ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಚಿತ್ರಣವನ್ನು ಒದಗಿಸುತ್ತದೆ. ವಿದ್ಯಾರ್ಥಿಗೆ ಯಾವ ರೀತಿಯ ಕೌಶಲದ ಕೊರತೆ ಇದೆ ಎನ್ನುವುದನ್ನು ಅರಿಯಲು ಮತ್ತು ಅದಕ್ಕೆ ತಕ್ಕಂತೆ ಕೌಶಲ ತರಬೇತಿ ನೀಡಲು ಔದ್ಯಮಿಕ ಕ್ಷೇತ್ರಕ್ಕೆ ಹಾಗೂ ಕೌಶಲ ತರಬೇತಿ ಕೇಂದ್ರಗಳಿಗೆ ಇದರಿಂದ ಸಹಾಯವಾಗುತ್ತದೆ ಎಂದು ಹೇಳಲಾಗಿದೆ.



ವಿದ್ಯಾರ್ಥಿಗಳು ತಮಗೆ ಅಗತ್ಯ ಎನಿಸಿದಾಗ ಯಾವ ಸಮಯದಲ್ಲಿ ಬೇಕಾದರೂ 'ಅಪಾರ್' ಮೂಲಕ ತಮ್ಮ ದಾಖಲೆಗಳನ್ನು ಪಡೆಯಬಹುದಾಗಿದೆ. ಅಧಿಕೃತ ಸಂಸ್ಥೆ, ವ್ಯವಸ್ಥೆಯ ಮೂಲಕ ಪಡೆದ ದಾಖಲೆಗಳು ಮಾತ್ರವೇ ಅಲ್ಲಿ ಲಭ್ಯ. ಬೆಳವಣಿಗೆಗೆ ತಕ್ಕಂತೆ, ವಿದ್ಯಾರ್ಥಿಯ ಶೈಕ್ಷಣಿಕ ಅಂಕಪಟ್ಟಿ ಮತ್ತಿತರ ಸಾಧನೆಯ ವಿವರಗಳು ತಕ್ಷಣವೇ ಅಪ್‌ಡೇಟ್ ಆಗುತ್ತವೆ. ಈ ಚೀಟಿಯಲ್ಲಿರುವ ವಿವರಗಳು ನಿಖರವಾಗಿರುತ್ತವೆ ಮತ್ತು ಪಾರದರ್ಶಕವಾಗಿರುತ್ತವೆ ಎಂದು ಹೇಳುತ್ತದೆ ಕೇಂದ್ರ ಸರ್ಕಾರ.

ದಾಖಲೆಗಳನ್ನು ನಿರ್ವಹಿಸಲು ವ್ಯವಸ್ಥಿತವಾದ ಹಾಗೂ ಸುಲಭ ವಿಧಾನ ಇದಾಗಿದೆ. ವಿದ್ಯಾರ್ಥಿಗಳು ಪ್ರವೇಶ ಪಡೆದ ಗಳಿಗೆಯಿಂದ ಅವರ ಹಾಜರಾತಿ, ಶೈಕ್ಷಣಿಕ ಪ್ರಗತಿ ಸಾಧಿಸುವುದು ಎಲ್ಲ ವಿವರಗಳೂ ಅಡಕವಾಗಿರುತ್ತವೆ. ಆರ್‌ಟಿಇ ಕಾಯ್ದೆಯ ಜಾರಿಯ ಸಂಬಂಧ ಶಾಲೆ ಬಿಟ್ಟ ಮಕ್ಕಳು, ಅಂಗವಿಕಲ ಮಕ್ಕಳು, ಅಂಚಿನ ಸಮುದಾಯಗಳ ಮಕ್ಕಳು ಮತ್ತು ಅವರು ಶಾಲೆಗೆ ಪ್ರವೇಶ ಪಡೆದ ಪ್ರಮಾಣ ಇತ್ಯಾದಿಗಳನ್ನು ಪತ್ತೆ ಹಚ್ಚಲು ಕೂಡ ಇದರಿಂದ ಸಹಾಯವಾಗುತ್ತದೆ. ಈ ಮೂಲಕ ಸರ್ಕಾರಗಳ ಯೋಜನೆ ಅನುಷ್ಠಾನಕ್ಕೆ ಮತ್ತು ಆಶಯ ಈಡೇರಿಕೆಗೆ 'ಅಪಾರ್' ನೆರವಾಗುತ್ತದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

ನಾವು ನೋಡಿದ ಸಿನಿಮಾ


ಅಲ್ಲು ಅರ್ಜುನ್

ಅದ್ದೂರಿತನವೇ 'ಪುಷ್ಪ'ನ ಜೀವಾಳ

ಹಿಟ್ ಆದ ಸಿನಿಮಾದ ಸೀಕ್ವೆಲ್‌ಗಳು ಪ್ರೇಕ್ಷಕರನ್ನು ಅನಾಯಾಸವಾಗಿ ಚಿತ್ರಮಂದಿರದತ್ತ ಸೆಳೆಯುತ್ತವೆ. ಇಂತಹ ಸೀಕ್ವೆಲ್‌ಗಳಲ್ಲಿ ಸೆಳೆಯುವ ಕಥೆ ಬಹುಮುಖ್ಯವಾಗುತ್ತದೆ. ಒಂದು ಡ್ರಾಮಾ ಇಲ್ಲದೆ, ಕೇವಲ ನಾಯಕನ ಅದ್ದೂರಿ ಮೆರವಣಿಗೆಗೆ, ಬ್ರ್ಯಾಂಡ್ ಸೃಷ್ಟಿಗೆ ಸಿನಿಮಾ ಸೀಮಿತವಾದರೆ ಅದು 'ಪುಷ್ಪ-2' ಆಗುತ್ತದೆ. 'ಪುಷ್ಪ-ದಿ ರೈಸ್'ನಲ್ಲಿ ಒಂದೊಳ್ಳೆಯ ಕಮರ್ಷಿಯಲ್ ಡ್ರಾಮಾ ಹೆಣೆದಿದ್ದ ನಿರ್ದೇಶಕ ಸುಕುಮಾರ್ ಎರಡನೇ ಭಾಗದಲ್ಲಿ 'ರೂಲ್' ಮಾಡಲು ಹೋಗಿ ಉರುಳಿಬಿದ್ದಿದ್ದಾರೆ.

ಪುಷ್ಪ 2–ದಿ ರೂಲ್ (ತೆಲುಗು)
- **ನಿರ್ಮಾಣ:** ನವೀನ್ ಯರ್ನೇನಿ, ವೈ. ರವಿಶಂಕರ್
- **ನಿರ್ದೇಶನ:** ಬಿ. ಸುಕುಮಾರ್
- **ತಾರಾಗಣ:** ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ, ಫಹಾದ್ ಫಾಸಿಲ್, ರಾವ್ ರಮೇಶ್, ಜಗಪತಿ ಬಾಬು, ಅಜಯ್, ಅನಸೂಯಾ ಭಾರದ್ವಾಜ್ ಮತ್ತಿತರರು

'ಪುಷ್ಪ' ಸಿನಿಮಾದ ಮೊದಲ ಭಾಗದ ಕಥೆ 'ಕೇಸವ' ಎಂಬ ಪಾತ್ರದ ಹಿನ್ನೆಲೆ ಧ್ವನಿಯಲ್ಲಿ ಸಾಗಿತ್ತು. ಆ ಹಿನ್ನೆಲೆ ಧ್ವನಿ ಹಾಗೂ 'ಪುಷ್ಪರಾಜ್' ಪಾತ್ರ ಕಥೆಗೊಂದು ಗತ್ತು ತಂದು ಸರಾಗವಾಗಿ ಸಾಗಿತ್ತು. ಈ ನಿರೂಪಣೆ, ಭಾಷಾ ಶೈಲಿ ಭಿನ್ನವಾಗಿಯೂ ಇತ್ತು. ಕೂಲಿಯಾಗಿ ಕೆಲಸಕ್ಕೆ ಸೇರಿದ 'ಪುಷ್ಪ' ನಂತರದಲ್ಲಿ 'ಪುಷ್ಪರಾಜ್' ಆಗಿ ಬೆಳೆದ ಬಗೆಯನ್ನು 'ಪುಷ್ಪ–ದಿ ರೈಸ್' ಹೇಳಿತ್ತು. ಆತನ ಆಳ್ವಿಕೆಯನ್ನು ಈ ಭಾಗ ಹೇಳಿದೆ.

ಕಥಾನಾಯಕ 'ಪುಷ್ಪ' ರಕ್ತಚಂದನ ಕಳ್ಳ ಸಾಗಣೆಯ ಸಿಂಡಿಕೇಟ್‌ನ ಮುಖ್ಯಸ್ಥನಾಗಿದ್ದಾನೆ. ಕೈಯಲ್ಲಿ ನೂರಾರು ಕೋಟಿಯಿದೆ. ಮುಖ್ಯಮಂತ್ರಿಯನ್ನೇ ಬದಲಾಯಿಸುವಷ್ಟು ಹಣ ಆತನ ಬಳಿಯಿದೆ. ಆತನನ್ನು ಹಿಡಿಯಲು 'ಬನ್ವರ್ ಸಿಂಗ್ ಶೇಖಾವತ್' ಹಲವು ಪ್ರಯತ್ನ ಮಾಡಿ ಸೋಲುತ್ತಾನೆ. ಇದು ಎರಡನೇ ಭಾಗದ ಮೊದಲಾರ್ಧ. ಮಧ್ಯಂತರದ ಬಳಿಕ ಮೂರನೇ ಭಾಗಕ್ಕೆ ಬೇಕಾಗುವ 'ವೀರ ಪ್ರತಾಪ್ ರೆಡ್ಡಿ' ಪಾತ್ರದ ಕೆತ್ತನೆಗೆ ಸುಕುಮಾರ್ ಹೆಜ್ಜೆ ಇಡುತ್ತಾರೆ. ಈ ಮೂಲಕ ನಟ ಜಗಪತಿ ಬಾಬು ಪ್ರವೇಶವಾಗುತ್ತದೆ. ಕ್ಲೈಮ್ಯಾಕ್ಸ್‌ನಲ್ಲಿ 'ಇಂಟಿ ಪೇರು' ಎಂದರೆ ಅಪ್ಪನ ಮನೆತನದ ಹೆಸರು 'ಪುಷ್ಪ'ನಿಗೆ ಸಿಗುವಷ್ಟರಲ್ಲಿ ಮೂರನೇ ಭಾಗಕ್ಕೆ ಬೇಕಾದ ಘಟನೆಯನ್ನು ನಿರ್ದೇಶಕರು ಸೃಷ್ಟಿಸುತ್ತಾರೆ. ಮೂರೂವರೆ ಗಂಟೆಯ ಈ ಭಾಗದಲ್ಲಿ ಒಂದು ಕಥೆ ಇಡಿಯಾಗಿ ಕಾಣಸಿಗುವುದಿಲ್ಲ. ಬಿಡಿ ಬಿಡಿ ಕಥೆಗಳ ಗುಚ್ಛವಾಗಿ ಚದುರಿ ಹೋಗಿದೆ. ಮೊದಲ ಭಾಗದಲ್ಲಿದ್ದ ಅನುಕ್ರಮಣಿಕೆಯ ಕಥನ ತಂತ್ರ ಈ ಭಾಗದಲ್ಲಿಲ್ಲ.

ಮೊದಲ ಭಾಗದಲ್ಲೇ 'ಪುಷ್ಪರಾಜ್' ಎಂಬ ಪಾತ್ರವನ್ನು ಸುಕುಮಾರ್ ಸ್ಟೈಲಿಷ್ ಆಗಿ ಹೆಣೆದಿದ್ದರು. ಅದಕ್ಕೆ ಮತ್ತಷ್ಟು ಅದ್ದೂರಿತನ ತರುವ ಕೆಲಸ ಈ ಭಾಗದಲ್ಲಾಗಿದೆ. ಕಾಲಿನಮೇಲೆ ಕಾಲು ಹಾಕಿಯೇ ಕೂರುವುದು, ಎಡಭುಜವನ್ನು ಕೊಂಚ ಸೆಟೆಸಿ, ಬಲಕ್ಕೆ ವಾಲಿಕೊಂಡೇ ಬಲಗೈಯನ್ನು ಎತ್ತಿ ಅಲುಗಾಡಿಸುತ್ತಾ ಹೆಜ್ಜೆ ಹಾಕುವುದು ಹೀಗೆ 'ಪುಷ್ಪರಾಜ್' ತೆರೆ ಮೇಲೆ ಭರ್ಜರಿಯಾಗಿ ಕಾಣಿಸಿಕೊಂಡಿದ್ದಾನೆ. ಇಷ್ಟು ಭರ್ಜರಿಯಾದ ಸ್ಟೈಲಿಷ್ ನಾಯಕನಿದ್ದರೂ ಶಿಳ್ಳೆ, ಚಪ್ಪಾಳೆಗಿಟ್ಟಿಸುವಂತಹ ಸನ್ನಿವೇಶಗಳು ಬರುವುದು ನಾಲ್ಕೈದು ಕಡೆಯಷ್ಟೇ. ಮೇಕಿಂಗ್ ವಿಚಾರದಲ್ಲಿ ಹತ್ತಾರು ಹೊಸ ಹೆಜ್ಜೆಗಳನ್ನು ಈ ಸಿನಿಮಾವಿಟ್ಟಿದ್ದು, ಇದಕ್ಕೆ ತಕ್ಕ ರೀತಿಯಲ್ಲಿ ವಿಎಫ್‌ಎಕ್ಸ್ ಮೂಡಿಬಂದಿಲ್ಲ. ದೇವಿಶ್ರೀ ಪ್ರಸಾದ್ ಸಂಗೀತ, ಪೀಟರ್ ಹೈನ್–ಡ್ರ್ಯಾಗನ್ ಪ್ರಕಾಶ್ ಸಾಹಸ ನಿರ್ದೇಶನ ಚಿತ್ರಕ್ಕೆ ಹೊಸ ರೂಪ ನೀಡಿದೆ. ಮಿರೊಸ್ಲಾವ್ ಬ್ರೊಜೆಕ್ ಕ್ಯಾಮೆರಾ ಕಣ್ಣು ಹೊಸ ಪ್ರಪಂಚವನ್ನು ತೆರೆಗೆ ತಂದಿದೆ.

'ಶ್ರೀವಲ್ಲಿ' ಗರ್ಭಿಣಿ ಎಂದು ತಿಳಿದಾಗ ಹೆಣ್ಣು ಮಗುವಿಗಾಗಿ 'ಪುಷ್ಪರಾಜ್' ಗಂಗಮ್ಮ ತಲ್ಲಿ ಜಾತ್ರೆಯಲ್ಲಿ ಹರಕೆ ಹೊತ್ತು ಹಾಕುವ ಹೆಜ್ಜೆ ಮೈ ಜುಂಮೆನಿಸುತ್ತದೆ. ಅಲ್ಲು ಅರ್ಜುನ್ ಡ್ಯಾನ್ಸ್, ಫೈಟಿಂಗ್ ಜೊತೆಗೆ ಭಾವನಾತ್ಮಕ ದೃಶ್ಯಗಳಲ್ಲಿ ಅಂಕ ಗಿಟ್ಟಿಸುತ್ತಾರೆ. 'ಶ್ರೀವಲ್ಲಿ'ಯಾಗಿ ರಶ್ಮಿಕಾ ಮಂದಣ್ಣ ಅವರಿಗೆ ಈ ಭಾಗದಲ್ಲಿ ಹೆಚ್ಚಿನ ತೆರೆ ಅವಧಿ ದೊರಕಿದ್ದು, ಅದನ್ನು ಸಮರ್ಥವಾಗಿ ಅವರು ಬಳಸಿಕೊಂಡಿದ್ದಾರೆ. ಇವರಿಬ್ಬರ 'ಕೆಮಿಸ್ಟ್ರಿ'ಯನ್ನು ಈ ಭಾಗದಲ್ಲಿ ಅಂದವಾಗಿ ಕೆತ್ತಲಾಗಿದೆ. ಮೊದಲ ಭಾಗದಲ್ಲಿ 'ಬನ್ವರ್ ಸಿಂಗ್ ಶೇಖಾವತ್' ಎಂಬ ರಗಡ್ ಪೊಲೀಸ್ ಪಾತ್ರ ಬರವಣಿಗೆಯಲ್ಲಿ ಎಡವಿ ಎರಡನೇ ಭಾಗದಲ್ಲಿ ಸಂಪೂರ್ಣ ದಾರಿ ತಪ್ಪಿ, 'ಜೋಕರ್' ರೀತಿಯಾಗಿದೆ. ಶ್ರೀಲೀಲಾ ಹೆಜ್ಜೆ ಹಾಕಿದ ಐಟಂ ಹಾಡು ವ್ಯರ್ಥ. 200 ನಿಮಿಷದ 'ಪುಷ್ಪ–2' ನೋಡಲು ತಾಳ್ಮೆ ಖಂಡಿತ ಬೇಕು. ಮೊದಲ ಭಾಗದಲ್ಲಿ ಒಂದೇ ಕೈಯಲ್ಲಿ ಗಡ್ಡವನ್ನು ಸವರಿದ್ದ ಅಲ್ಲು ಅರ್ಜುನ್, ಎರಡನೇ ಭಾಗದಲ್ಲಿ ಎರಡೂ ಕೈಗಳಿಂದ ಗಡ್ಡ ಸವರಿದ್ದಾರೆ. ಮೂರನೇ ಭಾಗದಲ್ಲಿ...? ಅಂದ ಹಾಗೆ ಮುಂದೆ 'ಪುಷ್ಪ–3: ದಿ ರ್‍ಯಾಂಪೇಜ್' ಬರಲಿದೆ.

ಅಭಿಲಾಷ್ ಪಿ.ಎಸ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ದೇವಸ್ಥಾನವೊಂದರಲ್ಲಿ 24 ವರ್ಷದ ಮಹಿಳೆಯೊಬ್ಬರು 50 ವರ್ಷದ ವಯಸ್ಸಿನ ತಂದೆಯನ್ನೇ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದಾರೆ ಎಂದು ಹೇಳಿಕೊಂಡ ವಿಡಿಯೊವನ್ನು ಸಮಾಜವಾದಿ ಪಕ್ಷದ ಮುಖಂಡರೊಬ್ಬರು ಎಕ್ಸ್‌ನಲ್ಲಿ ಇತ್ತೀಚೆಗೆ ಹಂಚಿಕೊಂಡಿದ್ದರು. ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ಇದರ ಆಧಾರದಲ್ಲಿ ಹಲವು ಮಾಧ್ಯಮ ಸಂಸ್ಥೆಗಳು ಕೂಡ ಆ ಮದುವೆಯ ಕುರಿತಾಗಿ ಸುದ್ದಿಗಳನ್ನು ಮಾಡಿದ್ದವು. ಆದರೆ. ಅದು ವಾಸ್ತವ ಅಲ್ಲ.

ವಿಡಿಯೊದ ಫ್ರೇಮ್‌ಗಳನ್ನು ಕೀ ವರ್ಡ್‌ಗಳ ಸಹಾಯದಿಂದ ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಡಿದಾಗ ರಾಯಲ್ ಟೈಗರ್ ಎಂಬ ಯುಟ್ಯೂಬ್ ಚಾನೆಲ್‌ನಲ್ಲಿ ನವೆಂಬರ್ 2ರಂದು ಅಪ್‌ಲೋಡ್ ಮಾಡಿರುವ ದೀರ್ಘ ಅವಧಿಯ ವಿಡಿಯೊ ಸಿಕ್ಕಿತು. ಆ ವಿಡಿಯೊದಲ್ಲಿ ಡಿಸ್‌ಕ್ಲೇಮರ್ ಕೂಡ ಇದ್ದು, ಈ ವಿಡಿಯೊವನ್ನು ಮನರಂಜನೆಯ ಉದ್ದೇಶದಿಂದ ಮಾಡಲಾಗಿದೆ ಎಂದು ಹೇಳಲಾಗಿದೆ. ಸೊಸೆಯೊಬ್ಬಳು ತನ್ನ ಮಾವನನ್ನೇ ಮದುವೆಯಾಗುವ ದೃಶ್ಯಾವಳಿಗಳನ್ನು ವಿಡಿಯೊ ಹೊಂದಿದೆ. ಆ ಯುಟ್ಯೂಬ್ ಚಾನೆಲ್‌ನ ವಿವರಗಳನ್ನು ಗಮನಿಸಿದಾಗ ದೆಹಲಿಯ ಅಂಕಿತಾ ಕರೋಟಿಯಾ ಎಂಬ 'ವಿಡಿಯೊ ಕ್ರಿಯೇಟರ್' ಅದನ್ನು ನಿರ್ವಹಿಸುತ್ತಿರುವುದು ತಿಳಿಯಿತು. ಈ ವಿಡಿಯೊದಲ್ಲಿ ಮಾವನ ಪಾತ್ರ ನಿರ್ವಹಿಸಿದ ವ್ಯಕ್ತಿಯೇ ಇನ್ನೊಂದು ಯುಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಆಗಿದ್ದ ವಿಡಿಯೊವೊಂದರಲ್ಲಿ ಆಟೊ ಚಾಲಕನ ಪಾತ್ರ ನಿರ್ವಹಿಸಿದ್ದು ಕಂಡು ಬಂತು. ಹಾಗಾಗಿ, ಇದು ಮನರಂಜನೆಯ ಉದ್ದೇಶದಿಂದ ಯೋಜಿತವಾಗಿ ಚಿತ್ರೀಕರಿಸಿದ್ದ ವಿಡಿಯೊ ಎಂಬುದು ದೃಢಪಟ್ಟಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಮನುಷ್ಯ ಯಾರಿಗೆ ಕ್ಷಮೆ ಕೇಳಬೇಕು?

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

82

'ನಿಮ್ಮ ತಂದೆ ತಾಯಿಯ ಕೊನೆಗಾಲದಲ್ಲಿ ಅವರ ಮನಸ್ಸಿಗೆ ನೋವು ಮಾಡಿದೆಯಲ್ಲ. ಅವರಿಗೆ ಕ್ಷಮೆ ಕೇಳು. ನಿನ್ನ ಮಕ್ಕಳಿಗೆ ಕ್ಷಮೆ ಕೇಳು. ಯಾಕಂದರ ನೀನು ಮನೆಗೆ ಬರುವಾಗ ಅವರು ಮಲಗಿರ್ತಾರ. ಬೆಳಿಗ್ಗೆ ನೀನು ಏಳೋ ಮೊದಲು ಅವರು ಶಾಲಿಗಿ ಹೋಗಿರ್ತಾರ. ನಿನ್ನ ಮಕ್ಕಳೂ ನಿನ್ನ ಮುಖ ಸರಿಯಾಗಿ ನೋಡಿಲ್ಲ. ಅವರ ಜೊತೆ ನೀನು ಸರಿಯಾಗಿ ಮಾತನಾಡಿಲ್ಲ. ನಿನ್ನ ಮಕ್ಕಳಿಗೆ ನೀಡಬೇಕಾದ ಸಮಯವನ್ನು ನೀಡಲು ಸಾಧ್ಯವಾಗಿಲ್ಲವಲ್ಲ ಅಂತ ನಿನ್ನ ಮಕ್ಕಳಲ್ಲಿ ಕ್ಷಮೆ ಕೇಳು. ನಿನ್ನ ಪತ್ನಿಗೆ ಕ್ಷಮೆ ಕೇಳು. ನಿನ್ನ ಸಲುವಾಗಿ ಮನೆಬಿಟ್ಟು ಬಂದ ಆಕೆಗೆ ನೀನು ದೆವ್ವವಾಗಿ ಕುಂತಿದಿ ಎಂಬೋದನ್ನು ಅರಿತು ಕ್ಷಮೆ ಕೇಳು. ಆಕೆಯ ಕೆನ್ನೆಯ ಮೇಲೆ ಕಣ್ಣೀರು ಹರಿಸಿದ್ದಕ್ಕೆ ಕ್ಷಮೆ ಕೇಳು. ನಿಜವಾದ ಪ್ರಾಯಶ್ಚಿತ್ತ ಯಾವುದು ಅಂದರ ನೀನು ಯಾರ ನೋವಿಗೆ ಕಾರಣ ಆದಿಯಲ್ಲ, ನಿನ್ನಿಂದ ಯಾರ್‍ಯಾರೆಲ್ಲ ನೊಂದಿದ್ದಾರಲ್ಲ ಅದರ ಬಗ್ಗೆ ನಿನ್ನ ಕಣ್ಣಲ್ಲಿ ಒಂದು ಸಣ್ಣ ನೀರಿನ ಹನಿ ಬಂದರ ಅದು ನೀನು ಗಂಗೆಯಲ್ಲಿ ಸ್ನಾನ ಮಾಡಿದ್ದಷ್ಟೇ ಪಾವಿತ್ರ್ಯ ತಂದುಕೊಡುತ್ತೈತಿ. ನಿನ್ನ ಜೀವನದಲ್ಲಿ ಯಾರ್‍ಯಾರಿಗೆ ತಪ್ಪು ಮಾಡಿಯಲ್ಲ, ಅವರಿಗೆಲ್ಲ ಕ್ಷಮೆ ಕೇಳು' ಎಂದು ಕವಿ ರವೀಂದ್ರರು ಹೇಳ್ತಾರ.

'ನೀನು ದೇವನ ಮುಂದೆ ಮಂಡಿಯೂರಿ ಕೂಡಬೇಡ, ಈ ಜಗತ್ತಿನಲ್ಲಿ ಯಾರು ಸೋತು ಬಿದ್ದಿದ್ದಾರಲ್ಲ ಅವರನ್ನು ಕೈಹಿಡಿದು ಮೇಲೆತ್ತಾಕ ಮಂಡಿಯೂರು. ಈ ಭೂಮಿ ಮ್ಯಾಲೆ ಬಹಳಷ್ಟು ಬಡವರಿದ್ದಾರ, ದುರ್ಬಲರಿದ್ದಾರ ಅವರ ಎದುರಿಗೆ ಮಂಡಿಯೂರು. ಆಗ ದೇವರು ನಿನಗೆ ಒಲಿತಾನ. ನನ್ನ ಹುಟ್ಟುಹಬ್ಬವನ್ನು ದೀಪ ಆರಿಸಿ ಆಚರಿಸುವುದಲ್ಲ. ದೀಪವೇ ಇಲ್ಲದ ಗುಡಿಸಲಿನಲ್ಲಿ ವಾಸಿಸುವ ಮಕ್ಕಳ ಬಳಿಗೆ ಹೋಗಿ ಒಂದು ಪುಸ್ತಕ ಕೊಟ್ಟು ಅವರ ತಲೆಯಾಗ ಜ್ಞಾನದ ದೀಪ ಹಚ್ಚಿ ನನ್ನ ಹುಟ್ಟುಹಬ್ಬವನ್ನು ಆಚರಿಸು. ಅಲ್ಲಿ ದೇವರಿದ್ದಾನೆ' ಎಂದರು.

ಬಸವಣ್ಣನವರು ಎಷ್ಟು ಸುಂದರ ಬದುಕು ಕಟ್ಟಿದರು! ಅವರು ಒಮ್ಮೆ ಕಲ್ಯಾಣದ ಒಂದು ಓಣಿಯಲ್ಲಿ ಹೊರಟಿದ್ದರು. ತಂಬೂರಿ ನಾಗಣ್ಣ ಅಂತ ಒಬ್ಬ ಅಸ್ಪೃಶ್ಯರ ಹುಡುಗ ಇದ್ದ. ಆತ ಊರಿನ ಬಾವಿಯ ನೀರು ಮುಟ್ಟಿದ ಅಂತ ಊರಿನ ಮಂದಿ ಹೊಡೆದರು. ಎಷ್ಟು ಹೊಡೆದಿದ್ದರು ಎಂದರೆ ಮೈತುಂಬಾ ರಕ್ತ, ಮಾರಿ ತುಂಬಾ ರಕ್ತ. ಆತ ನೆಲಕ್ಕೆ ಬಿದ್ದ. ಆತನನ್ನು ಮೇಲಕ್ಕೆತ್ತಿದ ಬಸವಣ್ಣನವರು ತಮ್ಮ ತೊಡೆಯ ಮೇಲೆ ಇಟ್ಟುಕೊಂಡು ಸಂತೈಸಿದರು. ಆಗ ನಾಗಣ್ಣ 'ಶಿವಶಿವ ತಂದೆ ಬಸವಣ್ಣ' ಎಂದ. 'ಊರಿನವರು ನಿನಗೆ ಹೊಡೆದಿದ್ದರಿಂದ ನಿನ್ನ ಕಣ್ಣೇ ಕಾಣದಂತೆ ಆಗ್ಯೆತಿ. ಆದರೂ ನಾನೇ ನಿನ್ನವೆತ್ತಿದೆ ಎಂದು ಹ್ಯಾಂಗ್ ಗೊತ್ತಾತು' ಎಂದು ಬಸವಣ್ಣ ಕೇಳಿದರು. 'ಕಲ್ಯಾಣದ ಪಟ್ಟಣದೊಳಗೆ ಬಿದ್ದವರನ್ನು ಎತ್ತಲಿಕ್ಕೆ ಬಸವಣ್ಣನ್ನ ಬಿಟ್ಟರೆ ಮತ್ಯಾರಿದಾರೆ' ಎಂದು ಕೇಳಿದ ಆತ. ಯಾರು ಬಿದ್ದವರನ್ನು ಮೇಲೆತ್ತುತ್ತಾರೋ ಅವರೆಲ್ಲ ಬಸವಣ್ಣ ಆಗ್ತಾರ.

'ಕೈಯಲ್ಲಿ ಅರಳಿದ ಹೂವು ಹಿಡಕೊಂಡು ಬಾಡಿದ ಮನಸ್ಸಿನಲ್ಲಿ ನನ್ನ ಪೂಜೆ ಮಾಡಿದರೆ ನಾನು ಒಲಿಯುವುದಿಲ್ಲ. ನನ್ನ ಮುಂದೆ ದೀಪ ಹಚ್ಚುವುದಕ್ಕಿಂತ ನಿನ್ನಲ್ಲಿ ಇರುವ ಕೆಟ್ಟತನವನ್ನು ಬಿಟ್ಟು ಒಳ್ಳೆಯತನದ ಜೀವನ ಕಟ್ಟಿದರೆ ನಾನೇ ನಿಮ್ಮ ಮನೆಗೆ ಬಂದು ನಂದಾದೀಪ ಆಗ್ತೀನಿ' ಅಂತಾನೆ ದೇವರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಡಿಸೆಂಬರ್ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಪಂಚಮಿ ಗಂ. 12-08 ನಕ್ಷತ್ರ: ಶ್ರವಣ ಗಂ. 17-19 ಯೋಗ: ಧ್ರುವ ಗಂ. 10-43 ಕರಣ: ಬಾಲವ ಗಂ. 12-08, ವೃಶ್ಚಿಕ ಮಾಸದ 20 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-44 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 03 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 5, 11

ಮೇಷ: ನೇರ ನಡೆ-ನುಡಿ ಕಲಹ ಉಂಟಾಗುವುದಕ್ಕೆ ಕಾರಣವಾಗಬಹುದು. ಅದರಿಂದ ಭವಿಷ್ಯದ ಭರವಸೆ ಕಳೆದುಕೊಳ್ಳುವಂತಾಗಲಿದೆ. ಚಟುವಟಿಕೆಗಳು ಚುರುಕುಗೊಂಡಿದ್ದು, ತುಂಬಾ ಲವಲವಿಕೆಯಿಂದ ಇರುವಿರಿ.

ವೃಷಭ: ಈಗಿರುವ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಪ್ರಾಪ್ತಿಯಾಗುತ್ತದೆ. ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯ ಗಳಿಕೆ ಆಗುವುದು. ಕಟ್ಟಡ ನಿರ್ಮಾಣಗಾರರಿಗೆ ಕೆಲಸ ಇರುವುದು.

ಮಿಥುನ: ವಿದೇಶಿ ವ್ಯವಹಾರಗಳು ಲಾಭದಾಯಕವಾಗಿರುತ್ತವೆ. ವ್ಯವಹಾರಕ್ಕಾಗಿ ವಿದೇಶಕ್ಕೆ ಪ್ರಯಾಣ ಮಾಡಬಹುದು. ಬಾಡಿಗೆದಾರರಿಂದ ಸಣ್ಣ-ಪುಟ್ಟ ಕಿರಿಕಿರಿ ತಪ್ಪಿದ್ದಲ್ಲ. ಆರೋಗ್ಯದಲ್ಲಿ ಕಾಳಜಿ ಇರಲಿ.

ಕರ್ಕಾಟಕ: ವಿಚಾರಗಳನ್ನು ಭಿನ್ನ ಭಿನ್ನ ದೃಷ್ಟಿಯಿಂದ ನೋಡುವುದರಿಂದ ನಷ್ಟವಾಗುವ ಅಪಾಯವನ್ನು ತಪ್ಪಿಸಬಹುದು. ವ್ಯಾಪಾರಗಳಲ್ಲಿ ನಿರೀಕ್ಷಿತ ಆದಾಯಕ್ಕಿಂತ ಹೆಚ್ಚು ಲಾಭ ಗಳಿಸುವಿರಿ.

ಸಿಂಹ: ಮಾಡುವ ಕೆಲಸಗಳಲ್ಲಿ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುವಂತಾಗುವುದು. ಉದ್ಯೋಗದ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ. ದಾಂಪತ್ಯದಲ್ಲಿ ಸಮಸ್ಯೆ ಉಂಟಾಗದಂತೆ ಜಾಗ್ರತೆ ವಹಿಸಿ.

ಕನ್ಯಾ: ಕರ್ತವ್ಯದ ರೀತಿ ಮಾಡಿಕೊಂಡುಬಂದ ಧಾರ್ಮಿಕ ಕೆಲಸದಲ್ಲಿ ಆಸಕ್ತಿ ಮೂಡುವುದು. ಸಾಲದ ಹಣವನ್ನು ಹಿಂದುರುಗಿಸುವ ಬಗ್ಗೆ ಗಮನವಿರಲಿ.

ತುಲಾ: ನಾಲ್ಕಾರು ದಿನಗಳಿಂದ ಉದ್ಯೋಗದಲ್ಲಿ ಉಂಟಾದ ಸಮಸ್ಯೆಗೆ ಉತ್ತರ ಸಿಗಲಿದೆ. ಹೆಣ್ಣು ಮಗುವಿನ ಸಂತಾನದ ಶುಭ ಸುದ್ದಿ ಸಿಗಲಿದೆ. ಲೇವಾದೇವಿ ವ್ಯವಹಾರದಲ್ಲಿ ವಂಚನೆಗೆ ಒಳಗಾಗುವಿರಿ.

ವೃಶ್ಚಿಕ: ಕೃಷಿಕರಿಗೆ ಸಸ್ಯಗಳ ಬೆಳವಣಿಗೆಯಲ್ಲಿನ ಅಡೆತಡೆ ಮಂದಗತಿಯು ಯೋಚನೆಗೆ ಕಾರಣವಾಗುವುದು. ಪೊಲೀಸ್ ವರಿಷ್ಠ ಅಧಿಕಾರಿಗಳಿಗೆ ಜವಾಬ್ದಾರಿ ಕಡಿಮೆಯಾಗುವುದು. ಅವಕಾಶದಿಂದ ಆತ್ಮಗೌರವ ಹೆಚ್ಚಲಿದೆ.

ಧನು: ಸ್ನೇಹಿತರ ಸಲಹೆ ಅಥವಾ ಸ್ವಾರ್ಥದ ಮನೋಭಾವದಿಂದ ಬರುವ ಆಲೋಚನೆಯು ದಾರಿ ತಪ್ಪಿಸುವುದು. ಸೂಕ್ತ ವ್ಯಕ್ತಿಗಳಿಂದ ಸಕಾಲದಲ್ಲಿ ಸಲಹೆ ಪಡೆಯುವುದು ಹಿತಕರ. ಸಂತೋಷಕೂಟದಲ್ಲಿ ಪಾಲ್ಗೊಳ್ಳುವಿರಿ.

ಮಕರ: ಹಿಂದೊಂದು ದಿನ ಅವಮಾನಿಸುತ್ತಿದ್ದವರೇ ಸಹಾಯ ಕೋರಿ ಬರಲಿದ್ದಾರೆ. ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿರುವುದು. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ಕುಂಭ: ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯ ತೋರಿಬಂದರೂ ಖರ್ಚು-ವೆಚ್ಚಗಳಲ್ಲಿ ಜಾಗ್ರತೆ ಇರಲಿ. ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರ ಸಿಗಲಿದೆ. ಷೇರು ವ್ಯವಹಾರದಲ್ಲಿ ನಷ್ಟ ಸಂಭವಿಸಬಹುದು.


ಮೀನ: ಕೌಟುಂಬಿಕವಾದ ಗೌಪ್ಯತೆಯ ವಿಚಾರ ನಿಮ್ಮಿಂದ ಇನ್ನೊಬ್ಬರಿಗೆ ತಿಳಿಯದಂತೆ ಜಾಗ್ರತೆ ವಹಿಸಿ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹವಿರುತ್ತದೆ. ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಿ.

ಪದಬಂಧ 5883

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ನಿರಂತರ ಎಂದು ಹೀಗೆನ್ನಿ (3)
7.ವಿಷಮಬಾಣದಲ್ಲಿ ಕಷ್ಟಕರ ಪರಿಸ್ಥಿತಿ (3)
9.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
11.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ವೃಕ್ಷದ ಬಳಿ ಸಂಭವಿದ ಸಾವು (3)
14.ಬೈದಾಟಕ್ಕೊಂದು ಪರ್ಯಾಯ ಪದ (3)
16.ನೂಲು ತೆಗೆಯುವ ಯಂತ್ರ (3)

ಮೇಲಿಂದ ಕೆಳಕ್ಕೆ
1. ಸಮಗ್ರವಾದುದನ್ನು ಹೀಗೆನ್ನಿ (4)
2. ಆಗಸ ನೋಡುತ್ತಿರುವ ಮಡಿವಾಳ (3)
3.ಅಗಲವಾದ ಹರಿವಾಣ (3)
4.ಅವಶ್ಯವಿಲ್ಲದ ಖರ್ಚು (4)
6.ಶಿರವನ್ನು ಕಡಿಯುವವನು (5)
7.ಬಿಡುವು ಈ ರೀತಿ ದೊರೆತಿದೆ (3)
8.ಮಣ ಭಾರದ ಹೆಣವನ್ನು ಹೂಳುವ ಜಾಗ (3)
9.ಪಾಕ ಮಾಡುತ್ತಲೇ ಕುಡಿದಿರುವ ಷರಬತ್ತು (3)
10.ಸಿದ್ಧತೆಯನ್ನು ಹೀಗೆ ಹೇಳಿ (3)
13.ಪುಸ್ತಕದ ಮೇಲು ಹೊದಿಕೆ (4)
15.ಈತ ನಾಚಿಕೆಯಿಲ್ಲದವನು (4)
16.ಹೆಬ್ಬೆರಳಿನ ಪಕ್ಕದ ಬೆರಳು (3)
17.ಲೀಲಾಜಾಲವಾಗಿ ನಡೆಸಿದ ಹರಾಜು (3)



5882ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಪ್ರತಾಪ 6.ಒಡಲುರಿ
7.ಪರಮಪುರುಷ 11.ಪ್ರಣಯಕಲಹ
16.ಬಲವಂತ 18.ಗಗ್ಗರ

ಮೇಲಿಂದ ಕೆಳಕ್ಕೆ:
1.ಸುಪ್ರಭಾತ 2.ಅಪರೂಪ
3.ಪುಂಡ 4.ಹರಿತ
6.ಒನಪು 8.ಮಶಕ
9.ಷರಾ 10.ವಿಪ್ರ
12.ಯನತ 13.ಹರಗಣೆ
14.ಹಗರಣ 15.ಓಬವ್ವ
17.ವಂದಿ

ಸುಡೊಕು 6268

	2	1		8				
	7		1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6267 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಷೇರುಪೇಟೆ ವಹಿವಾಟು 809



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,467
ಇಂದಿನ ಅಂತ್ಯ	24,708
▲	240
ದಿನದ ಗರಿಷ್ಠ	24,857

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹300-685

ದ್ವಿತಳಿ (ಬಿ.ವಿ) ₹470-835

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹192

ಆರ್‌ಎಸ್‌ಎಸ್-5 ₹186

ಗುಡ್ ಲಾಟ್ ₹181

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹21000
ಎಸಿ	₹11200
ಆರ್‌ಪಿ	₹18500
ಆರ್‌ಸಿ	₹10270

ಬಜೆಟ್ ಸಮಾಲೋಚನೆ ಇಂದಿನಿಂದ ಆರಂಭ



ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶುಕ್ರವಾರದಿಂದ ಬಜೆಟ್ ಪೂರ್ವ ಸಮಾಲೋಚನೆ ನಡೆಸಲಿದ್ದಾರೆ.

2025–26ನೇ ಸಾಲಿನ ಕೇಂದ್ರ ಬಜೆಟ್ ಫೆಬ್ರುವರಿ 1ರಂದು ಮಂಡನೆಯಾಗುವ ನಿರೀಕ್ಷೆಯಿದೆ. ಇದರ ಪೂರ್ವಭಾವಿಯಾಗಿ ಕೈಗಾರಿಕಾ ಸಂಘ–ಸಂಸ್ಥೆಗಳು, ತಜ್ಞರೊಟ್ಟಿಗೆ ಚರ್ಚಿಸಲಿದ್ದಾರೆ. ನಿರ್ಮಲಾ ಅವರು ಸತತ ಎಂಟನೇ ಬಾರಿಗೆ ಮಂಡಿಸಲಿರುವ ಬಜೆಟ್ ಇದಾಗಿದೆ.

ಡಿಸೆಂಬರ್ 6ರಂದು ಅರ್ಥಶಾಸ್ತ್ರಜ್ಞರೊಂದಿಗೆ ಸಮಾಲೋಚಿಸಲಿದ್ದಾರೆ. ಬಜೆಟ್ ಹಾಗೂ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಕುಸಿದಿರುವ ಬಗ್ಗೆ ಸಲಹೆ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಡಿಸೆಂಬರ್ 7ರಂದು ರೈತ ಸಂಘಟನೆಗಳು, ಕೃಷಿ ಅರ್ಥಶಾಸ್ತ್ರಜ್ಞರು, ಎಂಎಸ್‌ಎಂಇ ವಲಯದ ಪ್ರತಿನಿಧಿಗಳ ಜೊತೆಗೆ ಚರ್ಚಿಸಲಿದ್ದಾರೆ.

ಡಿಸೆಂಬರ್ 30ರಂದು ಸಮಾಲೋಚನೆ ಮುಕ್ತಾಯವಾಗಲಿದ್ದು ಕೈಗಾರಿಕೆ, ಶಿಕ್ಷಣ ಮತ್ತು ಆರೋಗ್ಯ ವಲಯದ ಪ್ರಮುಖರೊಟ್ಟಿಗೆ ಚರ್ಚಿಸಲಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	44000-50000
ಕಾರ್ಕಳ	
ಹೊಸತು	25000-33500
ಹಳತು	30000-44000
ಪುತ್ತೂರು	
ಕೋಕ	25000-33500
ಹೊಸತು	36000-50000
ಸಾಗರ	
ಬಿಳಿಗೋಟು	15899-25800
ಚಾಲಿ	21299-33989
ಕೋಕ	9299-24599
ಕೆಂಪುಗೋಟು	20786-31739
ರಾಶಿ	34009-50119
ಸಿಪ್ಪೆಗೋಟು	8100-16399
ಶಿವಮೊಗ್ಗ	
ಬೆಟ್ಟೆ	33909-56699
ಗೊರಬಲು	15331-32179
ಹೊಸತು	34069-49719
ರಾಶಿ	30599-50009
ಸರಕು	52109-85596
ಸಿದ್ದಾಪುರ	
ಬಿಳಿಗೋಟು	24109-27599
ಚಾಲಿ	32809-37599
ಕೋಕ	20899-22699
ಕೆಂಪುಗೋಟು	22209-22209
ರಾಶಿ	42289-47859
ತಟ್ಟಿಬೆಟ್ಟೆ	28099-42289
ಯಲ್ಲಾಪುರ	
ಬಿಳಿಗೋಟು	14899-28212
ಚಾಲಿ	32600-38269
ಕೋಕ	5609-17699
ಕೆಂಪುಗೋಟು	14899-23706
ರಾಶಿ	40666-57315
ತಟ್ಟಿಬೆಟ್ಟೆ	26919-36489

ಸಚಿವರ ಸಮಿತಿ ಶಿಫಾರಸು: ಬಟ್ಟೆ ತಯಾರಕರ ಸಂಘ ಆಕ್ಷೇಪ

ಸಿದ್ಧ ಉಡುಪು: ಜಿಎಸ್‌ಟಿ ಹೊರೆ



ಕೋಲ್ಕತ್ತ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ತೆರಿಗೆ ಪ್ರಮಾಣ ಸರಳೀಕರಣಗೊಳಿಸಲು ರಚಿಸಿರುವ ಸಚಿವರ ಸಮಿತಿಯು ಸಿದ್ಧ ಉಡುಪುಗಳ ಮೇಲಿನ ಜಿಎಸ್‌ಟಿ ಹೆಚ್ಚಳಕ್ಕೆ ಶಿಫಾರಸು ಮಾಡಿದೆ.

₹1,500 ಮೌಲ್ಯದವರೆಗಿನ ಉಡುಪುಗಳಿಗೆ ಶೇ 5, ₹1,500ರಿಂದ ₹10 ಸಾವಿರ ಮೌಲ್ಯದ ಉಡುಪುಗಳಿಗೆ ಶೇ 18 ಹಾಗೂ ₹10 ಸಾವಿರಕ್ಕಿಂತ ಹೆಚ್ಚು ಮೌಲ್ಯದ ಬಟ್ಟೆಗಳಿಗೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲು ಶಿಫಾರಸು ಮಾಡಿದೆ.

ಜಿಎಸ್‌ಟಿ ಮಂಡಳಿಯಿಂದ ರಚಿಸಿರುವ ಸಚಿವರ ಸಮಿತಿಯ ಈ ಶಿಫಾರಸಿಗೆ ಭಾರತದ ಬಟ್ಟೆ ತಯಾರಕರ ಸಂಘವು (ಸಿಎಂಎಐ) ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ದರ ಏರಿಕೆ ಬಗ್ಗೆ ಸರ್ಕಾರವು ಮರು ಪರಿಶೀಲಿಸಬೇಕಿದೆ ಎಂದು ಆಗ್ರಹಿಸಿದೆ.

ತೆರಿಗೆ ಹೆಚ್ಚಳವು ಖರೀದಿ ಮೇಲೆ ಪರಿಣಾಮ ಬೀರಲಿದೆ. ಗ್ರಾಹಕರು ಉಡುಪುಗಳ ಖರೀದಿಗೆ ಹಿಂದೇಟು ಹಾಕುತ್ತಾರೆ. ಮಾರುಕಟ್ಟೆಯಲ್ಲಿ ಖರೀದಿ ಪ್ರಮಾಣ ಕಡಿಮೆಯಾದರೆ ಕಾರ್ಮಿಕರ ಕೆಲಸಕ್ಕೆ ಧಕ್ಕೆಯಾಗಲಿದೆ. ಸಿದ್ಧ ಉಡುಪು ಕೈಗಾರಿಕೆಯ ಪೂರೈಕೆ ಸರಪಳಿಯು ಅಸ್ತವ್ಯಸ್ತಗೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಸರ್ಕಾರದ ನೀತಿಗಳು ರೂಪುಗೊಳ್ಳಬೇಕಿವೆ. ಇದರಿಂದ ದೀರ್ಘಕಾಲವರೆಗೆ ಕೈಗಾರಿಕಾ ವಲಯವು ಸುಸ್ಥಿರತೆ ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದೆ.

ಸಮಿತಿಯ ಶಿಫಾರಸು ಚಿಲ್ಲರೆ ಮಾರುಕಟ್ಟೆ ವಲಯದ ಮೇಲೆ ಪರಿಣಾಮ ಬೀರಲಿದೆ. ಗ್ರಾಹಕರ ಖರೀದಿ ಮತ್ತು ವ್ಯಾಪಾರಕ್ಕೆ ಧಕ್ಕೆ ತರಲಿದೆ. ಇದು ಕಾನೂನುಬದ್ಧವಾಗಿ ಮಾರಾಟ ಮಾಡುವವರಿಗೆ ತೊಂದರೆ ಉಂಟು ಮಾಡಲಿದೆ. ಅಕ್ರಮವಾಗಿ ಮಾರಾಟ ಮಾಡುವವರು ಹೆಚ್ಚಿನ ಪ್ರಯೋಜನ ಪಡೆಯಲಿದ್ದಾರೆ ಎಂದು ಹೇಳಿದೆ.

ಈಗಾಗಲೇ ದೇಶದ ಜವಳಿ ಉದ್ಯಮವು ಸಂಕಷ್ಟದ ಸುಳಿಗೆ ಸಿಲುಕಿದೆ. ತೆರಿಗೆ ಏರಿಕೆ ಮಾಡಿದರೆ ಈ ವಲಯದಲ್ಲಿ ಒಂದು ಲಕ್ಷ ಉದ್ಯೋಗಗಳು ನಷ್ಟವಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಎಲ್ಲಾ ಸಿದ್ಧ ಉಡುಪುಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಬೇಕಿದೆ. ಇದು ಕೈಗಾರಿಕಾ ವಲಯದ ಬೆಳವಣಿಗೆಗೆ ನೆರವಾಗಲಿದೆ ಎಂದು ಒತ್ತಾಯಿಸಿದೆ.

‘ಈಗಾಗಲೇ ಉದ್ಯಮವು ಗ್ರಾಹಕರ ಕೊರತೆ ಎದುರಿಸುತ್ತಿದೆ. ನಿವ್ವಳ ಲಾಭ ಹಾಗೂ ಕಾರ್ಯಾಚರಣೆ ಬಂಡವಾಳವು ಇಳಿಕೆಯಾಗಿದೆ. ಶಿಫಾರಸು ಅನುಷ್ಠಾನಗೊಂಡರೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು (ಎಂಎಸ್‌ಎಂಇ) ಬಾಗಿಲು ಮುಚ್ಚಲಿವೆ. ದೇಶದ ಆರ್ಥಿಕತೆ ಬೆಳವಣಿಗೆಗೆ ಮತ್ತು ಉದ್ಯೋಗ ಸೃಷ್ಟಿಗೆ ಹೆಚ್ಚಿನ ಕೊಡುಗೆ ನೀಡುತ್ತಿರುವ ಈ ವಲಯವು ಮತ್ತಷ್ಟು ಅಸ್ಥಿರಗೊಳ್ಳಲಿದೆ’ ಎಂದು ಸಂಘದ ಅಧ್ಯಕ್ಷ ಸಂತೋಷ್ ಕಟಾರಿಯಾ ಹೇಳಿದ್ದಾರೆ.

ಪ್ರಸ್ತುತ ₹1.5 ಲಕ್ಷ ಮೌಲ್ಯದ ಮೊಬೈಲ್‌ಗಳಿಗೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಆದರೆ, ₹10 ಸಾವಿರ ಮೌಲ್ಯದ ಉಡುಪುಗಳಿಗೆ ಶೇ 28ರಷ್ಟು ತೆರಿಗೆ ವಿಧಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ.

ಉದ್ಯೋಗಕ್ಕೆ ಪೆಟ್ಟು

ಸಿದ್ಧ ಉಡುಪು, ಶೂಗಳು, ಹ್ಯಾಂಡ್‌ಬ್ಯಾಗ್, ಕಾಸ್ಮೆಟಿಕ್, ಕೈಗಡಿಯಾರಗಳ ಮೇಲಿನ ಜಿಎಸ್‌ಟಿ ಹೆಚ್ಚಿಸಲು ಸಚಿವರ ಸಮಿತಿಯು ಶಿಫಾರಸು ಮಾಡಿರುವುದಕ್ಕೆ ರಿಟೇಲರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಆರ್‌ಎಐ) ಆಕ್ಷೇಪ ವ್ಯಕ್ತಪಡಿಸಿದೆ.

ಈ ಶಿಫಾರಸು ಅನುಷ್ಠಾನಗೊಂಡರೆ ಸರ್ಕಾರದ ‘ಮೇಕ್ ಇನ್ ಇಂಡಿಯಾ’ ಆಶಯಕ್ಕೆ ಧಕ್ಕೆಯಾಗಲಿದೆ. ಚಿಲ್ಲರೆ ಮಾರುಕಟ್ಟೆಗೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಅಸೋಸಿಯೇಷನ್‌ನ ಸಿಇಒ ಕುಮಾರ್ ರಾಜಗೋಪಾಲನ್ ಹೇಳಿದ್ದಾರೆ.

ದೇಶದ ಔಪಚಾರಿಕ ವ್ಯಾಪಾರಕ್ಕೆ ಅಡ್ಡಿಯಾಗಲಿದೆ. ಕೌಟುಂಬಿಕ ವೆಚ್ಚವನ್ನು ನಿಭಾಯಿಸುವ ಮಹಿಳೆಯರ ಮೇಲೆ ನೇರ ಪರಿಣಾಮ ಬೀರಲಿದೆ. ಗ್ರಾಹಕರ ಮೇಲೆ ಹೆಚ್ಚು ಹೊರೆಯಾಗದಂತೆ ವ್ಯಾಪಾರ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

ಚಿಲ್ಲರೆ ಮಾರಾಟ ವಲಯದಲ್ಲಿ ಶೇ 10ರಷ್ಟು ಉದ್ಯೋಗ ಕಡಿತಕ್ಕೆ ಕಾರಣವಾಗಲಿದೆ. ಹಾಗಾಗಿ, ಸರ್ಕಾರವು ಈ ಶಿಫಾರಸುಗಳನ್ನು ಅನುಷ್ಠಾನಗೊಳಿಸಬಾರದು ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಟ್‌ಕಾಯಿನ್ ಮೌಲ್ಯ 1 ಲಕ್ಷ ಡಾಲರ್‌ಗೆ ಏರಿಕೆ

ನ್ಯೂಯಾರ್ಕ್ (ಎಪಿ): ಬಿಟ್‌ಕಾಯಿನ್ ಮೌಲ್ಯವು ಗುರುವಾರದ ವಹಿವಾಟಿನಲ್ಲಿ 1 ಲಕ್ಷ ಅಮೆರಿಕನ್ ಡಾಲರ್‌ಗೆ (₹84.70 ಲಕ್ಷ) ಮುಟ್ಟಿದೆ.

ಕೋವಿಡ್ ವೇಳೆ ಬಿಟ್‌ಕಾಯಿನ್ ಮೌಲ್ಯವು 5 ಸಾವಿರ ಡಾಲರ್ (₹4.23 ಲಕ್ಷ) ಇತ್ತು. ಎರಡು ವರ್ಷದ ಹಿಂದೆ 17 ಸಾವಿರ ಡಾಲರ್ (₹14.40 ಲಕ್ಷ) ಇತ್ತು. ನವೆಂಬರ್ 5ರಂದು ನಡೆದ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ದಿನ ಇದರ ಮೌಲ್ಯವು 69,374 ಡಾಲರ್‌ಗೆ (₹58.76 ಲಕ್ಷ) ಮುಟ್ಟಿತ್ತು ಎಂದು ಕ್ರಿಪ್ಟೊಕರೆನ್ಸಿ ಬಗ್ಗೆ ಮಾಹಿತಿ ನೀಡುವ ಸುದ್ದಿಸಂಸ್ಥೆ ಕಾಯಿನ್‌ಡೆಸ್ಕ್ ತಿಳಿಸಿದೆ.



ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಿಪ್ಟೊಕರೆನ್ಸಿ ಪರ ಹೆಚ್ಚು ಒಲವು ಹೊಂದಿದ್ದಾರೆ. ಚುನಾವಣೆ ಪ್ರಚಾರ ವೇಳೆ ಅವರು ಕ್ರಿಪ್ಟೊಕರೆನ್ಸಿ ಸ್ನೇಹಿ ನೀತಿ ಜಾರಿಗೊಳಿಸುವುದಾಗಿ ಪ್ರಕಟಿಸಿದ್ದರು. ಇದಕ್ಕಾಗಿ ವರ್ಲ್ಡ್ ಲಿಬರ್ಟಿ ಫೈನಾನ್ಶಿಯಲ್ ಹೆಸರಿನ ಡಿಜಿಟಲ್ ಕರೆನ್ಸಿ ವೇದಿಕೆಯನ್ನು ಆರಂಭಿಸಿದ್ದರು.

ಕ್ರಿಪ್ಟೊಕರೆನ್ಸಿ ಸಲಹೆಗಾರ ಪೌಲ್ ಅಟ್ಕಿನ್ಸ್ ಅವರನ್ನು ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಅಧ್ಯಕ್ಷರನ್ನಾಗಿ ನೇಮಿಸುವುದಾಗಿ ಹೇಳಿದ್ದಾರೆ. ಇದರಿಂದ ಬಿಟ್‌ಕಾಯಿನ್ ಮೌಲ್ಯ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೆನ್ಸೆಕ್ಸ್ 809 ಅಂಶ ಏರಿಕೆ

ಮುಂಬೈ (ಪಿಟಿಐ): ಐ.ಟಿ ಷೇರುಗಳ ಖರೀದಿ ಹೆಚ್ಚಳದಿಂದಾಗಿ ದೇಶದ ಷೇರುಪೇಟೆಯಲ್ಲಿ ಗುರುವಾರ ಗೂಳಿ ಓಟ ಜೋರಾಗಿದ್ದು, ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ಅಮೆರಿಕದ ಷೇರುಪೇಟೆಯಲ್ಲಿನ ಸಕಾರಾತ್ಮಕ ವಹಿವಾಟು ಹಾಗೂ ವಿದೇಶಿ ಬಂಡವಾಳದ ಒಳಹರಿವು ಹೆಚ್ಚಳವು ದೇಶೀಯ ಷೇರುಪೇಟೆಯ ಏರಿಕೆಗೆ ನೆರವಾಯಿತು.

ಐದು ದಿನಗಳಲ್ಲಿ ಷೇರುಪೇಟೆಯ ಏರಿಕೆಯಿಂದಾಗಿ ಹೂಡಿಕೆದಾರರ ಸಂಪತ್ತು ₹15.18 ಲಕ್ಷ ಕೋಟಿ ಹೆಚ್ಚಳವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 809 ಅಂಶ ಏರಿಕೆ ಕಂಡು 81,765 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,361 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 240 ಅಂಶ ಏರಿಕೆ ಕಂಡು, 24,708 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಿಸಿಎಸ್, ಟೈಟನ್, ಇನ್ಫೊಸಿಸ್, ಭಾರ್ತಿ ಏರ್‌ಟೆಲ್, ಬಜಾಜ್ ಫೈನಾನ್ಸ್, ಐಸಿಐಸಿಐ ಬ್ಯಾಂಕ್, ಎಚ್‌ಸಿಎಲ್ ಟೆಕ್ನಾಲಜೀಸ್, ಟೆಕ್ ಮಹೀಂದ್ರ ಷೇರುಗಳ ಮೌಲ್ಯದಲ್ಲಿ ಏರಿಕೆಯಾಗಿದೆ. ಎನ್‌ಟಿಪಿಸಿ, ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ವಿನಿಮಯ ದರ

$ ಡಾಲರ್	84.71
£ ಪೌಂಡ್	107.85
€ ಯುರೊ	89.27
¥ ಯೆನ್ (100ಕ್ಕೆ)	56

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹1320 (1320)
ಸೂರ್ಯಕಾಂತಿ (ರಿಫೈನ್ಡ್)	₹1390 (1400)
ಪಾಮೋಲಿನ್	₹1420 (1410)

ಆರ್‌ಬಿಐನಿಂದ 27 ಟನ್ ಚಿನ್ನ ಖರೀದಿ

ಮುಂಬೈ (ಪಿಟಿಐ): ಅಕ್ಟೋಬರ್ ತಿಂಗಳಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮೀಸಲು ಉದ್ದೇಶಕ್ಕಾಗಿ (ಆರ್‌ಬಿಐ) 27 ಟನ್ ಚಿನ್ನ ಖರೀದಿಸಿದೆ.

ಪ್ರಸಕ್ತ ವರ್ಷದ ಜನವರಿಯಿಂದ ಅಕ್ಟೋಬರ್ ವರೆಗೆ ಒಟ್ಟು 77 ಟನ್ ಖರೀದಿಸಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ವರದಿ ಗುರುವಾರ ತಿಳಿಸಿದೆ. 2023ರ ಇದೇ ಅವಧಿಗೆ ಹೋಲಿಸಿದರೆ ಖರೀದಿಯಲ್ಲಿ 5 ಪಟ್ಟು ಏರಿಕೆಯಾಗಿದೆ ಎಂದು ಹೇಳಿದೆ. ಪ್ರಸ್ತುತ ಆರ್‌ಬಿಐ ಬಳಿ 882 ಟನ್ ಚಿನ್ನ ಮೀಸಲು ಇದೆ.

ಮುಂಬೈ ಧಾರಣೆ

ಶೇಂಗಾ

05-12-2024

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಪಾಮ್ ವಾರದ ಡೆಲಿವರಿ	1418 (1408)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1345)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹76,050 (76,000)

ಬೆಳ್ಳಿ ಕೆ.ಜಿ ₹91,150 (90,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

ಹುಂಡೈ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ (ಎಚ್‌ಎಂಐಎಲ್) ತನ್ನ ಎಲ್ಲಾ ಮಾದರಿಯ ವಾಹನಗಳ ಬೆಲೆಯನ್ನು ಜನವರಿ 1ರಿಂದ ಹೆಚ್ಚಿಸಲಿದೆ.

ಉತ್ಪಾದನಾ ವೆಚ್ಚ ಏರಿಕೆಯಾಗಿದೆ. ಕರೆನ್ಸಿ ವಿನಿಮಯ ದರವು ವ್ಯತಿರಿಕ್ತವಾಗಿದೆ. ಅಲ್ಲದೆ, ಸಾಗಣೆ ವೆಚ್ಚವೂ ಹೆಚ್ಚಳವಾಗಿದೆ. ಹಾಗಾಗಿ, ವಾಹನಗಳ ಬೆಲೆಯನ್ನು ₹25 ಸಾವಿರದವರೆಗೆ ಏರಿಕೆ ಮಾಡಲಾಗುವುದು ಎಂದು ಕಂಪನಿಯು ಗುರುವಾರ ತಿಳಿಸಿದೆ.

2025ರಿಂದ ತಯಾರಿಸುವ ವಾಹನಗಳಿಗೆ ಈ ಹೊಸ ದರ ಏರಿಕೆಯು ಅನ್ವಯವಾಗಲಿದೆ.

‘ಉತ್ಪಾದನಾ ವೆಚ್ಚವು ನಿರಂತರವಾಗಿ ಏರಿಕೆಯಾಗುತ್ತಿದೆ. ಹಾಗಾಗಿ, ಇದನ್ನು ಅಲ್ಪ ಪ್ರಮಾಣದಲ್ಲಿ ಬೆಲೆ ಹೆಚ್ಚಿಸುವ ಮೂಲಕ ಸರಿದೂಗಿಸುವುದು ಅನಿವಾರ್ಯವಾಗಿದೆ. ಇದು ಗ್ರಾಹಕರ ಮೇಲೆ ಸ್ವಲ್ಪ ಮಟ್ಟಿಗೆ ಪರಿಣಾಮ ಬೀರಲಿದೆ’ ಎಂದು ಎಚ್‌ಎಂಐಎಲ್‌ನ ಸಿಒಒ ತರುಣ್ ಗಾರ್ಗ್ ತಿಳಿಸಿದ್ದಾರೆ.

ರೇಮಂಡ್ ಲೈಫ್‌ಸ್ಟೈಲ್‌ಗೆ ಗೌತಮ್ ಸಿಂಘಾನಿಯಾ ಅಧ್ಯಕ್ಷ

ನವದೆಹಲಿ (ಪಿಟಿಐ): ರೇಮಂಡ್ ಲೈಫ್‌ಸ್ಟೈಲ್‌ನ ಕಾರ್ಯ ನಿರ್ವಾಹಕ ಅಧ್ಯಕ್ಷರಾಗಿ ಗೌತಮ್ ಹರಿ ಸಿಂಘಾನಿಯಾ ನೇಮಕವಾಗಿದ್ದಾರೆ.

ಇತ್ತೀಚೆಗೆ ನಡೆದ ಕಂಪನಿಯ ಸಾಮಾನ್ಯ ವಾರ್ಷಿಕ ಸಭೆಯಲ್ಲಿ ಶೇ 86.85ರಷ್ಟು ಷೇರುದಾರರು ಗೌತಮ್ ಅವರ ನೇಮಕದ ಪರವಾಗಿ ಮತ ಚಲಾಯಿಸಿದ್ದಾರೆ.

ಅಲ್ಲದೆ, ಸ್ವತಂತ್ರ ನಿರ್ದೇಶಕರು ಮತ್ತು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಸುನಿಲ್ ಕಟಾರಿಯಾ ಅವರ ನೇಮಕ ಸೇರಿ ಎಂಟು ವಿಶೇಷ ನಿರ್ಣಯಗಳಿಗೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಕಂಪನಿ ಕಾಯ್ದೆ 2013ರ ಅನ್ವಯ ವಿಶೇಷ ನಿರ್ಣಯಗಳಿಗೆ ಕನಿಷ್ಠ ಶೇ 75ರಷ್ಟು ಸದಸ್ಯರು ಒಪ್ಪಿಗೆ ನೀಡುವುದು ಕಡ್ಡಾಯವಾಗಿದೆ.

ರೇಮಂಡ್ ಲಿಮಿಟೆಡ್‌ನಿಂದ ವಿಭಜನೆ ಗೊಂಡಿರುವ ರೇಮಂಡ್ ಲೈಫ್‌ಸ್ಟೈಲ್ ಸೆಪ್ಟೆಂಬರ್ 5ರಂದು ಷೇರುಪೇಟೆಯಲ್ಲಿ ಲಿಸ್ಟಿಂಗ್ ಆಗಿದೆ. ಈ ಎರಡು ಕಂಪನಿಗಳಿಗೆ ಗೌತಮ್ ಸಿಂಘಾನಿಯಾ ಅವರೇ ಮುಖ್ಯಸ್ಥರಾಗಿದ್ದಾರೆ.

ಪ್ರವರ್ತಕ ಸಿಂಘಾನಿಯಾ ಕುಟುಂಬ ಮತ್ತು ಅವರ ಅಂಗಸಂಸ್ಥೆಗಳು ರೇಮಂಡ್ ಲೈಫ್‌ಸ್ಟೈಲ್‌ನಲ್ಲಿ ಶೇ 54.68ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿವೆ.

ನ್ಯಾನೊ ಎನ್‌ಪಿಕೆ ಶೀಘ್ರ ಬಿಡುಗಡೆ: ಇಫ್ಕೊ

ನವದೆಹಲಿ (ಪಿಟಿಐ): ದ್ರವರೂಪದ ನ್ಯಾನೊ ಯೂರಿಯಾ ಮತ್ತು ದ್ರವರೂಪದ ನ್ಯಾನೊ ಡಿಎಪಿ ಅನ್ನು ಮಾರುಕಟ್ಟೆಗೆ ಪರಿಚಯಿಸಿರುವ ಇಫ್ಕೊ, ಈಗ ನ್ಯಾನೊ ಎನ್‌ಪಿಕೆ ಪೋಷಕಾಂಶವನ್ನು ಅಭಿವೃದ್ಧಿಪಡಿಸಿದೆ. ಇದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ ಒಪ್ಪಿಗೆಗೆ ಎದುರು ನೋಡುತ್ತಿದೆ.

ಕಾಂಡ್ಲಾ ಘಟಕದಲ್ಲಿ ನ್ಯಾನೊ ಎನ್‌ಪಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. ಸರ್ಕಾರದಿಂದ ಅನುಮತಿ ಸಿಕ್ಕಿದ ಬಳಿಕ ಚಿಲ್ಲರೆ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಯು.ಎಸ್. ಅವಸ್ತಿ ತಿಳಿಸಿದ್ದಾರೆ. 5 ಕೆ.ಜಿ ತೂಕದ ಈ ರಸಗೊಬ್ಬರ ಚೀಲಕ್ಕೆ ₹950 ದರ ನಿಗದಿಪಡಿಸಲಾಗಿದೆ. ಇದು ಮಾರುಕಟ್ಟೆಯಲ್ಲಿ ರೈತರಿಗೆ ಲಭ್ಯವಾದರೆ ಯೂರಿಯಾ ಮತ್ತು ಡಿಎಪಿ ಬಳಕೆ ಪ್ರಮಾಣವು ಗಣನೀಯವಾಗಿ ಇಳಿಕೆಯಾಗಲಿದೆ ಎಂದು ಹೇಳಿದ್ದಾರೆ.

ಭಾರತ–ಮಾಲ್ದೀವ್ಸ್ ಬಾಂಧವ್ಯ ರಾಯಭಾರ ಕಚೇರಿ ಕಾರ್ಯ ಶ್ಲಾಘನೆ

ಮಾಲೆ (ಪಿಟಿಐ): ಮಾಲ್ದೀವ್ಸ್–ಭಾರತ ನಡುವಣ ಬಾಂಧವ್ಯ ವೃದ್ಧಿಯಲ್ಲಿ ಭಾರತದ ಹೈಕಮಿಷನರ್ ಮುನು ಮಹಾವರ್ ಉತ್ತಮ ಪಾತ್ರ ನಿರ್ವಹಿಸಿದ್ದಾರೆ ಎಂದು ಅಧ್ಯಕ್ಷ ಮೊಹಮ್ಮದ್ ಮುಯಿಜು ಶ್ಲಾಘಿಸಿದ್ದಾರೆ.

ತಮ್ಮ ಕಾರ್ಯದ ಅವಧಿ ಪೂರೈಸುತ್ತಿರುವ ಮಹಾವರ್ ಅವರು ಗುರುವಾರ ಅಧ್ಯಕ್ಷರನ್ನು ಔಪಚಾರಿಕವಾಗಿ ಭೇಟಿ ಮಾಡಿ, ಚರ್ಚಿಸಿದರು. ಈ ಕುರಿತು ಹೇಳಿಕೆ ನೀಡಿರುವ ಅಧ್ಯಕ್ಷರ ಕಚೇರಿಯು, ‘ಮಾಲ್ದೀವ್ಸ್‌ನ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುವ ವಾಗ್ದಾನವನ್ನು ಹೈಕಮಿಷನರ್ ಕಚೇರಿಯು ಮಾಡಿದೆ’ ಎಂದು ತಿಳಿಸಿದೆ.

ಮಹಾವರ್ ಅವರು 2021ರಲ್ಲಿ ಭಾರತದ ಹೈಕಮಿಷನರ್ ಆಗಿ ನೇಮಕವಾಗಿದ್ದರು. ಮಾಲ್ದೀವ್ಸ್‌ನ ಮುಂದಿನ ಹೈಕಮಿಷನರ್ ಆಗಿ 1998ನೇ ತಂಡದ ಐಎಫ್‌ಎಸ್ ಅಧಿಕಾರಿ ಜಿ.ಬಾಲಸುಬ್ರಹ್ಮಣಿಯನ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ.

‘ರಕ್ತರಹಿತ ಗಾಧಿಮಾಯಿ’ಗೆ ಒತ್ತಾಯ

ಕಠ್ಮಂಡು (ಪಿಟಿಐ): ನೇಪಾಳದ ಬಾರಾ ಜಿಲ್ಲೆಯಲ್ಲಿರುವ ‘ಗಾಧಿಮಾಯಿ’ ದೇವಸ್ಥಾನದಲ್ಲಿ ಆರಂಭಗೊಂಡಿರುವ ‘ಗಾಧಿಮಾಯಿ ಮೇಳ’ದಲ್ಲಿ ಪ್ರಾಣಿವಧೆ ಮಾಡದಂತೆ ಭಾರತ ಮತ್ತು ನೇಪಾಳದ ಬಲಪಂಥೀಯ ಸಂಘಟನೆಗಳು ಒತ್ತಾಯಿಸಿವೆ.

ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ‘ಗಾಧಿಮಾಯಿ ಮೇಳ’ ಉತ್ಸವವು ಸೋಮವಾರ ಆರಂಭಗೊಂಡಿದ್ದು, ಉಪ ರಾಷ್ಟ್ರಪತಿ ರಾಮ್ ಸಹಾಯ ಯಾದವ್ ಅವರು ಉದ್ಘಾಟಿಸಿದರು. ಈ ಉತ್ಸವದ ಭಾಗವಾಗಿ ಡಿ.8 ಮತ್ತು 9ರಂದು ಪ್ರಾಣಿಗಳನ್ನು ಬಲಿ ನೀಡಲಾಗುತ್ತದೆ.

ಪ್ರಾಣಿಬಲಿಯು ಸೂಕ್ತವಲ್ಲ ಎಂದು 2019ರಲ್ಲಿ ನೇಪಾಳದ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೂ ಪ್ರಾಣಿಬಲಿಗೆ ಸಿದ್ಧತೆ ನಡೆದಿದೆ.

ಭಾನುವಾರ ತಲಾ ಒಂದೊಂದು ಇಲಿ, ಕೋಣ, ಮೇಕೆ, ಬಾತುಕೋಳಿ ಮತ್ತು ಪಾರಿವಾಳಗಳನ್ನು ಬಲಿ ನೀಡುವ ಮೂಲಕ ‘ಪಂಚಬಲಿ’ (ಐದು ಪ್ರಾಣಿ –ಪಕ್ಷಿಗಳ ಬಲಿ) ಆಚರಿಸಿ ಔಪಚಾರಿಕವಾಗಿ ಪ್ರಾಣಿಬಲಿಯನ್ನು ಪ್ರಾರಂಭಿಸಲಾಗುತ್ತದೆ.

ಈ ಬಾರಿ ‘ರಕ್ತರಹಿತ ಗಾಧಿಮಾಯಿ’ ಆಚರಿಸಬೇಕೆಂದು ಭಾರತ ಮತ್ತು ನೇಪಾಳದ ಅನೇಕ ಸಂಘಟನೆಗಳು ಅಭಿಯಾನ ಆರಂಭಿಸಿವೆ. ಆದರೆ ಈಗಾಗಲೇ ಭಕ್ತರು ಪ್ರಾಣಿಬಲಿಗೆ ತಯಾರಿ ನಡೆಸಿದ್ದಾರೆ.

ನಿರ್ಬಂಧಗಳ ಹೊರತಾಗಿಯೂ ಭಾರತದ ವಿವಿಧ ರಾಜ್ಯಗಳಿಂದ ಈಗಾಗಲೇ 460 ಕೋಣಗಳನ್ನು ಅಕ್ರಮವಾಗಿ ನೇಪಾಳಕ್ಕೆ ಕರೆತರಲಾಗಿದೆ ಎಂದು ಪ್ರಾಣಿ ಕಲ್ಯಾಣ ಸಂಘಟನೆ ಹೇಳಿದೆ.

17ನೇ ಶತಮಾನದಲ್ಲಿ ನಿರ್ಮಿಸಲಾಗಿರುವ ಗಾಧಿಮಾಯಿ ದೇವಸ್ಥಾನದಲ್ಲಿ ಭಗವತಿ ಅಥವಾ ಕಾಳಿ ರೂಪದಲ್ಲಿ ದೇವರನ್ನು ಆರಾಧಿಸಲಾಗುತ್ತದೆ. ಇಲ್ಲಿಗೆ ಬರುವ ಭಕ್ತರು ತಮ್ಮ ಬೇಡಿಕೆಗಳು ಈಡೇರಿದ ಬಳಿಕ ಪ್ರಾಣಿ ಬಲಿ ನೀಡಬೇಕು ಎಂಬ ನಂಬಿಕೆ ಇದೆ. ಹೀಗಾಗಿ ಅನೇಕ ಭಕ್ತರು ಮೇಳದಲ್ಲಿ ವಿವಿಧ ಪ್ರಾಣಿಗಳನ್ನು ಬಲಿ ನೀಡುತ್ತಾರೆ.



ವಿಹಾರ... ಆಂಧ್ರಪ್ರದೇಶದ ಶ್ರೀಹರಿಕೋಟದಲ್ಲಿರುವ ಪುಲಿಕ್ಯಾಟ್ ಸರೋವರದಲ್ಲಿ ರಾಜಹಂಸಗಳು ಸ್ವಚ್ಛಂದವಾಗಿ ವಿಹರಿಸುತ್ತಿವೆ –ಪಿಟಿಐ ಚಿತ್ರ

ಶ್ರೀಲಂಕಾ: 14ಕ್ಕೂ ಹೆಚ್ಚು ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ಶ್ರೀಲಂಕಾದ ಜಲಗಡಿಯಲ್ಲಿ ಮೀನುಗಾರಿಕೆ ಮಾಡುತ್ತಿದ್ದ ಆರೋಪದಡಿ ಭಾರತದ 14 ಮೀನುಗಾರರನ್ನು ಬಂಧಿಸಲಾಗಿದೆ ಎಂದು ಶ್ರೀಲಂಕಾ ನೌಕಪಡೆ ತಿಳಿಸಿದೆ.

ಮನ್ನಾರ್‌ನ ಕರಾವಳಿಯಲ್ಲಿ ಅಕ್ರಮವಾಗಿ ಮೀನುಗಾರಿಗೆ ಮಾಡುತ್ತಿದ್ದ ಮೀನುಗಾರರು ಮತ್ತು ಎರಡು ದೋಣಿಗಳನ್ನು ನೌಕಾಪಡೆಯು ಬುಧವಾರ ವಶಪಡಿಸಿಕೊಂಡಿದೆ.

ಶ್ರೀಲಂಕಾದ ಸಮುದ್ರ ವ್ಯಾಪ್ತಿಯ ವೆಟ್ಟಿಳೈಕರ್ಣಿಯ ಕರಾವಳಿಯಲ್ಲಿ ಮೀನುಗಾರಿಕೆ ಮಾಡುತ್ತಿದ್ದ 18 ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆಯು ಸೋಮವಾರ ಬಂಧಿಸಿತ್ತು.

ಈ ವರ್ಷ ಇದುವರೆಗೆ 529 ಭಾರತೀಯ ಮೀನುಗಾರರನ್ನು ಬಂಧಿಸಲಾಗಿದೆ ಮತ್ತು 68 ದೋಣಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನೌಕಾಪಡೆ ತಿಳಿಸಿದೆ.

2023ರಲ್ಲಿ, ಶ್ರೀಲಂಕಾದ ನೌಕಾಪಡೆಯು 240 ಭಾರತೀಯ ಮೀನುಗಾರರನ್ನು ಅಕ್ರಮ ಮೀನುಗಾರಿಕೆ ಆರೋಪದ ಮೇಲೆ ಬಂಧಿಸಿತು.

ಸ್ಥಿರತೆ ಸಾಧ್ಯವಾಗಿಸಿದ್ದಕ್ಕೆ ಪ್ರಧಾನಿಗೆ ಪುಟಿನ್ ಮೆಚ್ಚುಗೆ



ಮಾಸ್ಕೊ (ಪಿಟಿಐ): ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಪೂರಕವಾದ ‘ಸ್ಥಿರತೆ’ಯನ್ನು ಸಾಧ್ಯವಾಗಿಸಿದ್ದಕ್ಕಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ಬಗ್ಗೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಷ್ಯಾದ ತಯಾರಿಕಾ ಘಟಕಗಳನ್ನು ಭಾರತದಲ್ಲಿ ಸ್ಥಾಪಿಸಲು ತಾವು ಸಿದ್ಧರಿರುವುದಾಗಿ ಹೇಳಿದ್ದಾರೆ.

ಮಾಸ್ಕೊದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಪುಟಿನ್, ರಷ್ಯಾದ ಮಾರುಕಟ್ಟೆಯಿಂದ ಹೊರ ನಡೆದ ಕೆಲವು ಪಾಶ್ಚಿಮಾತ್ಯ ಬ್ರ್ಯಾಂಡ್‌ಗಳಿಗೆ ಪರ್ಯಾಯವಾಗಿ ಅಲ್ಲಿನ ಸ್ವದೇಶಿ ಬ್ರ್ಯಾಂಡ್‌ಗಳು ಮುನ್ನೆಲೆಗೆ ಬಂದಿರುವುದನ್ನು ಉಲ್ಲೇಖಿಸಿದ್ದಾರೆ. ಆಮದು ಮಾಡಿಕೊಳ್ಳುವುದಕ್ಕೆ ಪರ್ಯಾಯಗಳನ್ನು ಕಂಡುಕೊಳ್ಳುವ ಯೋಜನೆಯ ಭಾಗವಾಗಿ ಇದಕ್ಕೆ ಬಹಳ ಮಹತ್ವ ಇದೆ ಎಂದಿದ್ದಾರೆ.

ಆಮದಿಗೆ ಪರ್ಯಾಯ ಕಂಡುಕೊಳ್ಳುವ ರಷ್ಯಾದ ಕ್ರಮವು ಭಾರತದಲ್ಲಿನ ‘ಮೇಕ್ ಇನ್ ಇಂಡಿಯಾ’ ಯೋಜನೆಯಂತೆಯೇ ಇದೆ ಎಂದು ಪುಟಿನ್ ಹೇಳಿದ್ದಾರೆ. ಭಾರತದ ನಾಯಕತ್ವವು ತನ್ನ ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ನೀತಿಯ ಮೇಲೆ ಗಮನ ಕೇಂದ್ರೀಕರಿಸಿದೆ ಎಂದು ಹೇಳಿದ್ದಾರೆ.

‘ಭಾರತದಲ್ಲಿನ ಅತಿದೊಡ್ಡ ಹೂಡಿಕೆ ಈಚೆಗೆ ಆಗಿದೆ. ರೊಸ್ನೆಫ್ಟ್ ಕಂಪನಿಯು ಅಂದಾಜು 20 ಬಿಲಿಯನ್ ಡಾಲರ್ (ಅಂದಾಜು ₹1.69 ಲಕ್ಷ ಕೋಟಿ) ಹೂಡಿಕೆಯನ್ನು ಭಾರತದಲ್ಲಿ ಮಾಡಿದೆ’ ಎಂದು ಪುಟಿನ್ ತಿಳಿಸಿದ್ದಾರೆ. ರಷ್ಯಾದಲ್ಲಿ ರೊಸ್ನೆಫ್ಟ್ ಕಂಪನಿಯು ಅತಿದೊಡ್ಡ ತೈಲ ಉತ್ಪಾದಕ ಕಂಪನಿಯಾಗಿದೆ.

‘ಭಾರತದ ನಾಯಕತ್ವವು, ಭಾರತ ಮೊದಲು ಎನ್ನುವ ನೀತಿಯನ್ನು ಪಾಲಿಸುತ್ತಿದೆ. ಹೀಗಾಗಿ ಭಾರತದ ಪ್ರಧಾನಿ ಮತ್ತು ಭಾರತದ ಸರ್ಕಾರದ ಅಧಿಕಾರಿಗಳು ಸ್ಥಿರತೆಯನ್ನು ತರುತ್ತಿದ್ದಾರೆ. ಭಾರತದಲ್ಲಿನ ಹೂಡಿಕೆಗಳು ಲಾಭದಾಯಕ ಎಂಬುದು ನಮ್ಮ ನಂಬಿಕೆ’ ಎಂದು ಪುಟಿನ್ ಅಭಿಪ್ರಾಯಪಟ್ಟಿದ್ದಾರೆ.

ಅಡಿಲೇಡ್ ಓವಲ್‌ನಲ್ಲಿ ಎರಡನೇ ಟೆಸ್ಟ್ ಇಂದಿನಿಂದ: ಮೊದಲ ದಿನ ಮಳೆಯಾಗುವ ನಿರೀಕ್ಷೆ

ಭಾರತಕ್ಕೆ ದುಃಸ್ವಪ್ನ ಮರೆಯುವ ಗುರಿ


ನಥಾನ್ ಮೆಕ್‌ಸ್ವೀನಿ


ಕೆ.ಎಲ್. ರಾಹುಲ್

• ಮಧು ಜವಳಿ

ಅಡಿಲೇಡ್: ಆಸ್ಟ್ರೇಲಿಯಾದ ಸಾಂಪ್ರದಾಯಿಕ ಟೆಸ್ಟ್ ತಾಣಗಳಲ್ಲಿ ಅತಿ ರಮ್ಯವೆನಿಸಿರುವ ಅಡಿಲೇಡ್ ಓವಲ್ ಭಾರತದ ಪಾಲಿಗೆ ಮಿಶ್ರಭಾವನೆಗಳ ಕಣಜ. 2001ರಿಂದೀಚೆ ಭಾರತ ಇಲ್ಲಿ ಎರಡು ಟೆಸ್ಟ್‌ಗಳನ್ನು ಗೆದ್ದು ಪ್ರವಾಸಿ ತಂಡಗಳ ಪೈಕಿ ಅತಿ ಹೆಚ್ಚು ಯಶಸ್ಸು ಪಡೆದಿದೆ. ಇದೇ ಅವಧಿಯಲ್ಲಿ ಆಸ್ಟ್ರೇಲಿಯಾ ಇಲ್ಲಿ ಸೋತಿರುವುದು ಬರೇ ಮೂರು ಪಂದ್ಯಗಳನ್ನು.

ಇದೇ ಕ್ರೀಡಾಂಗಣದಲ್ಲಿ ರಾಹುಲ್ ದ್ರಾವಿಡ್ 2003ರ ಸರಣಿಯಲ್ಲಿ ಅತಿ ಶ್ರೇಷ್ಠ ಇನಿಂಗ್ಸ್ (233) ಕಟ್ಟಿದ್ದರು. ಅದೇ ಪಂದ್ಯದಲ್ಲಿ ಅಜೇಯ 72 ರನ್‌ಗಳೊಂದಿಗೆ ಭಾರತ ಗುರಿಯನ್ನು ಬೆಂಬತ್ತುವಲ್ಲೂ ಅವರ ಪಾತ್ರ ಪ್ರಮುಖವಾಗಿತ್ತು. ವಿರಾಟ್ ಕೊಹ್ಲಿ ಇಲ್ಲಿ ಗಳಿಸಿದ್ದ ಶತಕಗಳು (115 ಮತ್ತು 141) ಭಾರತವನ್ನು ಬಹುತೇಕ ಗೆಲುವಿನ ಹಳಿಗೆ ತಲುಪಿಸಿದ್ದವು. ಆದರೆ ಇದೇ ಕ್ರೀಡಾಂಗಣದ ಹಗಲು ರಾತ್ರಿ ಟೆಸ್ಟ್‌ನಲ್ಲಿ ಭಾರತಕ್ಕೆ ಹಿಂದೆಂದೂ ಅನುಭವಿಸದ ಮುಖಭಂಗ ಎದುರಾಯಿತು. ಟೆಸ್ಟ್ ಇತಿಹಾಸದಲ್ಲೇ ತನ್ನ ಅತಿ ಕಡಿಮೆ ಮೊತ್ತವಾದ 36 ರನ್‌ಗೆ ಉರುಳಿದ್ದು ಇಲ್ಲಿಯೇ. ಆ ಟೆಸ್ಟ್ ನಂತರ ಭಾರತ ಅಮೋಘವಾಗಿ ತಿರುಗಿಬಿದ್ದು ಸರಣಿ ಗೆದ್ದಿದ್ದು ಇತಿಹಾಸ.

ಪಂದ್ಯ ಆರಂಭ: ಬೆಳಿಗ್ಗೆ 9.30. ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್


ಭಾರತ ತಂಡದ ನಾಯಕ ರೋಹಿತ್ ಶರ್ಮಾ

ಭಾರತ ತಂಡ ಶುಕ್ರವಾರ ಇದೇ ಕ್ರೀಡಾಂಗಣದಲ್ಲಿ ಬಾರ್ಡರ್– ಗಾವಸ್ಕರ್ ಟ್ರೋಫಿ ಸರಣಿಯ ಎರಡನೇ (ಪಿಂಕ್‌ಬಾಲ್) ಟೆಸ್ಟ್ ಪಂದ್ಯವನ್ನು ಆಸ್ಟ್ರೇಲಿಯಾ ವಿರುದ್ಧ ಆಡಲಿದೆ. ಈಗ ತಂಡದ ಮುಂದಿರುವ ಸವಾಲು 2020ರ ಆ ಟೆಸ್ಟ್ ದುಃಸ್ವಪ್ನದಿಂದ ಸಂಪೂರ್ಣವಾಗಿ ಹೊರಬರುವುದು. ಮೊದಲ ದಿನ ಮಳೆಯಾಗುವ ನಿರೀಕ್ಷೆಯಿದೆ. ಆದರೆ ಹಗಲು–ರಾತ್ರಿ ಟೆಸ್ಟ್‌ಗಳ ದಾಖಲೆಗಳನ್ನು ಗಮನಿಸಿದರೆ, ಫಲಿತಾಂಶಕ್ಕೆ ನಾಲ್ಕು ದಿನಗಳ ಅವಧಿ ಧಾರಾಳ ಎನಿಸುತ್ತದೆ.

ಭಾರತ ಪಿಂಕ್‌ಬಾಲ್ ಟೆಸ್ಟ್‌ಗಳಲ್ಲಿ ಆಡಿದ ನಾಲ್ಕರಲ್ಲಿ ಮೂರು ಗೆದ್ದು ಉತ್ತಮ ಸಾಧನೆ ದಾಖಲಿಸಿದೆ. ಆದರೆ ಆಸ್ಟ್ರೇಲಿಯಾದ ದಾಖಲೆಯೂ ಅದಕ್ಕಿಂತ ಉತ್ತಮವಾಗಿದೆ. ಅದು 12 ಅಹರ್ನಿಶಿ ಟೆಸ್ಟ್ ಪಂದ್ಯಗಳಲ್ಲಿ 11 ಗೆದ್ದಿದೆ! ಆ ಏಕೈಕ ಸೋಲನ್ನು ಈ ವರ್ಷದ ಜನವರಿಯಲ್ಲಿ ವೆಸ್ಟ್ ಇಂಡೀಸ್ ಎದುರು ಅನುಭವಿಸಿತ್ತು. ಭಾರತಕ್ಕೆ ಸ್ವಲ್ಪ ಚಿಂತೆಯ ವಿಷಯವೆಂದರೆ ಅಡಿಲೇಡ್‌ನಲ್ಲಿ ಆಡಿರುವ ಪಿಂಕ್‌ಬಾಲ್ ಟೆಸ್ಟ್‌ಗಳಲ್ಲಿ ಆತಿಥೇಯರು ಎಲ್ಲವನ್ನೂ ಗೆದ್ದಿದ್ದಾರೆ.

ಆಸ್ಟ್ರೇಲಿಯಾಕ್ಕೆ ಈ ವಿಷಯದಲ್ಲಿ ಮಾನಸಿಕ ಮೇಲುಗೈ ಇದೆ ನಿಜ. ಆದರೆ ಭಾರತದ ದಾಖಲೆಯೂ ಕಳಪೆಯೇನಿಲ್ಲ. ಮೊದಲ (ಪರ್ತ್) ಟೆಸ್ಟ್ ಪಂದ್ಯದಲ್ಲಿ 295 ರನ್‌ಗಳ ಭಾರಿ ಗೆಲುವು ತಂಡಕ್ಕೆ ಬೇಕಾದ ಆತ್ಮವಿಶ್ವಾಸ ಒದಗಿಸಿದೆ.

ಆ ಪಂದ್ಯದಲ್ಲಿ ಎಂಟು ವಿಕೆಟ್ ಪಡೆದಿದ್ದ ಹಂಗಾಮಿ ನಾಯಕ ಜಸ್‌ಪ್ರೀತ್ ಬೂಮ್ರಾ, ಆಸ್ಟ್ರೇಲಿಯಾದ ಬ್ಯಾಟರ್‌ಗಳಲ್ಲಿ ಸಾಕಷ್ಟು ಅಳುಕು ಮೂಡಿಸಿದ್ದಾರೆ. ಪಾಡ್‌ಕಾಸ್ಟ್‌ಗಳಲ್ಲಿ ಮತ್ತು ಪತ್ರಿಕಾಗೋಷ್ಠಿಗಳಲ್ಲಿ ಇದನ್ನು (ಬ್ಯಾಟರ್‌ಗಳ ದೌರ್ಬಲ್ಯ) ಪದೇ ಪದೇ ಉಲ್ಲೇಖಿಸಲಾಗಿದೆ. ಅದರ ಬ್ಯಾಟಿಂಗ್ ಸಮಸ್ಯೆಗಳು ಎದ್ದುಕಂಡಿವೆ. ಹೊಸ ಆರಂಭ ಆಟಗಾರರು ಇನ್ನೂ ಕುದುರಿಕೊಂಡಿಲ್ಲ. ಮಧ್ಯಮ ಕ್ರಮಾಂಕ ಕೂಡ ಅಲುಗಾಡುತ್ತಿದೆ. ಅನುಭವಿಗಳಾದ ಸ್ಟೀವ್ ಸ್ಮಿತ್ ಮತ್ತು ಮಾರ್ನಸ್ ಲಾಬುಷೇನ್ ಉತ್ತಮ ಲಯದಲ್ಲಿಲ್ಲ. ಭಾರತದ ಪಾಲಿಗೆ ಹಿಂದೆಯೂ ತಲೆನೋವಾಗಿರುವ ಟ್ರಾವಿಸ್ ಹೆಡ್ ಮಾತ್ರ ವಿಶ್ವಾಸದಿಂದ ಆಡಿದ್ದಾರೆ.

ಆಸ್ಟ್ರೇಲಿಯಾ ತಂಡ ಪಂದ್ಯಕ್ಕೆ ಮೊದಲೇ ದೊಡ್ಡ ಹಿನ್ನಡೆಯೆಂಬಂತೆ ವೇಗಿ ಜೋಶ್ ಹ್ಯಾಜಲ್‌ವುಡ್ ಅವರನ್ನು ಕಳೆದುಕೊಂಡಿದೆ. ಅವರು ಪಕ್ಕೆಲುಬಿನ ನೋವಿನಿಂದ ಬಳಲುತ್ತಿದ್ದಾರೆ. ಸ್ಕಾಟ್ ಬೋಲ್ಯಾಂಡ್ ಆ ಸ್ಥಾನಕ್ಕೆ ಬಂದಿದ್ದಾರೆ. ಆತಿಥೇಯರಿಗೆ ಸಮಾಧಾನದ ವಿಷಯವೆಂದರೆ ಮಿಚೆಲ್ ಮಾರ್ಷ್ ಬೌಲಿಂಗ್ ಮಾಡಲು ಫಿಟ್ ಆಗಿರುವುದು.

ಮೊದಲ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಪರಿಣಾಮಕಾರಿ ಬೌಲಿಂಗ್ ಹಾಗೂ ಎರಡನೇ ಇನಿಂಗ್ಸ್‌ನಲ್ಲಿ ಅಮೋಘ ಬ್ಯಾಟಿಂಗ್ ಭಾರತದ ಪಾಳೆಯದಲ್ಲಿ ನವೋಲ್ಲಾಸ ತುಂಬಿದೆ. ತಂಡದಲ್ಲಿ ಎರಡು ನಿರೀಕ್ಷಿತ ಬದಲಾವಣೆಗಳಾಗಿದೆ. ಬೆರಳ ಗಾಯದಿಂದ ಚೇತರಿಸಿರುವ ಶುಭಮನ್ ಗಿಲ್ ಮತ್ತು ನಾಯಕ ರೋಹಿತ್ ಶರ್ಮಾ ತಂಡಕ್ಕೆ ಮರಳಿದ್ದಾರೆ. ದೇವದತ್ತ ಪಡಿಕ್ಕಲ್ ಮತ್ತು ಧ್ರುವ್ ಜುರೇಲ್ ಸ್ಥಾನ ತೆರವು ಮಾಡಿದ್ದಾರೆ.

ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಆರಂಭಿಸಿ ಉತ್ತಮ ಆಟವಾಡಿದ ಕೆ.ಎಲ್.ರಾಹುಲ್ ಅವರೇ ಮತ್ತೆ ಆ ಹೊಣೆ ವಹಿಸುವರು ಎಂದು ರೋಹಿತ್ ಶರ್ಮಾ ಬಹಿರಂಗಪಡಿಸಿದ್ದಾರೆ. 36 ವರ್ಷದ ನಾಯಕ ತಾವು 'ಮಧ್ಯಮ ಕ್ರಮಾಂಕದ ಯಾವುದಾದರೂ ಸ್ಥಾನದಲ್ಲಿ ಆಡುವುದಾಗಿ' ತಿಳಿಸಿದ್ದಾರೆ.

ವೇಗದ ಬೌಲಿಂಗ್ ಆಲ್‌ರೌಂಡರ್ ನಿತೀಶ್ ರೆಡ್ಡಿ ಅವರಿಂದಾಗಿ ಬ್ಯಾಟಿಂಗ್ ವಿಭಾಗದ ಬಲವರ್ಧನೆಯಾಗಿದೆ. ಹರ್ಷಿತ್ ರಾಣಾ ಕೂಡ ತಮ್ಮ ಸ್ಥಾನ ಉಳಿಸಿಕೊಳ್ಳುವರು. ಆಫ್ ಸ್ಪಿನ್ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಆಡುವ ಸಾಧ್ಯತೆ ಇರುವುದರಿಂದ ಹಿರಿಯಣ್ಣರಾದ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರಿಗೆ 11ರ ಬಳಗದಲ್ಲಿ ಅವಕಾಶ ಕಷ್ಟ. ಭಾರತದ ಪಾಳೆಯಲ್ಲಿ ಮೂಡಿರುವ ವಿಶ್ವಾಸ ಸ್ಪಷ್ಟ ನಿರ್ಧಾರ ಸುಲಭವಾಗಿಸಿದೆ.

ಮುಖ್ಯಾಂಶಗಳು

- ಜೈಸ್ವಾಲ್ ಜೊತೆ ಮತ್ತೆ ಇನಿಂಗ್ಸ್ ಆರಂಭಿಸಲಿರುವ ರಾಹುಲ್
- ಮಧ್ಯಮ ಕ್ರಮಾಂಕಕ್ಕೆ ರೋಹಿತ್ ಶರ್ಮಾ
- ತಂಡದಲ್ಲಿ ಸ್ಥಾನ ಪಡೆದ ಮಿಚೆಲ್ ಮಾರ್ಷ್

ತಂಡಗಳು

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಉಸ್ಮಾನ್ ಖ್ವಾಜಾ, ನಥಾನ್ ಮೆಕ್‌ಸ್ವೀನಿ, ಟ್ರಾವಿಸ್ ಹೆಡ್, ಸ್ಟೀವ್ ಸ್ಮಿತ್, ಮಾರ್ನಸ್ ಲಾಬುಷೇನ್, ಅಲೆಕ್ಸ್ ಕ್ಯಾರಿ (ವಿಕೆಟ್ ಕೀಪರ್), ಮಿಚೆಲ್ ಮಾರ್ಷ್, ಮಿಚೆಲ್ ಸ್ಟಾರ್ಕ್, ಸ್ಕಾಟ್ ಬೋಲ್ಯಾಂಡ್, ನಥಾನ್ ಲಯನ್.

ಭಾರತ (ಸಂಭಾವ್ಯ): ರೋಹಿತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ (ಉಪ ನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ರಿಷಬ್ ಪಂತ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ನಿತೀಶ್ ಕುಮಾರ್ ರೆಡ್ಡಿ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ.

ಪಿಂಕ್‌ಬಾಲ್ ಟೆಸ್ಟ್ ದಾಖಲೆ

22 ಇದುವರೆಗೆ ನಡೆದ ಪಿಂಕ್‌ಬಾಲ್ ಟೆಸ್ಟ್ ಪಂದ್ಯಗಳು

12 ಆಸ್ಟ್ರೇಲಿಯಾ ಆಡಿದ ಪಂದ್ಯಗಳು. ಇದರಲ್ಲಿ 11ರಲ್ಲಿ ಗೆದ್ದಿದೆ. ಈ ವರ್ಷದ ಜನವರಿಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಪಂದ್ಯ ಮಾತ್ರ ಸೋತಿದೆ

4 ಭಾರತ ಆಡಿದ ಪಿಂಕ್‌ಬಾಲ್ ಟೆಸ್ಟ್ ಪಂದ್ಯಗಳು. ಇದರಲ್ಲಿ ಒಂದು ಪಂದ್ಯ ಮಾತ್ರ (2020ರ ಡಿಸೆಂಬರ್‌ನಲ್ಲಿ ಅಡಿಲೇಡ್‌ನಲ್ಲಿ) ಸೋತಿದೆ.

7 ಅಡಿಲೇಡ್‌ನಲ್ಲಿ ನಡೆದ ಪಿಂಕ್‌ಬಾಲ್ ಟೆಸ್ಟ್‌ಗಳು. ಎಲ್ಲದರಲ್ಲೂ ಆಸ್ಟ್ರೇಲಿಯಾ ಜಯ ಗಳಿಸಿದೆ.


ವಿಕೆಟ್ ಪಡೆದ ಮೇಘನ್ ಶುಟ್ ಅವರನ್ನು ಅಭಿನಂದಿಸಿದ ಆಸ್ಟ್ರೇಲಿಯಾ ಮಹಿಳಾ ತಂಡದ ಸಹ ಆಟಗಾರ್ತಿ –ಐಸಿಸಿ ಎಕ್ಸ್ ಚಿತ್ರ

ಏಕದಿನ ಪಂದ್ಯ: ಶುಟ್‌ಗೆ 5 ವಿಕೆಟ್

ಮಹಿಳಾ ತಂಡಕ್ಕೆ ಮತ್ತೆ ಕಾಡಿದ ಬ್ಯಾಟಿಂಗ್ ವೈಫಲ್ಯ

ಬ್ರಿಸ್ಬೇನ್ (ಪಿಟಿಐ): ಭಾರತ ಮಹಿಳಾ ತಂಡದ ಬ್ಯಾಟರ್‌ಗಳು ಮತ್ತೊಮ್ಮೆ ಕಳಪೆ ಆಟವಾಡಿದರು. ಇದರಿಂದಾಗಿ ಆತಿಥೇಯ ಆಸ್ಟ್ರೇಲಿಯಾ ತಂಡ ಗುರುವಾರ ನಡೆದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡದ ಮೇಲೆ ಐದು ವಿಕೆಟ್‌ಗಳ ಸುಲಭ ಜಯ ಗಳಿಸಿದರು.

ಎರಡನೇ ಏಕದಿನ ಪಂದ್ಯ ಭಾನುವಾರ ಇಲ್ಲಿನ ಆ್ಯಲನ್ ಬಾರ್ಡರ್ ಫೀಲ್ಡ್‌ನಲ್ಲಿ ನಡೆಯಲಿದೆ.

ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ 43.2 ಓವರುಗಳಲ್ಲಿ 100 ರನ್‌ಗಳಿಗೆ ಕುಸಿಯಿತು. ಬಲಗೈ ವೇಗಿ ಮೇಘನ್ ಶುಟ್ ಒಂದು ಮೇಡನ್ ಇದ್ದ 6.2 ಓವರುಗಳಲ್ಲಿ 19 ರನ್ನಿತ್ತು 5 ವಿಕೆಟ್ ಪಡೆದು ಭಾರತಕ್ಕೆ ಹೊಡೆತ ನೀಡಿದರು.

ಈ ಅಲ್ಪ ಮೊತ್ತ ಬೆನ್ನತ್ತುವ ಹಾದಿಯಲ್ಲಿ ಆಸ್ಟ್ರೇಲಿಯಾ ಮಧ್ಯಮ ಕ್ರಮಾಂಕ ಎಡವಿದರೂ, ಅಂತಿಮವಾಗಿ 16.2 ಓವರ್‌ನಲ್ಲಿ 5 ವಿಕೆಟ್‌ಗೆ 102 ರನ್ ಗಳಿಸಿ ಗೆಲುವು ಸಾಧಿಸಿತು. ಪದಾರ್ಪಣೆ ಮಾಡಿದ ಆರಂಭ ಆಟಗಾರ್ತಿ ಜಾರ್ಜಿಯಾ ವೊಲ್ (ಅಜೇಯ 46, 42ಎ, 4x6, 6x1) ಅವರು ತಂಡವನ್ನು ಆಧರಿಸಿದರು. ರೇಣುಕಾ ಬೌಲಿಂಗ್‌ನಲ್ಲಿ ಅವರು ಸಿಕ್ಸರ್ ಎತ್ತಿದರು. ಮೊದಲ ವಿಕೆಟ್‌ಗೆ ಫೋಬಿ ಲಿಚ್‌ಫೀಲ್ಡ್ (35, 29ಎ) ಜೊತೆ ಜಾರ್ಜಿಯಾ 48 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ರೇಣುಕಾ ಸಿಂಗ್ ಮೂರು ವಿಕೆಟ್ ಪಡೆದು ಆತಿಥೇಯರ ಮಧ್ಯಮ ಕ್ರಮಾಂಕ ಕುಸಿತಕ್ಕೆ ಕಾರಣರಾದರು.

ಇದಕ್ಕೆ ಮೊದಲು ಐದನೇ ಕ್ರಮಾಂಕದಲ್ಲಿ ಆಡಿದ ಜೆಮಿಮಾ ರಾಡ್ರಿಗಸ್ (23, 42ಎ) ಭಾರತದ ಕಡೆ ಅತಿ ಹೆಚ್ಚು ರನ್ ಗಳಿಸಿದ್ದರು. ಉಳಿದವರು 20ರ ಗಡಿ ದಾಟಲಿಲ್ಲ. ನಾಯಕಿ ಹರ್ಮನ್‌ಪ್ರೀತ್ ಕೌರ್ 31ಎಸೆತಗಳಲ್ಲಿ 17 ರನ್ ಗಳಿಸಿದರು. ಒಂದು ಹಂತದಲ್ಲಿ 3 ವಿಕೆಟ್‌ಗೆ 62 ರನ್ ಗಳಿಸಿದ್ದ ಭಾರತ ನಂತರ ಹಠಾತ್ ಕುಸಿಯಿತು.

ಸಂಕ್ಷಿಪ್ತ ಸ್ಕೋರು: ಭಾರತ ತಂಡ: 34.2 ಓವರುಗಳಲ್ಲಿ 100 (ಜೆಮಿಮಾ ರೋಡ್ರಿಗಸ್ 23; ಮೇಘನ್ ಶುಟ್ 19ಕ್ಕೆ5); ಆಸ್ಟ್ರೇಲಿಯಾ ತಂಡ: 16.2 ಓವರುಗಳಲ್ಲಿ 5 ವಿಕೆಟ್‌ಗೆ 102 (ಫೋಬಿ ಲಿಚ್‌ಫೀಲ್ಡ್ 35, ಜಾರ್ಜಿಯಾ ವೊಲ್ ಔಟಾಗದೇ 46, ರೇಣುಕಾ ಠಾಕೂರ್ 45ಕ್ಕೆ3, ಪ್ರಿಯಾ ಮಿಶ್ರಾ 11ಕ್ಕೆ2). ಪಂದ್ಯದ ಆಟಗಾರ: ಮೇಘನ್ ಶುಟ್

ಜಿಂಬಾಬ್ವೆಗೆ ಮಣಿದ ಪಾಕಿಸ್ತಾನ

ಬುಲಾವಯೊ (ಎಪಿ): ಯುವ ಆಲ್‌ರೌಂಡರ್ ತಿನೊತೆಂಡ ಮಪೊಸಾ ಅವರಿಗೆ ಟಿ20 ಅಂತರರಾಷ್ಟ್ರೀಯ ಪದಾರ್ಪಣೆ ಪಂದ್ಯ ಸ್ಮರಣೀಯವಾಯಿತು. ಅವರ ಕೊನೆಯ ಓವರ್ ಸಾಹಸದಿಂದ ಜಿಂಬಾಬ್ವೆ ತಂಡ ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡದ ಮೇಲೆ ಗುರುವಾರ ಎರಡು ವಿಕೆಟ್‌ಗಳ ರೋಚಕ ಜಯಪಡೆಯಿತು.

ಆದರೆ ಪಾಕಿಸ್ತಾನ ಸರಣಿಯನ್ನು 2–1 ರಿಂದ ಗೆದ್ದುಕೊಂಡಿತು.

133 ರನ್‌ಗಳ ಗುರಿ ಎದುರಿಸಿದ ಜಿಂಬಾಬ್ವೆ ಸೋಲಿನ ಅಪಾಯದಲ್ಲಿತ್ತು. ಆದರೆ 21 ವರ್ಷದ ಮಪೊಸಾ, ಎಡಗೈ ವೇಗಿ ಜಹಾನ್‌ದಾದ್ ಖಾನ್ ಅವರ ಬೌಲಿಂಗ್‌ನಲ್ಲಿ ಒಂದು ಬೌಂಡರಿ, ಒಂದು ಸಿಕ್ಸರ್ ಬಾರಿಸಿದರು. 19.5 ಓವರುಗಳಲ್ಲಿ 8 ವಿಕೆಟ್‌ಗೆ 133 ರನ್ ಹೊಡೆಯಿತು. ಇದಕ್ಕೆ ಮೊದಲು ಪಾಕಿಸ್ತಾನ 7 ವಿಕೆಟ್‌ಗೆ 132 ರನ್ ಗಳಿಸಿತ್ತು.

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಹೈಬ್ರಿಡ್ ಮಾದರಿ ಅಂತಿಮ



ನವದೆಹಲಿ (ಪಿಟಿಐ): ಮುಂದಿನ ವರ್ಷದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸುವುದಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಒಮ್ಮತ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಭಾರತ ತನ್ನ ಪಾಲಿನ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ.

2027ರವರೆಗೆ ನಡೆಯುವ ಐಸಿಸಿ ಟೂರ್ನಿಗಳಲ್ಲಿ ಇಂಥದ್ದೇ ಏರ್ಪಾಡನ್ನು ಮುಂದುವರಿಸಲು ಐಸಿಸಿ 'ತಾತ್ವಿಕ'ವಾಗಿ ಒಪ್ಪಿಗೆಯನ್ನೂ ನೀಡಿದೆ.

ಐಸಿಸಿಯ ಹೊಸ ಅಧ್ಯಕ್ಷ ಜಯ್ ಶಾ ಮತ್ತು ಪಾಕಿಸ್ತಾನವೂ ಒಳಗೊಂಡಂತೆ ಮಂಡಳಿಯ ನಿರ್ದೇಶಕರ ಜೊತೆಗೆ ದುಬೈನಲ್ಲಿರುವ ಸಮಿತಿಯ ಕೇಂದ್ರ ಕಚೇರಿಯಲ್ಲಿ ಗುರುವಾರ ಅನೌಪಚಾರಿಕ ಸಭೆ ನಡೆದಿದ್ದು, ಈ ನಿರ್ಧಾರವನ್ನು ಬಹುತೇಕ ಅಂತಿಮಗೊಳಿಸಲಾಗಿದೆ ಎಂದು ಸಮಿತಿಯ ಮೂಲವೊಂದು ತಿಳಿಸಿದೆ.

'2025ರ ಚಾಂಪಿಯನ್ಸ್ ಟ್ರೋಫಿಯ ಪಂದ್ಯಗಳನ್ನು ಯುಎಇ ಮತ್ತು ಪಾಕಿಸ್ತಾನದಲ್ಲಿ ನಡೆಸಲು ಎಲ್ಲ ಭಾಗೀದಾರರು ಒಪ್ಪಿಗೆ ನೀಡಿದ್ದಾರೆ. ಭಾರತ ತನ್ನ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಸಭೆಯಲ್ಲಿ ಎಲ್ಲ ಭಾಗೀದಾರರಿಗೂ ಸಮಾಧಾನವಾಗಿದೆ' ಎಂದು ಈ ಮೂಲ ಪಿಟಿಐಗೆ ತಿಳಿಸಿವೆ.

ಚಾಂಪಿಯನ್ಸ್ ಟ್ರೋಫಿ ಮುಂದಿನ ವರ್ಷದ ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ನಡೆಯಲಿದೆ.

ಬಹಿಷ್ಕಾರ ಬೆದರಿಕೆಯಿಂದ ಹಿಂದೆ ಸರಿದು, ಹೈಬ್ರಿಡ್ ಮಾದರಿಯಲ್ಲಿ ಚಾಂಪಿಯನ್ಸ್ ಟ್ರೋಫಿ ಟೂರ್ನಿ ನಡೆಸುವುದಕ್ಕೆ ಕಳೆದ ವಾರ ನಡೆದ ಐಸಿಸಿ ಸಭೆಯಲ್ಲಿ ಪಾಕಿಸ್ತಾನ ಒಪ್ಪಿಕೊಂಡಿತ್ತು. ಆದರೆ 2031ರವರೆಗೆ ಇಂಥದ್ದೇ ಏರ್ಪಾಡನ್ನು ತನಗೂ ಮಾಡಬೇಕು ಎಂದು ಹಟ ಹಿಡಿದಿತ್ತು.

2027ರವರೆಗಿನ ಅವಧಿಯಲ್ಲಿ ಭಾರತವು ಒಂದು ಐಸಿಸಿ ಟೂರ್ನಿಯ ಆತಿಥ್ಯ ಮತ್ತು ಒಂಟು ಟೂರ್ನಿಯ ಜಂಟಿ ಆತಿಥ್ಯ ವಹಿಸಿದೆ. 2025ರ ಅಕ್ಟೋಬರ್‌ನಲ್ಲಿ ಮಹಿಳಾ ಏಕದಿನ ವಿಶ್ವಕಪ್ ಭಾರತದಲ್ಲಿ ನಿಗದಿಯಾಗಿದೆ. 2026ರಲ್ಲಿ ಪುರುಷರ ಟಿ20 ವಿಶ್ವಕಪ್ ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.

ಚಾಂಪಿಯನ್ಸ್ ಟ್ರೋಫಿ ಹೈಬ್ರಿಡ್ ಮಾದರಿ ಒಪ್ಪಿಕೊಂಡಿದ್ದಕ್ಕೆ ಪಾಕಿಸ್ತಾನ ಕೇಳಿರುವ ಪರಿಹಾರಕ್ಕೆ ಸಂಬಂಧಿಸಿದ ನಿರ್ಧಾರ ಪರಿಶೀಲನೆಯಲ್ಲಿದೆ ಎಂದು ಮೂಲ ತಿಳಿಸಿದೆ.

ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿ

ಗುಜರಾತ್‌ಗೆ ಮಣಿದ ಕರ್ನಾಟಕ

ಇಂದೋರ್: ಅಕ್ಷರ್ ಪಟೇಲ್ (ಅಜೇಯ 56 ಮತ್ತು 22ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಗುಜರಾತ್ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕವನ್ನು 48 ರನ್‌ಗಳಿಂದ ಮಣಿಸಿತು.

ಕ್ವಾರ್ಟರ್ ಫೈನಲ್ ರೇಸ್‌ನಿಂದ ಈ ಮೊದಲೇ ಹೊರಬಿದ್ದಿರುವ ಮಯಂಕ್ ಅಗರವಾಲ್ ಪಡೆಯು 'ಬಿ' ಗುಂಪಿನಲ್ಲಿ ಏಳು ಪಂದ್ಯಗಳ ಪೈಕಿ ಮೂರರಲ್ಲಿ ಗೆದ್ದು, 12 ಅಂಕದೊಂದಿಗೆ ಅಭಿಯಾನವನ್ನು ಮುಗಿಸಿತು.

ಇಲ್ಲಿನ ಹೋಳ್ಕರ್ ಕ್ರೀಡಾಂಗಣದಲ್ಲಿ ಗುರುವಾರ ಟಾಸ್ ಗೆದ್ದ ಕರ್ನಾಟಕ ತಂಡವು ಗುಜರಾತ್ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಆರ್ಯ ದೇಸಾಯಿ (73;40ಎ) ಮತ್ತು ಉರ್ವಿಲ್ ಪಟೇಲ್ (33;14ಎ) ಅವರು ತಂಡಕ್ಕೆ ಉತ್ತಮ ಆರಂಭ ಒದಗಿಸಿದರು.

ನಂತರದಲ್ಲಿ ಅಭಿಷೇಕ್ ದೇಸಾಯಿ (47;32ಎ) ಮತ್ತು ಅಕ್ಷರ್ ಪಟೇಲ್ ಉಪಯುಕ್ತ ಕಾಣಿಕೆಯನ್ನು ನೀಡಿದರು. ಅಕ್ಷರ್ ಇನಿಂಗ್ಸ್ ಆರು ಸಿಕ್ಸರ್ ಮತ್ತು ಎರಡು ಬೌಂಡರಿ ಒಳಗೊಂಡಿತ್ತು. ಕೊನೆಯಲ್ಲಿ ಹೇಮಂಗ್ ಪಟೇಲ್ (30;12ಎ) ಅಬ್ಬರಿಸಿದರು. ಹೀಗಾಗಿ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 251 ರನ್ ಗಳಿಸಿತು. ಕರ್ನಾಟಕದ ಪರ ವಾಸುಕಿ ಕೌಶಿಕ್ ಮತ್ತು ಮನೋಜ್ ಭಾಂಡಗೆ ತಲಾ ಎರಡು ವಿಕೆಟ್ ಪಡೆದರು.


ಅಕ್ಷರ್ ಪಟೇಲ್

ಬೃಹತ್ ಮೊತ್ತದ ಗುರಿಯನ್ನು ಬೆನ್ನತ್ತಿದ ಕರ್ನಾಟಕ ತಂಡವು 19.1 ಓವರ್‌ಗಳಲ್ಲಿ 203 ರನ್ ಗಳಿಸಿ ಹೋರಾಟವನ್ನು ಮುಗಿಸಿತು.


ಮಯಂಕ್ (45;20ಎ), ಆರ್. ಸ್ಮರಣ್ (49;21ಎ), ಮನೀಷ್ ಪಾಂಡೆ (30;17ಎ) ಪ್ರತಿರೋಧ ತೋರಿದರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ನಿರಾಸೆ ಮೂಡಿಸಿದರು. ಸ್ಪಿನ್ನರ್ ರವಿ ಬಿಷ್ಣೋಯಿ ಮೂರು ವಿಕೆಟ್ ಪಡೆದರು.

ಆರಂಭಿಕ ಪಂದ್ಯದಲ್ಲಿ ಬರೋಡಾ ವಿರುದ್ಧ ಸೋತ ಗುಜರಾತ್ ತಂಡಕ್ಕೆ ಇದು ಸತತ ಆರನೇ ಗೆಲುವಾಗಿದೆ.

ಸ್ಕೋರುಗಳು: ಗುಜರಾತ್: 20 ಓವರುಗಳಲ್ಲಿ 5 ವಿಕೆಟ್‌ಗೆ 251 (ಆರ್ಯ ದೇಸಾಯಿ 73, ಉರ್ವಿಲ್ ಪಟೇಲ್ 33, ಅಭಿಷೇಕ್ ದೇಸಾಯಿ 47, ಅಕ್ಷರ್ ಪಟೇಲ್ ಔಟಾಗದೇ 56, ಹೇಮಾಂಗ್ ಪಟೇಲ್ 30; ವಾಸುಕಿ ಕೌಶಿಕ್ 39ಕ್ಕೆ2, ಮನೋಜ್ ಭಾಂಡಗೆ 28ಕ್ಕೆ2). ಕರ್ನಾಟಕ: 19.1 ಓವರ್‌ಗಳಲ್ಲಿ 203 (ಮನೀಷ್ ಪಾಂಡೆ 30, ಮಯಂಕ್ ಅಗರವಾಲ್ 45, ಕೆ.ಎಲ್. ಶ್ರೀಜಿತ್ 26, ಆರ್.ಸ್ಮರಣ್ 49; ಅಕ್ಷರ್ ಪಟೇಲ್ 22ಕ್ಕೆ 2, ರವಿ ಬಿಷ್ಣೋಯಿ 28ಕ್ಕೆ 3). ಫಲಿತಾಂಶ: ಗುಜರಾತ್‌ಗೆ 48 ರನ್ ಜಯ, ಪಂದ್ಯದ ಆಟಗಾರ: ಅಕ್ಷರ್ ಪಟೇಲ್

ಬರೋಡಾ ತಂಡದ ದಾಖಲೆ ಮೊತ್ತ

ಇಂದೋರ್ (ಪಿಟಿಐ): ಬರೋಡಾ ತಂಡ, ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಗುರುವಾರ ಟಿ20 ಕ್ರಿಕೆಟ್ ಇತಿಹಾಸದಲ್ಲಿ ಅತಿ ದೊಡ್ಡ ಮೊತ್ತ ದಾಖಲಿಸಿತು. ಇನ್ನೊಂದು ಕಡೆ ಪಂಜಾಬ್‌ನ ಅಭಿಷೇಕ್ ಶರ್ಮಾ 28 ಎಸೆತಗಳಲ್ಲಿ ಶತಕ ಸಿಡಿಸಿ ಈ ಮಾದರಿಯಲ್ಲಿ ಅತಿ ವೇಗದ ಶತಕದ ದಾಖಲೆಯನ್ನು ಸರಿಗಟ್ಟಿದರು.


ಅಭಿಷೇಕ್ ಶರ್ಮಾ

ಎರಡೂ ದಾಖಲೆಗಳು ಈಶಾನ್ಯ ರಾಜ್ಯಗಳ ದುರ್ಬಲ ತಂಡಗಳ ಎದುರು ಮೂಡಿಬಂದವು. ಇಂದೋರ್‌ನಲ್ಲಿ ಸಿಕ್ಕಿಂ ಎದುರಿನ ಪಂದ್ಯದಲ್ಲಿ ಬರೋಡಾ ತಂಡ 20 ಓವರುಗಳಲ್ಲಿ 5 ವಿಕೆಟ್‌ಗೆ 349 ರನ್ ಬಾರಿಸಿತು. ದೇಶೀಯ ಟಿ20 ಟೂರ್ನಿಯಲ್ಲಿ 300ಕ್ಕೂ ಅಧಿಕ ರನ್ ದಾಖಲಾಗಿರುವುದು ಇದೇ ಮೊದಲು. ಮೂರನೇ ಕ್ರಮಾಂಕದ ಆಟಗಾರ ಭಾನು ಪೂನಿಯಾ ಬರೇ 51 ಎಸೆತಗಳಲ್ಲಿ 134 ರನ್ ಚಚ್ಚಿದರು. ಐದು ಬೌಂಡರಿ, 11 ಸಿಕ್ಸರ್‌ಗಳು ಅವರ ಇನಿಂಗ್ಸ್‌ನಲ್ಲಿದ್ದವು.

ಈ ದೊಡ್ಡ ಮೊತ್ತಕ್ಕೆ ಉತ್ತರವಾಗಿ ಸಿಕ್ಕಿಂ 7 ವಿಕೆಟ್‌ಗೆ 86 ರನ್ ಗಳಿಸಲಷ್ಟೇ ಶಕ್ತವಾಗಿ ಬರೋಡಾ 263 ರನ್‌ಗಳ ಭಾರಿ ಅಂತರದಿಂದ ಜಯಗಳಿಸಿತು.

ಅಭಿಷೇಕ್ ಶರ್ಮಾ ರಾಜಕೋಟ್‌ನಲ್ಲಿ ಮೇಘಾಲಯ ವಿರುದ್ಧ ಭಾರತದ ಆಟಗಾರನೊಬ್ಬನ ವೇಗದ ಶತಕದ ದಾಖಲೆಯನ್ನು ಸರಿಗಟ್ಟಿದರು. ಗುಜರಾತ್ ಉರ್ವಿಲ್ ಪಟೇಲ್ ಅವರೂ ತ್ರಿಪುರಾ ವಿರುದ್ಧ ಇತ್ತೀಚೆಗೆ ಇದೇ ಟೂರ್ನಿಯ ಪಂದ್ಯದಲ್ಲಿ 28 ಎಸೆತಗಳಲ್ಲಿ ಶತಕ ಬಾರಿಸಿದ್ದರು. ಶರ್ಮಾ 29 ಎಸೆತಗಳಲ್ಲಿ ಅಜೇಯ 106 ರನ್ ಬಾರಿಸಿದರು. ಈ ಇನಿಂಗ್ಸ್‌ನಲ್ಲಿ 11 ಸಿಕ್ಸರ್, ಆರು ಬೌಂಡರಿಗಳಿದ್ದವು. ಎಸ್ಟೋನಿಯಾದ ಸಾಹಿಲ್ ಚೌಹಾನ್, ಈ ವರ್ಷದ ಆರಂಭದಲ್ಲಿ ಸೈಪ್ರಸ್ ವಿರುದ್ಧ ಪಂದ್ಯದಲ್ಲಿ 27 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಬ್ಯಾಸ್ಕೆಟ್‌ಬಾಲ್: ಕೆಎಸ್‌ಪಿಗೆ ಗೆಲುವು

ಬೆಂಗಳೂರು: ಕೆಎಸ್‌ಪಿ ತಂಡವು ರಾಜ್ಯ ಅಸೋಸಿಯೇಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಗುರುವಾರ 93–75ರಿಂದ ದಕ್ಷಿಣ ಕನ್ನಡ ಜಿಲ್ಲಾ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಕೆಎಸ್‌ಪಿ 51–34ರಿಂದ ಮುನ್ನಡೆ ಪಡೆದಿತ್ತು. ಉತ್ತರಾರ್ಧದಲ್ಲೂ ಚುರುಕಿನ ಆಟವಾಡಿ ಗೆಲುವು ಸಾಧಿಸಿತು.

ಸೆಮಿಫೈನಲ್ ಲೀಗ್ ಫಲಿತಾಂಶ: ಪುರುಷರು: ಎಂಇಜಿ ಅಂಡ್ ಸೆಂಟರ್ 72–64ರಿಂದ ಕೆಎಸ್‌ಸಿ ವಿರುದ್ಧ; ಕೆಎಸ್‌ಪಿ 93–75ರಿಂದ ದಕ್ಷಿಣ ಕನ್ನಡ ವಿರುದ್ಧ ಜಯ ಸಾಧಿಸಿತು. **ಮಹಿಳೆಯರ ವಿಭಾಗ:** ಬೀಗಲ್ಸ್ ಬಿ.ಸಿ 77–38ರಿಂದ ಯಂಗ್ಸ್ ಓರಿಯನ್ಸ್ ವಿರುದ್ಧ; ಎಸ್. ಡಬ್ಲ್ಯು. ರೈಲ್ವೆ 67–52ರಿಂದ ಮೈಸೂರು ಜಿಲ್ಲಾ ತಂಡದ ವಿರುದ್ಧ ಗೆಲುವು ದಾಖಲಿಸಿತು.


ಯಂಗ್ ಓರಿಯನ್ಸ್‌ನ ಮಧುರವಾಣಿ (ಬಲ) ಮತ್ತು ಬೀಗಲ್ಸ್‌ನ ರೆನೆಟಾ ಚೆಂಡಿಗಾಗಿ ಸೆಣಸಾಟ ನಡೆಸಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

'ಬಾಂಗ್ಲಾ ಹಿಂದೂಗಳ ಮೇಲಿನ ದೌರ್ಜನ್ಯ ಖಂಡನೀಯ'

ಅಗರ್ತಲಾ (ಪಿಟಿಐ): ಬಾಂಗ್ಲಾದೇಶದಲ್ಲಿ ಭಾರತದ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಆಗ್ರಹಿಸಿರುವ ತ್ರಿಪುರಾ ರಾಜ್ಯದ ಮುಸ್ಲಿಂ ಸಂಘಟನೆ 'ತ್ರಿಪುರಾ ಗೌಸಿಯಾ ಸಮಿತಿ'ಯು, ಹಿಂದೂಗಳ ಮೇಲಿನ ದೌರ್ಜನ್ಯ ಖಂಡನೀಯ ಎಂದು ಹೇಳಿದೆ.

'ಕಳೆದ ಕೆಲವು ತಿಂಗಳಿಂದ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ನಾವು ಆತಂಕದಿಂದ ನೋಡುತ್ತಿದ್ದೇವೆ. ಅಲ್ಲಿನ ಹಿಂದೂಗಳು ನಿರಂತರವಾಗಿ ದಬ್ಬಾಳಿಕೆಗೆ ಒಳಗಾಗುತ್ತಿದ್ದಾರೆ. ಅವರ ಆಸ್ತಿ ಪಾಸ್ತಿಯನ್ನು ನಾಶ ಮಾಡಲಾಗುತ್ತಿದೆ. ಇದು ಅತ್ಯಂತ ಖಂಡನೀಯ' ಎಂದು ಸಮಿತಿಯ ಅಧ್ಯಕ್ಷ ಅಬ್ದುಲ್ ಬಾರಿಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಬಾಂಗ್ಲಾದೇಶದಲ್ಲಿ ನಮ್ಮ ರಾಷ್ಟ್ರಧ್ವಜಕ್ಕೆ ಅಗೌರವ ತೋರುತ್ತಿರುವುದನ್ನು ನೋಡುವಾಗ ಅತೀವ ಬೇಸರವಾಗುತ್ತದೆ. ಈ ರೀತಿಯ ಘಟನೆಗಳನ್ನು ಕೂಡಲೇ ನಿಲ್ಲಿಸಬೇಕು ಮತ್ತು ಇಂತಹ ಘಟನೆಗಳ ವಿಡಿಯೋಗಳ ಕುರಿತು ಸ್ಪಷ್ಟನೆ ತೆಗೆದುಕೊಳ್ಳಬೇಕು' ಎಂದರು.

'ಬಾಂಗ್ಲಾದೇಶದಲ್ಲಿ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಗರ್ತಲಾದಲ್ಲಿರುವ ಬಾಂಗ್ಲಾದ ಸಹಾಯಕ ಹೈಕಮಿಷನ್ ಅವರನ್ನು ಉದ್ದೇಶಿಸಿ ಪಶ್ಚಿಮ ತ್ರಿಪುರಾ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದೇವೆ' ಎಂದು ಹೇಳಿದರು.

ಶೇಖ್ ಹಸೀನಾ ಭಾಷಣ ಪ್ರಸಾರ ನಿಷೇಧ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ 'ದ್ವೇಷ ಭಾಷಣ'ವನ್ನು ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣದಲ್ಲಿ ಪ್ರಸಾರ ಮಾಡುವುದಕ್ಕೆ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ (ಐಸಿಟಿ) ನಿಷೇಧ ಹೇರಿದೆ.

ಇತ್ತೀಚೆಗೆ ಮಾತನಾಡಿದ ಶೇಖ್ ಹಸೀನಾ ಅವರು, ದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. 'ನರಮೇಧ'ಕ್ಕೆ ಉತ್ತೇಜನ ನೀಡುತ್ತಿದ್ದು, ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ಹಿತ ರಕ್ಷಿಸುವಲ್ಲಿ ಅವರು ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದರು.

ನ್ಯಾಯಮೂರ್ತಿ ಮೊಹಮ್ಮದ್ ಗೋಲಂ ಮೊರ್ತುಜಾ ಮೊಜುಂದಾರ್ ನೇತೃತ್ವದ ದ್ವಿಸದಸ್ಯರಿರುವ ನ್ಯಾಯಮಂಡಳಿಯು, ಶೇಖ್ ಹಸೀನಾ ಭಾಷಣದ ಪ್ರಸಾರಕ್ಕೆ ನಿಷೇಧ ಹೇರಿ ಆದೇಶ ಹೊರಡಿಸಿದೆ. ಎಲ್ಲ ರೀತಿಯ ಸಮೂಹ ಮಾಧ್ಯಮಗಳಲ್ಲಿ ಭಾಷಣ ಪ್ರಸಾರ ಮಾಡಬಾರದು ಎಂದು ಸೂಚಿಸಿದೆ.

ಸುದ್ದಿ ಸಂಸ್ಥೆಗೆ ಈ ಕುರಿತು ಮಾಹಿತಿ ನೀಡಿದ ವಕೀಲ ಅಬ್ದುಲ್ಲಾ ಅಲ್ ನೊಮನ್ ಅವರು, ಆದೇಶ ಜಾರಿಗೊಳಿಸಲು ದೇಶದ ಮಾಹಿತಿ ಮತ್ತು ಪ್ರಸಾದ ಸಚಿವಾಲಯಕ್ಕೆ ಸೂಚಿಸಿದೆ ಎಂದು ಹೇಳಿದರು.

'ಇಸ್ಲಾಂ ತತ್ವಕ್ಕೆ ವಿರುದ್ಧವಾದುದು'

ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುತ್ತಿರುವ ರೀತಿ ಸೂಕ್ತವಾಗಿಲ್ಲ. ಇದನ್ನು ನಾವು ಖಂಡಿಸುತ್ತೇವೆ. ಪ್ರವಾದಿ ಅವರು ತೋರಿಸಿಕೊಟ್ಟ ತತ್ವಗಳಿಗೆ ಇದು ವಿರೋಧವಾಗಿದೆ. ಮುಸ್ಲಿಮರಾಗಿ ನಮಗೆ ಈ ಕೃತ್ಯಗಳು ಬೇಸರವನ್ನೂ ದಿಗ್ಭ್ರಮೆಯನ್ನೂ ಮೂಡಿಸಿದೆ. ಕೋಮುವಾದಿ ಶಕ್ತಿಗಳ ವಿರುದ್ಧ ಬಾಂಗ್ಲಾದೇಶ ಸರ್ಕಾರವು ಕಠಿಣ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಂಬಿದ್ದೇವೆ. ಹಿಂದೂಗಳು ಸೇರಿದಂತೆ ಎಲ್ಲ ಅಲ್ಪಸಂಖ್ಯಾತರನ್ನು ರಕ್ಷಿಸಿ. ಪ್ರಜಾಪ್ರಭುತ್ವದಲ್ಲಿ ಅಲ್ಪಸಂಖ್ಯಾತರನ್ನು ಗೌರವದಿಂದ ನೋಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಹಿಂದೂ ಆರೋಪಿಯ ಪರವಾಗಿ ವಾದಿಸಲು ಯಾರೂ ಮುಂದೆ ಬರದಿರುವ ಬೆಳವಣಿಗೆ ಕೂಡ ಬಹಳ ನೋವಿನ ಸಂಗತಿ.

ಸಿಟಿಜನ್ ಫಾರ್ ಫೆಟರ್‌ನಿಟಿ

(ಈ ಸಂಸ್ಥೆಯು ಬಾಂಗ್ಲಾದೇಶದ ಮಧ್ಯಂತರ ಸರ್ಕಾರಕ್ಕೆ ಪತ್ರ ಬರೆದಿದೆ. ಈ ಪತ್ರಕ್ಕೆ ಮಾಜಿ ಚುನಾವಣಾ ಆಯುಕ್ತ **ಎಸ್.ವೈ. ಖುರೇಶಿ**, ದೆಹಲಿಯ ಮಾಜಿ ಲೆಫ್ಟಿನೆಂಟ್ ಗವರ್ನರ್ **ನಜೀಬ್ ಜಂಗ್**, ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಮಾಜಿ ಕುಲಪತಿ **ಜಮೀರ್ ಉದ್ದೀನ್ ಶಾ**, ಮಾಜಿ ಸಂಸದ **ಶಾಹಿದ್ ಸಿದ್ದೀಕಿ**, ಉದ್ಯಮಿ **ಸಯೀದ್ ಶೇರ್ವಾನಿ** ಅವರು ಸಹಿ ಹಾಕಿದ್ದಾರೆ)

ಅವಿಶ್ವಾಸ ನಿರ್ಣಯಕ್ಕೆ ಗೆಲುವು ಫ್ರಾನ್ಸ್ ಪ್ರಧಾನಿ ಪದಚ್ಯುತಿ

ಪ್ಯಾರಿಸ್ (ಎ.ಪಿ/ರಾಯಿಟರ್ಸ್): ಫ್ರಾನ್ಸ್ ಪ್ರಧಾನಿ ಮಿಷೆಲ್ ಬರ್ನಿಯರ್ ವಿರುದ್ಧ ಬುಧವಾರ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯ ಅಂಗೀಕಾರವಾಗಿದ್ದು, ಅವರು ಅಧಿಕಾರದಿಂದಪದಚ್ಯುತಗೊಂಡಿದ್ದಾರೆ.

1962ರ ಬಳಿಕ ಇದೇ ಮೊದಲ ಬಾರಿಗೆ ಅವಿಶ್ವಾಸ ನಿರ್ಣಯಕ್ಕೆ ಯಶಸ್ಸು ದೊರೆತಿದೆ. ಫ್ರಾನ್ಸ್ ಸಂಸತ್ತಿನ ಬಲಪಂಥೀಯ ಮತ್ತು ಎಡಪಂಥೀಯ ಸದಸ್ಯರು ಒಗ್ಗೂಡಿ ನಿರ್ಣಯದ ಪರ ಮತ ಚಲಾಯಿಸಿದರು.

ಅವಿಶ್ವಾಸ ನಿರ್ಣಯಕ್ಕೆ ಗೆಲುವಾದ ಹಿಂದೆಯೇ ಬರ್ನಿಯರ್ ಮತ್ತು ಅವರ ಸಂಪುಟ ಸದಸ್ಯರು ರಾಜೀನಾಮೆ ಸಲ್ಲಿಸಿದರು. ನಿರ್ಣಯದ ಪರ 331 ಮತಗಳು ಬಂದವು. ಅಂಗೀಕಾರಕ್ಕೆ ಒಟ್ಟು 288 ಮತಗಳ ಅಗತ್ಯವಿತ್ತು.

ಸೆಪ್ಟೆಂಬರ್ ತಿಂಗಳಲ್ಲಿ ಪ್ರಧಾನಿಯಾಗಿ ನೇಮಕವಾಗಿದ್ದ ಬರ್ನಿಯರ್ ಅವರು ಇತ್ತೀಚಿನ ವರ್ಷಗಳಲ್ಲಿ ಅತಿ ಕಡಿಮೆ ಅವಧಿಯಲ್ಲಿ ಅಧಿಕಾರದಲ್ಲಿದ್ದ ಪ್ರಧಾನಿ ಎಂದು ಇತಿಹಾಸದಲ್ಲಿ ದಾಖಲಾದರು.

'ಈ ಅವಿಶ್ವಾಸ ನಿರ್ಣಯ ಎಲ್ಲವನ್ನೂ ಗಂಭೀರಗೊಳಿಸಲಿದೆ. ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಕರವಾಗಿಸಲಿದೆ' ಎಂದು ಅವರು ವಿದಾಯ ಭಾಷಣದಲ್ಲಿ ಹೇಳಿದರು.

ಫ್ರಾನ್ಸ್‌ನ ನ್ಯಾಷನಲ್ ಅಸೆಂಬ್ಲಿಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆದಿಲ್ಲ. ಪ್ರಸ್ತುತ ಮೂರು ಮೈತ್ರಿಕೂಟಗಳಿವೆ. ಸರ್ಕಾರದ ಪತನದ ಹಿಂದೆಯೇ ದೇಶದಲ್ಲಿ ರಾಜಕೀಯ ಮತ್ತು ಆರ್ಥಿಕ ಅನಿಶ್ಚಿತತೆಯೂ ಮೂಡಿದೆ.

ಬರ್ನಿಯರ್ ರಾಜೀನಾಮೆ ನೀಡಿರುವುದನ್ನು ಅಧ್ಯಕ್ಷರ ಕಚೇರಿ ದೃಢಪಡಿಸಿದೆ. ಹೊಸ ಸರ್ಕಾರ ರಚನೆ ಆಗುವವರೆಗೂ ಉಸ್ತುವಾರಿ ಪ್ರಧಾನಿಯಾಗಿ ಮುಂದುವರಿಯಬೇಕು ಎಂದು ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರು ಸೂಚಿಸಿದ್ದಾರೆ.

ದಕ್ಷಿಣ ಕೊರಿಯಾ: ರಕ್ಷಣಾ ಸಚಿವರ ಬದಲಾಯಿಸಿದ ಅಧ್ಯಕ್ಷ ಯೂನ್

ಸಿಯೋಲ್ (ಎಪಿ): ದೇಶದಲ್ಲಿ 'ತುರ್ತು ಸೇನಾ ಆಡಳಿತ'ವನ್ನು ಜಾರಿ ಮಾಡಿರುವುದು ವಿವಾದಕ್ಕೀಡಾಗಿರುವ ನಡುವೆಯೇ ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು, ರಕ್ಷಣಾ ಸಚಿವರನ್ನು ಬದಲಾಯಿಸಿದ್ದಾರೆ.

ಕಿಮ್ ಯೋಂಗ್ ಹ್ಯುನ್ ಅವರ ಬದಲಿಗೆ ಸೌದಿ ಅರೇಬಿಯಾದಲ್ಲಿ ದಕ್ಷಿಣ ಕೊರಿಯಾದ ರಾಯಭಾರಿಯಾಗಿರುವ ನಿವೃತ್ತ 'ಫೋರ್ ಸ್ಟಾರ್ ಜನರಲ್' ಚೋಯ್ ಬ್ಯುಂಗ್ ಹ್ಯುಕ್ ಅವರನ್ನು ರಕ್ಷಣಾ ಸಚಿವರನ್ನಾಗಿ ನೇಮಿಸಲು ನಿರ್ಧರಿಸಲಾಗಿದೆ ಎಂದು ಯೂನ್ ಅವರ ಕಚೇರಿ ಗುರುವಾರ ತಿಳಿಸಿದೆ.

ಚೋಯ್ ಅವರು ಅಧಿಕಾರ ವಹಿಸಿಕೊಳ್ಳುವವರೆಗೆ ಉಪ ರಕ್ಷಣಾ ಸಚಿವ ಕಿಮ್ ಸಿಯೋನ್ ಹೋ ಹಂಗಾಮಿ ಸಚಿವರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಸರ್ಕಾರವು 'ತುರ್ತು ಸೇನಾ ಆಡಳಿತ'ವನ್ನು ಹಿಂಪಡೆಯಲಿದೆ ಎಂದು ದೂರದರ್ಶನದ ಭಾಷಣದಲ್ಲಿ ಘೋಷಿಸಿದಾಗಿನಿಂದ ಯೂನ್ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ.

ಮೇಲ್ಮನವಿ: ರಾಜ್ಯಪಾಲರಿಗೆ ನೋಟಿಸ್

ಎರಡನೇ ಮುಖಪುಟದಿಂದ...

'ಇದು ಯಾವುದೇ ಪಕ್ಷದ ಮುಖ್ಯಮಂತ್ರಿ, ಮಂತ್ರಿಗೆ ಸಂಬಂಧಿಸಿದ್ದಲ್ಲ. ಈ ರೀತಿ ಮುಖ್ಯಮಂತ್ರಿ, ಸಚಿವರ ವಿರುದ್ಧ ತನಿಖೆಗೆ ಅನುಮತಿಸುತ್ತಾ ಹೋದರೆ ಅವ್ಯವಸ್ಥೆ ಸೃಷ್ಟಿಯಾಗಲಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಸುದೀರ್ಘವಾಗಿ ಎಲ್ಲರ ವಾದವನ್ನು ಆಲಿಸಿ ರಾಜ್ಯಪಾಲರು, ಸಿಬಿಐ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿದರು. ವಿಚಾರಣೆ 2025ರ ಜನವರಿ 25ಕ್ಕೆ ಮುಂದೂಡಲಾಗಿದೆ.

ಸಿಬಿಐ ತನಿಖೆ ಕೋರಿಕೆ: ಮಧ್ಯಪ್ರವೇಶಕ್ಕೆ ನಕಾರ

ಎರಡನೇ ಮುಖಪುಟದಿಂದ...

ತನಿಖೆ ನಡೆಸುತ್ತಿರುವ ಲೋಕಾಯುಕ್ತರಿಗೆ ತನಿಖಾ ವರದಿ ಸಲ್ಲಿಸಿ ಎಂದು ಏಕಸದಸ್ಯ ನ್ಯಾಯಪೀಠ ಆದೇಶಿಸಿದೆ. ಈ ಅರ್ಜಿಯ ವಿಚಾರಣೆ ಇದೇ 10ಕ್ಕೆ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆಗೆ ಬರಲಿದೆ. ಆವತ್ತು ಏನಾಗುವುದೊ ಗೊತ್ತಿಲ್ಲ. ಹಾಗಾಗಿ, ಮುಂಜಾಗ್ರತೆಯಾಗಿ ಅರ್ಜಿದಾರ ದೇವರಾಜುಗೆ ರಕ್ಷಣ ನೀಡಬೇಕು' ಎಂದು ಮನವಿ ಮಾಡಿದರು.

'ನಮ್ಮ ಅರ್ಜಿದಾರ ದೇವರಾಜುಗೆ ಈಗ 80 ವರ್ಷ. ದೇವರಾಜು ಅವರ ವಾದ ಆಲಿಸದೆಯೇ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು ದೇವರಾಜು ಅವರೂ ಕ್ರಿಮಿನಲ್ ಪ್ರಕರಣ ಎದುರಿಸುವಂತೆ ಆದೇಶಿಸಿದೆ. ರಾಜಕೀಯ ಕೆಸರೆರಚಾಟದಲ್ಲಿ ದೇವರಾಜು ಅವರನ್ನು ಸಿಲುಕಿಸಲಾಗಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ದೂರುದಾರರು ಇವತ್ತು ಸಿಬಿಐ ತನಿಖೆಗೆ ಕೊಡಿ ಎಂದು ಅರ್ಜಿ ಹಾಕಿಕೊಂಡಿದ್ದಾರೆ. ನಾಳೆ ಇ.ಡಿಗೆ (ಜಾರಿ ನಿರ್ದೇಶನಾಲಯ) ಕೊಡಿ ಎಂದು ಕೇಳುತ್ತಾರೆ. ದೇವರಾಜು ಒಬ್ಬ ಬಡಪಾಯಿ. ಅವರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ ಅಥವಾ ಈ ಕ್ರಿಮಿನಲ್ ಆರೋಪಗಳ ಭಾಗೀದಾರರೂ ಅಲ್ಲ. ಆದ್ದರಿಂದ, ಅವರಿಗೆ ಇಲ್ಲಿಯೇ ಸೂಕ್ತ ರಕ್ಷಣೆ ನೀಡುವ ನಿಟ್ಟಿನಲ್ಲಿ ಆದೇಶಿಸಬೇಕು' ಎಂದು ಪದೇ ಪದೇ ಕೋರಿದರು.

ದವೆ ಅವರ ಈ ಮನವಿಗೆ ಕೇವಿಯೆಟ್‌ದಾರ ಸ್ನೇಹಮಯಿ ಕೃಷ್ಣ ಪರ ಹಾಜರಿದ್ದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಮಣಿಂದರ್ ಸಿಂಗ್, 'ಸಿಬಿಐ ತನಿಖೆ ಕೋರಲಾಗಿರುವ ಏಕಸದಸ್ಯ ನ್ಯಾಯಪೀಠದ ಮುಂದಿರುವ ರಿಟ್ ಅರ್ಜಿಯಲ್ಲಿ ಕೇವಲ ನೋಟಿಸ್ ಜಾರಿಗೆ ಮಾತ್ರವೇ ಆದೇಶಿಸಲಾಗಿದೆ. ಈ ಹಂತದಲ್ಲಿ ದೇವರಾಜು ತಮಗೇನೋ ಆಗಿಬಿಡಬಲ್ಲದು ಎಂಬ ಭೀತಿಯಿಂದ ರಕ್ಷಣೆ ಕೋರುವಂತಹ ಯಾವುದೇ ಬೆಳವಣಿಗೆಯಾಗಿಲ್ಲ. ಹೀಗಾಗಿ, ಮೇಲ್ಮನವಿದಾರರ ಮನವಿಯನ್ನು ಪುರಸ್ಕರಿಸಬಾರದು' ಎಂದು ಆಕ್ಷೇಪಿಸಿದರು.

'ದವೆ ಅವರು ಮಧ್ಯಂತರ ಆದೇಶ ಪಡೆಯಲು ತಂತ್ರ ರೂಪಿಸಿದ್ದಾರೆ. ಇವತ್ತಿನ ವಿಚಾರಣೆಯ ಪ್ರಕ್ರಿಯೆ ಪ್ರತಿವಾದಿಗಳಿಗೆ ಕೇವಲ ನೋಟಿಸ್ ಜಾರಿಗೊಳಿಸುವುದಕ್ಕೆ ಮಾತ್ರವೇ ಸೀಮಿತಗೊಂಡರೆ ಸೂಕ್ತ' ಎಂದು ಪ್ರತಿಪಾದಿಸಿದರು.

ಇವರಿಬ್ಬರ ವಾದ–ಪ್ರತಿವಾದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು, 'ಏಕಸದಸ್ಯ ನ್ಯಾಯಪೀಠದ ನ್ಯಾಯಿಕ ಪ್ರಕ್ರಿಯೆಗೆ ನಾನು ಅಡ್ಡ ಬರುವುದಿಲ್ಲ' ಎಂದು ಸಾರಾಸಗಟಾಗಿ ದವೆ ಅವರ ಮನವಿಯನ್ನು ತಳ್ಳಿ ಹಾಕಿದರು.

ವಲಸಿಗರ ಕುಟುಂಬ ಒಗ್ಗೂಡಿಸುವಿಕೆಗೆ ಆದ್ಯತೆ: ಮಸೂದೆ ಮಂಡನೆ

ವಾಷಿಂಗ್ಟನ್ (ಪಿಟಿಐ): ವಲಸಿಗರ ಕುಟುಂಬ ಒಗ್ಗೂಡಿಸುವ, ಕುಟುಂಬ ಆಧಾರಿತ ವಲಸಿಗರ ಶಿಬಿರ ಸ್ಥಾಪಿಸಲು ಒತ್ತು ನೀಡುವ ಮಸೂದೆಯನ್ನು ಡೆಮಾಕ್ರಟಿಕ್ ಪಕ್ಷದ ಇಬ್ಬರು ಸದಸ್ಯರು ಬುಧವಾರ ಮಂಡಿಸಿದರು. ಭಾರತ ಮತ್ತು ಚೀನಾದವರಿಗೆ ಹೆಚ್ಚಿನ ವೀಸಾ ನೀಡಲು ಮಸೂದೆ ಅವಕಾಶ ಕಲ್ಪಿಸಲಿದೆ.

ಸೆನೆಟ್ ಸದಸ್ಯರಾದ ಮಾಝಿ ಕೆ. ಹಿರೊನೊ ಮತ್ತು ಟ್ಯಾಮಿ ಡಕ್ವರ್ಥ್ ಅವರು 'ಕುಟುಂಬ ಒಗ್ಗೂಡಿಸುವ ಕಾಯ್ದೆ (ಆರ್‌ಎಫ್‌ಎ)' ಮಸೂದೆಯನ್ನು ಮಂಡಿಸಿದರು.

ಫಿಲಿಪಿನೊ ವಿಶ್ವಯುದ್ಧ-2ರಲ್ಲಿ ಭಾಗಿಯಾಗಿದ್ದ ಸೈನಿಕರ ಮಕ್ಕಳಿಗೆ ವೀಸಾ ನೀಡುವ ಪ್ರಕ್ರಿಯೆ ತ್ವರಿತಗೊಳಿಸಲು ಒತ್ತು ನೀಡುವ ಮಸೂದೆಯನ್ನು ಸೆನೆಟ್ ಸದಸ್ಯೆ ಹಿರೊನೊ ಫಿಲಿಪಿನೊ ಮಂಡಿಸಿದರು.

'ಪ್ರಸಕ್ತ ಸೆನೆಟ್‌ನಲ್ಲಿ ಇರುವ ಏಕಮಾತ್ರ ವಲಸಿಗ ಸದಸ್ಯ ನಾನು. ಈ ಮಸೂದೆ ಮಂಡಿಸಲು ಹೆಮ್ಮೆಯಾಗುತ್ತಿದೆ. ಈ ಮೂಲಕ ಕುಟುಂಬದ ಒಗ್ಗಟ್ಟಿಗೆ ಉತ್ತೇಜನ ನೀಡಲಾಗುತ್ತಿದೆ' ಎಂದು ಹೇಳಿದರು.

ಫೈನಲ್ಸ್‌ನ 9 ಪಂದ್ಯಗಳ ನಂತರ ಸ್ಕೋರ್ 4.5–4.5ರಲ್ಲಿ ಸಮಬಲ

ವಿಶ್ವ ಚೆಸ್: ಸತತ ಆರನೇ ಡ್ರಾ

ಸಿಂಗಪುರ (ಪಿಟಿಐ): ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಡ್ರಾ ಪರ್ವ ಮುಂದುವರಿದಿದೆ. ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಮತ್ತು ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರು ಮತ್ತೊಂದು– ಸತತ ಆರನೇ– ಪಂದ್ಯವನ್ನು ಗುರುವಾರ ಡ್ರಾ ಮಾಡಿಕೊಂಡರು.

ಇದು 14 ಪಂದ್ಯಗಳ ಫೈನಲ್‌ನ ಒಂಬತ್ತನೇ ಪಂದ್ಯವಾಗಿದ್ದು ಒಟ್ಟಾರೆ ಏಳು ಪಂದ್ಯಗಳು ಡ್ರಾ ಆಗಿವೆ. ಇಬ್ಬರ ಖಾತೆಯಲ್ಲೂ ನಾಲ್ಕೂವರೆ ಅಂಕಗಳು ಇವೆ. ಮೊದಲು ಏಳೂವರೆ ಪಾಯಿಂಟ್ಸ್ ತಲುಪುವ ಆಟಗಾರನ ಮುಡಿಗೆ ವಿಶ್ವ ಚಾಂಪಿಯನ್ ಕಿರೀಟ ಏರಲಿದೆ.

ಒಂಬತ್ತನೇ ಪಂದ್ಯದಲ್ಲಿ 54 ನಡೆಗಳ ನಂತರ ಇಬ್ಬರೂ 'ಶಾಂತಿ ಒಪ್ಪಂದಕ್ಕೆ' ಸಹಿ ಹಾಕಿದರು. ಆಗ ಬೋರ್ಡ್‌ನಲ್ಲಿ ಉಭಯ ರಾಜರಷ್ಟೇ ಉಳಿದಿದ್ದರು. ಗುಕೇಶ್ ಈ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ್ದರು.

ಶುಕ್ರವಾರ ಚಾಂಪಿಯನ್‌ಷಿಪ್‌ಗೆ ಮೂರನೇ ವಿಶ್ರಾಂತಿಯ ದಿನವಾಗಿದೆ. ಶನಿವಾರ ಹತ್ತನೇ ಪಂದ್ಯದೊಡನೆ ಹಣಾಹಣಿ ಮುಂದುವರಿಯಲಿದೆ. ಇನ್ನು ಐದು ಸುತ್ತಿನ ಪಂದ್ಯಗಳಷ್ಟೇ ಉಳಿದಿವೆ. 14 ಸುತ್ತುಗಳ ಬಳಿಕವೂ ಸ್ಕೋರ್ 7–7 ಸಮನಾದಲ್ಲಿ ಚಾಂಪಿಯನ್ ಆಟಗಾರನನ್ನು ನಿರ್ಧರಿಸಲು ಅಲ್ಪಾವಧಿಯ ಟೈಬ್ರೇಕ್ ಪಂದ್ಯ ಆಡಿಸಲಾಗುತ್ತದೆ.

32 ವರ್ಷ ವಯಸ್ಸಿನ ಲಿರೆನ್ ಮೊದಲ ಪಂದ್ಯ ಜಯಿಸಿದ್ದರೆ, 18 ವರ್ಷ ವಯಸ್ಸಿನ ಗುಕೇಶ್ ಮೂರನೇ ಗೇಮ್ ಗೆದ್ದಿದ್ದರು. ಉಳಿದೆಲ್ಲ ಪಂದ್ಯಗಳು 'ಡ್ರಾ' ಆಗಿವೆ.

ಗುಕೇಶ್ ಕೆಟಲಾನ್ ಓಪನಿಂಗ್ ಅನುಸರಿಸಿ, ಲಿರೆನ್ ಅವರ ಸಿದ್ಧತೆಯನ್ನು ಪರೀಕ್ಷಿಸಲು ಮುಂದಾದಂತೆ ಕಂಡಿತು. ಆದರೆ ಮೊದಲ ಕೆಲವು ನಡೆಗಳಿಗೆ ಸಾಕಷ್ಟು ಸಮಯ ತೆಗೆದುಕೊಂಡ ಚೀನಾದ ಆಟಗಾರ ಚೆನ್ನೈ ಆಟಗಾರನ ಪಡೆಗಳು ದಾಳಿ ಮಾಡದಂತೆ ವ್ಯೂಹ ರಚಿಸಿಕೊಂಡರು. ಗುಕೇಶ್ ಮೊದಲ 14 ನಡೆಗಳಿಗೆ ಕೇವಲ 15 ನಿಮಿಷ ಬಳಸಿಕೊಂಡರೆ, ಅನುಭವಿ ಲಿರೆನ್ ಅಷ್ಟೇ ನಡೆಗಳಿಗೆ 50 ನಿಮಿಷ ತೆಗೆದುಕೊಂಡರು.

ಗುಕೇಶ್ ಅವರ 20ನೇ ನಡೆ ಎದುರಾಳಿ ಮೇಲೆ ಒತ್ತಡ ಹೇರುವಂತೆ ಕಂಡಿತು. ಆದರೆ ಲಿರೆನ್ ಅಷ್ಟೇ ಚಾಣಾಕ್ಷತೆಯಿಂದ ಅಪಾಯ ತಪ್ಪಿಸಿದರು. ಜೊತೆಗೆ ಸಮಯದ ಒತ್ತಡದಿಂದ ಹೊರಬಂದ ಮೇಲೆ ಕರಾರುವಾಕ್ ನಡೆಗಳನ್ನು ಆಡಿದರು. ಪಂದ್ಯ ಡ್ರಾ ಹಾದಿ ಹಿಡಿದರೂ ನಿಯಮದ ಪ್ರಕಾರ ಇಬ್ಬರು 40 ನಡೆಗಳನ್ನು ಆಡಲೇಬೇಕಿತ್ತು.

ಅಂತಿಮ ಹಂತದಲ್ಲಿ ಗುಕೇಶ್ ಬಳಿ ಹೆಚ್ಚುವರಿ ಪಾನ್ ಇದ್ದರೂ ಅದನ್ನು ಕೊನೆವರೆಗೂ ಕಾಪಾಡುವುದು ಕಠಿಣವೇ ಆಗಿತ್ತು.

ಕೊನೆಯ ಐದು ಪಂದ್ಯಗಳಲ್ಲಿ ಲಿರೆನ್ ಅವರಿಗೆ ಮೂರು ಬಾರಿ ಬಿಳಿ ಕಾಯಿಗಳಲ್ಲಿ ಆಡುವ ಅವಕಾಶವಿದೆ.

ಇಂದಿನ ಪಂದ್ಯ: ಮಧ್ಯಾಹ್ನ 2.30


ನಡೆಯೊಂದರ ಯೋಚನೆಯಲ್ಲಿ ಗುಕೇಶ್ ಫಿಡೆ ವೆಬ್‌ಸೈಟ್ ಚಿತ್ರ

ರಾಷ್ಟ್ರೀಯ ಸೀನಿಯರ್ ಕುಸ್ತಿ ಕೂಟ ಇಂದಿನಿಂದ

ಬೆಂಗಳೂರು (ಪಿಟಿಐ): ಒಲಿಂಪಿಯನ್‌ಗಳು ಮತ್ತು ರೈಲ್ವೇಸ್‌ನ ಅನುಭವಿ ಕುಸ್ತಿಪಟುಗಳ ಅನುಪಸ್ಥಿತಿಯಲ್ಲಿ ಶುಕ್ರವಾರ ನಗರದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಆರಂಭವಾಗಲಿದೆ. ಹೀಗಾಗಿ ದೇಶದ ಜೂನಿಯರ್ ಮತ್ತು ಎರಡನೇ ಹಂತದ ಪೈಲ್ವಾನರಿಗೆ ತಮ್ಮ ಛಾಪು ಮೂಡಿಸಲು ಈ ಚಾಂಪಿಯನ್‌ಷಿಪ್ ಒಳ್ಳೆಯ ವೇದಿಕೆ ಒದಗಿಸಿದೆ.

ಪ್ಯಾರಿಸ್ ಒಲಿಂಪಿಕ್ಸ್ ಪದಕ ವಿಜೇತ ಅಮನ್ ಸೆಹ್ರಾವತ್ ಅವರು ಈ ವಾರ್ಷಿಕ ಕೂಟದಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಕೊನೆಗಳಿಗೆಯಲ್ಲಿ ಹಿಂದೆಸರಿದಿದ್ದಾರೆ. ಅವರು ರೈಲ್ವೇಸ್ ಉದ್ಯೋಗಿಯಾಗಿದ್ದು, ಅದು ತನ್ನ ತಂಡವನ್ನು ಕಳುಹಿಸದಿರಲು ನಿರ್ಧರಿಸಿದೆ.

ಗುರುವಾರ ರಾತ್ರಿಯವರೆಗೆ 29 ತಂಡಗಳು ಭಾಗವಹಿಸುವುದನ್ನು ಖಚಿತಪಡಿಸಿವೆ ಎಂದು ಕರ್ನಾಟಕ ಕುಸ್ತಿ ಸಂಸ್ಥೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಹರಿಯಾಣದ ಕುಸ್ತಿಪಟುಗಳು ಪ್ರತಿ ವರ್ಷದಂತೆ ಈ ಬಾರಿಯೂ ಮೇಲುಗೈ ಸಾಧಿಸುವ ನಿರೀಕ್ಷೆಯಿದೆ. ಆ ರಾಜ್ಯ ವಿವಿಧ ವಿಭಾಗಗಳಲ್ಲಿ ಒಟ್ಟು 28 ಮಂದಿಯ ತಂಡವನ್ನು ಕಣಕ್ಕಿಳಿಸಿದೆ.

ಏಷ್ಯನ್ 23 ವರ್ಷದೊಳಗಿನ-ವರ ಚಾಂಪಿಯನ್‌ಷಿಪ್‌ನ ಸ್ವರ್ಣ ವಿಜೇತೆ, ಮಣಿಪುರದ ಮೀನಾಕ್ಷಿ ದೇವಿ (ಮಹಿಳೆಯ 50 ಕೆ.ಜಿ), ಜೂನಿಯರ್ ಏಷ್ಯನ್ ಚಾಂಪಿಯನ್ ಬಿಪಾಶಾ (72 ಕೆ.ಜಿ) ಮತ್ತು ರಾಧಿಕಾ (68 ಕೆ.ಜಿ) ಅವರ ಪ್ರದರ್ಶನದ ಮೇಲೆ ಕುತೂಹಲವಿದೆ.

ಹರಿಯಾಣದ ಜ್ಯೋತಿ 53 ಕೆ.ಜಿ ವಿಭಾಗದಲ್ಲಿ ಕಣದಲ್ಲಿದ್ದು ಅವರ ನಿರ್ವಹಣೆಯ ಮೇಲೂ ಗಮನ ಇಡಲಾಗಿದೆ. ಅವರು ಈ ವರ್ಷ ಸ್ಪೇನ್‌ನಲ್ಲಿ ನಡೆದ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದು, ಕೆಡೆಟ್ ಏಷ್ಯನ್ ಚಾಂಪಿಯನ್‌ಷಿಪ್‌ನ ಪದಕ ವಿಜೇತೆ ಕೂಡ

ಹೈಕೋರ್ಟ್ ಮೆಟ್ಟಿಲೇರಿದ ಡಬ್ಲ್ಯುಎಫ್‌ಐ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ವ್ಯವಹಾರವನ್ನು ನಡೆಸಲು ಭಾರತ ಒಲಿಂಪಿಕ್ ಸಂಸ್ಥೆಗೆ ಅಡ್‌ಹಾಕ್ ಸಮಿತಿ ಪುನರ್‌ರಚಿಸಲು ಅಧಿಕಾರ ನೀಡುವ ಆದೇಶ ಪ್ರಶ್ನಿಸಿ ಫೆಡರೇಷನ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದೆ.

ಈ ಮೇಲ್ಮನವಿ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರ ಪೀಠದ ಮುಂದೆ ಬಂದಿದೆ. ಗುರುವಾರ ಒಂದು ಕಕ್ಷಿದಾರರ ವಕೀಲರು ಹಾಜರಿಲ್ಲದ ಕಾರಣ ವಿಚಾರಣೆ ಡಿಸೆಂಬರ್ 18ಕ್ಕೆ ಮುಂದೂಡಲಾಯಿತು.

ಆ್ಯಕ್ಷನ್ ಡ್ರಾಮಾ ಸರಣಿ ಈಗಾಗಲೇ ಹೊಸ ಅಲೆ ಸೃಷ್ಟಿಸಿದೆ!

ಕಬಡ್ಡಿ: ಎರಡೂ ಪಂದ್ಯಗಳು ಟೈ

ಪುಣೆ (ಪಿಟಿಐ): ಯುಪಿ ಯೋಧಾಸ್ ಮತ್ತು ದಬಾಂಗ್ ಡೆಲ್ಲಿ ತಂಡಗಳು ಪ್ರೊ ಕಬಡ್ಡಿ ಲೀಗ್‌ನ ತೀವ್ರ ಹೋರಾಟದ ಪಂದ್ಯದಲ್ಲಿ ಗುರುವಾರ ಸಮಬಲ ಮಾಡಿಕೊಂಡವು. ಈ ಪಂದ್ಯ 32–32ರಲ್ಲಿ ಟೈ ಆಯಿತು.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ನಡೆದ ಪಂದ್ಯದಲ್ಲಿ ಯೋಧಾಸ್ ಪರ ಕನ್ನಡಿಗ, ರಿಪ್ಪನ್‌ಪೇಟೆಯ ಹುಡುಗ ಗಗನ್ ಗೌಡ ಮತ್ತೊಮ್ಮೆ ಮಿಂಚಿ 13 ಅಂಕ ಗಳಿಸಿದರು. ಭವಾನಿ ರಜಪೂತ್ (10) ಕೂಡ ಸೂಪರ್ ಟೆನ್ ದಾಖಲಿಸಿದರು. ದಬಾಂಗ್ ಡೆಲ್ಲಿ ಪರ ಕಪ್ತಾನ ಆಶು ಮಲ್ಲಿಕ್ (10) ಮತ್ತೊಮ್ಮೆ ಸೂಪರ್ ಟೆನ್ ಸಾಧಿಸಿದರು.

ನವೀನ್ ಎಂಟು ಅಂಕಗಳ ಕೊಡುಗೆ ನೀಡಿದರು.

ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಯು ಮುಂಬಾ ನಡುವಣ ಅಲ್ಪ ಸ್ಕೋರುಗಳ ಎರಡನೇ ಪಂದ್ಯವೂ 22–22ರಲ್ಲಿ ಸಮಬಲಗೊಂಡಿತು. ವಿರಾಮದ ವೇಳೆ ಮುಂಬಾ 12–8 ಪಾಯಿಂಟ್‌ಗಳ ಮುನ್ನಡೆ ಪಡೆದಿತ್ತು.

ಯೂತ್ ಬ್ಯಾಸ್ಕೆಟ್‌ಬಾಲ್: ಬಾಲಕರ ತಂಡ ರನ್ನರ್ಸ್ ಅಪ್

ಕರ್ನಾಟಕದ ಬಾಲಕಿಯರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕಿಯರ ತಂಡವು ಕೋಲ್ಕತ್ತದಲ್ಲಿ ಗುರುವಾರ ಮುಕ್ತಾಯಗೊಂಡ 39ನೇ ಯೂತ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಪುರುಷರ ತಂಡವು ರನ್ನರ್ ಅಪ್ ಆಯಿತು.

ಗುರುವಾರ ನಡೆದ ಫೈನಲ್‌ನಲ್ಲಿ ದೀಪಿಕಾ ಪಿ.ಪಿ, ನಿಧಿ ಉಮೇಶ್ (ತಲಾ 16 ಅಂಕ) ಅವರ ಆಟದ ನೆರವಿನಿಂದ ಕರ್ನಾಟಕದ ಬಾಲಕಿಯರು 61–54ರಿಂದ ತಮಿಳುನಾಡು ತಂಡವನ್ನು ಮಣಿಸಿದರು.

ಕರ್ನಾಟಕದ ಮಹೇಕ್ ಶರ್ಮಾ ಮತ್ತು ತಾರುಶ್ರೀ ತರುಣ್ ಕ್ರಮವಾಗಿ 11 ಮತ್ತು 10 ಅಂಕ ಗಳಿಸಿ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಕೇರಳ ತಂಡವು 83–54ರಿಂದ ಮಹಾರಾಷ್ಟ್ರವನ್ನು ಮಣಿಸಿ ಮೂರನೇ ಸ್ಥಾನ ಗಳಿಸಿತು. ತಾರುಶ್ರೀ ತರುಣ್ ಟೂರ್ನಿಯ ಅತ್ಯಂತ ಮೌಲ್ಯಯುತ ಆಟಗಾರ್ತಿ, ನಿಧಿ ಉಮೇಶ್ ಅವರು ಉತ್ತಮ ಶೂಟರ್ ಗೌರವಕ್ಕೆ ಪಾತ್ರವಾದರು.

ಬಾಲಕರ ಫೈನಲ್‌ನಲ್ಲಿ ರಾಜಸ್ಥಾನ ತಂಡವು 85–67ರಿಂದ ಕರ್ನಾಟಕವನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ರಾಜಸ್ಥಾನದ ತಂಡದ ಪಿಯೂಷ್ ಚೌಧರಿ 27 ಪಾಯಿಂಟ್ಸ್ ಗಳಿಸಿ ಗೆಲುವಿನ ರೂವಾರಿಯಾದರು. ಕರ್ನಾಟಕದ ಪರ ಸಮರ್ಥ್ ಮನೂರ್ 24, ಹರ್ಷನ್ ಯತೀಶ್ 19 ಅಂಕ ಸಂಪಾದಿಸಿದರು.

ತಮಿಳುನಾಡು ತಂಡವು 101–100ರಿಂದ ಹರಿಯಾಣ ತಂಡವನ್ನು ಸೋಲಿಸಿ ತೃತೀಯ ಸ್ಥಾನ ಗಳಿಸಿತು.

ಬಹುಮಾನ ಘೋಷಣೆ: ಟೂರ್ನಿಯಲ್ಲಿ ಚಾಂಪಿಯನ್ ಆದ ಕರ್ನಾಟಕದ ಬಾಲಕಿಯರಿಗೆ ಎಫ್‌ಐಬಿಎ ಏಷ್ಯಾ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ.ಕೆ. ಗೋವಿಂದರಾಜ್ ಅವರು ₹7.50 ಲಕ್ಷ ಬಹುಮಾನ ಘೋಷಿಸಿದ್ದಾರೆ. ರನ್ನರ್ ಅಪ್ ಆದ ಬಾಲಕರ ತಂಡಕ್ಕೆ ₹5 ಲಕ್ಷ ಬಹುಮಾನ ಪ್ರಕಟಿಸಿದ್ದಾರೆ.


ಪ್ರಶಸ್ತಿ ಗೆದ್ದ ಕರ್ನಾಟಕದ ಬಾಲಕಿಯರ ಬ್ಯಾಸ್ಕೆಟ್‌ಬಾಲ್ ತಂಡ. (ನಿಂತವರು) ಎಡದಿಂದ ತಾರುಶೀ ತರುಣ್, ಅದಿತಿ ಸುಬ್ರಹ್ಮಣ್ಯ, ಮಹೇಕ್ ಶರ್ಮಾ, ಪವಿತ್ರಾ ಎನ್. ಗೌಡ (ಮ್ಯಾನೇಜರ್), ಸತ್ಯನಾರಾಯಣ ಕೆ. (ಮುಖ್ಯ ಕೋಚ್), ನಿಧಿ ಉಮೇಶ್ (ಕ್ಯಾಪ್ಟನ್), ನಿಲಯ ರೆಡ್ಡಿ, ಶ್ರಾವಣಿ ಎಸ್. (ಕುಳಿತವರು) ದೇವಿ ಪ್ರಿಯಾ, ದೀಪಿಕಾ ಪಿ.ಪಿ., ಸಮೇಹಾ ರೈ, ಸ್ವಾತಿ ಪ್ರಭು, ಆಂಚಲ್ ಎಸ್, ಶ್ರೇಯಾ ವಿ.

ಈಜು: ಹಿತಶ್ರೀಗೆ ಮೂರು ಚಿನ್ನ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ ಹಿತಶ್ರೀ ಎನ್. ಅವರು ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್ ಷಿಪ್‌ನಲ್ಲಿ ಮೂರು ಚಿನ್ನ ಗೆದ್ದರು.

ಗುರುವಾರ ನಡೆದ ಬಾಲಕಿಯರ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಹಿತಶ್ರೀ 2 ನಿ.35.86 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ಡಿವಿಕೆ ಈಜು ಕೇಂದ್ರ ಪ್ರತೀಕ್ಷಾ ಎನ್. ಗೌಡ ಮತ್ತು ಪಿ.ಎಂ. ಈಜು ಕೇಂದ್ರದ ಮಾನ್ಯ ಆರ್. ವಾದ್ವಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

200 ಮೀ. ಮೆಡ್ಲೆಯಲ್ಲಿ ಹಿತಶ್ರೀ 2 ನಿ.35.90 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಪಿ.ಎಂ. ಈಜು ಕೇಂದ್ರದ ಮಾನ್ಯಾ ಆರ್. ವಾಧ್ವಾ ಮತ್ತು ಬೆಂಗಳೂರು ಈಜು ಅಕಾಡೆಮಿಯ ಸಾನ್ವಿ ತ್ರಿಪಾಠಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

400 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಹಿತಶ್ರೀ 4 ನಿ.49.94 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಗ್ಲೋಬಲ್ ಈಜು ಕೇಂದ್ರದ ಶಾಮಣಿ ಎಚ್. ಗೌಡ ಮತ್ತು ಡಿವಿಕೆ ಈಜು ಕೇಂದ್ರದ ಸುಮನ್ವಿ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿದರು.